ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 5
ಸಂಚಿಕೆ 2
ಏಪ್ರಿಲ್ - ಜೂನ್ 1976

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 5 No. 2, April–June 1976

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪ ರಿ ವಿ ಡಿ

ಒಂದು ಈಜಿಪ್ಶಿಯನ್ ಕವನ

ಇಂಗ್ಲೀಷ್ ಮೂಲ : **Erica Jong**
ಅನುವಾದ : **ಎನ್. ವೆಂಕಟಕೃಷ್ಣಯ್ಯ**

ನಾನು ಸ್ಫಿಂಕ್ಸ್
ಗದ್ದದವರೆಗೂ ಗೆದ್ದಲುಮಣ್ಣಲ್ಲಿ
ಹೂತುಕೊಂಡವಳು
ನೆಲ ಅಗೆದು ನನ್ನ ಕೈಕಾಲುಗಳನ್ನು
ಮುಕ್ತಗೊಳಿಸುವವನಿಗಾಗಿ ಕಾಯುತ್ತಿದ್ದೇನೆ.
ನಾನು ಬರೀ ಒಗಟು
ನನ್ನ ಒಗಟನ್ನು ಈವರೆಗೆ ಬಿಡಿಸಿದವ
ಒಬ್ಬನೇ ಒಬ್ಬ : ಓಡಿಪಸ್.

* * *

ಈಜಿಪ್ಟಿನ ಒಣಭೂಮಿಯಿಂದ ಮೇಲೆದ್ದ
ಈ ಅಗಾಧಮಣ್ಣಿನ ಮೊಲೆ
ಪಿರಮಿಡ್ಡುಗಳನ್ನು ನೋಡುತ್ತಿದ್ದೇನೆ.
ನನ್ನ ಸಪೂರನದಿ ಅಂತರ್ಗತವಾಗಿ
ಹರಿಯುತ್ತಲೇ ಇದೆ
ಆದ್ದರಿಂದ ಪ್ರತಿಯೊಂದು ಹೆಣ್ಣೂ
ನುಬಿಯ ರಾಣಿಯರ ಪೃಷ್ಟದಂತಹ
ಬೂದು ಬಣ್ಣದ ಬಯಲು ಪಡೆದುಕೊಳ್ಳಲಿ.

* * *

ಓಹ್ ! ಪ್ರಯಾಣಿಕ
ನೀನೇಕೆ ಈಜಿಪ್ಟಿಗೆ ಬಂದೆ
ಆಟಿನ್ ಮತ್ತು ಯುಹಾವ್ ಇಲ್ಲಿ ಇನ್ನೂ ಇದ್ದಾರೆ
ಮೋಸೆಸ ತನ್ನ ಜನಗಳೊಂದಿಗೆ
ಸಂಚುನಡೆಸುತ್ತಿದ್ದಾನೆ.

ಅಗ್ನಿಪರ್ವತಗಳು ಯಾವಾಗಲಾದರೂ
ಸಿಡಿಯುಬಹುದು.

*　　　*　　　*

ಒಂದು ಸಾವನ್ನು ಸ್ವಾಗತಿಸುವ ಧರ್ಮ
ಒಂದು ಹೆಣ್ಣಿನ ಜೀವಂತ ಸಮಾಧಿ
ಯುಗಾಂತರಗಳಿಂದ ತೂರೆದ್ದ ಮಣ್ಣು
ನನ್ನಮುಸುಕಿದೆ : ಮುಚ್ಚಿಹಾಕಿದೆ
ನನ್ನ ವಿರಹ ತಣಿಸುವವರು ಯಾರು
ಯಾರೂ ನನ್ನ ತುಟಿಕಚ್ಚಿ
ಮಾತನಾಡಿಸುವುದಿಲ್ಲವೇಕೆ ?

*　　　*　　　*

ಈ ಪಿರಮಿಡ್ಡುಗಳು
ಅಗಾಧ ಕೋನಗಳು
ಅವಿನಾಶಿನಿ :
ಪ್ರತಿ ಔನ್ನತ್ಯದ ಹೃದಯದಲ್ಲೂ
ಒಂದು ಕತ್ತಲೆ ಕೋಣೆ
ಅಲ್ಲಿ ರಾಜನೊಬ್ಬನ ಹೆಣ
ಸತ್ತವನ ಬಿಳಿ ಮೂಳೆಗಳು
ಸುತ್ತುವರಿದ ಐಶ್ವರ್ಯ.

ಹಿಂದೀ ಸಾಹಿತ್ಯದಲ್ಲಿ 'ಜಂಗಮ'

ಮ. ಸು. ಕೃಷ್ಣಮೂರ್ತಿ

'ಜಂಗಮ' ಶಬ್ದಕ್ಕೆ ಮೋನಿಯರ್ ವಿಲಿಯಂಸ್ ಡಿಕ್ಷನರಿಯಲ್ಲಿ ಚಲ, ಸ್ಥಿರ-ವಲ್ಲದ್ದು ಮೊದಲಾದ ಅರ್ಥ ನೀಡಿ ಕೊನೆಗೆ 'a shaiva sect' ಎಂದು ಹೇಳಿ, ಶಂಕರ ವಿಜಯವನ್ನು ನೋಡಿ ಎಂದು ಹೇಳಿದೆ. 'ಶಂಕರ ವಿಜಯ'ದ 'ಶೈವಮತ ನಿರಾಕರಣಮ್' ಎಂಬ ಭಾಗದಲ್ಲಿ "ಹೃದಿ ತ್ರಿಶೂಲಂ (ಶಿರಸಿ ಪಾಷಾಣ ಲಿಂಗಂಚ) ಧಾರಯಂತೋ ಜಂಗಮಾಃ । ಎಂದರೆ ಎದೆಯಲ್ಲಿ ತ್ರಿಶೂಲವನ್ನೂ ಮತ್ತು ತಲೆಯಲ್ಲಿ ಶಿವಲಿಂಗವನ್ನೂ ಧರಿಸುವವರು ಜಂಗಮರು ಎಂದು ಹೇಳಿದೆ. ಆದರೆ 'ಶಂಕರ ವಿಜಯ' ಅಷ್ಟು ಪ್ರಾಚೀನ ಗ್ರಂಥವಲ್ಲವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕಿಟಲ್ ಕೋಶದಲ್ಲಿ 'ಜಂಗಮ' ಶಬ್ದಕ್ಕೆ ಈ ರೀತಿ ಅರ್ಥ ವಿವರಣೆ ನೀಡಿದೆ. Jangama, moving, movable, locomotive : 1. that which has motion ; living. 2. a walking linga ; a Lingavanta (sometimes married, sometimes unmarried) of a higher position brought about by a kind of dikshe, also called an Ayya, whose feet and linga are worshipped by the other Lingavantas, who lives either by begging and eating in the houses of the various castes of the Lingavantas or by trading and may be made a guru."[1]

ಆದರೆ ವೀರಶೈವರಲ್ಲಿ ಜಂಗಮ ಒಂದು ಪಾರಿಭಾಷಿಕ ಶಬ್ದ; ಅಷ್ಟಾವರಣಗಳಲ್ಲಿ ಒಂದು. ಅಷ್ಟೇ ಅಲ್ಲ; 'ಜಂಗಮ' ವೀರಶೈವಕ್ಕೇ ವಿಶಿಷ್ಟವಾದುದು. 'ಜಂಗಮ' ಶಬ್ದಕ್ಕೆ ಡಾ. ನಂದೀಮಠರು ಈ ರೀತಿ ವಿವರಣೆ ನೀಡುತ್ತಾರೆ.

The Jangama : This is a Sanskrit word, meaning 'moving object' or that which is not fixed in one place, the opposite of sthavara, fixed. It is generally applied in Virasaivism to a person of a religious order, who is always travelling from place to place preaching religion and morality. This is the original meaning of Jangama, but now many Jangamas have abandoned this vocation

---

1 *A Kannada-English Dictionary* : F. Kittel, p. 630

and have settled in towns and villages, usually superintending the religious functions of the community, in other words, they have now become the priests of the community,

The viragama describes Jangama as one who is free from worldly attachments, free from burdens, free from restrictions, free from upadhis, free from bodily cravings and free from the influence of Malas. No distinctions are made between the Guru, the Linga and the Jangama, all of whom are believed to be equal and to share the same reverence"[2].

'ಜಂಗಮ' ವೀರಶೈವಕ್ಕೇ ವಿಶಿಷ್ಟವಾದುದು ಎಂದು ಹೇಳುತ್ತ ಶ್ರೀ ಕುಮಾರ ಸ್ವಾಮಿಯವರು ಹೀಗೆ ಅಭಿಪ್ರಾಯಪಡುತ್ತಾರೆ:– "The Jangama is the third avarana and is peculiar to this religion. Its etymological meaning is dynamic knowledge, having the same root gam as in Agama, Nigama, etc., in the sense of knowledge. When it is applied to a person it means one who has dynamic knowledge of God. He is called a Cara, because he travels from place to place, preaching religion and morality to all. He is therefore the itinerant jivan-mukta (a man emancipated even while living) moving about in the country for the sake of guiding the devotees in their religious and spiritual exercises."[3]

ಹಿಂದೀ ಸಾಹಿತ್ಯ ಸಮ್ಮೇಳನ, ಪ್ರಯೋಗದಿಂದ ಪ್ರಕಟವಾಗಿರುವ 'ಮಾನಕ ಹಿಂದೀ ಕೋಶ್' ನಲ್ಲಿ 'ಜಂಗಮ' ಶಬ್ದಕ್ಕೆ ಚರ ಮೊದಲಾದ ಅರ್ಥಗಳ ಜೊತೆಗೆ ಲಿಂಗಾಯುತ ಶೈವಸಂಪ್ರದಾಯದ ಗುರುಗಳ ಉಪಾಧಿ, ಒಂದು ರೀತಿಯ ಸಾಧು (ಪು 317) ಎಂದು ಅರ್ಥ ವಿವರಣೆ ನೀಡಿದೆ.

ಕಾಶಿಯ ನಾಗರೀ ಪ್ರಚಾರಿಣಿ ಸಭೆಯವರು ಪ್ರಕಟಿಸಿರುವ 'ಹಿಂದೀ ಶಬ್ದ ಸಾಗರ'ದಲ್ಲಿ 'ಜಂಗಮ' ಶಬ್ದಕ್ಕೆ ಈ ರೀತಿ ಅರ್ಥ ಹೇಳಿದೆ. ಚಲಿಸುವ...ನಾಮಪದ ಪುಲ್ಲಿಂಗ - ದಾಕ್ಷಿಣಾತ್ಯ ಲಿಂಗಾಯತ ಶೈವ ಸಂಪ್ರದಾಯದ ಗುರುಗಳು ವಿಶೇಷ;— ಇವರಲ್ಲಿ ಎರಡು ಬಗೆ ವಿರಕ್ತರು ಮತ್ತು ಗೃಹಸ್ತರು. ವಿರಕ್ತರು ತಲೆಯ ಮೇಲೆ ಜಟೆ ಬಿಡುತ್ತಾರೆ ಮತ್ತು ಕೌಪೀನ ಧರಿಸುತ್ತಾರೆ. ಲಿಂಗಾಯತರಲ್ಲಿ ಇವರಿಗೆ ವಿಶೇಷ ಗೌರವ, 2 ಗಮನಶೀಲಯತಿ, ಜೋಗಿ.[4]

---

2 *Hand-Book of Virasaivism*: Dr. S. C. Nandimutt, p. 57

3 *The Cultural Heritage of India*, Vol. IV, p. 102

4 ಹಿಂದೀ ಶಬ್ದಸಾಗರ, ಭಾಗ 4, ಪುಟ 5, ಪ್ರ : ನಾಗರೀ ಪ್ರಚಾರಿಣೀ ಸಭಾ, ಕಾಶಿ

ಮರಾಠಿಯ 'ಸುಲಭ ವಿಶ್ವಕೋಶ' (ಭಾಗ– 2, ಪು. 825) ದಲ್ಲಿ ಜಂಗಮ ಶಬ್ದಕ್ಕೆ 'ಹೀ ಲಿಂಗಾಯತ ಗುರೂಂಚಿ ಜಾತ ಆಹೇ' (ಇದು ಲಿಂಗಾಯತ ಗುರುಗಳ ಒಂದು ಜಾತಿ) ಎಂದು ಹೇಳಿದೆ.

ಆದರೆ ಕನ್ನಡದಲ್ಲಾಗಲೀ ಅಥವಾ ಹಿಂದೀ ಭಾಷೆಯಲ್ಲಾಗಲೀ ಎಲ್ಲೂ 'ಜಂಗಮ' ಶಬ್ದದ ಐತಿಹಾಸಿಕ ವಿವೇಚನೆಯಿಲ್ಲ. ಹೀಗಾಗಿ 'ಜಂಗಮ' ಮೂಲತಃ ವೀರಶೈವದಿಂದ ಉತ್ತರಕ್ಕೆ ಹೋಯಿತೋ ಇಲ್ಲವೆ ಅದೊಂದು ಶೈವಮತದ ಸ್ವತಂತ್ರ ಪಂಥದ ಹೆಸರೋ ಸ್ಪಷ್ಟವಾಗಿಲ್ಲ.

ಹಿಂದೀ ಸಾಹಿತ್ಯದಲ್ಲಿ ಹಿಂದಿಯ ಆದಿಕವಿಯೆಂದು ಪ್ರಖ್ಯಾತನಾದ ಚಂದ ಬರದಾಯಿ (1200) 'ಪೃಥ್ವೀರಾಜ ರಾಸೋ' ಎಂಬ ಕಾವ್ಯ ಬರೆದಿದ್ದಾನೆ. ಈತ ಹಿಂದೂಗಳ ಅಂತಿಮ ಸಾಮ್ರಾಟನಾದ ಪೃಥ್ವೀರಾಜ ಚೌಹಾನನ ಆಸ್ಥಾನ ಕವಿ, ಅಂತರಂಗಸಖ. ಪೃಥ್ವೀರಾಜನ ಜೀವನವನ್ನು ಕುರಿತು ಬರೆದ ಕಾವ್ಯ 'ಪೃಥ್ವೀರಾಜ ರಾಸೋ'. ಪಂಜಾಬಿನ ಜಾಲಂಧರದಲ್ಲಿ ಹುಟ್ಟಿದ ಈ ಕವಿ ವೃತ್ತಿಗಾಗಿ ದಿಲ್ಲಿಗೆ ಬಂದ. ಈತನ ಗ್ರಂಥದಲ್ಲಿ ಒಬ್ಬ ಜಂಗಮ ಬರುತ್ತಾನೆ:–

'ಕಹ್ಯೆಂ ಜಂಗಮ ತುಂ ಕೌನ್ ನರ್ ಕ್ಯೋಂ ಆಗಮ
ಹ್ಯಾಂ ಕೀನ॥ (ಪೃ. ರಾ. 6-12214)

(ಜಂಗಮ ಹೇಳಿದ : ನೀನು ಯಾರು, ಏಕೆ ಇಲ್ಲಿಗೆ ಬಂದೆ?) ಆದರೆ 'ಪೃಥ್ವೀರಾಜ ರಾಸೋ' ಗ್ರಂಥ, ಅದರ ಭಾಷೆ, ಕರ್ತೃ, ಕಾಲ ಇವೆಲ್ಲವೂ ಸಂದಿಗ್ಧತೆಯ ಸಂಪುಟದಲ್ಲಿ ಅಡಗಿ ಕುಳಿತಿವೆ. ಅದು ಇತ್ತೀಚಿನ ಕಾವ್ಯವೆಂದು ಹೇಳುವವರೂ ಇದ್ದಾರೆ. ಈ ಅರ್ಧ ಪ್ರಾಮಾಣಿಕ ಕೃತಿಯನ್ನು ಬಿಟ್ಟರೆ, ಅದಕ್ಕೂ ಹಿಂದಿನ ಇಲ್ಲವೆ ಮುಂದಿನ ನವನಾದ ನಾಥಪಂಥೀಸಂತ ಚರ್ಪಟಿ ಅಥವಾ ಚರ್ಪಟನಾಥನ (ಈತನ ಕಾಲವೂ ಅನಿಶ್ಚಿತ. ಆದರೆ 14ನೆಯ ಶತಮಾನದ 'ವರ್ಣರತ್ನಾಕರ'ದಲ್ಲಿ ಉಕ್ತನಾಗಿರುವುದರಿಂದ ಈತ ಅದಕ್ಕಿಂತ ಪ್ರಾಚೀನ ಎಂಬುದು ಸ್ಪಷ್ಟ.) ವಾಣಿಯಲ್ಲಿ 'ಜಂಗಮ' ಶಬ್ದ ಬರುತ್ತದೆ. ಸಂತ ಸಂಪೂರ್ಣಸಿಂಹರು ತರನತಾರನದಿಂದ 'ಪ್ರಾಣಸಂಗಲಿ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಚರ್ಪಟೀನಾಥ ಹಾಗೂ ಗುರುನಾನಕರ ನಡುವೆ ನಡೆಯಿತೆಂದು ಹೇಳಲಾದ ವಿವಾದವೊಂದರ ಚರ್ಚೆಯಿದೆ. ಅದರಲ್ಲಿ ಈ ಪದವಿದೆ :

''ಇಕ ಪೀತ ಪಟಾ ಇಕ ಲಂಬಜಟಾ, ಇಕ ಸೂತ ಜನೇಊ ತಿಲಕ ಠಟಾ ।
ಇಕ 'ಜಂಗಮು' ಕಹೀಐ' ಭಸಮಘಟಾ, ಜಉಲ ಇ ನಹೀಂ ಚೀನ್ಹೈ ಉಲಟಿ ಘಟಾ ॥
ತಬ್ ಚರಪಟ ಸಗಲೇ ಸ್ವಾಂಗನಟಾ ।[5]

---

5 **ಪ್ರಾಣಸಾಂಗಲೀ, ಅಧ್ಯಾಯ 76, ಪುಟ 794**

ಇದರಲ್ಲಿ ಆಗಿನ ಕಾಲದ ವಿವಿಧ ಪಂಥೀ ಸಾಧು ಸಂತರ ಬಾಹ್ಯಾಚಾರ, ವೇಷ ಭೂಷಣಗಳ ಉಲ್ಲೇಖವಿದೆ. ಇದರಂತೆ "ಒಬ್ಬ ಪೀತಪಟಧಾರಿ, ಒಬ್ಬ ಉದ್ದನೆಯ ಜಟೆ ಬಿಟ್ಟಿದ್ದಾನೆ, ಮತ್ತೊಬ್ಬ ಜನಿವಾರ ಧರಿಸಿ ತಿಲಕ ಹಾಕಿಕೊಂಡಿದ್ದಾನೆ. ಒಬ್ಬ ಜಂಗಮ ಮೈಗೆಲ್ಲಾ ಭಸ್ಮ ಲೇಪಿಸಿಕೊಂಡಿದ್ದಾನೆ. ಮೃತ್ಯುವನ್ನು ಗೆಲ್ಲದೆ ಮಾಡುವ ಬಾಹ್ಯಾಚಾರಗಳೆಲ್ಲ ಬರಿಯ ಸೋಗು" !

ಮೇಲಿನ ಪಂಕ್ತಿಗಳಲ್ಲಿ 'ಜಂಗಮ' ಸಾಮಾನ್ಯ ಸಾಧುವಾಗಿರದೆ ಒಂದು ಪಂಥ ವಿಶೇಷದ ಪ್ರತಿನಿಧಿಯಾಗಿದ್ದಾನೆ. ಸಂತ ಕಬೀರನೂ ಕೂಡ 'ಜಂಗಮ' ಶಬ್ದವನ್ನು ಪಂಥ ವಿಶೇಷದ ಅನುಯಾಯಿ ಎಂಬ ಅರ್ಥದಲ್ಲೇ ಬಳಸಿದ್ದಾನೆ. ಚರ್ಪಟಿಯ ಕಾಲ 14ನೆಯ ಶತಮಾನದಿಂದ ಹಿಂದಕ್ಕೆ ಎಂದೇನೋ ಹೇಳಿದೆವು. ಆದರೆ ಮೇಲೆ ಉದ್ಧರಿಸಿದ ಆತನ ಪದ್ಯ ದೊರೆಯುವುದು 16-17ನೆಯ ಶತಮಾನದಿಂದ ಈಚೆಗೆ ರಚಿತವಾದ ಸಿಖ್ ಗ್ರಂಥದಲ್ಲಿ. ಆದ್ದರಿಂದ ಕಾಲದ ದೃಷ್ಟಿಯಿಂದ ಅದೂ ಅಷ್ಟು ಪ್ರಾಮಾಣಿಕ, ಪ್ರಾಚೀನ ಎಂದು ಹೇಳುವಂತಿಲ್ಲ.

ಇದನ್ನು ಬಿಟ್ಟರೆ 'ಜಂಗಮ' ಶಬ್ದದ ಪ್ರಯೋಗ ಕಂಡು ಬರುವುದು ಸಂತ ಕಬೀರನ ವಾಣಿಯಲ್ಲಿ, ಕಬೀರ ಹಿಂದಿಯ ಆದಿ ಸಂತ. ಕಾಶಿಯ ನಿವಾಸಿ. ಆತ ಮಹಾರಾಷ್ಟ್ರದವರೆಗೂ ಸಂಚರಿಸಿದ್ದನಂತೆ. ಈತನ ಕಾಲ 1398 – 1518 ಕಬೀರ 'ಜಂಗಮ' ಶಬ್ದವನ್ನು ಶೈವ ಸಂಪ್ರದಾಯಾನುಯಾಯಿ ಎಂಬ ಅರ್ಥದಲ್ಲೇ ಸ್ಪಷ್ಟವಾಗಿ ಬಳಸಿದ್ದಾನೆ. ತನ್ನ ಕಾಲದ ಧರ್ಮ ಸಂಪ್ರದಾಯಗಳನ್ನು ಖಂಡಿಸುತ್ತ ಆತ ಹೀಗೆ ಹೇಳಿದ್ದಾನೆ :

(i) ಹರಿಕೌ ನಾಂವುಂ ತತ ತ್ರಿಲೋಕ ಸಾರ।
ಲೈ ಲೀನ ಭಯೇ ಜೇ ಉತರೇ ಪಾರ॥
ಇಕ ಜಂಗಮ ಇಕ ಜಟಾಧರ। ಇಕ ಅಂಗ ವಿಭೂತಿ ಕರೈಂ ಅಪಾರ॥
ಇಕ ಮುನಿಯರ್ ಇಕ ಮನಹೂಂ ಲೀನ। ಐಸೈಂ ಹೋತ ಹೋತ ಜಗ ಜಾತ ಖೀನ॥
ಆಕ ಆರಾಧೈಂ ಸಕತೀ ಸೀವ। ಇಕ ಪರದಾ ದೈದೈ ಬಧೈಂ ಜೀವ॥
ಇಕು ಕುಲ ದೇವ್ಯಾ ಕೌ ಜಪಹಿಂ ಜಾಪ। ತ್ರಿಭುವನ ಪತಿ ಭೂಲೇ ತ್ರಿಬಿಧತಾವ॥
ಅಂನ್ನ ಛಾಡಿ ಇಕ ಪೀಬಹಿ ದೂಧ। ಹರಿ ನ ಮಿಲೈ ಬಿನ ಹಿರದೈ ಸೂಧ॥
ಕಹೈ ಕಬೀರ ಐಸೈಂ ಬಿಚಾರ। ರಾಮ ಬಿನಾ ಕೋ ಉತರೇ ಪಾರ॥[6]

ಎಂದರೆ "ಹರಿಯನಾಮ ತ್ರಿಲೋಕಸಾರ. ಆದ್ದರಿಂದ ಅದರಲ್ಲಿ ಲೀನರಾದವರು ಭವಸಾಗರವನ್ನು ದಾಟಿದರು. ಒಬ್ಬ ಜಂಗಮ, ಒಬ್ಬ ಜಟಾಧಾರಿ. ಒಬ್ಬರು ಮೈಗೆ ಅಪಾರ ವಿಭೂತಿ ಬಳಿದುಕೊಳ್ಳುತ್ತಾರೆ, ಮತ್ತೊಬ್ಬರು ಮುನಿವರರು, ಅವರು ಮನದಲ್ಲೇ ಮಗ್ನರಾಗಿರುತ್ತಾರೆ. ಈ ರೀತಿ ಮಾಡುತ್ತ ಮಾಡುತ್ತ ಜಗತ್ತು

6 ಕಬೀರ ಗ್ರಂಥಾವಲೀ : ಸಂಪಾದಕ : ಡಾ. ಮಾತಾಪ್ರಸಾದಗುಪ್ತ, ಪು. 371

ಕ್ಷೀಣವಾಗುತ್ತಿದೆ. ಒಬ್ಬರು ಶಕ್ತಿಶಿವರನ್ನು ಆರಾಧಿಸುತ್ತಾರೆ. ಒಬ್ಬರು ತೆರೆಯ ಮರೆಯಲ್ಲಿ ಜೀವವಧೆ ಮಾಡುತ್ತಾರೆ. ಮತ್ತೊಬ್ಬರು ಕುಲದೇವತೆಯ ಜಪ ಮಾಡುತ್ತಾರೆ. ಆದರೆ ಇವರೆಲ್ಲ ತ್ರಿವಿಧ ತಾಪಕ್ಕೆ ಗುರಿಯಾಗಿ ತ್ರಿಭುವನ ಪತಿಯನ್ನು ಮರೆತಿದ್ದಾರೆ. ಒಬ್ಬರು ಅನ್ನವನ್ನು ತೊರೆದು ಹಾಲು ಕುಡಿಯುತ್ತಾರೆ. ಆದರೆ ಹರಿಯಿಲ್ಲದೆ ಶುದ್ಧ ಹೃದಯರನ್ನು ಕಾಣಲಿಲ್ಲ. ಆದ್ದರಿಂದ ಕಬೀರ ಹೇಳುತ್ತಾನೆ. ರಾಮನಿಲ್ಲದೆ ಭವಜಲವನ್ನು ದಾಂಟಬಲ್ಲವನು ಯಾರು ?"

'ಒಬ್ಬರು ಶಕ್ತಿ ಶಿವರನ್ನು ಆರಾಧಿಸುತ್ತಾರೆ' ಎಂಬ ಮಾತು ಇಲ್ಲಿ ಗಮನಾರ್ಹ. ಇದರಿಂದ ಶಕ್ತಿ ವಿಶಿಷ್ಟಾದ್ವೈತದ ಬೋಧವಾಗುವುದೆ ?

(ii) ಮೈಲಾ ಬ್ರಹ್ಮಾ ಮೈಲಾ ಇಂದು ।
ಮೈಲೇ ಜೋಗಿ ಜಂಗಮು ಜಟಸಹೇತಿ ।
ಮೈಲೀ ಕಾಇಆ ಹಂಸಸಮೇತಿ ॥[7]

(ಬ್ರಹ್ಮ ಮೈಲಿಗೆ, ಚಂದ್ರ (ಇಂದ್ರ?) ಮೈಲಿಗೆ, ಜಟಾಸಹಿತವಾಗಿರುವ ಜೋಗಿ ಜಂಗಮರು ಮೈಲಿಗೆ. ಹಂಸಸಮೇತ ಈ ಕಾಯ ಮೈಲಿಗೆ.)

ಈ ಪದದಲ್ಲಿ ಕಬೀರ ಜಂಗಮರು ಜಟಾಧಾರಿಗಳು ಜಂಬ ಅಂಶವನ್ನು ಹೇಳಿದ್ದಾನೆ.

(iii) ಭಾಈ ರೇ ಬಿರಲೇ ದೋಸತ ಕಬೀರಕೇ ಯಹ
ತತ್ ಬಾರ್‌ಬಾರ್‌ಕಾಸೋಂಕಹಿಏ ।
ಮಾನಸ ಘಡಣ ಸಂವಾರಣ ಸಂಮ್ರಥ, ಜ್ಯೂಂ ರಾಖೈ ತ್ಯೂಂ ರಹಿಏ ॥
ಆಲಗ ದುನೀಂ ಸಬೈ ಫಿರಿ ಖೋಜೀ ಹರಿಬಿನ
ಸಕಲ ಅಯಾನಾಂ ॥
ಛಹ ದರಸನ ಛಯಾನವೈ ಪಾಷಂಡ, ಆಕುಲ ಕಿನಹ್ಹಂ ನಜಾನಾಂ ॥
ಜಪತಪ ಸಂಜಮ ಅರಚಾ, ಜೋತಿಗ ಜಗ ಬೌರಾನಾಂ ॥
ಕಾಗದ ಲಿಖಿಲಿಖಿ ಜಗತ ಭುಲಾನಾಂ, ಮನಹೀಂ ಮನ ನ ಸಮಾನಾ ॥
ಕಹೈ ಕಬೀರ ಜೋಗೀ ಅರೂ ಜಂಗಮು, ಏಸಬ್ ಝೂಠೀ ಆಸಾ ॥
ಗುರುಪ್ರಸಾದೀ ರಟೌ ಚಾತ್ರಿಗ ಜ್ಯೂಂ, ನಿಹಚೈ ಭಗತಿ ನಿವಾಸಾ ॥[8]

ಅಯ್ಯಾ ಸೋದರ, ಕಬೀರನಿಗೆ ಮಿತ್ರರು ವಿರಳ. ಈ ಮಾತನ್ನು ಮತ್ತೆ ಮತ್ತೆ ಯಾರಿಗೆ ಹೇಳುವುದು ? ಸಂಹಾರ, ನಿರ್ಮಾಣ ಹಾಗೂ ಪೋಷಣಸಮರ್ಥನಾದ ಸ್ವಾಮಿ ಇಟ್ಟಹಾಗೆ ಇರಬೇಕು. ಸೃಷ್ಟಿ, ಜಗತ್ತು ಇವೆಲ್ಲವನ್ನೂ ಅಲೆದು ಅಲೆದು ಹುಡುಕಿದೆ. ಹರಿಯಿಲ್ಲದೆ ಎಲ್ಲವೂ ಅಜ್ಞಾನಮಾತ್ರ. ಷಟ್‌ದರ್ಶನಗಳು ಮತ್ತು ತೊಂಬತ್ತಾರು ಕರ್ಮಕಾಂಡಗಳು ಇವೆಲ್ಲವೂ ಆ ಪರಮನನ್ನು ಅರಿಯಲು ವ್ಯಾಕುಲ

7 ಸಂತ ಕಬೀರ, ಡಾ॥ ರಾಮಕುಮಾರವರ್ಮಾ, ಪು. 208

8 ಕಬೀರ್ ಗ್ರಂಥವಲೀ, ಸಂ. ಶ್ಯಾಮಸುಂದರದಾಸ್. ಪದ ಸಂಖ್ಯೆ 34

ವಾಗಿವೆ. ಆದರೂ ಇವುಗಳಲ್ಲಿ ಯಾವ ಒಂದಕ್ಕೂ ಅವನ ಅರಿವಿಲ್ಲ. ಜಪ, ತಪ, ಸಂಯಮ, ಪೂಜೆ, ಅರ್ಚನೆ ಮತ್ತು ಜ್ಯೋತಿಷ್ಯ ಇವುಗಳ ಹಿಂದೆ ಜಗತ್ತು ಹುಚ್ಚೆದ್ದು ಹೋಗಿದೆ. ಕಾಗದ (ಶಾಸ್ತ್ರಗಳನ್ನು) ಬರೆದೂ ಬರೆದೂ ಜಗತ್ತು ಆತ್ಮವಂಚನೆ ಮಾಡಿಕೊಳ್ಳುತ್ತಿದೆ. ಆದರೆ ಮನಸ್ಸಿಗೆ ಗೋಚರವಾಗಬೇಕಾದದ್ದು ಆಗಲಿಲ್ಲ. ಕಬೀರ ಹೇಳುತ್ತಾನೆ, ಯೋಗಿಗಳು ಮತ್ತು ಜಂಗಮರು ಸುಳ್ಳು ಆಶೆಯಿಂದ ಲಿಪ್ತರಾಗಿದ್ದಾರೆ. ಗುರುವಿನ ಕೃಪೆಯಿಂದ ಚಾತಕದಂತೆ (ಹರಿನಾಮವನ್ನು) ಉಲಿ. ಆಗ ನಿಶ್ಚಯವಾಗಿಯೂ ಭಕ್ತಿಯಲ್ಲಿ ನೀನು ನೆಲಸುವೆ.

ಮಾಯೆಯ ಕೋಲಾಹಲವನ್ನು ಬಣ್ಣಿಸುತ್ತ ಕಬೀರ ಮತ್ತೊಂದೆಡೆ ಹೀಗೆ ಹೇಳಿದ್ದಾನೆ:-

> ತೂಂ ಮಾಯಾ ರಘುನಾಥ ಕೀ, ಖೇಲಣ ಚಢೀ ಅಹೇಡೈ
> ಚತುರ ಛಿಕಾರೇ ಚುಣಿ ಚುಣಿ ಮಾರೇ, ಕೋಈ ನ ಛೋಡ್ಯಾ ಬೋಲ್ಯೆ ॥
> ಮುನಿಜನ ಪಿರ ಡಿಗಂಬರ ಮಾರೇ, ಜತನ ಕರಂತಾಜೋ
> ಜಂಗಲ ಮಹಿಕೇ ಜಂಗಮ ಮಾರೇ, ತೂಂ, ರಫಿರ್ಯೆ ಬಲಿವಂತೀ ॥
> ವೇದ ಪಢಂತಾಂ ಬ್ರಾಂಹ್ಮಣಾ ಮಾರಾ, ಸೇವಾ ಪರತಾಂ ಸ್ವಾಮೀಂ ॥
> ಅರಥ ಕರಂತಾ ಮಿಸರ ಪಛಾಡ್ಯಾ, ತೂಂ ರ ಫಿರ್ಯೆ ಮೈರುಂತೀ ॥
> ಸಾಷಿತ ಕೈ ತೂಂ ಹರತಾ ಕರತಾ, ಹರಿ ಭಗತನ ಕೈ ಚೇರೀ ।
> ದಾಸ ಕಬೀರ ರಾಂಮ ಕೈಸರನ್ಯೆಂ, ಜ್ಯೂಂ ಲಾಗೀ ತ್ಯೂಂ ತೋರೀ ॥[9]

ರಘುನಾಥನ ಮಾಯೆಯಾದ ನೀನು ಬೇಟೆಯಾಡಲು ಹೊರಟೆ. ನೀನು ಚತುರ ಚಿಗರೆಗಳನ್ನು ಆರಿಸಿ ಆರಿಸಿ ಕೊಂದೆ; ಯಾರನ್ನೂ ಬಿಡಲಿಲ್ಲ. ನೀನು ಮುನಿಗಳು, ಗುರು, ದಿಗಂಬರರನ್ನು ಕೊಂದೆ. ಯೋಗಶೀಲರಾದ ಯೋಗಿಗಳನ್ನೂ ಕೊಂದೆ. ಜಂಗಲಿನಲ್ಲಿದ್ದ ಜಂಗಮರನ್ನೂ ಕೊಂದೆ. ಈ ರೀತಿ ಬಲಶಾಲಿಯಾದ ನೀನು ಅಲೆಯುತ್ತಿದ್ದೀಯೆ. ವೇದಪಠನ ಮಾಡುತ್ತಿದ್ದ ಬ್ರಾಹ್ಮಣರನ್ನೂ ನೀನು ಬಲಿಹಾಕಿದೆ. ಸೇವೆಮಾಡುತ್ತಿದ್ದ ಸ್ವಾಮಿಗಳನ್ನೂ ನೀನು ಸವೆಬಡಿದೆ. ಶಾಸ್ತ್ರಗಳಿಗೆ ಅರ್ಥೈಸುತ್ತಿದ್ದ ಮಿಶ್ರ (ಪಂಡಿತ) ರುಗಳನ್ನು ನೀನು ಹೊಡೆದುರುಳಿಸಿದ್ದೀಯೆ. ಈಗ ನೀನು ಮದಮತ್ತಳಾಗಿ ಅಲೆಯುತ್ತಿದ್ದೀಯೆ. ಶಾಕ್ತರಲ್ಲಿ ನೀನೇ ಹರ್ತ್ರಿ, ಕರ್ತ್ರಿ, ಅದೇ ಹರಿಭಕ್ತರ ಮನೆಯಲ್ಲಿ ನೀನು ಬಳಿದೊತ್ತು. ದಾಸ ಕಬೀರನಾದ ನಾನು ರಾಮನಿಗೆ ಶರಣು ಹೊಕ್ಕಿದ್ದೇನೆ. ನನ್ನನ್ನು ತಾಗಿದಕೂಡಲೇ ನಾನು ನಿನ್ನನ್ನು ಭಂಗಿಸಿಬಿಟ್ಟೆ.

ಬೇರೊಂದೆಡೆ ಆದರ್ಶ ಸಂತರು ಯಾರು ಎಂದು ಹೇಳುತ್ತ ಎಲ್ಲರೂ ಪಥಭ್ರಷ್ಟರು, ದೇವರನ್ನು ಯಾರೂ ಕಾಣಲಿಲ್ಲ ಎಂದು ಹೇಳುತ್ತ ಕಬೀರ ಹೀಗೆ ಹೇಳಿದ್ದಾನೆ :

---

9 ಕಬೀರ ಗ್ರಂಥಾವಲೀ : ಸ. ಡಾ॥ ಮಾತಾಪ್ರಸಾದ್ ಗುಪ್ತ, ರಾಗರಾಮಕಲೀ, ಪದಸಂಖ್ಯೆ 34

ಕಾಜೋ ಸೋ ಜೋ ಕಾಯಾವಿಚಾರೈ । ತೇಲ ದೀಪ ಮೈಂ ಬಾತೀ ಜಾರೈ ॥
ತೇಲ ದೀಪ ಮೈಂ ಬಾತೀರಹೈ । ಜೋತಿ ಚೀಹ್ನಿಜೇಕಾಜೀ ಕಹೈ ॥
ಮುಲನಾಂ ಬಂಗ ದೇ ಇ ಸುರ ಜಾಂ ನೀ, ಆಪ ಮುಸಲಾ ಬೈಠಾ ತಾಂನೀಂ ॥
ಆಪುನ ಮೈಂಜೇ ಕರೈ ನಿವಾಜಾ, ಸೋ ಮುಲನಾಂ ಸರಬತ್ತರಿ ಗಾಜಿಂ ॥
ಸೇಷ ಸಹಜ ಮೈಂ ಮಹಲ ಉಠಾವಾ, ಚಂದ ಸೂರ ಬಿಚಿತಾರಾಲಾವಾ ॥
ಅರ್ಧ ಉರ್ಧ ಬಿಚಿ ಆಂನಿ ಉತಾರಾ, ಸೋಈ ಸೇಷ ತಿಹೂಂ ಲೋಕ ಪಿಯಾರಾ ।
ಜಂಗಮು ಜೋಗ ಬಿಚಾರೈ ಜಹೂಂವಾಂ, ಜೀವ ಸೀವ ಕರಿ ಏಕೈ ಠಊವಾಂ ॥
ಚಿತ್ತ ಚೇತನಿ ಕರಿ ಪೂಜಾಲಾವಾ, ತೇತೌ ಜಂಗಮು ನಾಂಉಂ ಕಹಾವಾ ॥ [10]

ಕಬೀರನ ತರುವಾಯ 1475 ರ ಸರಿಸುಮಾರಿನಲ್ಲಿ ರಚಿತವಾಯಿತೆಂದು ಹೇಳಲಾದ 'ಛಿತಾಯೀ ಚರಿತ'. (ಇದರ ಭಾಷೆ ರಾಜಾಸ್ತಾನೀ ಮಿಶ್ರಿತ ಬ್ರಜಭಾಷೆ. ಲೇಖಕ ನಾರಾಯಣದಾಸ ಮತ್ತು ಇತರರು ಇವರು ಗ್ವಾಲಿಯರ್ ನಿವಾಸಿಗಳು) ಎಂಬ ಗ್ರಂಥದಲ್ಲಿ 'ಜಂಗಮು' ಶಬ್ದ ಮಾತ್ರವೇ ಅಲ್ಲ ಜಂಗಮು ಒಬ್ಬ ವ್ಯಕ್ತಿಯಾಗಿ ಬರುತ್ತಾನೆ. 'ಛಿತಾಯೀ ಚರಿತ' ಅಲ್ಲಾವುದ್ದೀನನ ದೇವಗಿರಿ ದಂಡಯಾತ್ರೆ ಪ್ರಸಂಗವನ್ನೊಳಗೊಂಡು ಒಂದು ಪ್ರೇಮಾಖ್ಯಾನ. ದೇವಗಿರಿಯ ಅರಸ ರಾಮ ದೇವನ ಮಗಳು ಛಿತಾಯಿ ರೂಪಸಿ. ಆಕೆಯನ್ನು ಅಪಹರಿಸಲು ಅವನು ದೇವಗಿರಿಯ ಮೇಲೆ ಮುತ್ತಿಗೆ ಹಾಕುತ್ತಾನೆ. ಕೊನೆಗೆ ಆಕೆಯನ್ನು ದಿಲ್ಲಿಗೆ ಕದ್ದೊಯ್ಯುತ್ತಾನೆ. ಆಕೆಯ ಗಂಡ ಸೌರಸೀ ಹೊಯ್ಸಳ ರಾಜಕುಮಾರ, ತನ್ನ ಪತ್ನಿ ಅಪಹೃತಳಾದುದನ್ನು ಕಂಡು ಅವನು ಬೈರಾಗಿಯಾಗಿ, ಮನೆ ಮಠವನ್ನು ತೊರೆದು ವೀಣೆ ಬಾರಿಸಿಕೊಂಡು ಯೋಗಿಯ ವೇಷದಲ್ಲಿ ಅಲೆಯುತ್ತಿರುತ್ತಾನೆ. ಕೊನೆಗೆ ದಿಲ್ಲಿಗೆ ಹೋಗಿ ಅಲ್ಲಾವುದ್ದೀನನ್ನು ತನ್ನ ವೀಣಾವಾದನದಿಂದ ಮೆಚ್ಚಿಸಿ ತನ್ನ ಪತ್ನಿಯನ್ನು ಮರಳಿ ಪಡೆದು ತನ್ನ ದೇಶಕ್ಕೆ ಹಿಂತಿರುಗುತ್ತಾನೆ.

ರಾಜಕುಮಾರಿ ಛಿತಾಯಿಯೂ ವೀಣಾ ಪ್ರವೀಣೆ. ಅವಳಿಗೆ ವೀಣೆ ಹೇಳಿಕೊಟ್ಟ ಗುರು ಒಬ್ಬ ಜಂಗಮು. ಈ ಜಂಗಮು ಜಟಾಧಾರಿ, ಅದ್ಭುತ ಕಲಾಕೋವಿದ. ಈ ಪ್ರಸಂಗದ ಒಂದೆರಡು ಪಂಕ್ತಿಗಳನ್ನು ನೋಡಬಹುದು.

ಮಹಾರಾಜ ಜುಗವಣಿ ಭೋವಾಲಾ ಅಹಿನಿಶಿ ದೀಜಈ ಶತ್ರೂ ಕಾಲಾ ।
ಚಉದಹ ವಿದ್ಯಾ ಚತುರ ಸುಜಾನಾಂ । ಛಹದರಸನ ಕಉ ರಾಖಣಿ ಮಾನಾ ॥
ಜಂಗಮು ಏಕ ಬೀನ ಕರ ಲೀಏಂ । ಜಟಾ ಜೂಟಾ ಸಿರಿ ಜೂರಾ ದೀಏಂ ।
ಆಯೋ ರಾಮುದೇವ ಕೇಪಾಸಾ । ಗಾವಣಿ ಸುಘರು ಸೇ ಖಿತಾ ಉದಾಸಾ ॥
ಪಾನೀ ಮಾಂರಿಘು ಬಜಾಕಣಿ ಬೀನಾ । ಸುನತಿ ನಿಂದು ರಸ ರೀಝಹಿ ಮೀನಾ ।
ಸುನಿಕಣಿ ಕೀಯೋ ಅಚಂಭಉ ರಾಯೀ । ಮಹಲ ಮಾಂರಘು ತೇ ಗಯೋ ಲಿವಾಈ ।

10 ಅದೇ, ರಮೈಂಣೀ – 3

ಜಂಗಮು ಸ್ಯಉಂ ರಾಜಾ ಇಉಂ ಕಹಿಯೋ । ತುಮ್ಹಗುನ ಸುನತಿ ಮೋಹಿ
ಮನು ಹರಿಯೋ ॥
ತಬ ಜಂಗಮು ಮಾನಿಉ ಉಚ್ಛಾಹೂ, ಜಬ್ ಸುಗ್ಯಾನ ಜಾನಿಉ ನರನಾಹೂ ॥
ಜತೀ ಸಿಧ್ಯ ಅವಲಂಬೇ ಸರ್ಬಿ । ಗೀತಂನೀ ಅನು ಸುರ ಗಂಧರ್ವ ।
ತವಕರ ಬೀನ ಬಿಯೋಗೀ ಲಈ । ಠೋಕೀ ಪಾಂತುನಾದುಧುನಿಈ ।
ಅತಿಸುಜಾನ ತೇ ಮನು ದಯಾ ಸುನೀ । ರಹೇ ರೀಝು ದೇವನಿರಿ ಕೇಗುನೀ ।
ಜೇತೇ ಸಭಾಭಯೇ ಗಂಧರ್ವ, ಮೃಗ ಜಿಉಂ ಮೋಹಿ ರಹೇ ಸುನಿಸರ್ವ ॥
ಸೋಗುನ ಸಾಹಿ ಸರಾಹಇ ಗುನೀ । ಸೋ ಚಾತುರೀ ಜೇ ರೀಝುಇ ದುನೀ ।
ನಾದು ರಂಗು ಬಿನು ಔರ್ ನರಂಗೂ । ಮೃಗಮಾಲಾ ಮೋಹಿಯಇ ಭುವಂಗೂ ॥
ಚಿತ್ತ ಏಕ ಪಾಖಂಡೀಕರ ಉಂ । ತೀರಥ ಫಿರತಿ ಭವಇ ಬಾಬರ ಉಂ ॥
ಕಹಇ ರಾಉ ಜಂಗಮು ಸ್ಯಉಂ ಏಹೂ । ಏಕ ವಚನ ಮಾಂಗಿಉ ಮೋದೇಹೂ ।
ಮೇರೇ ಜೇ ಪಾತರ ಪರಬೀನಾ । ತಿನ್ಹಹಿ ಬಿಜಾವನ ಸಿಖವಹು ಬೀನಾ ॥
ಮಹಲ ಮಾಂಝು ದಿನ ಜಂಗಮು ಜಾಈ । ತ್ರೀಯಾ ಸಹಿತು ರಾಇಬಇಠಇ ಆಈ ।
ರೀಝೀ ತಾಂತಿ ನಾದುರಸ ರಂಗೂ, ಭಈ ಚಿತು ವ್ಯಾಪಿ ಖರೀ ಅಭಂಗೂ ॥
ಜಂಗಮು ತಾಂತಿ ನಾದ ಧುನಿಕರಈ । ಭೂಲೀ ಭಾಮಿನೀ ಸುಧಿನ ಪರಈ।
ತಿನ್ಹ ಕೇ ಸಾಥಿ ಥಿತಾಈ ರಹಈ, ಬೀನಾ ನಾದ ಧುನಿ ಜೀಯ ಮಹಿ ಗಹಈ ॥
ಜಇಸಇಂ ಗೀತ ನಾದ ಧುನಿಕರಈ, ವಿನಹೀ ಪಢೇಂ ಥಿತಾಈ ಲಹಈ ।
ಅತಿ ವಿತಪನ್ನ ನಾದು ಗುನ ಖರೀ । ಜನು ಕಲಿಮಾರಂಭಾ ಔತರೀ ॥ [11]

ಭೂಪತಿ ರಾಮದೇವ ಬಹುದೊಡ್ಡ ರಾಜ್ಯವನ್ನು ಆಳುತ್ತಿದ್ದ. ಆತ ಹದಿನಾಲ್ಕು ವಿದ್ಯೆಗಳಲ್ಲಿ ಪಾರಂಗತ, ರಸಿಕ. ಷಡ್ ದರ್ಶನಗಳನ್ನು ಆದರಿಸುತ್ತಿದ್ದ. ಹೀಗಿರಲು ಒಮ್ಮೆ ಕೈಯಲ್ಲಿ ವೀಣೆ ಹಿಡಿದು ತಲೆಯ ಮೇಲೆ ಜಟೆಧರಿಸಿ ಒಬ್ಬ ಜಂಗಮು ರಾಮದೇವನ ಬಳಿಗೆ ಬಂದ. ಅವನು ತುಂಬ ಚೆನ್ನಾಗಿ ಹಾಡುತ್ತಿದ್ದ ಮತ್ತು ಸಾಂಸಾರಿಕ ಜೀವನದಲ್ಲಿ ವಿರಕ್ತನಾಗಿದ್ದ. ಅವನು ನೀರಿನಲ್ಲಿ ಕುಳಿತು ವೀಣೆ ಬಾರಿಸಿದರೆ ಅವನ ರಸಾಲಧ್ವನಿ ಕೇಳಿ ಮೀನುಗಳೂ ಕೂಡ ಮಾರು ಹೋಗುತ್ತಿದ್ದವು. ಅವನ ಇಂಥ ಗಾಯನ ವಾದನವನ್ನು ಕೇಳಿ ರಾಜ ವಿಸ್ಮಿತನಾದ. ಅವನು ಜಂಗಮುನನ್ನು ತನ್ನ ಅರಮನೆಗೆ ಕರೆದುಕೊಂಡು ಹೋದ. ಅರಸ ಜಂಗಮುನಿಗೆ ಹೇಳಿದ, "ನಿನ್ನ ಗುಣ (ಗೀತ ವಾದನ) ನನ್ನ ಮನವನ್ನು ಸೂರೆಗೈದಿದೆ."

ಇದನ್ನು ಕೇಳಿ ಜಂಗಮುನಿಗೆ ಹರ್ಷವಾಯಿತು. ರಾಜ ಕಲಾಮರ್ಮಜ್ಞ ಎಂಬುದನ್ನು ಅವನು ಮನಗಂಡ. ಆ ಯತಿ ದೇವಗಾಯಕರಿಗೆ ಸಮಾನರಾದ ತನ್ನ ಗುರುಪರಂಪರೆಯನ್ನು ಸ್ಮರಿಸಿದ. ಅವನು ವೀಣೆ ಮಿಡಿಯ ತೊಡಗಿದ. ದೇವಗಿರಿಯ ಗುಣೀ ನಾಗರಿಕರು ರಸಿಕರು. ಅವರು ಗಮನವಿಟ್ಟು ವೀಣಾವಾದನವನ್ನು ಆಲಿಸಿದರು. ಸಭೆಯಲ್ಲಿದ್ದ ಶ್ರೋತೃಗಳೆಲ್ಲ ಹರಿಣಗಳಂತೆ ಮುಗ್ಧರಾಗಿ ಹೋದರು..

---

11 ಛಾವಾಈ ಚತ ; ಸಂ. ಹರಿಹರ ನಿವಾಸ ದ್ವಿವೇದಿ. ಅಗರ ಚಂದನಾಹಲಾ ವಿದ್ಯಾ ಮಂದಿರ ಪ್ರಕಾಶನ, ಗ್ವಾಲಿಯರ್, ಪ್ರಥಮ ಖಂಡ. 36-48

ಆಗ ಅರಸ ತನ್ನ ಪ್ರವೀಣ ನರ್ತಕಿಯರಿಗೆ ವೀಣೆ ಹೇಳಿಕೊಡುವಂತೆ ಜಂಗಮನನ್ನು ಕೇಳಿಕೊಂಡ. ಅದರಂತೆ ಜಂಗಮ ನಿತ್ಯವೂ ಅರಮನೆಗೆ ಹೋಗಿಬರುತ್ತಿದ್ದ. ಅಲ್ಲಿ ತನ್ನ ಪತ್ನಿಯರೊಂದಿಗೆ ಅರಸನೂ ಬಂದು ಕುಳಿತುಕೊಳ್ಳುತ್ತಿದ್ದ. ಸಮಸ್ತ ರಾಣೀವಾಸ ಆತನ ನಾದ ತರಂಗಗಳಲ್ಲಿ ಮುಳುಗಿ ಹೋಯಿತು. ಅವನು ವೀಣೆ ಮಿಡಿದಾಗ ಆ ಸ್ತ್ರೀಯರು ಎಷ್ಟೊಂದು ತನ್ಮಯರಾಗುತ್ತಿದ್ದರೆಂದರೆ ಅವರು ಕಲಿಯುವುದನ್ನೇ ಮರೆಯುತ್ತಿದ್ದರು. ಅವರ ಜೊತೆ ರಾಜಕುಮಾರಿ ಛಿತಾಯಿಯೂ ಇರುತ್ತಿದ್ದಳು. ಅವಳು ಅದನ್ನು ಗ್ರಹಿಸುತ್ತಿದ್ದಳು. ಆಕೆ ಆತನ ನಾದವನ್ನು ಕಲಿಸದೆಯೇ ತದ್ವತ್ತಾಗಿ ಕಲಿಯುತ್ತಿದ್ದಳು. ಆಕೆ ಕಲಿಯುಗದ ರಂಭೆಯೋ ಎನ್ನುವಂತೆ ಸಂಗೀತ ಮರ್ಮಜ್ಞಳಾಗಿದ್ದಳು.

ಹಿಂದಿಯ ಸೂಫೀಸಂತ ಮಹಾಕವಿ ಮಲ್ಲಿಕ್ ಮಹಮ್ಮದ್ ಜಾಯಸಿ (1540) ಯ 'ಪದ್ಮಾವತ್' ಎಂಬ ಮಹಾ ಕಾವ್ಯದಲ್ಲೂ ಕೂಡ 'ಜಂಗಮ'ನ ಉಲ್ಲೇಖ ಬರುತ್ತದೆ. ಜಾಯಸಿ ಅಯೋಧ್ಯೆಯ ಹತ್ತಿರದ ಅಮೇಠಿಯ ನಿವಾಸಿ. ಅಲ್ಲಿ ಜಂಗಮ ಒಂದು ಸಂಪ್ರದಾಯದ ಪ್ರತಿನಿಧಿಯಾಗಿ ಬರುತ್ತಾನೆ. ಕಾವ್ಯ ನಾಯಿಕೆಯಾದ ಪದ್ಮಿನಿಯ ಜನ್ಮಭೂಮಿ ಸಿಂಹಳದ್ವೀಪವನ್ನು ವರ್ಣಿಸುತ್ತ ಕವಿ ಹೀಗೆ ಹೇಳುತ್ತಾನೆ :

> ಪೈಗ ಪೈಗ ಪರ್‌ಕುಆಂ ಬಾವರೀ । ಸಾಜೀ ಬೈಠಕ ಔ ಪಾಂವರೀ ॥
> ಔರ್ ಕುಂಡ ಬಹು ಠಾಂವಹಿಂ ಠಾಉಂ । ಸಬ ತೀರಥ ಔ ತಿನ್ಹಕೇ ನಾ ಊಂ ॥
> ಮಠ ಮಂಡಪ ಚಹುಂ ಪಾಸ ಸಂವಾರೇ । ಜಪಾ ತಪಾ ಸಬ ಆಸನ ಮಾರೇ ।
> ಕೋಈ ರಿಷೇಸ್ವರ ಕೋಇ ಸನ್ಯಾಸಿ । ಕೋಇ ರಾಮಜನ ಕೋಇ ಮಸವಾಸೀ ॥
> ಕೋಈ ಬ್ರಹ್ಮಚರ್ಜ ಪಂಥ ಲಾಗೇ । ಕೋಇ ದಿಗಂಬರ ಆವುಹಿಂ ನಾಂಗೇ ।
> ಕೋಇ ಸರಸುತೀ ಸಿದ್ಧ ಕೋಇ ಜೋಗೀ । ಕೋಇ ನಿರಾಸಪಂಥ ಬೈಠಿ ಬಿಯೋಗೀ ॥
> ಕೋಇ ಮಹೇಸುರ ಜಂಗಮ ಜತೀ । ಕೋಇ ಏಕ ಪರಖೈ ದೇವೀಸತೀ ॥
> ಸೇವಕಾ ಖೇವರಾ ಬಾನ ಪರಸ್ತೀ ಸಿಧ ಸಾಧಕ ಅವಧೂತ ।
> ಆಸನ ಮಾರಿ ಬೈಠ ಸಬ್ ಜಾರಿ ಆತ್ಮಾಭೂತ ॥[12]

ಅಲ್ಲಿ ಹೆಜ್ಜೆಹೆಜ್ಜೆಗೂ ಬಾವಿಗಳಿದ್ದವು. ಅವುಗಳಿಗೆ ಕಟ್ಟೆಗಳಿದ್ದವು, ಸೋಪಾನಗಳಿದ್ದವು. ಅನೇಕ ತೀರ್ಥಕುಂಡಗಳಿದ್ದವು. ಸುತ್ತಲೂ ಮಂಟಪಗಳು, ಮಠಗಳು ಇದ್ದವು. ಅಲ್ಲಿ ಜಪ, ತಪ, ಆಸನಗಳಲ್ಲಿ ಸಾಧಕರು ಮಗ್ನರಾಗಿದ್ದರು. ಒಬ್ಬರು ಋಷೀಶ್ವರರಾದರೆ, ಒಬ್ಬರು ಸನ್ಯಾಸಿ. ಒಬ್ಬರು ರಾಮಭಕ್ತರಾದರೆ ಮತ್ತೊಬ್ಬರು ಮಾಸೋಪವಾಸಿಗಳು. ಕೆಲವರು ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದರೆ,

---

12 ಪದ್ಮಾವತ್ : ಸಂ. ಡಾ॥ ವಾಸುದೇವ ಶರಣ ಅಗರ್‌ವಾಲ್, ಸಿಂಹಲದ್ವೀಪ, ವರ್ಣನಖಂಡ 30

ನಗ್ನ ದಿಗಂಬರರು ಕೆಲವರು. ವಾಕ್‌ಸಿದ್ಧಿಯನ್ನು ಗಳಿಸಿದ ಸಿದ್ಧರಿದ್ದರೆ, ಮತ್ತೆ ಕೆಲವರು ಜೋಗಿಗಳು. ಮಾಹೇಶ್ವರು ಕೆಲವರಾದರೆ ಕೆಲವರು ಜಂಗಮರು ಅಥವಾ ಕೆಲವರು ಮಾಹೇಶ್ವರ ಜಂಗಮರು. ಯತಿಗಳು ಕೆಲವರು. ಕೆಲವರು ದೇವೀ ಉಪಾಸಕರು. ಕೆಲವರು ಶ್ವೇತಪಟರು, ಕ್ಷಪಣಕರು, ವಾನಪ್ರಸ್ಥರು, ಸಿದ್ಧರು, ಸಾಧಕರು, ಅವಧೂತರು. ಇವರೆಲ್ಲ ಆಸನಸ್ಥರಾಗಿ ಎಲ್ಲ ವಾಸನೆಗಳನ್ನೂ, ಸಾಧನೆಯ ಮೂಲಕ ನಾಶಮಾಡಿದವರು.

ಮೇಲಣ ಪದ್ಯಕ್ಕೆ ವ್ಯಾಖ್ಯಾನ ಬರೆಯುತ್ತಾ ಡಾ॥ ಅಗರ್‌ವಾಲರು 'ಜಂಗಮ' ಎಂಬುದಕ್ಕೆ 'ಬಸವನಿಂದ ಸ್ಥಾಪಿತ ಲಿಂಗಾಯತ ಶೈವ ಸಂಪ್ರದಾಯ' ಎಂದು ಬರೆದಿದ್ದಾರೆ (ಅದೇ ಪುಟ 35).

ಇದೇ ಕವಿ ಮತ್ತೊಂದೆಡೆ ನಾಗಮತಿಯ ವಿರಹವನ್ನು ವರ್ಣಿಸುತ್ತ ಆಕೆ ದಾರಿಯಲ್ಲಿ ಹೋಗಿಬರುವ ಜೋಗಿ ಜಂಗಮರನ್ನೆಲ್ಲ ತನ್ನ ನಲ್ಲನ ಬಗೆಗೆ ಕೇಳುತ್ತಾಳೆ ಎಂದು ಹೇಳುತ್ತಾನೆ.

ಫಿರಿ ಫಿರಿ ರೋಈ ನಕೋಈ ಡೋಲಾ ।
ಆಧೀ ರಾತ್ ವಿಹಂಗಮ ಬೋಲಾ ॥
ತೇಂಫೀರ್ ಫಿರ್ ದಾಧೇ ಸಬ್ ಪಾಂಖೀ ।
ಕೇಹಿ ದುಃಖ ರೈನಿ ನ ಲಾವಸಿ ಆಂಖೀ ॥
ನಾಗಮತೀ ಕಾರನಕೈ ರೋಈ ।
ಕಾ ಸೋವೈ ಜೋ ಕಂತ ಭಿಛೋಈ ॥
ಮನ ಚಿತು ಹುತೇನ ಬಿಸರೇ ಧೋರೇ ।
ನೈನ ರಾಜಲ ಚಖಿ ರಹೇನ ಮೋರೇ ॥
ಕಹಿಸಿ ಜಾತಿ ಹೋಂ ಸಿಂಘಲದೀಪಾ ।
ತೇಹಿ ಸೇವಾತಿ ಕಈ ನೈನಾ ಸೀಪಾ
ಜೋಗಿ ಹೋಇ ನಿಸರಾ ಸೋನಾಹು ।
ತಬ್ ಹುತ ಕಹಾ ಸಂದೇಸ ನ ಕಾಹು ॥
ನಿತಿ ಪೂ ಛೋಂ ಸಬ್ ಜೋಗೀ ಜಂಗಮ ।
ಕೋಈ ನಿಜು ಬಾತ್ ನ ಕಹೈ ವಿಹಿಂಗಮ ॥
ಚಾರಿಉ ಚಕ್ರ ಉಜಾರಿ ಮೈಂ ಏಕ ಸೀಸಂದೇಸಟೇಕು ।
ಕಹಾಂ ವಿರಹ ದುಖ ಆಸನ ಬೈಠಿ ಸುನಹಿ ಉಡೇ ಏಕು ॥[13]

ಆಕೆ ಮತ್ತೆ ಮತ್ತೆ ಅಳುತ್ತಿದ್ದಳು. ಆದರೆ ಯಾರೂ ಅದಕ್ಕೆ ಮಿಸುಕಾಡಲಿಲ್ಲ. ಆಗ ಅರ್ಧರಾತ್ರಿಯಲ್ಲಿ ಒಂದು ಹಕ್ಕಿ ಮೌನ ಭಂಗ ಮಾಡಿ ಕೇಳಿತು, "ನೀನು ಸುತ್ತಿ ಸುತ್ತಿ ಎಲ್ಲ ಹಕ್ಕಿಗಳನ್ನು ನಿನ್ನ ಗೋಳಿನಿಂದ ಸುಟ್ಟಿದ್ದೀಯೆ. ಯಾವ ಕಾರಣ

13 ಪದ್ಮಾವತ್ : ನಾಗಮತೀ ಸಂದೇಸಖಂಡ್, ಪೃ. 439

ದಿಂದ ನಿನ್ನ ಕಣ್ಣಿಗೆ ನಿದ್ದೆಯಿಲ್ಲ? ಆಗ ನಾಗಮತಿ ತನ್ನ ರೋದನದ ಕಾರಣವನ್ನು ಆ ಹಕ್ಕಿಗೆ ತಿಳಿಸಿದಳು.

"ತನ್ನ ಪ್ರಿಯನಿಂದ ದೂರವಿರುವ ರಮಣಿಗೆ ನಿದ್ದೆ ಎಲ್ಲಿ? ಆ ಅಮಾಯಕ ಪ್ರಿಯತಮನಾದರೋ ಮನದಿಂದ ದೂರ ಸರಿಯಲೊಲ್ಲ. ಅತ್ತು ಅತ್ತು ನನ್ನ ಕಣ್ಣಿನ ಕಾಡಿಗೆ ಹಾಗೂ ದೃಷ್ಟಿಯೇ ಉಡುಗಿಹೋಗಿದೆ. ನನ್ನ ಪ್ರಿಯತಮ ಸಿಂಹಳದ್ವೀಪಕ್ಕೆ ಹೋಗಿಬರುವೆನೆಂದು ಹೇಳಿಹೋದ. ಅಂದಿನಿಂದ ನನ್ನ ಕಂಗಳು ಕಪ್ಪೆಯ ಚಿಪ್ಪು ಸ್ವಾತಿಯ ಮಳೆಗಾಗಿ ಕಾಯುವಂತೆ ಅವನಿಗಾಗಿ ಕಾಯುತ್ತಿವೆ. ಗಂಡ ಜೋಗಿಯಾಗಿ ಹೋದಂದಿನಿಂದ ಯಾರೂ ನನಗೆ ಅವನ ಸುದ್ದಿ, ಸಂದೇಶ ತಿಳಿಸಲಿಲ್ಲ. ನಿತ್ಯ ಕಂಡ ಕಂಡ ಜೋಗಿ ಜಂಗಮರನ್ನು ಅವನ ಬಗೆಗೆ ಕೇಳುತ್ತಿರುತ್ತೇನೆ. ಎಲೆ ವಿಹಂಗಮ, ಯಾರೂ ನನ್ನ ಗಂಡನ ಸುದ್ದಿಯನ್ನೇ ಹೇಳುವುದಿಲ್ಲವಲ್ಲ. ನನ್ನ ಪಾಲಿಗೆ ಎಲ್ಲೆಲ್ಲೂ ಹಾಳುಸುರಿಯುತ್ತಿದೆ. ನೀನು ನನ್ನ ಸಂದೇಶವನ್ನು ಒಯ್ಯಬಲ್ಲೆಯಾ? ಒಂದು ಘಳಿಗೆ ಕುಳಿತು ಕೇಳುವುದಾದರೆ ನನ್ನ ವಿರಹದುರಿಯನ್ನು ತೋಡಿಕೊಳ್ಳುತ್ತೇನೆ."

ಕಬೀರನ ತರುವಾಯ ಹಿಂದಿಯಲ್ಲಿ ಅತ್ಯಂತ ಪ್ರಸಿದ್ಧನಾದ ಸಂತನೆಂದರೆ ದಾದೂ ದಯಾಲ್ (ಕ್ರಿ.ಶ. 1544–1603). ಈತ ಗುಜರಾತಿನಲ್ಲಿ ಜನಿಸಿ ರಾಜಾಸ್ಥಾನವನ್ನು ತನ್ನ ಸಾಧನಾಕ್ಷೇತ್ರವನ್ನಾಗಿ ಮಾಡಿಕೊಂಡ. ಈತ ಜಂಗಮರನ್ನು ತನ್ನ 'ದೋಹೆ' (ದ್ವಿಪದಿ) ಯೊಂದರಲ್ಲಿ ಹೀಗೆ ಉಲ್ಲೇಖಿಸಿದ್ದಾನೆ.

> 'ಜೋಗೀ ಜಂಗಮ ಸೇವಡೇ, ಬೋಧಸಂನ್ಯಾಸೀ ಸೇಖ್ ।
> ಷಟ್ ದರಸನ ದಾದೂ ರಾಂಮ ಬಿನ, ಸಬೈ ಕಪಟಕೇ ಭೇಷ್ ॥[14]

(ಜೋಗಿಗಳು, ಜಂಗಮರು, ಶ್ವೇತಪಟರು, (ಶ್ವೇತಾಂಬರ ಜೈನಸಾಧುಗಳು), ಬೌದ್ಧ ಸಂನ್ಯಾಸಿಗಳು, ಮುಸಲ್ಮಾನ ಶೇಖರು, ಮತ್ತು ಷಟ್‌ದರ್ಶನ ಮೊದಲಾದವು. ದಾದು ಹೇಳುತ್ತಾನೆ ರಾಮನಿಲ್ಲದೆ ಇವೆಲ್ಲ ಕಪಟದ ವೇಷ ಮಾತ್ರ.)

ದಾದುವಿನ ಶಿಷ್ಯ ಸುಂದರದಾಸ ಉತ್ತರ ಭಾರತದ ಸಂತರಲ್ಲೆಲ್ಲ ಅತ್ಯಂತ ದೊಡ್ಡ ಪಂಡಿತ. ಆತ ರಾಜಾಸ್ಥಾನದ ಜೈಪುರ ಸಂಸ್ಥಾನದಲ್ಲಿದ್ದ. ಆತನ ಕಾಲ ಕ್ರಿ. ಶ. 1596–1689. ಆತ ತನ್ನ 'ಭ್ರಮವಿಧ್ವಂಸನ ಅಷ್ಟಕ' ಎಂಬ ಗ್ರಂಥದಲ್ಲಿ ದಾದೂ ಹೇಳಿದ ಮಾತನ್ನೇ ಹೀಗೆ ಹೇಳಿದ್ದಾನೆ :

> 'ಷಟ್ ದರಸನ ಹಮ್ ಖೋಜಿಯಾ, ಯೋಗೀ ಜಂಗಮ ಶೇಖ್ ।
> ಸಂನ್ಯಾಸೀ ಅರುಸೇವಡಾ, ಪಂಡಿತ ಭಕ್ತಾ ಭೇಷ್ ।। [15]

---

14 ದಾದೂದಯಾಲ್ : (ಲೇ ಪರಶುರಾಮ ಚತುರ್ವೇದಿ) ನಾರೀಪ್ರಚಾರಿಣೀಸಭಾ, ಕಾಶಿ. ಭೇಷ ಕೌ ಅಂಗ್ 31

15 ಸಪಸುಧಾಸಾರ್, ಸಂ:- ವಿಯೋಗೀಹರಿ, ಪುಟ 591

(ಷಟ್ ದರ್ಶನಗಳನ್ನು ನಾವು ತಡಕಾಡಿದೆವು. ಯೋಗಿ, ಜಂಗಮ, ಶೇಖ್, ಸಂನ್ಯಾಸಿ, ಶ್ರಮಣ, ಪಂಡಿತ ಮತ್ತು ಭಕ್ತ ಇವರಲ್ಲೆಲ್ಲ ಅರಸಿದೆವು. ಆದರೆ ಅವರೆಲ್ಲ ವೇಷಧಾರಿಗಳು.)

ಸಿಕ್ಖರ ಒಂಭತ್ತನೆಯ ಗುರುವಾದ ಗುರು ತೇಜಬಹುದ್ದೂರ್ (ಕ್ರಿ. ಶ. 1622–1655) ಒಳ್ಳೆಯ ಕವಿಯೂ ಹೌದು. ಇವರ ಒಂದು ಪದದಲ್ಲಿ 'ಜಂಗಮ' ಶಬ್ದ ಸಾಧಾರಣಾರ್ಥದಲ್ಲಿ ಬಳಕೆಗೆ ಬಂದಿದೆ :

"ಪಾಪೀ ಹಿಯೇ ಮೈಂ ಕಾಮ ಬಸಾಇ । ಮನುಚಂಚಲು ಇಆ ತೇಗಹಿಓನಜಾಇ ।
ಜೋಗೀ ಜಂಗಮ ಅರುಸಂನಿಆಸಿ । ಸಭಹೀ ಪರಿಡಾರೀ ಇಹ ಫಾಂಸಿ ॥
ಜಹಿ ಜಹಿ ಹರಿಕೋ ನಾಮು ಸಮ್ಹಾರಿ । ತೇಭವ ಸಾಗರ ಉತರೇ ಪಾರಿ ।
ಜನ್ನಾನಕ ಹರಿಕೇ ಸರನಾಇ । ದೀಜೈ ನಾಮು, ರಹೈ ಗುನ ಗಾಇ ॥[16]

(ಹೃದಯದಲ್ಲಿ ಕಾಮವನ್ನು ನೆಲೆಗೊಳಿಸಿ ಮನವನ್ನು ಚಂಚಲಗೊಳಿಸಿರುವವರು ಅಗ್ರಾಹ್ಯರು. ಜೋಗಿ, ಜಂಗಮ ಮತ್ತು ಸಂನ್ಯಾಸಿ ಇವರೆಲ್ಲರಿಗೂ ಇದು ನೇಣನ್ನು ಬಿಗಿದಿದೆ. ಆದರೆ ಹರಿನಾಮವನ್ನು ಆಶ್ರಯಿಸಿದವರು ಭವಸಾಗರವನ್ನು ದಾಟಿದರು. ಭಕ್ತನಾನಕ ಹರಿಶರಣ ನಾಮವನ್ನು ನೆನೆದು ಗುಣಸ್ಮರಣೆ ಮಾಡಿದರು.)

ಬಿಹಾರಿನ ಸಂತ ದರಿಯಾ (1674-1780) ಕೂಡ ಇದೇ ರೀತಿ ವಿವಿಧ ಪಂಥಗಳನ್ನು ಖಂಡಿಸುವಾಗ ಜಂಗಮರನ್ನು ಉಲ್ಲೇಖಿಸುತ್ತಾನೆ:

''ಜಂಗಮ ಜೋಗೀ ಸೇವಡಾ, ಪಡೇಕಾಲ ಕೇಹಾಥ್ ।
ಕಹ ದರಿಯಾ ಸೋಇ ಬಾಚಿಹೈ, ಸತ್ತನಾಮ ಕೇಸಾಥ॥[17]

[ಜಂಗಮರು ಜೋಗಿಗಳು, ಮತ್ತು (ಶ್ವೇತಾಂಬರ) ಜೈನರು ಕಾಲನ ಹಿಡಿತಕ್ಕೆ ಸಿಕ್ಕಿದರು. ದರಿಯ ಹೇಳಿದ, 'ಸತ್ಯನಾಮ'ವನ್ನು ನಂಬಿದವರು ಮಾತ್ರ. ಪಾರಾದರು.]

ಆಧುನಿಕ ಹಿಂದೀ ಸಾಹಿತ್ಯದಲ್ಲಿ 'ಜಂಗಮ' ಶಬ್ದದ ಬಳಕೆ ಅಷ್ಟಾಗಿ ಇಲ್ಲದಿದ್ದರೂ 'ಜಂಗಮ' ಎಂದರೆ ವೀರಶೈವ ಸಾಧು ಎಂದು ಅನೇಕರು ಖಚಿತವಾಗಿ ಹೇಳಿದ್ದಾರೆ. ಹಿಂದಿಯ ಸುಪ್ರಸಿದ್ಧ ಐತಿಹಾಸಿಕ ಕಾದಂಬರಿಕಾರರಾದ ವೃಂದಾವನಲಾಲ್ ವರ್ಮ ಅವರು ತಮ್ಮ 'ಮೃಗನಯನಿ' ಎಂಬ ಕಾದಂಬರಿಯಲ್ಲಿ 'ವಿಜಯಜಂಗಮ' ಎಂಬ ಐತಿಹಾಸಿಕ ಪಾತ್ರವನ್ನು ತಂದಿದ್ದಾರೆ. 16ನೆಯ ಶತಮಾನದಲ್ಲಿ ಆಗಿಹೋದ ಗ್ವಾಲಿಯರಿನ ಮಹಾರಾಜ ಮಾನಸಿಂಹ ತೋಮರನ ಆಸ್ಥಾನ ಕಲಾಕಾರನಾದ ಈತ ವೀಣಾಪ್ರವೀಣ, ಕಾಯಕದ ಕಲಿ. ಮಹಾರಾಜನೊಬ್ಬನ ಆಸ್ಥಾನದ ರತ್ನವಾಗಿದ್ದರೂ

16 ಸಂತಸುಧಾಸಾದು ಭಾಗ 2–ಪು. 399
17 ಅದೇ ಭಾಗ 2–ಪು. 95

ಆತ ನಿತ್ಯವೂ ಶ್ರಮದಾನ ಮಾಡದೆ ಅನ್ನಗ್ರಹಣ ಮಾಡುತ್ತಿರಲಿಲ್ಲ. ವರ್ಣಾಶ್ರಮ ಧರ್ಮ ವಿರೋಧ, ಸರ್ವಸಮತ್ವ, ಕಾಯಕ ನಿಷ್ಠೆ ಮೊದಲಾದ ಆತನ ವಿಚಾರಗಳಿಂದ ಮಾನಸಿಂಹ ತುಂಬ ಪ್ರಭಾವಿತನಾಗುತ್ತಾನೆ. ತನ್ನ ಧರ್ಮಗುರುವಾದ ಬಸವಣ್ಣನವರ ಬಗೆಗೆ ಆತ ಅತ್ಯಂತ ಶ್ರದ್ಧೆಯನ್ನು ಹುಟ್ಟಿಸಿ ಕನ್ನಡ ಸಂಸ್ಕೃತಿಯ ಜೀವಂತ ಪ್ರತಿನಿಧಿಯಾಗಿ ಮೆರೆಯುತ್ತಾನೆ, ಅಷ್ಟೇ ಅಲ್ಲ, ಬೈಜೂಬಾವ್ರಾನಂತಹ ಸಂಗೀತಗಾರನಿಗೆ ಸಮನಾದ ವೀಣಾವಾದಕನಾಗಿ ಮೆರೆಯುತ್ತಾನೆ. ಸಂಗೀತ ವಿದುಷಿ ಮಹಾರಾಣಿ ಮೃಗನಯನಿಗೆ ಆತ ವೀಣೆಕಲಿಸುವ ಆಚಾರ್ಯ.

ಡಾ॥ ಹಜಾರೀ ಪ್ರಸಾದ್ ದ್ವಿವೇದಿಯವರು ತಮ್ಮ "ಚಾರುಚಂದ್ರಲೇಖ" ಎಂಬ ಕಾದಂಬರಿಯಲ್ಲಿ 'ಗುಂಡಕೇಶ್ವರ' ಎಂಬ ಜಂಗಮನನ್ನು ತರುತ್ತಾರೆ. ಅವರ ಪ್ರಕಾರ ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದಲ್ಲೇ ಕೆಲವು ಜಂಗಮರು ಮಧ್ಯ ಭಾರತದತ್ತ ಓಡಿಹೋಗಿ ಗ್ವಾಲಿಯರ್ ಮೊದಲಾದ ಕಡೆ ನೆಲೆಸಿದರಂತೆ.

ಡಾ. ಅಗರವಾಲರು ಹೇಳುವಂತೆ 'ಜಂಗಮ' ಎಂದರೆ ವೀರಶೈವ ಸಾಧು ಎನ್ನುವುದು ನಿಶ್ಚಿತವಾದರೆ ಬಸವಾದಿ ಪ್ರಮಥರು ಆಗಿಹೋದ ಕೂಡಲೆ ಇಲ್ಲವೆ ಅವರ ಜೀವಿತ ಕಾಲದಲ್ಲೇ ವೀರಶೈವ ಸಾಧುಸಂತರು ದಿಲ್ಲಿ, ಕಾಶಿ, ಗ್ವಾಲಿಯರ್, ಅಯೋಧ್ಯೆ, ಮೊದಲಾದ ಪ್ರಸಿದ್ಧ ಜನಪದಗಳಲ್ಲದೆ ರಾಜಾಸ್ಥಾನ, ಬಿಹಾರ್, ಕೊನೆಗೆ ಗುರು ತೇಗಬಹಾದ್ದೂರನ ಹೊತ್ತಿಗೆ ಪಂಜಾಬಿನವರೆಗೂ ಕಾಣಿಸಿಕೊಂಡಿದ್ದರು ಎಂದಾಗುತ್ತದೆ. ಈ 'ಜಂಗಮ'ರು ಬಸವಣ್ಣನವರ ತರುವಾಯ ಶೀಘ್ರದಲ್ಲೇ ಉತ್ತರದಲ್ಲೆಲ್ಲ ಹಬ್ಬಿಕೊಂಡರು ಎಂಬುದಕ್ಕೆ ಕಾಶಿಯ 'ಜಂಗಮವಾಡೀಮಠ' ಒಂದು ಜೀವಂತಸಾಕ್ಷಿ. 'ಕೆಳದಿ ನೃಪವಿಜಯ'ದ ತೃತೀಯಾಶ್ವಾಸದಲ್ಲಿ ಈ ಜಂಗಮವಾಡೀ ಮಠದ ವೃತ್ತಾಂತ ಬರುತ್ತದೆ. ಅದರಲ್ಲಿ ದೊಡ್ಡಸಂಕಣ್ಣನಾಯಕನ ಕಾಶೀಯಾತ್ರೆ, ಅಲ್ಲಿಯ ಜಂಗಮವಾಡೀಮಠದ ಜೀರ್ಣೋದ್ಧಾರ ಮೊದಲಾದವನ್ನು ಕುರಿತು ಹೀಗೆ ಹೇಳಿದೆ :—

"ಇಂತತ್ಯಂತ ಮಹಿಮಾಸ್ಪದೆಯಪ್ಪ ಗಂಗೆಯಂ ನಿಟ್ಟಿಸಿ ನಲಿನಲಿದು ತತ್ಸಂಕಣೇಂದ್ರಂ ತದ್ವಾರಾಣಸಿಯೊಳ್ಮಜ್ಜನಂಗೈದನಂತರಂ ಮಣಿಕರ್ಣಿಕೆಯೊಳ್ಮಿಂದು ಬಹುವಿಧದಾನಧರ್ಮಂಗಳನಾಗಿಸಿ ವಿಶ್ವೇಶ್ವರ ನಡೆದಾವರೆಯಂ ಭಜಿಸಿ ಮತ್ತಂ ಕಾಶೀಕ್ಷೇತ್ರ ಮಹಿಮಾತಿಶಯಂಗಳಂ ಕೇಳ್ದು ಸಂತಸಂ ಬಿಡುತ್ತಂ ತತ್ತಲ್ಲಿಂಗ ತೀರ್ಥಂಗಳನವಲೋಕಿಸುತ್ತುಂ ಪಂಚಕ್ರೋಶಯಾತ್ರೆಯಂ ರಚಿಸಿ ಸಂತಸಂದಳೆಯುತಿಂತು ಕತಿಪಯ ದಿವಸಂ ವರ್ತಿಸುತ್ತುಮಿರ್ದು ಪಿಂತೆ ಬಹುಕಾಲದೊಳ್ ಶ್ರೀಶೈಲದೊಳ್ ನಂದೀಶ್ವರಾಂಶೀಭೂತನಾಗುದಿಸಿದ ವೀರಶೈವ ಶಿರೋಮಣಿಯಪ್ಪ ಶೀಲವಂತನಾಯಕನೆಂಬ ಕಾರಣ ಪುರುಷನೈತಂದು ಮೊರಸನೆರಂಕೆಗಳಂ ಮಾಡಿಕೊಂಡು ಪಾರಿಪವಾಡಂಗಳಂ ಮೆರೆದು ಜಯ ಚಂದ್ರ ನರೇಂದ್ರನಂ ಮೆಚ್ಚಿಸಿ ದಶಾಶ್ವಮೇಧದ ಘಟ್ಟದಪಶ್ಚಿಮ ದಿಕ್ಕಿನೊಳೆಸೆವ ಹರಿಕೇಶವಾನಂದ ಕಾನನಮಂ ಪಡೆದಾಭೂಮಿಯೊಳ್ ಮಠಮಂ ಕಟ್ಟಿಸಿ ತಾನಾಮಠಮಧ್ಯಸ್ತಂಭಾಗ್ರದೊಳ್ಯೋಗಾರೂಢನಾಗಿ ಕುಳ್ಳಿರ್ದಂತರ್ಧಾನವನೈದಲ್ ಬಳಿಕಿತ್ತಂ ಪಲವು ವತ್ಸರಂಗಳ್ಪೋಗಲೊಡನೆ ಜಯ

ಚಂದ್ರನರೇಂದ್ರನ ವಂಶಾಗತರೆಲ್ಲಂ ಧರ್ಮಸಂತಾನಮಂ ಪಡೆಯಲಾಗಿ ಬಳಿಕಿತ್ತಂ ಮ್ಲೇಂಛರ್ಕಳ್ಬೆರ್ಚಿ ತತ್ಸ್ಥಳವನಾಕ್ರಮಿಸಿರಲವರ್ಕಳಂ ವಾರೆದೆಗೆಸಿ ಸಂಕಣನಾಯಕಂ ತಾನಾಸ್ಥಾನಮಂ ಸಂಪಾದಿಸಿ ಚತುರ್ಗಡಿಗಳೊಳ್ಮಿಲಾಸ್ಥಾಪನಮಂ ರಚಿಸಿ ಜಂಗಮವಾಟಿಯೆಂದು ಪೆಸರಿಟ್ಟು ತನ್ಮಧ್ಯದೊಳತಿ ಮನೋಹರಮಾದ ಮಠಮಂ ನಿರ್ಮಾಣಂಗೈಸಿ ತದ್ಧರ್ಮಾರ್ಥಮಾ ಮಠದ ನಿರ್ಯತಿದಿಶಂ ಪ್ರಾಂತ ದೊಳ್ ಜಂಗಮಪುರಮೆಂಬ ಗ್ರಾಮಮಂ ಬಿಡಿಸಿ ಸ್ಥಿರಶಾಸನಮಂ ಬರೆಸಿ ಜಂಗಮಮೂರ್ತಿಗಳ್ಗೆ ಶಿವಾರ್ಪಣಂಗೈದು ಮತ್ತಮದಲ್ಲದೆ ಪಂಚಮಠಮಂಕಟ್ಟಿಸಿ ಶಿವಜಂಗಮಕ್ಕೆ ಶಿವಾರ್ಪಣಂಗೈದು ಪ್ರೌಢರುಗಳಪ್ಪ ಶಿಲ್ಪಿಗಳಂ ಬರಿಸಿ ತತ್ಕಾಶೀಕ್ಷೇತ್ರದೊಳೊಪ್ಪುವ ಕಪಿಲಾಧಾರಾ ತೀರ್ಥ ಮಾನಸ ಸರೋವರ ಗಂಧರ್ವ ಸಾಗರಮೆಂಬ ತೀರ್ಥಂಗಳಂ ಶಿಲಾಮಯುವನಾಗಿಸಿ ಜೀರ್ಣೋದ್ಧಾರಮಂ ರಚಿಸಿ ಮತ್ತಮ್ಮೈಯಪ್ಪನೆಂಬ ಸೇನಬೋವನ ಮುಖದಿಂ ಕರ್ದಮೇಶ್ವರ ಸರ್ಮದೇಶ್ವರ ಭೀಮ ಚಂಡಿಕೆ ವೃಷಭಧ್ವಜೇಶ್ವರ ದೇವಸ್ಥಾನಂಗಳಂ ಜೀರ್ಣೋದ್ಧಾರಮಂ ರಚಿಸಿ ಸ್ವಪುತ್ರ ವೆಂಕಟಪ್ಪ ನಾಯಕರ ಹೆಸರಲ್ಲಿ ಶಿಲಾಶಾಸನವಂ ಬರೆಸಿ ಶಾಶ್ವತಮಾದ ಧರ್ಮಕೀರ್ತಿ ಸುಕೃಂತಗಳನಾರ್ಜಿಸಿ ಬಳಿಕ್ಕಾ ವಾರಣಾಸಿಕ್ಷೇತ್ರದೊಳಂದತಿ ಮನೋಹರಮಾದ ಸ್ಥೂಲಲಿಂಗಮಂ ಸಂಪಾದಿಸಿಕೊಂಡ ನಂತರದೊಳ್ ॥18

ಮೇಲೆ ಹೇಳಿದ ಶೀಲವಂತಯ್ಯನ ಕಾಲ ಸು. 1160 ಎಂದು ಕವಿಚರಿತೆಕಾರರು ನಿರ್ಧರಿಸಿದ್ದಾರೆ. ಎಂದರೆ ಈತ ಬಸವಣ್ಣನವರ ಸಮಕಾಲೀನನೆಂದಾಯಿತು. ಈ ಮಠದಲ್ಲಿ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ವಿಶ್ವಾರಾಧ್ಯನ ಪೀಠವಿದೆ. ಇದು ಬಸವಣ್ಣನವರಿಗಿಂತಲೂ ಹಿಂದಿನ ಪೀಠವೆಂದು ಮಠದವರು 'ಜಂಗಮವಾಡೀ ಮಠದ ಪ್ರಾಚೀನತ್ವ' ಎಂಬ ಹಿಂದೀ ಗ್ರಂಥವೊಂದರಲ್ಲಿ ಪ್ರತಿಪಾದಿಸಿದ್ದಾರೆ. ಅದು ಹೇಗಾದರೂ ಇರಲಿ ಕೊನೆಯಪಕ್ಷ ಶೀಲವಂತಯ್ಯನಿಂದ ಇಂದಿನವರೆಗೆ ಈ ಮಠವಲ್ಲಿ ಜಂಗಮ ಪರಂಪರೆ ನಡೆದು ಬಂದಿರುವುದು ಸ್ಪಷ್ಟ.

ಈ ರೀತಿ 12ನೆಯ ಶತಮಾನದಿಂದಲೇ ಉತ್ತರದಲ್ಲಿ ಕಾಣಿಸಿಕೊಂಡ ಈ ಜಂಗಮರ ಪ್ರಭಾವ ಅಲ್ಲಿಯ ಜನಜೀವನದ ಮೇಲೆ ಬಿದ್ದಿರಬೇಕು. ಅಷ್ಟೇ ಅಲ್ಲ, ಔತ್ತರೇಯ ನಂತರ, ಅದರಲ್ಲೂ ಸಂತಸಾರ್ವಭೌಮ ಕಬೀರನ ಮೇಲೂ ಬಿದ್ದಿರಬೇಕು. ಕಾರ್ಯದ ಮಹತ್ವ ಸಂತ ಒಬ್ಬ ಯೋಧ ಎಂಬ ಕಲ್ಪನೆ ಮೊದಲಾದವು ವೀರಶೈವ ಪ್ರಭಾವ ಎಂದು ನಾವು ಅನ್ಯತ್ರ ವಿವರಿಸಿದ್ದೇವೆ.

ಮೇಲಿನ ಉದ್ಧರಣಗಳಲ್ಲಿ 'ಜಂಗಮ'ರನ್ನು ಬಹುಪಾಲು ಎಲ್ಲರೂ ಖಂಡಿಸಿದ್ದಾರೆಯೇ ಹೊರತು ಗೌರವವನ್ನು ವ್ಯಕ್ತಪಡಿಸಿಲ್ಲ. ಅಂತಹುದರಲ್ಲಿ ಅವರ ಪ್ರಭಾವ ಜನರ ಮೇಲೆ ಬಿದ್ದಿದೆ ಎನ್ನುವುದು ಸರಿಯೆ ಎಂಬ ಪ್ರಶ್ನೆ ಏಳಬಹುದು. ಶಂಕರಾಚಾರ್ಯರು ಬೌದ್ಧರನ್ನು ಖಂಡಿಸಿದರು, ಅಂದಮಾತ್ರಕ್ಕೇ ಅವರ ಪ್ರಭಾವಕ್ಕೆ ಈಡಾಗಲಿಲ್ಲ ಎಂದು ಹೇಳಲು ಸಾಧ್ಯವೆ ? ಕಬೀರ ಯೋಗಿಗಳನ್ನು ಖಂಡಿಸಿದ್ದಾನೆ. ಆದರೆ ಅವನ ಪದಗಳಲ್ಲೆಲ್ಲ ಯೋಗಮಾರ್ಗದ ಪ್ರಕ್ರಿಯೆಗಳ ವರ್ಣನೆಯೇ ವಿಜೃಂಭಿಸುತ್ತದೆ.

---

18 ಕೆಳದಿನೃಪವಿಜಯ, ಪು. 58-60.

ಜೀವದ ಉಗಮ

ಎಸ್. ಸುಂದರರಾಜನ್

ಭೂಮಿಯ ಮೇಲೆ ಜೀವ ಹೇಗೆ ಉದಯಿಸಿತೆಂಬ ಸಮಸ್ಯೆ ಅತ್ಯಂತ ಪ್ರಾಚೀನ ಕಾಲದಿಂದಲೂ ವಿಜ್ಞಾನಿಗಳ ಮನಸ್ಸನ್ನು ಸೆರೆಹಿಡಿದು, ಇದುವರೆಗೂ ತೀರದ ತಲೆ ನೋವಾಗಿದೆ. ಅದು ಅತ್ಯಂತ ಮೂಲಭೂತವಾದ ಹಾಗೂ ಅತ್ಯಂತ ಕ್ಲಿಷ್ಟ ಸಮಸ್ಯೆಗಳಲ್ಲೊಂದು. ವಿಜ್ಞಾನಿಗಳು ಇದರ ಬಗ್ಗೆ ವಿಧವಿಧದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಅನೇಕರು ಜೀವ ಮೊದಲು ಯಾವುದೋ ಒಂದು ದೈವೀವಸ್ತುವಿನಲ್ಲಿ ಉದಯಿಸಿತೆಂದೂ, ಅನಂತರ ಅದು ಭೂಮಿಗೆ ವರ್ಗಾವಣೆಯಾಯಿತೆಂದೂ ಅಭಿಪ್ರಾಯ ಪಡುತ್ತಾರೆ. ಕೆಲವರು ಖಗೋಳ ಶಾಸ್ತ್ರಜ್ಞರು ಅನೇಕ ಗ್ರಹಗಳ ಮೇಲೆ ಜೀವ ಇರುವ ಕುರುಹು ಕಂಡುಬರುವುದೆಂದು ತಿಳಿಸಿದರೂ, ಇತರ ಗ್ರಹಗಳ ಮೇಲೆ ಜೀವ ಇದ್ದೇ ಇದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಜೀವ ಯಾವುದೋ ಒಂದು ದೈವೀವಸ್ತುವಿನ ಮೂಲಕ ಈ ಜಗತ್ತಿಗೆ ಬಂದಿತೆಂಬುದು ಸತ್ಯದೂರವಾದ ಸಂಗತಿ. ಏಕೆಂದರೆ, ಬೇರೆ ಗ್ರಹಗಳಿಂದ ಹೊರಬಂದು ಶೂನ್ಯಾಕಾಶದಲ್ಲಿ ಸಂಚರಿಸುವಾಗ ಜೀವಿಗಳಿಗೆ ಸೂರ್ಯನಿಂದ ಹೊರಹೊಮ್ಮುವ ನೀಲಾತೀತ ಕಿರಣಗಳಿಂದ ಅಪಾಯವಿದೆ. ಭೂಮಿಯ ಮೇಲಿರುವಂತೆ, ಜೀವಿಗಳನ್ನು ಮಾರಕ ಕಿರಣಗಳಿಂದ ರಕ್ಷಿಸಲು ವಾತಾವರಣದ ಕವಚವಿಲ್ಲ. ಆದ್ದರಿಂದ ಈ ವಾದವನ್ನು ನಾವು ಸುಲಭವಾಗಿ ತಳ್ಳಿಹಾಕಬಹುದು. ಅಕಸ್ಮಾತ್ ಇದು ನಿಜವಾದರೂ, ಜೀವದ ಉದಯದ ಸಮಸ್ಯೆಯನ್ನೇನೂ ಬಿಡಿಸಿದಂತಾಗಲಿಲ್ಲ. ಕೇವಲ ಸಮಸ್ಯೆಯನ್ನು ಒಂದು ಗ್ರಹದಿಂದ ಇನ್ನೊಂದಕ್ಕೆ ವರ್ಗಾಯಿಸಿದಂತಾಯಿತು, ಅಷ್ಟೆ.

ಜೀವದ ಉದಯದ ಮೇಲಿನ ಚರ್ಚೆಯನ್ನಾರಂಭಿಸುವಾಗ, ಜೀವ ಎಂದರೇನು ಎಂದು ವಿವರಿಸುವುದು ಅತ್ಯವಶ್ಯ. ಇದು ಬಹಳ ಕಷ್ಟದ ಕೆಲಸ. ಸಾಧಾರಣವಾಗಿ, ನಾವು ಜೀವಿಯ ಗುಣಲಕ್ಷಣಗಳನ್ನು ವಿವರಿಸಿ ಇಂತಹ ಗುಣಲಕ್ಷಣಗಳನ್ನು ಪಡೆದಿರುವುದನ್ನು 'ಜೀವ' ಎಂದು ಕರೆಯುತ್ತೇವೆ. ಜೀವಕೋಶಗಳನ್ನು ಪಡೆದಿರುವುದು ಜೀವವಸ್ತುಕರಣ, ಬೆಳವಣಿಗೆ, ಕೆರಳುವ ಪ್ರತಿಕ್ರಿಯೆ, ಸಂತಾನೋತ್ಪತ್ತಿ ಮತ್ತು ಅಂಗವ್ಯವಸ್ಥೆ—ಇವು ಜೀವಿಗಳ ಲಕ್ಷಣಗಳೆಂದು ಪರಿಗಣಿಸಲಾಗಿದೆ.

ಕೇವಲ ಒಂದು ಜೀವಕೋಶದಲ್ಲಿ ಸಹ ಸಹಸ್ರಾರು ರಸಾಯನಿಕ ಸಂಯುಕ್ತಗಳಿರುತ್ತವೆ. ಆದರೂ ಜೀವಿಗಳಿಗೂ, ನಿರ್ಜೀವಿಗಳಿಗೂ ನಡುವಣ ವ್ಯತ್ಯಾಸ ಅತ್ಯಂತ ಕರಾರುವಾಕ್ಕಾದುದುವಲ್ಲವೆಂದರೆ ಆಶ್ಚರ್ಯವೇ. ಈ ವಿಷಯದಲ್ಲಿ ಜೀವ ಶಾಸ್ತ್ರಜ್ಞರ ನಡುವೆ ವಾದ-ವಿವಾದಗಳನ್ನೆಬ್ಬಿಸುವ ಅನೇಕ ಜೀವಿಗಳಿವೆ. ಇವು ಜೀವಿಗಳಿಗೂ ನಿರ್ಜೀವಿಗಳಿಗೂ ನಡುವಣ ಹಂತದಲ್ಲಿವೆ. ಇವನ್ನು ಏನೆಂದು ಪರಿಗಣಿಸಬೇಕು, ಜೀವಂತ ಎಂದೋ ಅಥವಾ ನಿರ್ಜೀವ ಎಂದೋ ? ಒಂದು ಉದಾಹರಣೆಯನ್ನು ಪರಿಶೀಲಿಸೋಣ. ಸಿಡುಬು, ಪೋಲಿಯೋ, ಪಡಾರ, ಗದ್ದವಾರಿ, ನೆಗಡಿ ಮುಂತಾದ ರೋಗಗಳನ್ನುಂಟುಮಾಡುವ ವಿಷಕಣಗಳು (ವೈರಸ್) ಅತ್ಯಂತ ಸೂಕ್ಷ್ಮವಾದ ಏಕಾಣು ಜೀವಿಗಳಿಗಿಂತಲೂ ಸಹಸ್ರಪಾಲು ಚಿಕ್ಕವು. ಇವು ಸಂತಾನಾಭಿವೃದ್ಧಿ ಶಕ್ತಿಯನ್ನು ಪಡೆದಿರುವುದರಿಂದ ಜೀವಂತ ಎನ್ನೋಣವೆಂದರೆ, ಇವುಗಳಲ್ಲಿ ಅಂಗ ವ್ಯವಸ್ಥೆಯೇ ಇಲ್ಲ. ಇವು ಕೇವಲ ಪ್ರೋಟೀನ್ ಮತ್ತು ನ್ಯೂಕ್ಲಿಯಿಕ್ ಆಮ್ಲಗಳಿಂದ ಮಾಡಲ್ಪಟ್ಟಿವೆ. ಸಾಧಾರಣ ವಿಷಕಣಗಳಲ್ಲಿ ಸರಳ ರಸಾಯನಿಕಗಳಿರುತ್ತವೆ. ಅವನ್ನು ಶುದ್ಧಗೊಳಿಸಿ ಹರಳಿನ ರೂಪದಲ್ಲಿ ಪಡೆಯಬಹುದು. ಅಲ್ಲಿಗೆ ವಿಷಕಣಗಳು ನಿರ್ಜೀವಂತ ಎಂದಾಗುತ್ತವೆ. ಈಗ ವಿಷಕಣಗಳನ್ನು 'ದೇಹದ ಒಳಗೆ ಇದ್ದಾಗ ಜೀವಂತ ಪ್ರಯೋಗನಳಿಕೆಯಲ್ಲಿ ಇದ್ದಾಗ ಕೇವಲ ಒಂದು ರಸಾಯನಿಕ ಸಂಯುಕ್ತ' ಎಂದು ಪರಿಗಣಿಸುತ್ತಾರೆ. ಜೀವದ ಸೂಕ್ತಗುಣಲಕ್ಷಣಗಳನ್ನು ಕೊಡುವಾಗ ವಿಷಕಣಗಳು ಅತ್ಯಂತ ಪ್ರಮುಖವಾಗುತ್ತವೆ.

ತೀರ ಇತ್ತೀಚಿನವರೆಗೂ, ಬಹಳ ಜನ ನಿರ್ಜೀವ ವಸ್ತುವಿನಿಂದ ಇದ್ದಕ್ಕಿದ್ದ ಹಾಗೆ ಸಣ್ಣ ಜೀವಿಗಳು ಹುಟ್ಟುವುದು, ಮಳೆಯ ಮೂಲಕ ಕಪ್ಪೆಗಳು ಆಕಾಶದಿಂದ ಭೂಮಿಗೆ ಬೀಳುವುದು, ಮುಂತಾದ ಸಂಗತಿಗಳನ್ನು ನಿಜವೆಂದೇ ನಂಬಿದ್ದರು. ಇದು ಸತ್ಯ ದೂರವಾದ ಸಂಗತಿ. ಹೊಸಜೀವಿಗಳು ಮುಂಚೆಯೇ ಇರುವ ಜೀವಿಗಳಿಂದ ಮಾತ್ರವೇ ಹುಟ್ಟುತ್ತವೆ. ಲಕ್ಷಾಂತರ ವರ್ಷಗಳ ಹಿಂದೆ ಜೀವಂತ ವಸ್ತು ಮೊದಲ ಬಾರಿಗೆ ಕಾಣಿಸಿಕೊಂಡಾಗ ಅದು ನಿರ್ಜೀವ ವಸ್ತುವಿನಿಂದಲೇ ಉದಯಿಸಿರಬೇಕು. ಆದರೆ, ಆ ತರಹದ ಯಾವುದೂ ಈಗ ನಡೆಯಲು ಸಾಧ್ಯವಿಲ್ಲ. ಕೊಳೆತ ಮಾಂಸ ಮತ್ತು ಸಗಣಿಯಿಂದ ಕೀಟಕಗಳು ಮತ್ತು ಸೊಳ್ಳೆ, ಧೂಳು, ಕೊಳಚೆಯಿಂದ ಏಕಾಣು ಜೀವಿಗಳು ಜನಿಸುವವೆಂಬ ವಾದಕ್ಕೆ 'ಜೀವಿಗಳು ತಾವಾಗಿ ಹುಟ್ಟುವ ವಾದ' ಎನ್ನುತ್ತಾರೆ. ಇದು ನಿರಾಧಾರವೆಂದು 1858 ರಲ್ಲಿ ಲೂಯಿ ಪಾಶ್ಚರ್ ಪ್ರಯೋಗದ ಮೂಲಕ ರುಜುವಾತು ಪಡಿಸಿದ. ಅವನು ಗಾಜಿನ ಪಾತ್ರೆಯಲ್ಲಿ ಕೊಳೆತ ಮಾಂಸದ ಚೂರನ್ನು ಹಾಕಿ, ಅದರ ಒಳಗೆ ಗಾಳಿಯೂ ಸಹ ನುಸುಳದಂತೆ ಗಾಜಿನ ಪಾತ್ರೆಯ ಬಾಯನ್ನು ಭದ್ರಪಡಿಸಿದನು. ಸ್ವಲ್ಪ ದಿನಗಳ ನಂತರ ನೋಡಿದಾಗ, ಅದರಲ್ಲಿ ಯಾವ ಜೀವಿಯೂ ಹುಟ್ಟಿರಲಿಲ್ಲ. ಈ ವಾದ ನಿಜವಾಗಿದ್ದಲ್ಲಿ, ಜೀವಿಗಳು ಹುಟ್ಟಿರಬೇಕಾ

ಗಿತ್ತು. ಇದರಿಂದ ಅವನು ಹೇಳಿದ್ದೇನೆಂದರೆ, 'ಕೊಳೆತ ವಸ್ತುವನ್ನು ಆಚೆ ಇಟ್ಟಾಗ, ಗಾಳಿಯಲ್ಲಿ ತೇಲಾಡುತ್ತಿರುವ, ಸೂಕ್ಷ್ಮದರ್ಶಕದ ಸಹಾಯದಿಂದ ಮಾತ್ರ ನೋಡಲು ಸಾಧ್ಯವಾದ, ಏಕಾಣುಜೀವಿಗಳು ಹುಟ್ಟಿದಹಾಗೆ ಕಾಣುತ್ತದೆ'. ಪ್ರಾರಂಭದಿಂದ ಹಿಡಿದು, ಇವತ್ತಿನವರೆಗೂ ಭೂಮಿಯ ಮೇಲಿನ ವಾತಾವರಣ ಬದಲಾಗುತ್ತಲೇ ಇದೆ. ಒಂದು ವಿಶಿಷ್ಟ ವಾತಾವರಣ ಒಂದು ಬಾರಿ ಹೋಯಿತೆಂದರೆ ಹೋದ ಹಾಗೆಯೇ, ಮತ್ತೊಮ್ಮೆ ಬರುವುದಿಲ್ಲ. ಜೀವ ಹುಟ್ಟಿದಾಗ ಇದ್ದ ಭೂಮಿಯ ಮೇಲಿನ ಗುಣಲಕ್ಷಣಗಳು ಇದುವರೆಗೂ ಮತ್ತೊಮ್ಮೆ ಬಂದಿಲ್ಲ. ಆದ್ದರಿಂದ ಬಹು ಹಿಂದೆ ಭೂತಕಾಲದಲ್ಲಿ ಜೀವ ಒಮ್ಮೆ ಹುಟ್ಟಿತು ಮತ್ತು ಅವತ್ತಿನಿಂದ ಇದುವರೆಗೂ ತನ್ನ ಸಂತಾನೋತ್ಪತ್ತಿಯ ಬಲದಿಂದ ಉಳಿದುಕೊಂಡು ಬಂದಿದೆ ಎಂದು ಹೇಳ ಬಹುದು.

ಜೀವಂತವಸ್ತು ಪ್ರಥಮ ಬಾರಿಗೆ ನಿರ್ಜೀವ ಪದಾರ್ಥದಿಂದ ಹುಟ್ಟಿರಲೇ ಬೇಕೆಂಬ ಅಭಿಪ್ರಾಯದಲ್ಲಿ ಭೇದವಿಲ್ಲ. ನಿರ್ಜೀವ ಪದಾರ್ಥಗಳಲ್ಲಿಲ್ಲದ ಯಾವೊಂದು ವಿಶಿಷ್ಟಧಾತುವೂ ಜೀವಿಗಳಲ್ಲಿಲ್ಲವೆಂಬುದು ನಿಜ. ಆದರೆ ಈ ಕೆಲವು ಧಾತುಗಳು ಕೂಡಿ ಆಗಿರುವ ಕೆಲವು ವಿಶೇಷ ರಸಾಯನಿಕ ಸಂಯುಕ್ತಗಳು ಜೀವಿಗಳ ದೇಹವನ್ನು ಬಿಟ್ಟು ಹೊರಗಡೆ ಇಲ್ಲ ಎಂಬುದೂ ನಿಜ. ಜೀವಿಗಳ ದೇಹದಲ್ಲಿ ಮಾತ್ರ ಇರುವ ಸಂಯುಕ್ತಗಳು ಜೈವಿಕ ಸಂಯುಕ್ತಗಳು. ಇವುಗಳಲ್ಲಿ ಅನೇಕ ವಿಧದ ಹಿಟ್ಟುಗಳು, ಕೊಬ್ಬುಗಳು ಮತ್ತು ಪ್ರೋಟೀನುಗಳು ಸೇರಿವೆ. ಎಲ್ಲಾ ಜೈವಿಕ ಪದಾರ್ಥಗಳಲ್ಲೂ ಇಂಗಾಲ ಇರುವುದರಿಂದ ಅವನ್ನು ಇಂಗಾಲ ಸಂಯುಕ್ತಗಳೆಂದೂ ಕರೆಯುತ್ತಾರೆ. ಎಲ್ಲಾ ಇಂಗಾಲ ಸಂಯುಕ್ತಗಳನ್ನು ಜೈವಿಕ ಪದಾರ್ಥಗಳೆನ್ನಬಹುದಾದರೂ, ಕೆಲವು ಮಾತ್ರ ಅಜೈವಿಕ ಪದಾರ್ಥಗಳಾಗಿವೆ. ಇದರಿಂದ ಜೈವಿಕ ಮತ್ತು ಅಜೈವಿಕ ಸಂಯುಕ್ತಗಳ ನಡುವಣ ವ್ಯತ್ಯಾಸ ಅಷ್ಟು ನಿಖರವಲ್ಲ. ಹಿಂದಿನ ಕಾಲದಲ್ಲಿ ಅನೇಕರು ಜೈವಿಕ ಸಂಯುಕ್ತಗಳು ಜೀವಿಗಳಲ್ಲಿ ಒಂದು ಬಗೆಯ ಚೇತನ ಶಕ್ತಿಯ ಮೂಲಕ ತಯಾರಾಗುತ್ತವೆಂದು ತಿಳಿದಿದ್ದರು. ಈ ಚೇತನ ಶಕ್ತಿಗೆ ಅವರು ಆರೋಪಿಸಿದ ಗುಣಲಕ್ಷಣಗಳು ಅದನ್ನು ಜೀವಿಗಳ ಚಟುವಟಿಕೆಯನ್ನು ನಿಯಂತ್ರಿಸುವ ದೈವಿ ಶಕ್ತಿಯನ್ನಾಗಿ ಮಾಡಿದ್ದವು. ಹಿಂದೆ ಅನೇಕ ರಸಾಯನಶಾಸ್ತ್ರಜ್ಞರು ಇಂತಹ ರಸಾಯನಿಕ ಸಂಯುಕ್ತಗಳನ್ನು ಕೃತಕವಾಗಿ ಪ್ರಯೋಗಶಾಲೆಯಲ್ಲಿ ತಯಾರಿಸಲು ಯತ್ನಿಸಿ ವಿಫಲರಾಗಿದ್ದರು. ಈ ವಿಫಲತೆ ದೈವೀಶಕ್ತಿಯನ್ನು ಸಮರ್ಥಿಸಿತು. ಇದರಿಂದ ಜೀವಂತ ವಸ್ತು ನಿರ್ಜೀವ ವಸ್ತುವಿಗಿಂತ ಮೂಲಭೂತವಾಗಿ ಬೇರೆ ಯೆಂದೂ, ಚೇತನ ಶಕ್ತಿ ಉಳಿದೆಲ್ಲ ಶಕ್ತಿಗಳಿಗಿಂತ ಅಪೂರ್ವವೆಂದೂ ಮಾನವನ ಗುರಿಗೆ ಅದು ಸಿಲುಕಲಾರದು, ಮಾನವ ಅದನ್ನು ನಕಲು ಮಾಡಲಾಗಲೀ, ನಿಯಂತ್ರಿಸಲಾಗಲೀ ಅಥವಾ ಅರ್ಥಮಾಡಿಕೊಳ್ಳಲಾಗಲೀ ಆಗದೆಂದು ತಿಳಿಯ ಲಾಯಿತು. ಆದರೆ, ಈ ಚೇತನ ಶಕ್ತಿಯ ವಾದ ಬಹಳ ಕಾಲ ಉಳಿಯಲಿಲ್ಲ.

1828ನೇ ಇಸವಿಯಲ್ಲಿ ಪ್ರಥಮ ಬಾರಿಗೆ ಫ್ರೆಡ್ರಿಕ್ ವೋಲರ್ ಮಾನವ ಮತ್ತಿತರ ಪ್ರಾಣಿಗಳ ಮೂತ್ರದಲ್ಲಿರುವ ಮೂತ್ರಲವಣವನ್ನು (ಯೂರಿಯ) ಅಜೈವಿಕ ವಸ್ತುಗಳಿಂದ ಕೃತಕವಾಗಿ ಪ್ರಯೋಗಶಾಲೆಯಲ್ಲಿ ತಯಾರಿಸಲು ಯತ್ನಿಸಿ ವಿಜಯಿಯಾದನು. ಚೇತನ ಶಕ್ತಿಯ ವಾದಕ್ಕೆ ಇದು ಪ್ರಥಮ ಹೊಡೆತವಾಗಿತ್ತು. ಅಲ್ಲಿಂದೀಚೆಗೆ ಕೃತಕವಾಗಿ ತಯಾರಾದ ಜೈವಿಕ ಸಂಯುಕ್ತಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆಲ್ಲಾ ಚೇತನ ಶಕ್ತಿಯವಾದ ದುರ್ಬಲವಾಗುತ್ತಾ ನಡೆದು, ಕೊನೆಗೆ ವಿಜ್ಞಾನಕ್ಷೇತ್ರದಿಂದ ಸಂಪೂರ್ಣವಾಗಿ ಮಾಯವಾಯಿತು. ಜೈವಿಕ ಸಂಯುಕ್ತಗಳ ಕೃತಕ ತಯಾರಿಕೆ ಈಗ ರಸಾಯನ ಶಾಸ್ತ್ರದ ಪ್ರಯೋಗಶಾಲೆಗಳಲ್ಲಿ ದಿನನಿತ್ಯದ ವ್ಯವಹಾರವಾಗಿದೆ. ಆದರೆ ಕೆಲವು ಜೈವಿಕ ಸಂಯುಕ್ತಗಳನ್ನು ಮಾನವ ಇನ್ನೂ ತಯಾರಿಸಲಾಗಿಲ್ಲವೆಂಬುದು ನಿಜವಾದರೂ ಅದು ಅಸಾಧ್ಯವಲ್ಲ.

ಬಹುಶಃ ಜೀವ ಹೇಗೆ ಉದಯಿಸಿತೆಂಬುದಾಗಲೀ ಅಥವಾ ಜೀವಂತವಸ್ತುವಾಗಲು ನಿರ್ಜೀವ ವಸ್ತು ಯಾವ ಹಂತಗಳನ್ನು ದಾಟಿತೆಂಬುದಾಗಲೀ ಎಂದೆಂದಿಗೂ ಬಗೆಹರಿಯದೆ ಇರಬಹುದು. ರಸಾಯನಶಾಸ್ತ್ರಜ್ಞರು ಜೀವಿಗಳಿಗೆಲ್ಲಾ ಪ್ರಥಮ ಅವಶ್ಯಕತೆಯಾದ ಜೀವರಸದ ಕೃತಕ ತಯಾರಿಕೆಯಲ್ಲಿ ಜಯಶೀಲರಾದರೂ ಅವರು ಪ್ರಕೃತಿಯೂ ಸಹ ಬೇರೆ ವಿಧಾನಗಳನ್ನು ಪಾಲಿಸದೆ ತಾವು ಹಿಡಿದ ಮಾರ್ಗವನ್ನೇ ಅನುಸರಿಸಿದೆ ಎಂದು ಹೇಳಲಾರರು. ಅನೇಕ ವಿಜ್ಞಾನಿಗಳು ಜೀವದ ಉದಯದ ಬಗ್ಗೆ ಸಾಧ್ಯವೆನಿಸುವ ವಿವರಣೆಗಳನ್ನು ಕೊಟ್ಟಿದ್ದಾರೆ.

ಈಗ ಸಾಮಾನ್ಯವಾಗಿ ಎಲ್ಲರೂ ಒಪ್ಪಿರುವ ವಿವರಣೆಯೆಂದರೆ, 'ರಸಾಯನಿಕ ವಿಕಾಸದ ವಾದ.' ಇದರ ಪ್ರಕಾರ ಜೀವಂತವಸ್ತು ಮೊಟ್ಟಮೊದಲಬಾರಿಗೆ ಜೈವಿಕ ಸಂಯುಕ್ತಗಳ ರೂಪದಲ್ಲಿ ತಲೆಯೆತ್ತಿತು. ಜೈವಿಕ ಸಂಯುಕ್ತಗಳು ತಲೆಯೆತ್ತಿದ ಬಗೆ, ಅವು ದಾಟಿರಬಹುದಾದ ಹಂತಗಳು ಇವನ್ನು ಕಂಡುಹಿಡಿಯುವುದರಲ್ಲಿ ಜೀವ ರಸಾಯನಶಾಸ್ತ್ರಜ್ಞರ ಪಾತ್ರ ಅತ್ಯಂತ ಹಿರಿದು. ಇವರಲ್ಲಿ ಹಾಲ್ಡೇನ್, ಪೈರಿ ಮತ್ತು ಒಪೇರಿನ್ ಮುಂತಾದವರು ಜೀವದ ಉಗಮದ ಬಗ್ಗೆ ಗಣನೀಯವಾಗಿ ಸಂಶೋಧಿಸಿದ್ದಾರೆ.

ಜೆ. ಬಿ. ಎಸ್. ಹಾಲ್ಡೇನ್ ರಸಾಯನಿಕ ವಿಕಾಸದ ವಾದಕ್ಕೆ ಬೆಂಬಲವಿತ್ತು, ಜೀವಿಗಳು ಹುಟ್ಟುವುದಕ್ಕೆ ಎಷ್ಟೋ ಮುಂಚೆ ಜೈವಿಕ ಸಂಯುಕ್ತಗಳು ಇದ್ದವೆಂದು ಸಿದ್ಧಪಡಿಸಿದನು. ಇದು 1934ರಲ್ಲಿ ಸರಿಯೆಂದು ಎಲ್ಲರಿಂದಲೂ ಒಪ್ಪಿಕೊಳ್ಳಲ್ಪಟ್ಟಿತು. ಏಕೆಂದರೆ ಗುರು, ಶನಿ, ನೆಪ್ಚೂನ್ ಮುಂತಾದ ದೊಡ್ಡ ಗ್ರಹಗಳ ವಾತಾವರಣದಲ್ಲಿ ಜಲೀಂಗಾಲ ಸಂಯುಕ್ತವಾದ ಮಿಥೇನ್ ಸೇರಿದೆ. ಇದು ಅಲ್ಲಿ ಯಾವ ಜೀವಿಗಳ ಸಹಾಯವೂ ಇಲ್ಲದೆಯೇ ತಯಾರಾಗಿರಬೇಕು. ಏಕೆಂದರೆ, ಅಲ್ಲಿನ ಶೈತ್ಯದಲ್ಲಿ ಯಾವ ಜೀವಿಯೂ ಬದುಕಿರಲು ಸಾಧ್ಯವಿಲ್ಲ.

ಇದೇ ರೀತಿ ಭೂಮಿಯು ಮೇಲೂ ಪ್ರಥಮವಾಗಿ ಮಿಥೇನ್ ಇದ್ದಿರಬೇಕು. ಭೂಮಿಯು ಮೇಲೆ ನೀರಿನ ಕಣ ಇತರ ಸಂಯುಕ್ತಗಳ ಜೊತೆ ವರ್ತಿಸಿ, ಅನೇಕ ವಿಧದ ಜಲೇಂಗಾಲ ಸಂಯುಕ್ತಗಳು ಉಂಟಾದವು. ಇನ್ನೂ ಹುಟ್ಟಿ ಬಹಳ ಶಕ ಗಳಾಗಿರದ ಭೂಮಿಯು ವಾತಾವರಣದಲ್ಲಿ, ಆಮ್ಲಜನಕ, ಸಾರಜನಕ ಮತ್ತು ಇಂಗಾಲ-ಡೈ-ಆಕ್ಸೈಡ್‌ಗಳಿರಲಿಲ್ಲ. ಅದರ ವಾತಾವರಣದಲ್ಲಿ ಪ್ರಥಮವಾಗಿ ಹೈಡ್ರೋಜನ್ ಸಲ್ಫೈಡ್, ಮಿಥೇನ್, ಅಮೋನಿಯಾ ಮತ್ತು ನೀರಿನ ಕಣಗಳು ತುಂಬಿದ್ದವು. ಇವುಗಳೆಲ್ಲಾ ಪರಸ್ಪರ ವಿವಿಧ ರಸಾಯನಿಕ ಕ್ರಿಯೆಗಳಲ್ಲಿ ಭಾಗ ವಹಿಸಿದ್ದರಿಂದ ಅಪಾರ ಸಂಖ್ಯೆಯ ಸಂಯುಕ್ತಗಳಾಗಿರಬೇಕು. ಅವುಗಳಲ್ಲಿ ಮುಖ್ಯ ವಾಗಿ ಮಿಥೈಲ್ ಆಲ್ಕೋಹಾಲ್, ಆಲ್ಡಿಹೈಡ್‌ಗಳು, ಅಮೈನೋ ಸಂಯುಕ್ತಗಳು ಮುಂತಾದವು ಉಂಟಾಗಿರಬಹುದೆಂದು ದೃಢವಾಗಿ ಹೇಳಬಹುದು. ಅನೇಕ ಮಿಥೇನ್ ಅಣುಗಳು ಸೇರಿ ನೀರು ಮತ್ತುಅಮೋನಿಯಾ ಜೊತೆ ವರ್ತಿಸಿ ಅಮೈನೋ ಆಮ್ಲಗಳನ್ನು ಕೊಡುತ್ತವೆ. ಅಮೈನೋ ಆಮ್ಲಗಳು ಬಹಳ ಮುಖ್ಯವಾದುವು, ಏಕೆಂದರೆ ಅವು ಪ್ರೋಟೀನುಗಳನ್ನು ನಿರ್ಮಿಸುವ ಇಟ್ಟಿಗೆಗಳು. ಪ್ರೋಟೀನುಗಳು ಜೀವಿಗಳ ಉಳಿವಿಗೆ ಮತ್ತು ಚಟುವಟಿಕೆಗೆ ಅತ್ಯವಶ್ಯ.

ಈ ಸಂದರ್ಭದಲ್ಲಿ 1955ರಲ್ಲಿ ಎಸ್. ಎಲ್. ಮಿಲ್ಲರ್ ಮಾಡಿದ ಒಂದು ವಿಶೇಷ ಪ್ರಯೋಗವನ್ನು ಹೇಳುವುದು ಅಗತ್ಯ. ಅವನು ವಿಶೇಷವಾಗಿ ಸಿದ್ಧ ಗೊಳಿಸಿದ ಒಂದು ಸಾಧನದಲ್ಲಿ ಮೀಥೇನ್, ಅಮೋನಿಯಾ, ಜಲಜನಕ, ನೀರಿನ ಆವಿ ಇವುಗಳ ಮಿಶ್ರಣವನ್ನು (ಭೂಮಿಯಲ್ಲಿ ಮೊದಲು ಇದ್ದಹಾಗೆ) ಇರಿಸಿದನು. ಈ ಮಿಶ್ರಣಕ್ಕೆ ವಿದ್ಯುಚ್ಛಕ್ತಿಯನ್ನು ಹಾಯಿಸಿದಾಗ ಅನೇಕ ಆಮ್ಲಗಳು ಉಂಟಾ ದವು. ಅವುಗಳಲ್ಲಿ ಮುಖ್ಯವಾಗಿ ಗ್ಲೈಸೀನ್, ಅಲನೀನ್‌ಗಳಂತಹ ಅಮೈನೋ ಆಮ್ಲಗಳೂ, ಹಾಲಿನಲ್ಲಿರುವಂತಹ ಲಾಕ್ಟಿಕಾಮ್ಲ, ಫಾರ್ಮಿಕಾಮ್ಲ ಮುಂತಾದವೂ ಉಂಟಾದವು.

ಒಪೇರೀನ್‌ನ ಪ್ರಕಾರ ಪ್ರಥಮತಃ ಅನೇಕ ಅಣುಗಳು ಸೇರಿ ಅರ್ಧದ್ರಾವಣ ರೂಪದ 'ಕೋಸರ್ವೇಟ್'ಗಳು ಉಂಟಾದವು. ಅವನು ಜೀವದ ಪ್ರಥಮ ಅವಶ್ಯ ಕತೆಯಾದ ಜೀವರಸಕ್ಕೂ, ಕೋಸರ್ವೇಟಿಗೂ ಇರುವ ಅನೇಕ ಸಾಮ್ಯಗಳನ್ನು ತೋರಿಸಿದನು.

ಕಾಲ್ವಿನ್ ಪ್ರಕಾರ ಮೊದಲು ಉಂಟಾದುದು, ನ್ಯೂಕ್ಲಿಯಿಕ್ ಆಮ್ಲದ ಒಂದು ಅಣು. ಇದು ಅನೇಕ ಅಣುಗಳೊಡನೆ ಸೇರಿ ನ್ಯೂಕ್ಲಿಯೊ-ಪ್ರೋಟೀನ್‌ಗಳನ್ನು ನಿರ್ಮಿಸಿತು. ಇವು ಜೀವಿಗಳ ದೇಹದಲ್ಲಿ ಇರುವ ಅತಿ ಮುಖ್ಯವಾದ ಅಂಶಗಳು. ಜೀವರಸವನ್ನು ವಿಶ್ಲೇಷಿಸಿದಾಗ ದೊರಕುವುದು ಮುಖ್ಯವಾಗಿ ಇವೇ. ಒಮ್ಮೆ

ಜೀವರಸದ ಉದಯುವಾಯಿತೆಂದರೆ, ನಂತರ ನಾವು ಡಾರ್ವಿನ್‌ನ ಜೀವವಿಕಾಸದ ಮೂಲಕ ವಿವಿಧ ಜೀವಿಗಳ ಉದಯುವನ್ನು ಸುಲಭವಾಗಿ ಹೇಳಬಹುದು.

ಏನಾದರೂ, ಇದುವರೆಗೆ ಯಾವ ವಿಜ್ಞಾನಿಯೂ ಸಂಪೂರ್ಣವಾಗಿ ಖಚಿತವಾದ ವಿವರಣೆಗಳನ್ನು ಕೊಟ್ಟಿಲ್ಲ. ನಿರ್ಜೀವ ವಸ್ತು ಜೀವಂತವಸ್ತುವಾಗಿ ವಿಕಾಸವಾಗಲು ದಾಟಿರಬಹುದಾದ ಹಂತಗಳ ಬಗ್ಗೆ ಊಹಿಸಿರುವ ವಿಷಯುಗಳೆಲ್ಲವೂ ಸಂಪೂರ್ಣವಾಗಿ 'ರೆ' ರಾಜ್ಯದವು. ಆದರೆ, ಮುಖ್ಯವಾಗಿ ಇದರಿಂದ ತಿಳಿಯು ಬರುವ ವಿಷಯುವೇನೆಂದರೆ, ಪ್ರಕೃತಿಯಿಂದ ಜೀವ ಸಂಪೂರ್ಣವಾಗಿ ಬೇರೆಯುಲ್ಲ, ಇತರ ವಸ್ತುಗಳಷ್ಟೇ ಪೂರ್ಣವಾದ ಪ್ರಕೃತಿಯ ಭಾಗ ಎಂದು. ಒಂದಲ್ಲ ಒಂದು ದಿನ ನಾವು ಇದೇ ರೀತಿ ಜೀವ ದಾಟಿರಬಹುದಾದ ಹಂತಗಳ ಮೂಲವನ್ನು ಹುಡುಕುತ್ತಾ ಕಾಲಗರ್ಭದೊಳಗೆ ಖಚಿತವಾಗಿ ಪ್ರವೇಶಿಸಿ ಈ ರಹಸ್ಯವನ್ನು ಭೇದಿಸಿಯೇ ತೀರುತ್ತೇವೆಂಬ ಭರವಸೆ ಇಡಬಹುದು.

ಕವಿಮಾತು

ಜಿ. ಎಸ್. ಶಿವರುದ್ರಪ್ಪ

ತಂತಿಯ ಮೇಲೆ ಸದಾ ನಡೆಯುತ್ತಿರುವ
ನಿಮ್ಮನ್ನು ಕಂಡು
ನನಗೆ ಬೆರಗು, ಭಯ ಮತ್ತೆ ಮರುಕ.
ನೆಲದ ಮೇಲೆ ನಡೆಯುವ ನಾನು
ಸ್ಪರ್ಧಿಸಲಾರೆ ನಿಮ್ಮೊಡನೆ.
ಬದಲು, ನೀವು ಬೀಳದಿರಲಿ ಎಂದು
ಆಶಿಸುತ್ತೇನೆ; ಬಿದ್ದರೂ ಹೆಚ್ಚುಪೆಟ್ಟಾಗದಿರಲಿ
ಎಂದು ಹಾರೈಸುತ್ತೇನೆ; ಇಷ್ಟರಮೇಲೆ
ನಾನು ಅಸಹಾಯಕ.

ಒಪ್ಪಂದ

ಎಸ್. ನಾರಾಯಣಮೂರ್ತಿ

ಮನುಷ್ಯ ತನ್ನ ನಿತ್ಯ ಜೀವನದಲ್ಲಿ ತಿಳಿದೋ ತಿಳಿಯದೆಯೋ ನಾನಾ ರೀತಿಯ ಒಪ್ಪಂದ (agreement)ದ ಕುಣಿಕೆಯೊಳಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಿಕ್ಕಿಕೊಳ್ಳುತ್ತಾನೆ. ಸಿನೇಮಾಕ್ಕೆ, ಬಸ್ಸಿಗೆ ಟಿಕೇಟು ತೆಗೆದುಕೊಳ್ಳುವಾಗ, ಹೋಟೇಲಿನಲ್ಲಿ ಕಾಫಿ ಕುಡಿಯುವಾಗ, ಸಾಮಾನನ್ನು ಹೊರಿಸಿಕೊಂಡು ಹೋಗುವಾಗ, ಶಾಲಾ ಕಾಲೇಜುಗಳಿಗೆ ಪ್ರವೇಶವನ್ನು ಕೋರುವಾಗ, ಹೀಗೆ ಒಂದಲ್ಲ ಒಂದು ರೀತಿಯ ವ್ಯವಹಾರವನ್ನು ಮಾಡುವ ವೇಳೆ ನಮಗೆ ತಿಳಿಯದೆಯೇ ನಾವು ಒಪ್ಪಂದದ ಸುಳಿಯೊಳಗೆ ಸಿಕ್ಕಿಕೊಳ್ಳುತ್ತೇವೆ. ಹೀಗೆ ಯಾವುದಾದರೂ ವ್ಯವಹಾರವನ್ನು ಕೈಗೊಳ್ಳುವ ಸಮಯ ಅದರ ಪರಿಣಾಮವಾಗಿ ವ್ಯವಹರಿಸುವ ಪಕ್ಷಗಾರರಲ್ಲಿ ಹಕ್ಕುಬಾಧ್ಯತೆಗಳು ಉದ್ಭವವಾಗುತ್ತವೆ. ಹಾಗೆ ಹುಟ್ಟಿಕೊಳ್ಳುವ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಒದಗಿದಾಗ ಅವುಗಳನ್ನು ಊರ್ಜಿತಪಡಿಸಿಕೊಳ್ಳಲು ಸಂಬಂಧಪಟ್ಟ ಕಕ್ಷಿಗಾರರು ಕೋರ್ಟುಗಳ ಮುಂದೆ ಪ್ರಕರಣ ಹೂಡಬಹುದು, ಹೂಡಬೇಕಾಗುತ್ತದೆ. ಯಾರಾದರೂ ಯಾವುದಾದರೂ ಒಂದು ಕೃತ್ಯವನ್ನು ಮಾಡುತ್ತೇನೆಂದು ವಚನ ಕೊಟ್ಟು ಅದನ್ನು ಪಾಲಿಸದೆ ವಚನಭ್ರಷ್ಟನಾದರೆ ಅದಕ್ಕೆ ತಕ್ಕ ಶಾಸ್ತಿಯನ್ನು ಮಾಡಲು ಸಿವಿಲ್ ಕೋರ್ಟುಗಳಿಗೆ ಅಧಿಕಾರವಿರುತ್ತದೆ. ಕೋರ್ಟುಗಳಲ್ಲಿ ಚಲಾಯಿಸಲು ಯೋಗ್ಯವೆನಿಸುವ ಒಪ್ಪಂದಗಳು ಕರಾರುಬಂಧನ (contracts) ಗಳೆನಿಸುವುವು.

ಒಪ್ಪಂದದ ಎರಡು ವಿಧ : ಒಪ್ಪಂದಗಳನ್ನು ಸಾಮಾಜಿಕ ರೀತಿಯ ವ್ಯವಹಾರಗಳಲ್ಲೂ ಶಾಸನಬದ್ಧ ವ್ಯವಹಾರಗಳಲ್ಲೂ ಮಾಡಿಕೊಳ್ಳಬಹುದು. ಆದರೆ, ಯಾರಾದರೂ ಇಬ್ಬರೊಳಗೆ ಸಾಮಾಜಿಕ ವ್ಯವಹಾರಗಳಲ್ಲಿ ಒಪ್ಪಂದವಾಗಿದ್ದರೆ ಅವು ಕೋರ್ಟುಗಳಲ್ಲಿ ಅಂಗೀಕೃತವಾಗಲಾರವು. ಉದಾಹರಣೆಗೆ: 'ಅ' ಎಂಬುವನು ಒಂದು ತಿಂಗಳಮಟ್ಟಿಗೆ ತನ್ನ ಮನೆಯಲ್ಲಿ 'ಕ' ಎಂಬವನಿಗೆ ಅನ್ನ ಹಾಕಲು ಒಪ್ಪುತ್ತಾನೆ. 'ಕ' ಅದಕ್ಕೆ ಒಪ್ಪಿ 'ಅ'ನ ಮನೆಗೆ ಊಟಕ್ಕೆ ಹೋಗುತ್ತಾನೆ. ಆದರೆ 'ಅ' ಅವನಿಗೆ ಅನ್ನ ಹಾಕಲು ನಿರಾಕರಿಸುತ್ತಾನೆ. ಈ ತರಹೆಯ ಒಪ್ಪಂದ ಬರೇ ಸಾಮಾಜಿಕ ರೀತಿಯ ವ್ಯವಹಾರವಾದ್ದರಿಂದ 'ಕ' ತನಗೆ ನಷ್ಟವಾಯ್ತೆಂದು ಕೋರ್ಟಿನಲ್ಲಿ ಪರಿಹಾರ ಕೇಳಲು ಬರಲಾರದು. ಆದರೆ, ಅದೇ 'ಅ' ಎಂಬುವನು ಹೋಟೇಲ್ ಮಾಲಿಕನಾಗಿದ್ದು 'ಕ' ತಿಂಗಳ ಊಟಕ್ಕೆಂದು ಹಣ ಪಾವತಿಸಿ ಟಿಕೇಟ್ ಪುಸ್ತಕ ಪಡೆದು

ಕೊಂಡಿದ್ದರೆ 'ಅ' ಅವನಿಗೆ ಅನ್ನ ಹಾಕಲು ನಿರಾಕರಿಸಲು ಬರುವುದಿಲ್ಲ. ಒಂದು ವೇಳೆ 'ಅ' ಹಾಗೆ ಊಟ ಹಾಕಲು ನಿರಾಕರಿಸಿದನೆಂದರೆ 'ಕ' ತನ್ನ ಹಕ್ಕು ಚಲಾಯಿಸಲು ಬರುತ್ತದೆ. ಯಾಕೇದರೆ 'ಕ' ನಿಂದ ಹಣ ಪಡೆದಮೇಲೆ 'ಅ'ನು ತನ್ನ ಪಾಲಿನ ಕರಾರನ್ನು ಕಾರ್ಯಗತಗೊಳಿಸಲೇಬೇಕು. ಇಂಥ ಒಪ್ಪಂದವು ಶಾಸನಬದ್ಧ ಒಪ್ಪಂದವೆಂದು ಪರಿಗಣಿಸಲ್ಪಡುವುದರಿಂದ ಕೋರ್ಟುಗಳು ಸಂಬಂಧಪಟ್ಟ ಪಕ್ಷಗಾರರಿಗೆ ಪರಿಹಾರ ನೀಡುತ್ತವೆ.

ಒಪ್ಪಂದದ ಹುಟ್ಟು : ಒಂದು ಒಪ್ಪಂದವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚಿತವಾಗಿ ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರೊಳಗೆ ಯಾವುದಾದರೂ ಒಂದು ವ್ಯವಹಾರದ ಬಗ್ಗೆ ಮಾತುಕತೆ ನಡೆಯುತ್ತದೆ. ಅದರಲ್ಲಿ ಒಬ್ಬನು ವಿಷಯದ ಬಗ್ಗೆ ತನ್ನ ಸೂಚನೆಯನ್ನು ಮತ್ತೊಬ್ಬನ ಮುಂದಿಡುತ್ತಾನೆ. ಮತ್ತೊಬ್ಬ ಅದರ ಬಗ್ಗೆ ಆಲೋಚಿಸಿ ಸರಿಯೆಂದು ತೋರಿದರೆ ಆ ಸೂಚನೆಯನ್ನು ಅಂಗೀಕರಿಸುತ್ತಾನೆ. ಹೀಗೆ ಒಬ್ಬನ ಸೂಚನೆಗೆ ಮತ್ತೊಬ್ಬನ ಅಂಗೀಕಾರವಾದ ಕೂಡಲೇ ಅದು ಒಡಂಬಡಿಕೆ ಅಥವಾ ಒಪ್ಪಂದವಾಗಿ ಮಾರ್ಪಡುತ್ತದೆ. ಎಂದರೆ, ಒಂದು ಒಪ್ಪಂದದ ಸೃಷ್ಟಿಯಾಗಬೇಕಾದರೆ ಎರಡು ಪಕ್ಷದವರೂ ಆ ವಿಷಯದಬಗ್ಗೆ ಒಮ್ಮತಕ್ಕೆ ಬಂದಿರಲೇಬೇಕಾಗುತ್ತದೆ. ಉದಾಹರಣೆಗೆ : ರಾಮನು ತನ್ನ ಆಸ್ತಿ ಮಾರಾಟ ಮಾಡಲಿರುವ ಸೂಚನೆಯೊಂದನ್ನು ಕೃಷ್ಣನ ಮುಂದಿಡುತ್ತಾನೆ. ಕೃಷ್ಣ ಅದನ್ನು ಕೊಂಡುಕೊಳ್ಳಲು ಇಚ್ಛಿಸುತ್ತಾನೆ. ಆಸ್ತಿ ಮಾರಾಟ ಮತ್ತು ಕೊಂಡುಕೊಳ್ಳುವ ಬಗ್ಗೆ ಅವರೊಳಗೆ ಪರಸ್ಪರ ಮಾತುಕತೆ ಬೆಳೆಯುತ್ತದೆ. ಮಾರಾಟ ಮಾಡುವ, ಕೊಂಡುಕೊಳ್ಳುವ ಹಣದ ಬಗ್ಗೆಯೂ ಅವರು ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರುತ್ತಾರೆ. ಹಾಗೆ ಅವರವರೊಳಗೆ ಆದ ತೀರ್ಮಾನವೇ ಒಂದು ಒಡಂಬಡಿಕೆ ಎನ್ನಿಸುತ್ತದೆ. ಹೀಗೆ ಎಲ್ಲಾ ಷರತ್ತುಗಳ ಬಗ್ಗೆ ಅವರು ಒಡಂಬಡಿಕೆ ಮಾಡಿಕೊಂಡರೆ ಮತ್ತೆ ಅದರ ನಂತರ ಯಾರೇ ಆಗಲಿ ಅದರ ಕರಾರನ್ನು ಮುರಿಯಲು ಬರುವಂತಿಲ್ಲ. ಒಪ್ಪಿಕೊಂಡ ಶರತ್ತುಗಳಂತೆ ನಡೆಯುಲು ತಪ್ಪಿದರೆ ನೊಂದವನು ಪರಿಹಾರ ಬೇಡಿ ಕೋರ್ಟಿನಲ್ಲಿ ಪ್ರಕರಣವನ್ನು ಮಂಡಿಸಲು ಹಕ್ಕುದಾರನಾಗಿರುತ್ತಾನೆ.

ಒಪ್ಪಂದದ ರೂಪರೇಖೆಗಳು : ಒಪ್ಪಂದವನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಮಾಡಿಕೊಳ್ಳಬಹುದು. ಒಟ್ಟಿನಲ್ಲಿ, ಪಕ್ಷಗಾರರೊಳಗೆ ಯಾವುದಾದರೂ ವ್ಯವಹಾರದ ಬಗ್ಗೆ ಒಂದೇ ವೇಳೆಯಲ್ಲಿ ಏಕಾಭಿಪ್ರಾಯವುಂಟಾದಾಗ ಒಪ್ಪಂದವು ಪೂರ್ಣವಾದಂತೆಯೇ ಒಂದೇ ರೂಪದ ಅಭಿಪ್ರಾಯವಾಗದಿದ್ದರೆ ಒಪ್ಪಂದ ಪೂರ್ಣಗೊಂಡಿತೆಂದು ಹೇಳಬರುವುದಿಲ್ಲ. ಉದಾ : ರಾಮನಿಗೆ 'ಅ' ಮತ್ತು 'ಬ' ಎಂಬ ಎರಡು ಊರುಗಳಲ್ಲಿ ಮನೆಗಳಿರುತ್ತವೆ. ಅವನು 'ಅ' ಊರಿನ ಮನೆ ಮಾರಾಟ ಮಾಡಲು ಸೂಚನೆ ಇತ್ತಾಗ, ಕೊಳ್ಳಲು ಬಂದ ಕೃಷ್ಣ 'ಬ' ಊರಿನ

ಮನೆಯೆಂದು ತಿಳಿದು ಆಪನೊಡನೆ ಆ ಬಗ್ಗೆ ಒಪ್ಪಂದವನ್ನು ಮಾಡಿಕೊಂಡರೆ ಅದು ಅಂಗೀಕಾರ ಯೋಗ್ಯ ಒಪ್ಪಂದ ಎನಿಸದು. ಯಾವನಾದರೂ ಒಬ್ಬ ಯಾವುದಾದರೂ ಒಂದು ವ್ಯವಹಾರದ ಬಗ್ಗೆ ತನ್ನ ಸೂಚನೆಯನ್ನು ಮುಂದಿಡಬೇಕು; ಮತ್ತೊಬ್ಬ ಅದನ್ನು ಅಂಗೀಕರಿಸುವುದಾಗಿ ಹೇಳಬೇಕು. ಹೀಗೆ, ಆ ವ್ಯವಹಾರದ ಬಗ್ಗೆ ಉದ್ಭೂತವಾಗುವ ಎಲ್ಲಾ ವಿಷಯುಗಳ ಮೇಲೆ ಚರ್ಚೆ ನಡೆಸಿ ಅವರವರ ಪಾಲಿಗೆ ಬರುವ ಕರ್ತವ್ಯಗಳನ್ನು ನಿರ್ದಿಷ್ಟಪಡಿಸಿ ಅವರಿಬ್ಬರೂ ಒಮ್ಮತಕ್ಕೆ ಬರಬೇಕು. ಹೀಗೆ ಪರಸ್ಪರ ಮಾಡಿಕೊಂಡ ಒಡಂಬಡಿಕೆಯ ಪರಿಣಾಮವಾಗಿ ಕಾನೂನುಬದ್ಧ ಹಕ್ಕು ಬಾಧ್ಯತೆಗಳು ಅವರೊಳಗೆ ಒಡಮೂಡುವಂತಿರಬೇಕು.

ಪ್ರತಿಕ್ರಯ (Consideration)

ಒಂದು ಒಪ್ಪಂದವು ಪೂರ್ಣವಾಗಬೇಕಾಗಿದ್ದರೆ ಅದಕ್ಕೆ ನ್ಯಾಯಬದ್ಧ ಪ್ರತಿಕ್ರಯ (consideration) ವಿರಬೇಕು. ಒಪ್ಪಂದ ಮಾಡಿಕೊಂಡದ್ದರ ಪರಿಣಾಮವಾಗಿ ಒಬ್ಬಾತನು ಪ್ರಯೋಜನ ಹೊಂದುವಂತಿದ್ದರೆ ಅವನು ಮತ್ತೊಬ್ಬನಿಗೆ ಪ್ರತಿಕ್ರಯವಾಗಿ ಬೇರೆ ಏನನ್ನಾದರೂ ಕೊಡಲು ಒಪ್ಪಬೇಕಾಗುತ್ತದೆ. ಪ್ರತಿಕ್ರಯವಿಲ್ಲದ ಒಪ್ಪಂದ ಎಷ್ಟುಮಾತ್ರಕ್ಕೂ ಉಪಯೋಗಕ್ಕೆ ಬಾರದು. ಪ್ರತಿಕ್ರಯವು ಹಣ ಅಥವಾ ಇಂತಹದೇ ರೂಪದಲ್ಲಿರಬೇಕೆಂಬ ನಿರ್ಬಂಧವಿಲ್ಲ. ಯಾವುದಾದರೂ ಒಂದು ಕೃತ್ಯವನ್ನು ತಾನು ಮಾಡುತ್ತೇನೆಂದು ಒಪ್ಪುವುದೂ ಅಥವಾ ಅದನ್ನು ಮಾಡದೇ ಇರುವಂತೆ ಒಪ್ಪುವುದೂ ಪ್ರತಿಕ್ರಯವೆಂದು ಗಣಿಸಲು ಬರುತ್ತದೆ. ಒಬ್ಬನು ತಾನು ಭವಿಷ್ಯದಲ್ಲಿ ಯಾವುದಾದರೊಂದು ಕೃತ್ಯವನ್ನು ಮಾಡುವುದಾಗಿ ಅಥವಾ ಮಾಡದೇ ಇರುವುದಾಗಿ ಒಪ್ಪಿದರೆ ಅದೂ ನ್ಯಾಯಸಮ್ಮತ ಪ್ರತಿಕ್ರಯವೆಂದು ತೀರ್ಮಾನಿಸಬಹುದು. ಪ್ರತಿಕ್ರಯ ಹಿಂದಿನ, ಇಂದಿನ ಅಥವಾ ಮುಂದಿನ ಯಾವ ಕಾರ್ಯಗಳಿಗೂ ಅನ್ವಯವಾಗಬಹುದು.

ಒಪ್ಪಂದಕ್ಕೆ ಅರ್ಹ ಪಕ್ಷಗಾರರು

ಯಾರಾದರೂ ಯಾವುದಾದರೂ ವ್ಯವಹಾರದ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕಾದರೆ ಅಂಥವರು ಹದಿನೆಂಟು ವರ್ಷಕ್ಕಿಂತಲೂ ಮೇಲ್ಪಟ್ಟ ಪ್ರಾಯಸ್ಥರಿರಬೇಕು. ಯಾರಾದರೂ ಅಪ್ರಾಯಸ್ಥನೊಡನೆ ಒಪ್ಪಂದ ಮಾಡಿಕೊಂಡರೆ ಅದು ಸಿಂಧುವಾಗಲಾರದು. ಅಲ್ಲದೆ ಒಪ್ಪಂದ ಮಾಡಿಕೊಳ್ಳುವ ಪಕ್ಷಗಾರರು ಮನಸ್ವಾಸ್ಥ್ಯವುಳ್ಳವರಾಗಿರಬೇಕು. ಬುದ್ಧಿಭ್ರಮಣೆ, ಅಪ್ರಾಯಸ್ಥತೆ, ತಿಳಿಗೇಡಿತನ ಇವೇ ಮೊದಲಾದವುಗಳಿದ್ದ ಜನರೊಡನೆ ಮಾಡಿಕೊಂಡ ಒಪ್ಪಂದ ಕೋರ್ಟಿನಲ್ಲಿ ಅದೇ ಕಾರಣದಿಂದಾಗಿ ಅನೂರ್ಜಿತವಾಗುವುದು.

ಪಕ್ಷಗಾರರ ಸಮ್ಮತಿ

ಒಪ್ಪಂದಕ್ಕೆ ಸುಭದ್ರ ತಳಹದಿ ಎಂದರೆ ಅದಕ್ಕೆ ಸಂಬಂಧಪಟ್ಟ ಪಕ್ಷಗಾರರೊಳಗಿನ ಪರಸ್ಪರ ಸಮ್ಮತಿ. ಎಲ್ಲಾ ಪಕ್ಷಗಾರರು ಒಪ್ಪಂದದ ಎಲ್ಲಾ ಕರಾರುಗಳ ಬಗ್ಗೆ ಏಕಕಾಲದಲ್ಲಿ ಏಕಾಭಿಪ್ರಾಯವನ್ನು ತಾಳಿರಬೇಕು. ಒಂದು ಪಕ್ಷ ಮಾಡಿದ ಸೂಚನೆಯನ್ನು ಮತ್ತೊಂದು ಪಕ್ಷ ಅಂಗೀಕರಿಸಿರಬೇಕು, ಸಮ್ಮತಿಸಿರಬೇಕು. ಯಾವುದಾದರೂ ಒಂದು ಪಕ್ಷದ ಸಮ್ಮತಿ ಇಲ್ಲದ ಒಂಪ್ಪಂದಕ್ಕೆ ಎಷ್ಟುಮಾತ್ರಕ್ಕೂ ಮಾನ್ಯತೆ ಸಿಗಲಾರದು. ಒಂದು ವೇಳೆ ಕಾನೂನಿನ ಬಗ್ಗೆ ಅಥವಾ ಒಪ್ಪಂದದ ವಿಷಯದ ಬಗ್ಗೆ ಎರಡು ಪಕ್ಷದವರೂ ತಪ್ಪಾಗಿ ತಿಳಿದುಕೊಂಡಿದ್ದರೆ ಅಂಥ ಒಪ್ಪಂದ ಸಮ್ಮತಿಪೂರ್ವಕವೇ ಆಗಿದ್ದರೂ ನಿಷ್ಪ್ರಯೋಜಕವೆನಿಸುತ್ತದೆ. ಅಂಥ ತಪ್ಪಿನ ಅರಿವಾದೊಡನೆ ಯಾರಾದರೊಬ್ಬ ಅಂಥ ಒಪ್ಪಂದವನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಬಹುದು ಯಾವನಾದರೂ ಒಬ್ಬ ವಿಷಯವನ್ನು ತಪ್ಪಾಗಿ ನಿರೂಪಿಸಿ ಮತ್ತೊಬ್ಬನ ಮನವೊಲಿಸಿ ಒಪ್ಪಂದಕ್ಕೆ ಅವನ ಸಹಿ ಹಾಕಿಸಿಕೊಂಡಿದ್ದರೆ ಅಂಥ ಪ್ರಸಂಗದಲ್ಲಿಯೂ ಆ ಒಪ್ಪಂದವನ್ನು ರದ್ದುಪಡಿಸಿಕೊಳ್ಳಲು ಬರುತ್ತದೆ. ಒಬ್ಬನು ಮತ್ತೊಬ್ಬನನ್ನು ವಂಚಿಸಿ, ಅವನ ಮನವೊಲಿಸಿ ಒಪ್ಪಂದದ ಸಂಕಲೆಯೊಳಗೆ ಬಿಗಿಸಿಕೊಂಡಿದ್ದರೆ ಹಾಗೆ ಕುತಂತ್ರಕ್ಕೆ ಒಳಗಾದ ವ್ಯಕ್ತಿ ಅಂಥ ವಂಚನೆಯನ್ನು ಬಯಲಿಗೆಳೆದು ಅಂಥ ಒಪ್ಪಂದದಿಂದ ಬಿಡುಗಡೆ ಮಾಡಿಕೊಳ್ಳಲು ಸಾಧ್ಯವಿದೆ. ಒಬ್ಬಾತನು ತನ್ನ ಅಧಿಕಾರ ಅಥವಾ ಸ್ಥಾನಬಲದಿಂದ ಮತ್ತೊಬ್ಬನ ಮೇಲೆ ಅನ್ಯಾಯವಾಗಿ ಪ್ರಭಾವವನ್ನು ಬೀರಿ ಒಪ್ಪಂದಕ್ಕೆ ಅವನ ಸಹಿ ಪಡೆದಿದ್ದರೆ ಅದೂ ಮನೋರಾಜಿಯಿಂದ ಆದ ಒಪ್ಪಂದವೆಂದು ಹೇಳಲು ಬರುವುದಿಲ್ಲ. ಹೀಗೆ, ವಂಚನೆ, ಮರೆ–ಮೋಸಗಳಿಂದ ಮತ್ತೊಬ್ಬನ ಸಮ್ಮತಿ ಪಡೆದು ಒಪ್ಪಂದಕ್ಕೆ ಅವನ ಅಂಗೀಕಾರ ಮುದ್ರೆಯನ್ನು ಪಡೆದಿದ್ದರೂ ಅಂಥ ಮೋಸದ ಅರಿವಾದಮೇಲೆ ಬಲೆಗೆಬಿದ್ದ ವ್ಯಕ್ತಿ ಅಂಥ ಒಪ್ಪಂದದ ಶೃಂಖಲೆಯೊಳಗಿಂದ ಪಾರಾಗಲು ಬರುತ್ತದೆ. ಏಕೆಂದರೆ, ಹಾಗೆ ಪಡೆದುಕೊಂಡ ಸಮ್ಮತಿ ನ್ಯಾಯಬದ್ಧ ಸಮ್ಮತಿ ಎನ್ನಿಸಿಕೊಳ್ಳಲಾರದು.

ಒಪ್ಪಂದಗಳನ್ನು ನ್ಯಾಯಸಮ್ಮತ ಉದ್ದೇಶಗಳಿಗಾಗಿಯೇ ಮಾಡಿಕೊಳ್ಳಬೇಕಾದುದು ಗಮನಿಸಬೇಕಾದ ಮತ್ತೊಂದು ಅಂಶ. ಯಾವುದಾದರೂ ದುರುದ್ದೇಶ ಪೂರ್ತಿಗಾಗಿ, ಕಾನೂನಿನ ಕಟ್ಟುಪಾಡುಗಳನ್ನು ಮುರಿಯುವ ಸಲುವಾಗಿ ಒಪ್ಪಂದಗಳು ಸಲ್ಲದು. ಯಾರಾದರೂ ವ್ಯಕ್ತಿಗೆ, ಅವನ ಆಸ್ತಿಗೆ ಅಥವಾ ಸಾರ್ವಜನಿಕರಾಜನೀತಿಗೆ ಧಕ್ಕೆ ಬರುವಂಥ ಅಥವಾ ಶಾಸನದ ವ್ಯಾಪ್ತಿಗೆ ಹೊರಗಾಗಿರುವ ಒಪ್ಪಂದಗಳು ಅಂಗೀಕೃತವಾಗಲಾರವು.

ಒಪ್ಪಂದದ ಕರಾರುಗಳು

ಒಪ್ಪಂದದ ಕರಾರುಗಳು ಸ್ಪಷ್ಟವಾಗಿದ್ದು ಸರಳವಾಗಿರಬೇಕು. ಅವುಗಳು ಅನುಮಾನಾಸ್ಪದವಾಗಿರಬಾರದು. ಕರಾರುಗಳನ್ನು ಸರಿಯಾಗಿ ಅರ್ಥವಿಸಲು ಬಾರದಿದ್ದಲ್ಲಿ ಅಥವಾ ಕರಾರುಗಳು ಅರ್ಥವಿಹೀನವಾಗಿದ್ದಲ್ಲಿ ಅಂಥ ಒಪ್ಪಂದಗಳು ನಿಷ್ಪ್ರಯೋಜಕವೆನಿಸುವುವು. ಮತ್ತೆ, ಒಪ್ಪಂದದ ಷರತ್ತುಗಳನ್ನು ಕಾರ್ಯರೂಪಕ್ಕಿಳಿಸಲು ಸಾಧ್ಯವಾಗುವ ಹಾಗೆಯೂ ಇರಬೇಕು. ಒಪ್ಪಂದದ ಕರಾರುಗಳನ್ನು ಲಿಖಿತರೂಪಕ್ಕಿಳಿಸುವಾಗ ಅದು ಆ ಬಗ್ಗೆ ಮೊದಲಾದ ಕಾನೂನಿನ ಕಟ್ಟುಪಾಡುಗಳಿಗೆ ಒಳಪಟ್ಟಿರಬೇಕಾಗುತ್ತದೆ. ಪ್ರಚಲಿತ ಕಾನೂನಿನ ಮೇಲೆ ಒಪ್ಪಂದವನ್ನು ರೂ. 3-00 ರ ಸ್ಟಾಂಪು ಕಾಗದದಲ್ಲಿ ಬರೆಯಬೇಕಾಗುತ್ತದೆ. ಆದರೆ ಅದನ್ನು ನೋಂದಾಯಿಸುವ ಅವಶ್ಯಕತೆಯಿಲ್ಲ. ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದ ಸನ್ನಿವೇಶಗಳಲ್ಲಿ ನೊಂದವನು ಅದಕ್ಕೆ ಸಮಂಜಸವಾದ ಪರಿಹಾರವನ್ನು ಕೇಳಿ ಸ್ಥಳೀಯ ಮುನ್ಸಿಫ್ ಕೋರ್ಟಿನಲ್ಲಿ ಪ್ರಕರಣವನ್ನು ಮಂಡಿಸಬೇಕಾಗುತ್ತದೆ. ನೊಂದವನು ಮಂಡಿಸಿದ್ದನ್ನೂ ಅವನ ಎದುರಾಳಿ ಖಂಡಿಸಿದ್ದನ್ನೂ ಕೋರ್ಟು ಅವಗಾಹನೆಗೆ ತೆಗೆದುಕೊಂಡು ಸೂಕ್ತವಾದ ನಿರ್ಣಯವನ್ನು ಕೊಡುತ್ತದೆ.

ಕನ್ನಡ ಜೈನ ಕವಿಗಳು ಹಾಗೂ ರಾಜಾಶ್ರಯ

ಬಿ. ಬಿ. ಮಹೀಶವಾಡಿ

"ಯಥಾ ರಾಜಾ ತಥಾ ಪ್ರಜಾ" ಎಂಬುದು ಹಳೆಯ ಮಾತು. ಪ್ರಜಾಸತ್ತೆಯ ಈಗಿನ ಕಾಲದಲ್ಲಿ ಇದನ್ನು ತಿರುವು ಮುರುವು ಮಾಡಿ ಹೇಳಬಹುದು; ಅಂದರೆ, "ಯಥಾ ಪ್ರಜಾ ತಥಾ ರಾಜಾ" ಎಂದು. ರಾಜನೇ ಇಲ್ಲದ ಈ ಕಾಲದಲ್ಲಿ 'ರಾಜಾ' ಶಬ್ದದ ಬದಲು 'ರಾಜ್ಯಸತ್ತೆ' ಎನ್ನಬಹುದಷ್ಟೆ.

ರಾಜಕೀಯ ಚರಿತ್ರೆಯೊಂದಿಗೆ ಸಾಂಸ್ಕೃತಿಕ ಚರಿತ್ರೆಯೂ ಅನಿವಾರ್ಯವಾಗಿ ಬೆರೆತು ಬರುವುದರಿಂದಲೂ, ಸಾಂಸ್ಕೃತಿಕ ಚರಿತ್ರೆಯ ಪ್ರಧಾನ ಅಂಶಗಳು ಧರ್ಮ, ಮತ್ತು ಸಾಹಿತ್ಯಗಳಲ್ಲಿ ಸಮಾವೇಶಗೊಳ್ಳುವುದರಿಂದಲೂ, ರಾಜರೊಂದಿಗೆ ಧರ್ಮ ಮತ್ತು ಸಾಹಿತ್ಯ ಬದುಕಿ ತಮ್ಮ ಪ್ರಭಾವಗಳನ್ನು ಬೀರುವುದು ತೀರ ಸ್ವಾಭಾವಿಕವಾಗಿದೆ. ರಾಜನ ಜೊತೆಗೆ ರಾಜನ ಧರ್ಮಗುರು, ರಾಜನ ಕವಿ ಸಮಾನ ಮರ್ಯಾದೆಯನ್ನೂ, ಒಮ್ಮೊಮ್ಮೆ ಹೆಚ್ಚು ಮರ್ಯಾದೆಯನ್ನೂ ಹೊಂದಿ ಗೌರವ ಪಡೆಯುತ್ತ ಬಂದಿರುವುದು ಇತಿಹಾಸದಲ್ಲಿ ಕಂಡುಬರುತ್ತದೆ. "ಯಥಾ ರಾಜಾ ತಥಾ ಪ್ರಜಾ" ಎಂಬ ಗಾದೆ ಜೀವಂತ ಇದ್ದ ಕಾಲದಿಂದ ಇಂದಿನ ಪ್ರಜಾಸತ್ತೆಯ ಕಾಲದವರೆಗೂ ಸಾಹಿತ್ಯ ಚರಿತ್ರೆ ಹರಿದು ಬಂದಿರುವುದರಿಂದ ರಾಜನಿಗೆ ಅಥವಾ ರಾಜ್ಯಸತ್ತೆಗೆ ಬೇಕಾದ ಕವಿಗಳು ಅಭಿವೃದ್ಧಿ ಹೊಂದಿ ಸಾಹಿತ್ಯ ಸೃಷ್ಟಿ ಮಾಡಿದರು. ರಾಜನಿಗೆ ಅಥವಾ ರಾಜ್ಯಸತ್ತೆಗೆ ಬೇಕಾದ ಧರ್ಮದ ಹಿನ್ನೆಲೆಯಲ್ಲಿ ಸಾಹಿತ್ಯ ಸೃಷ್ಟಿಯಾಗುವುದೂ ಅನಿವಾರ್ಯವಾಯಿತು; ಅಷ್ಟೇ ಅಲ್ಲ, ಭಾರತೀಯ ಸಂಸ್ಕೃತಿಯಲ್ಲಿ ಇಹಪರ ಜೀವನಕ್ಕೆ ಸಂಬಂಧಿಸಿದ ತಾತ್ವಿಕ ಸತ್ವಗಳನ್ನು ಹೊತ್ತ ಧರ್ಮ ಬಹು ಮುಖ್ಯ ವಿಷಯವಾಯಿತು; ಅದು ಸಾಹಿತ್ಯದ ಹಿನ್ನೆಲೆಯಲ್ಲಿ ಉದ್ದೇಶಪೂರ್ವಕವಾಗಿ ಚಿತ್ರಿತವಾಯಿತು.

ಕನ್ನಡ ಸಾಹಿತ್ಯದಲ್ಲಿ ಮತೀಯ ಕೃತಿಗಳನ್ನು ಬಿಟ್ಟು ಮತ್ತೇನಿದೆ? ಸಾಹಿತ್ಯವೆಲ್ಲ ಮತ ಧರ್ಮಗಳ ಸಂತೆಯಾಗಿದೆ, ಎಂದು ಕೆಲವರು ಮೂದಲಿಸುತ್ತಾರೆ.[1] ಭಾರತದ ಯಾವ ಭಾಷೆಯ ಸಾಹಿತ್ಯವನ್ನು ತೆಗೆದುಕೊಂಡರೂ ಈ ಮಾತಿಗೆ ಹೊರತಾಗಿಲ್ಲ. ಅಧ್ಯಾತ್ಮ ಪ್ರವೃತ್ತಿ ಭಾರತ ಸಂಸ್ಕೃತಿಯ ಜೀವಾಳವಾದ್ದರಿಂದ ಅಧ್ಯಾತ್ಮವು ಧರ್ಮ–ಜಾತಿಗಳ ಮೂಲಕವೇ ಪ್ರತಿ ಭಾರತೀಯನ ಹೃದಯದಲ್ಲಿ

---

1. E. P. Rice : *A History of Kanarese Literature*, pp. 105–108

ನೆಲೆಸಿ ರಕ್ತಗತವಾಗಿ ವಂಶಪರಂಪರೆಯಿಂದ ಹರಿದುಬರುವುದರಿಂದಲೂ, ಬೇರೆಯ ದೇಶಗಳಿಗಿಂತ ಭಾರತದಲ್ಲಿ ಮತಧರ್ಮಗಳಲ್ಲಿ ಆಸಕ್ತಿ ಹೆಚ್ಚಾಗಿದೆ. ಆದ್ದರಿಂದಲೇ ಸಾಹಿತ್ಯವೂ ಮತಧರ್ಮಗಳ ಹಿನ್ನೆಲೆಯಲ್ಲಿಯೇ ರಚಿಸಲ್ಪಡುವುದು ಎಲ್ಲೆಲ್ಲಿಯೂ ಕಂಡುಬರುವ ಭಾರತೀಯ ಸಾಹಿತ್ಯಗಳ ಸ್ವಭಾವವಾಗಿದೆ. ಸಾಹಿತಿಗಳನ್ನು ಪೋಷಣೆ ಮಾಡುತ್ತಾ ಬಂದ ದೊರೆಗಳ ಸ್ವಭಾವವು 'ಮತೀಯತೆ'ಯನ್ನು ಉದ್ದೇಶಪೂರ್ವಕ ಸ್ವೀಕರಿಸಿದೆ. ಇದರಲ್ಲಿ ತಪ್ಪೇನಿದೆ ? ಈ ಮತೀಯತೆಯಲ್ಲಿಯೇ ಮತಾತೀತ ಪ್ರವೃತ್ತಿಯನ್ನು ಬೆಳೆಸಲು ಯತ್ನಿಸಲಾಗಿದೆ. ಇದು ಸಾಮಾನ್ಯವೇ ? ನಮ್ಮ ಧರ್ಮ ಮಾನವ ಧರ್ಮ; ವಿಶ್ವಧರ್ಮ—ಎಂದು ಭಾರತದ ಪ್ರತಿಯೊಂದು ಧರ್ಮದವನೂ ಹೇಳಿಕೊಳ್ಳಲು ಹೆಮ್ಮೆಪಡುತ್ತಾನೆ. ತನ್ನ ಧರ್ಮವನ್ನು ಸಕಲ ಮಾನವ ಜಾತಿಗೆ, ವಿಶ್ವದ ವ್ಯಾಪ್ತಿಗೆ ಒಳಪಡಿಸಲು ಆಶೆಪಡುವುದು ಎಲ್ಲೆಲ್ಲಿಯೂ ಕಂಡುಬರುತ್ತದೆ. ಈ ಮಹತ್ವಾಕಾಂಕ್ಷೆಯಲ್ಲಿ ಮತೀಯತೆಯಲ್ಲಿಯೇ, ಜಾತೀಯತೆಯಲ್ಲಿಯೇ ಮತಾತೀತ—ಜಾತ್ಯಾತೀತ ಭಾವನೆಗಳನ್ನು ಪೋಷಿಸುವ ಹಿರಿಯ ಹಂಬಲವಿರುವುದನ್ನು ಗಮನಿಸಬಹುದು. ಈ ಒಳ್ಳೆಯ ಅಂಶ ಮತೀಯತೆಯ ಪಟ್ಟಿಯನ್ನು ಕಟ್ಟಿ ಮೂದಲಿಸುವವರ ತಲೆಗೆ ಹೊಳೆದಿಲ್ಲವೆಂದೇ ಹೇಳಬಹುದು.

ಕನ್ನಡ ಸಾಹಿತ್ಯ ರಾಜಾಶ್ರಯದಲ್ಲಿಯೇ ಹೆಚ್ಚಾಗಿ ಬೆಳೆದುಬಂತು.[2] ಮತೀಯ ಹಿನ್ನೆಲೆಯಲ್ಲಿಯೇ ಬೆಳೆದು ಬಂತು. ಜೈನ, ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ ಮತಗಳ ಕೃತಿಗಳು ಹುಟ್ಟಿಕೊಂಡವು. ಕನ್ನಡ ಸಾಹಿತ್ಯದ ಯಾವುದೇ ಉತ್ತಮ ಕೃತಿಯನ್ನು ತೆಗೆದುಕೊಂಡರೂ, ಈ ಸೂಚಿತ ಮತಗಳಲ್ಲಿ ಒಂದನ್ನು ಆಶ್ರಯಿಸಿ ಬರೆಯಲ್ಪಟ್ಟುದುಂಟು. ಯಾವುದೇ ಒಬ್ಬ ಕನ್ನಡ ಕವಿಯನ್ನು ತೆಗೆದುಕೊಂಡರೂ, ಅವನು ಈ ಮತಗಳಲ್ಲಿ ಒಂದು ಮತದ ಅಭಿಮಾನಿಯಾಗಿರುವುದುಂಟು. ಅವನು ಬಹುಶಃ ರಾಜಾಶ್ರಯ ಇಲ್ಲವೆ ರಾಜ್ಯಸತ್ತೆಯ ಬೆಂಬಲ, ಪ್ರೋತ್ಸಾಹ ಅಥವಾ ಪ್ರಚೋದನೆಯನ್ನು ಹೊಂದಿಯೇ ತನ್ನ ಕೃತಿರಚನೆ ಮಾಡಿರುವುದುಂಟು. ಇದಕ್ಕೆ ಅಪವಾದವೆಂಬಂತೆ ಕೆಲವು ನಿದರ್ಶನಗಳೂ ಇವೆ. ಅಲ್ಲದೆ, ಕೆಲವು ಶಾಸ್ತ್ರೀಯ ಗ್ರಂಥಗಳೂ ಮತೀಯತೆಯಿಂದ ಹೊರತಾಗಿವೆ. ಆದರೆ, ಸಾಮಾನ್ಯವಾಗಿ ಭಾವನಾತ್ಮಕವಾದ ಕಥೆ ಕಾವ್ಯಗಳ ಲಲಿತ ಸಾಹಿತ್ಯ ಹಾಗೂ ಮತತತ್ವಗಳ ಜಿಜ್ಞಾಸೆಯುಳ್ಳ ಧಾರ್ಮಿಕ ಕೃತಿಗಳು ಮತೀಯ ಬಂಧನದಿಂದ ದೂರವಾಗಿಲ್ಲ.

ರಾಜನಿಗೆ ಅಥವಾ ರಾಜ್ಯಸತ್ತೆಗೆ ಬೇಕಾದ ಮತಧರ್ಮ ರಾಜ್ಯದ ಪ್ರಜೆಗಳೆಲ್ಲರ ಮತಧರ್ಮವಾಗುವುದು ಒಮ್ಮೊಮ್ಮೆ ಸಂಪೂರ್ಣ ಸಾಧ್ಯವಾಗಲಿಕ್ಕಿಲ್ಲವಾದರೂ

---

2 ಆರ್. ನರಸಿಂಹಾಚಾರ್ಯ : ಕರ್ಣಾಟಕ ಕವಿಚರಿತೆ, II (ಪ್ರಸ್ತಾವನೆ) 1923–ಪು. 32–40

ಹೆಚ್ಚು ಪುರಸ್ಕಾರ ಪಡೆಯುವುದು ಸಾಧ್ಯವಿದೆ. ಅದರಂತೆ ರಾಜಾಶ್ರಯದ ಸಾಹಿತ್ಯವೂ ಹೆಚ್ಚು ಗೌರವಹೊಂದುವ ಶಕ್ಯತೆ ಇದೆ.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವ ಸಹೃದಯರು ರಾಜ್ಯಸತ್ತೆ, ಧರ್ಮ ಹಾಗೂ ಸಾಹಿತ್ಯ ಇವುಗಳನ್ನು ಕ್ರಮವಾಗಿ ತಿಳಿಯಲು ಯತ್ನಿಸಿದರೆ ಅನೇಕ ಸಮಸ್ಯೆಗಳು ತಂತಾನೆ ಬಿಡುತ್ತ ಹೋಗುವುವು ಮತ್ತು ಸಾಹಿತ್ಯ ಚರಿತ್ರೆಯು ಶುದ್ಧ ಮತ್ತು ಸಮಗ್ರತೆಯ ದಿಸೆಯಲ್ಲಿ ಹೊಸ ಹೆಜ್ಜೆಗಳನ್ನು ಇಡುವುದು.

ರಾಜಕೀಯ ಶಕ್ತಿ ತನಗೆ ಬೇಕಾದುದನ್ನು ಇಟ್ಟುಕೊಂಡು ಬೇಡಾದುದನ್ನು ನಷ್ಟ ಮಾಡುವ ಸಾಮರ್ಥ್ಯವನ್ನೂ ಹೊಂದಿರುವುದರಿಂದ ರಾಜಾಶ್ರಯವಿಲ್ಲದ ಸಾಹಿತ್ಯ ಹುಟ್ಟಬಹುದಾದರೂ ಬೆಳೆದು ಬಾಳುವುದು ಬಹು ಕಷ್ಟದ ವಿಷಯ. ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ ರಾಜಾಶ್ರಯದ ಪಾತ್ರ ಪ್ರಮುಖವಾಗಿದೆ.

ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯ ರಾಜಾಶ್ರಯದಲ್ಲಿಯೇ ಹೆಚ್ಚಾಗಿ ಅಭಿವೃದ್ಧಿ ಹೊಂದಿದ ಸಂಗತಿ, ರಾಜಾಶ್ರಯ ಪಡೆದವರಲ್ಲಿ ಜೈನ ಕವಿಗಳ ಸಂಖ್ಯೆಯೇ ಅಧಿಕವಾಗಿರುವ ಸಂಗತಿ ಸಹೃದಯರ ಗಮನ ಸೆಳೆಯುವ ವಿಷಯ ಗಳಾಗಿವೆ.[3] "ಕನ್ನಡ ಜೈನ ಕವಿಗಳು ಹಾಗೂ ರಾಜಾಶ್ರಯ" ಎಂಬುದು ಈ ಹಿನ್ನೆಲೆಯಲ್ಲಿ ಒಂದು ಮಹತ್ವಪೂರ್ಣ ಅಭ್ಯಾಸವಾಗಿದೆ.

ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಹೊಯ್ಸಳರು, ರಟ್ಟರು, ಶಿಲಾ ಹಾರರು, ಕೊಂಗಾಳ್ವರು, ಚೆಂಗಾಳ್ವರು, ತುಳು ದೇಶದ ಅರಸರು, ಚೌಟರು, ಬಂಗರು, ವಿಜಯನಗರದ ಅರಸರು, ಮೈಸೂರು ಒಡೆಯರು, ಕೆಲವು ಪಾಳೆಯ ಗಾರರು, ಮಂತ್ರಿಗಳು, ಸೇನಾಧಿಪತಿಗಳು ಜೈನ ಕವಿಗಳಿಗೆ ಆಶ್ರಯ ಕೊಟ್ಟಿದ್ದಾರೆ. ರಾಜರು ಮತ್ತು ಅವರ ಅಧಿಕಾರಿಗಳಲ್ಲಿ ಕೆಲವರು ಸ್ವತಃ ಕವಿಗಳಾಗಿಯೂ ಇದ್ದರು.

(1) ಗಂಗರು

ದುರ್ವಿನಿತ (ಸು. ಕ್ರಿ. ಶ. 500) ಶಿವಮಾರ (ಕ್ರಿ. ಶ. 780–814)ರು ಗಂಗವಂಶದ ರಾಜರು. ಕವಿರಾಜಮಾರ್ಗದಲ್ಲಿ ಹೇಳಿದ ಗದ್ಯಕಾರರಲ್ಲಿ ದುರ್ವಿನಿತನೂ ಒಬ್ಬನಾಗಿರಬಹುದು. ಶಿವಮಾರನು 'ಗಜಾಷ್ಟಕ' ವನ್ನು ಬರೆದಿದ್ದಾನೆ. ಅದು ಸುಪ್ರಸಿದ್ಧ 'ಓವನ' ಅಂದರೆ ಒನಕೆವಾಡು ಆಗಿತ್ತೆಂದು ಕೀರ್ತಿ ಇದೆ. ಶೂದ್ರಕ–

3 ಆರ್. ನರಸಿಂಹಾಚಾರ್ಯ : ಕರ್ಣಾಟಕ ಕವಿಚರಿತೆ, II (1923) – ಪ್ರಸ್ತಾವನೆ, ಪು. 32–40

ಹರಿವಂಶಗಳನ್ನು ಬರೆದ ಒಂದನೆಯ ಗುಣವರ್ಮನಿಗೆ ಗಂಗರ ಎರೆಯಪ್ಪನ (ಕ್ರಿ.ಶ. 886–913) ಆಶ್ರಯವಿದ್ದಿತು. ಗಂಗ ರಾಚಮಲ್ಲನ ಮಂತ್ರಿ ಚಾವುಂಡ ರಾಯನು ಮಹಾಕಲಿಯೂ ಕವಿಯೂ ಆಗಿ ಕನ್ನಡ ನಾಡಿನಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿದ್ದಾನೆ.

ಚಾವುಂಡರಾಯನಿಗೆ ಅಜಿತಸೇನಾಚಾರ್ಯರ ಶಿಷ್ಯನಾದ 'ಗಂಗಕುಲಾಬ್ಧಿ ಚಂದ್ರ, ಗಂಗಕುಲಚೂಡಾಮಣಿ, ಜಗದೇಕವೀರ, ಧರ್ಮಾವತಾರ, ನೊಳಂಬ ಕುಳಾಂತಕ ದೇವ' ಎಂಬ ಬಿರುದುಳ್ಳ ರಾಚಮಲ್ಲನು (ಕ್ರಿ.ಶ. 978–984) 'ಪರಮಸ್ವಾಮಿ'. ರಾಚಮಲ್ಲನಲ್ಲಿ ಚಾವುಂಡರಾಯನು ಸೇನಾನಾಯಕನಾಗಿಯೂ ಮಂತ್ರಿಯಾಗಿಯೂ ಇದ್ದನು. ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರ ಪ್ರತಿಷ್ಠೆ ಯನ್ನು ಮಾಡಿಸಿ ಅಜರಾಮರ ಕೀರ್ತಿಗೆ ಪಾತ್ರನಾಗಿದ್ದಾನೆ. ರಾಚಮಲ್ಲನು ಇವನ ಔದಾರ್ಯಕ್ಕೆ ಮೆಚ್ಚಿ 'ರಾಯ' ಎಂಬ ಬಿರುದನ್ನು ಕೊಟ್ಟನು. ಶ್ರ. ಬೆ. 345 ನೆಯ ಶಾಸನದಲ್ಲಿ–

'ಸ್ಥಿರ ಜಿನ ಶಾಸನೋದ್ಧರಣಾದಿಯೊಳಾರೆನೆ ರಾಚಮಲ್ಲಭೂ—
ವರ ವರಮಂತ್ರಿ ರಾಯನ ಬಳಿಕ್ಕೆ...'

ಎಂಬ ಪದ್ಯಭಾಗದಲ್ಲಿಯೂ ಇವನಿಗೆ 'ರಾಯ' ಎಂಬ ಹೆಸರು ಉಪಯೋಗಿಸಲ್ಪ ಟ್ಟಿರುವುದೂ ಕಂಡುಬಂದಿದೆ. ಚಾವುಂಡರಾಯನಿಗೆ 'ವೀರಮಾರ್ತಾಂಡ' ನೆಂಬ ಬಿರುದಿತ್ತು. ತನ್ನ ಬಿರುದನ್ನು–

ಚಂಡಪ್ರತಾಪರೂರ್ಜಿತ । ಮಂಡಲರಪ್ರತಿಮತೇಜರೆಂದೆಂದೆ ಭಯಂ ॥
ಗೊಂಡೆಱಗುಗುಂ ಜನಂ ಮಾ! ರ್ತಾಂಡಂಗಂ ನೆಗಱ್ದ ವೀರಮಾರ್ತಾಂಡಂಗಂ ॥[4]

ಎಂದು ಚಾವುಂಡರಾಯನೇ ಹೇಳಿಕೊಂಡಿದ್ದಾನೆ.

ಸುರಶೈಲಂ ಪಿರಿದಲ್ತು ವಾರ್ಧಿಪಿರಿದತ್ತಾ ಮೇರುಗಂ ವಾರ್ಧಿಗಂ ।
ಪಿರಿದುರ್ವೀತಳಮಲ್ತು ಮೇರುಗಿರಿಗಂ ವಾರಾಸಿಗಂ ಧಾತ್ರಿಗಂ ॥
ಪಿರಿದಾಶಾಂತರಮಲ್ತು ಮಂದರ ಸಮುದ್ರೋರ್ವೀದಿಗಂತಂಗಳಿಂ ।
ಪಿರಿದುಗ್ರಾರಿಜಯಾರ್ಜಿತೋರ್ಜಿತ ಯಶಂ ಶ್ರೀವೀರಮಾರ್ತಾಂಡನಾ ॥[5]

ಎಂದು ಚಾವುಂಡರಾಯನ ಕೀರ್ತಿಯು ಹರವು ಎಷ್ಟಿತ್ತು ಎಂಬುದನ್ನು ಬಣ್ಣಿಸಲಾಗಿದೆ. ಜಿನಸೇನರು "ಭವ್ಯಾಳಿಗೆ ಪೇಳ್ದಂ ವಾಣಿ ಗುಣಭದ್ರ ಮುನೀಶ್ವರರ್ ತ್ರಿಷಷ್ಟೀ ಪುರುಷ ಪ್ರತಿಬಂಧ ಪುರಾಣ' ಬರೆದರು. ಅದನ್ನೇ ಕನ್ನಡದಲ್ಲಿ ಚಾವುಂಡರಾಯನು

---

4 ಕರ್ನಾಟಕ ಕವಿಚರಿತೆ I (1961) – ಪು. 43.
5 ಅದೇ, ಪು. 50.

ಬರೆದನೆಂದು ಚಾವುಂಡರಾಯ ಪುರಾಣದಲ್ಲಿ ಹೇಳಲಾಗಿದೆ : 'ಕವಿಜನಶೇಖರಂ ಬರೆದು ಪುಸ್ತಕಕೇರಿಸಿದಂ ಪುರಾಣಮಂ'.

(2) ರಾಷ್ಟ್ರಕೂಟರು

ರಾಷ್ಟ್ರಕೂಟರ ಅಮೋಘವರ್ಷನೆಂಬ ದೊರೆ ನೃಪತುಂಗ ಎಂಬ ಹೆಸರಿನಿಂದ ಕನ್ನಡ ಸಾಹಿತ್ಯದ ಆದಿಪ್ರವರ್ತಕನೆನಿಸಿಕೊಂಡಿದ್ದಾನೆ. ಅವನು ಕವಿರಾಜಮಾರ್ಗ ಕಾರನಾಗಿ ಶ್ರೀವಿಜಯನಿಗೆ ಆಶ್ರಯ ನೀಡಿದ ವಿಷಯ[6] ಸುಪ್ರಸಿದ್ಧವಾಗಿದೆ. ನೃಪತುಂಗನು 'ಕವಿರಾಜಮಾರ್ಗ' ವನ್ನು ಬರೆದನೊ ಶ್ರೀವಿಜಯನು ಬರೆದನೊ ಎಂಬ ವಾದ ಇನ್ನೂ ವಿದ್ವಾಂಸರಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಿದೆ.[7]

ನೃಪತುಂಗನು (ಕ್ರಿ.ಶ. 814-877) ಮಾನ್ಯಖೇಟಪುರ (ಮಳಖೇಡ) ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು 62 ವರ್ಷಗಳವರೆಗೆ ಕರ್ನಾಟಕ ಸಾಮ್ರಾಜ್ಯಾಧಿಪತಿಯಾಗಿ ರಾಜ್ಯವಾಳಿದ್ದಾನೆ. ಆಮೇಲೆ, ವೈರಾಗ್ಯ ತಾಳಿ ರಾಜ್ಯ ಸೂತ್ರವನ್ನು ತ್ಯಜಿಸಿ ಸನ್ಯಾಸ ಧರ್ಮವನ್ನು ಸ್ವೀಕರಿಸಿದನೆಂದು ಹೇಳಲಾಗುತ್ತಿದೆ. ಅವನು ಬರೆದ ಸಂಸ್ಕೃತ ಕೃತಿಯಾದ 'ಪ್ರಶ್ನೋತ್ತರಮಾಲೆ' ಯಲ್ಲಿ ಇದಕ್ಕೆ ಪೋಷಣೆ ನೀಡುವ ಪದ್ಯವಿದೆ :

ವಿವೇಕಾತ್ತ್ಯಕ್ತ ರಾಜ್ಯೇನ ರಾಜ್ಞೀಯಂ ರತ್ನಮಾಲಿಕಾ ।
ರಚಿತಾಮೋಘವರ್ಷೇಣ ಸುಧಿಯಾ-ಸದಲಂಕೃತಿಃ ॥[8]

ನೃಪತುಂಗನ ಗುರುಗಳು ಜಿನಸೇನಾಚಾರ್ಯರು. ಅವರ ಬೋಧನೆಯಿಂದ ಅವನಿಗೆ ಜೈನ ಧರ್ಮದಲ್ಲಿ ಶ್ರದ್ಧೆ ಬಲಿತು ಮುಪ್ಪಿನ ಕಾಲದಲ್ಲಿ ಮುನಿಧರ್ಮ ಸ್ವೀಕರಿಸಿದ್ದು ಸಹಜವಾಗಿದೆ.

ಜಿನಸೇನಾಚಾರ್ಯರ ಶಿಷ್ಯನಾದ ಗುಣಭದ್ರನು (ಕ್ರಿ.ಶ. 898) ತನ್ನ 'ಉತ್ತರ ಪುರಾಣ'ದಲ್ಲಿ ನೃಪತುಂಗನು ಜಿನಸೇನಾಚಾರ್ಯರ ಶಿಷ್ಯನಾಗಿದ್ದನೆಂಬ ವಿಷಯವನ್ನು ಉಲ್ಲೇಖ ಮಾಡಿದ್ದಾನೆ :–

ಯಸ್ಯಪ್ರಾಂಶುನಖಾಂಶು—ಜಾಲವಿಸರದ್ಧಾರಾಂತರಾವಿರ್ಭವ ।
ತ್ಪಾದಾಂಭೋಜ ರಜಃಪಿಶಂಗ ಮಕುಟಪ್ರತ್ಯಗ್ರ ರತ್ನದ್ಯುತಿಃ ॥
ಸಂಸ್ಮರ್ತಾಸ್ವಮಮೋಘವರ್ಷನೃಪತಿಃ ಪೂತೋಹಮದ್ಯೇತ್ಯಲಂ ।
ಸ ಶ್ರೀಮಾನ್ ಜಿನಸೇನಪೂಜ್ಯ ಭಗವತ್ಪಾದೋ ಜಗನ್ಮಂಗಳಂ ॥[9]

---

6 ಎಂ. ವಿ. ಸೀತಾರಾಮಯ್ಯ ; ಕವಿರಾಜಮಾರ್ಗ (1968) - ಪ್ರಸ್ತಾವನೆ ; ಡಾ॥ ಎಂ. ಎಂ. ಕಲಬುರ್ಗಿ : ಕವಿರಾಜಮಾರ್ಗಪರಿಸರದ ಕನ್ನಡ ಸಾಹಿತ್ಯ (1973) ಪು. 28-43.

7 ಭೀಮರಾವ ಚಿಟಗುಪ್ಪಿ : ಕವಿರಾಜಮಾರ್ಗ ಪ್ರಶಸ್ತಿ (1972) ಪು. 143.

8 ಆರ್. ನ. : ಕ. ಕ. ಚ. (1961) – I, ಪು. 18.

9 ಆರ್. ನ. — ಕ. ಕ. ಚ. (1961)-I, ಪು. 17

ನೃಪತುಂಗನ ಜೈನಧರ್ಮಾಸಕ್ತಿ ಸುಸ್ಪಷ್ಟವಾದುದು. ಆದರೂ ಅವನನ್ನು ಕೆಲವರು ವೈಷ್ಣವನೆಂದಿದ್ದಾರೆ.

ರಾಷ್ಟ್ರಕೂಟರ ಮೂರನೆಯ ಕೃಷ್ಣನು (ಕ್ರಿ.ಶ. 939–968) ಭುವನೈಕ ರಾಮಾಭ್ಯುದಯವನ್ನು ಬರೆದ ಪೊನ್ನನಿಗೆ ಆಶ್ರಯ ನೀಡಿ ಕವಿಚಕ್ರವರ್ತಿ ಎಂಬ ಪ್ರಶಸ್ತಿಯನ್ನು ದಯಪಾಲಿಸಿದ್ದಾನೆ. ಆದರೆ, ಭುವನೈಕರಾಮಾಭ್ಯುದಯ ಇನ್ನೂ ಉಪಲಬ್ಧವಾಗಿಲ್ಲ.

ಪೊನ್ನ (ಸು. ಕ್ರಿ.ಶ. 950) ಕವಿಯು ಸ್ವತಃ ತನ್ನ ಕೃತಿಯಲ್ಲಿ, ಶಾಂತಿನಾಥ ಪುರಾಣದಲ್ಲಿ ತನಗೆ ಆಶ್ರಯ ನೀಡಿದ ಕೃಷ್ಣನೃಪನ ಬಗೆಗೆ ಕೆಲವು ಮಾತುಗಳನ್ನು ಹೇಳಿದ್ದಾನೆ. ಅವುಗಳನ್ನು ವಿದ್ವಾಂಸರು ಗಮನಿಸಬಹುದು :

ಭುವನ ಸಕ್ಕದ ಕನ್ನಡ ।
ಗವಿಗಳ್ ಸೆಲೆಸಾಲೆ ಸೋಲೆ ಸವಣಂಗಿತ್ತಂ ॥
ಸವಿವೇಕಮುಭಯ ಕವಿಚ ।
ಕ್ರವರ್ತಿವೆಸರಂ ನಿಜಾಹಿತೋಷ್ಣಂ ಕೃಷ್ಣಂ ॥[10]

ಕವಿತಾ ವಿಳಾಸಮಂ ಚ ।
ಕ್ರವರ್ತಿತಾನಿರ್ದು ಮಚ್ಚಿ ಪೆಸರ್ಗೊಂಡೆರಡುಂ ॥
ಕವಿತೆಯೊಳಮುಭಯಕವಿಚ ।
ಕ್ರವರ್ತಿಯನೆ ನೆಗಳ್ದನೀಕುರುಳ್ಗಳ ಸವಣಂ ॥[11]

ಅಯ್ದು ಕಷಾಯೋದಕದೊಳ್ ।
ತೊಯ್ದುಸಗಂಬೋಲ್ ನೃಪೇಂದ್ರ ಸಭೆಯೆಂಬ ಕೊಳ ॥
ಕ್ಕಯ್ದಲಸದಲೆದು ಸೆಲೆಯೊಳ್ ।
ಪೊಯ್ದಂ ಕವಿಚಕ್ರವರ್ತಿ ಜೀವರಮಂ ॥[12]

ಕನ್ನಡ—ಸಂಸ್ಕೃತ ಎರಡರಲ್ಲಿಯೂ ಪೊನ್ನನಿಗೆ ಸಮಾನರಾದ ಕವಿಗಳಾರೂ ಇರಲಿಲ್ಲವಾದ್ದರಿಂದ ಕೃಷ್ಣನೃಪನು ಅವನಿಗೆ ಉಭಯಕವಿಚಕ್ರವರ್ತಿ ಎಂಬ ಪ್ರಶಸ್ತಿಯನ್ನು ಕೊಟ್ಟನೆಂದು ತಿಳಿಯುತ್ತದೆ. ಐದು ಕಷಾಯೋದಕದಲ್ಲಿ ತೊಯ್ದ ಅಗಸನಂತೆ ನೃಪೇಂದು ಸಭೆಯೆಂಬ ಕೆರೆಗೆ ಒಯ್ದು ಕವಿಚಕ್ರವರ್ತಿಯಾದ ಪೊನ್ನನು ರೇಶಿಮೆಬಟ್ಟೆ (ಚೀವರ) ಯನ್ನು ನಿರ್ಮಲ ಸೆಲೆಯಲ್ಲಿ ಒಗೆದನು, ಎಂದು ಕವಿ ತನ್ನ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಾನೆ.

ಅತ್ತಿಮಬ್ಬೆಯ ತಂದೆ ಹಾಗೂ ಕಕ್ಕಂದಿರಾದ ಮಲ್ಲಪ್ಪಯ್ಯ—ಪೊನ್ನಮಯ್ಯರು ಪೊನ್ನನಿಂದ ಶಾಂತಿಪುರಾಣವನ್ನು ಬರೆಸಿದರು. ಅವರು ಕೃಷ್ಣನೃಪನಲ್ಲಿ ಮುಖ್ಯಾಧಿಕಾರಿಗಳಾಗಿದ್ದರು. ಅವರ ಬಗೆಗೆ ಪೊನ್ನಕವಿ ಹೀಗೆ ಹೇಳಿದ್ದಾನೆ :—

10, 11, 12. ಎ. ವೆಂಕಟ್ರಾವ್ : ಶಾಂತಿ ಪುರಾಣಂ (1929) ಪ್ರಸ್ತಾವನೆ. 3-4

ಶಾಂತಿಪುರಾಣದ ನಿರ್ವಾ ।
ಣಂ ತಕ್ಕದೆ ಮಲ್ಲಪಯ್ಯನಿಂ ತದನುಜನಿಂ ॥
ಶಾಂತಿಧನ ಪುನ್ನಮಯ್ಯನಿ ।
ನೇ ತಮ್ಮುೃತೀರ್ವರುಂ ಕೃತಾರ್ಥರೊ ಜಗದೊಳ್ ॥[13]

ಪೊನ್ನನ ಶಾಂತಿನಾಥಪುರಾಣವನ್ನೇ ಅತ್ತಿಮಬ್ಬೆ ಪ್ರತಿಮಾಡಿಸಿ ಶಾಸ್ತ್ರದಾನ ಮಾಡಿದ ಳೆಂಬ ವಿಷಯವನ್ನು ಅಜಿತನಾಥ ಪುರಾಣದಲ್ಲಿ ರನ್ನಕವಿ ಹೇಳಿದ್ದಾನೆ.

(3) ಚಾಳುಕ್ಯರು

ರಾಷ್ಟ್ರಕೂಟರ ಸಾಮಂತರಾಜನಾದ ಚಾಳುಕ್ಯರ ಅರಿಕೇಸರಿ (ಕ್ರಿ.ಶ. 920-950) ಯ ಆಶ್ರಯದಲ್ಲಿ ಕನ್ನಡದ ಆದಿಕವಿ ಮಹಾಕವಿಯಾದ ಪಂಪನು ವಿಕ್ರಮಾರ್ಜುನ ವಿಜಯ (ಪಂಪಭಾರತ) ವನ್ನು ಬರೆದು ರಾಜ್ಯಮಹಾಮರ್ಯಾದೆಯನ್ನು ಹೊಂದಿ ಅರಿಕೇಸರಿಯಿಂದ ಧರ್ಮಪುರವೆಂಬ ಅಗ್ರಹಾರವನ್ನು ಪಡೆದನು.

ಪಂಪಕವಿ ತನಗೆ ಆಶ್ರಯ ನೀಡಿದ ಅರಿಕೇಸರಿಯ ಬಗೆಗೆ ಹೀಗೆ ಉದ್ಗಾರ ತೆಗೆದಿದ್ದಾನೆ :

ಎಸೆಯೆ ಸಮಸ್ತ ಭಾರತಮನಾವ ನರೇಂದ್ರರುಮಾರ್ತರ್ು ಕೂರ್ತು ಪೇ ।
ಳಿಸ (ರೆ) ಕವೀಂದ್ರರುಂ ನೆರೆಯೆ ಪೇಳರೆ ಪೇಳಿಪೊಡೆಯ್ದೆ ನೀನೆ ಪೇ ॥
ಳಿಸುವೆಯುದಾತ್ತ ಕೀರ್ತಿನಿಲೆ ಪೇಳ್ವೊಡೆ ಪಂಪನೆ ಪೇಳ್ಗುಮಿಂತು ಪೇ ।
ಳಿಸಿದ ನರೇಂದ್ರರುಂ ಸರೆಯೆ ಪೇಳ್ದ ಕವೀಂದ್ರರುಮಾರ್ ಧರಿತ್ರಿಯೊಳ್ ॥[14]

ಅರಿಕೇಸರಿಯೆ ಭಾರತವನ್ನು ಬರೆಸಬೇಕು, ಪಂಪನೇ ಬರೆಯಬೇಕು, ಭೂಮಿಯಲ್ಲಿ ಅಂಥ ದೊರೆ ಅಂಥ ಕವಿ ಇನ್ನಾರಿದ್ದಾರೆ ?—ಎಂದು ಹೇಳಿಕೊಳ್ಳಲು ಜನರಿಗೆ ಹೆಮ್ಮೆ ಎನಿಸಬೇಕಾದರೆ, ಕವಿಯು ತನ್ನ ಕೃತಿಯ ಬಗ್ಗೆ ತುಂಬ ಆತ್ಮವಿಶ್ವಾಸವನ್ನು ಹೊಂದಿರಬೇಕಾಗುತ್ತದೆ. ಅದು ಸಹೃದಯರ ದೃಷ್ಟಿಯಲ್ಲಿ ಒಪ್ಪುವಂತೆಯೂ ಇದೆ. ಆದ್ದರಿಂದಲೇ ಆ ಮಾತನ್ನು ಮುಂದುವರಿಸಿ ಹೀಗೆ ಹೇಳಲಾಗಿದೆ :

ಎನೆ ಸಕಲಾವನೀತಳಜನಂ ಪಿರಿದುಂ ದಯೆಗೆಯ್ದು ಸಾರ್ಚಿ ಮೆ ।
ಲ್ಲನೆ ಪಿರಿದಪ್ಪ ಗೌರವದ ಮೈಮೆಯ ಮನ್ನಣೆಯೊಳೀಗಳ್ ಕರಂ ॥
ಮನಮನಲರ್ಚೆ ಕೀರ್ತಿ ಜಗದೊಳ್ ನಿಲೆ ಪೇಳಿಸಿದಂ ಜಗಕ್ಕೆ ನ ।
ಚ್ಚನ ಕವಿತಾ ಗುಣಾರ್ಣವನಿನೀಕೃತಿ ಬಂಧನಮಂ ಗುಣಾರ್ಣವಂ ॥[15]

---

13. ಎ. ವೆಂಕಟ್ರಾವ್ : ಶಾಂತಿ ಪುರಾಣಂ (1929), ಪ್ರಸ್ತಾವನೆ, ಪು. 22
14. ಬೆಳ್ಳಾವೆ ವೆಂಕಟನಾರಾಯಣಪ್ಪ : ಪಂಪ ಭಾರತಂ (1973), ಪು. 404
15. ಬೆಳ್ಳಾವೆ ವೆಂಕಟನಾರಾಯಣಪ್ಪ ; ಪಂಪ ಭಾರತಂ (1973), ಪು. 404

ಜನ ಮೆಚ್ಚಿ ಗೌರವಿಸುವಂತೆ ದೊರೆ ಕವಿಯಿಂದ ಕೃತಿರಚನೆ ಮಾಡಿಸಿದನು. ಜಗದಲ್ಲಿ ಕೀರ್ತಿಯುಳಿಯುವಂತೆ ಮಾಡಿದನು.

ತುಡುಗೆ ನಿಚ್ಚಲುಂ ಪಂಚರತ್ನಂಗಳುಂ ಪೊಡಮಡೆ ತನ್ನುಡುವುಪ್ಪಟಂಗಳ್ ।
ಮಡಿಯೊಳಾಗೆಯುಮುಳ್ಕರಿಂ ಕಂಡಾಗಳ್ ಪಿರಿಯ ಬಿತ್ತರಿಗೆಯುಂ ಕೆಲದೊಳಿಕ್ಕಿ ॥
ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲೆನಿಸಿ ರಾಗಂ ।
ಗಿಡದೆ ಕೊಂಡಾಡಿದಂ ಬಲ್ಲಹನರಿಯೆ ಗುಣಾರ್ಣವಂ ಕವಿತಾಗುಣಾರ್ಣವನಂ ॥[16]

ಅರಿಕೇಸರಿ—ಪಂಪರಲ್ಲಿಯ ಆತ್ಮೀಯ ಪ್ರೀತಿ ಎಂತಹದಾಗಿತ್ತೆಂಬುದಕ್ಕೆ ಈ ಪದ್ಯ ಸಾಕ್ಷಿಯಾಗಿದೆ.

ಬೀರದಳವಿಯ ನನ್ನಿಯ ಚಾಗದ ಶಾಸನಂ ಚಂದ್ರಾರ್ಕತಾರಂಬರಂ ।
ಮೇರು ನಿಲ್ವಿನಂ ನಿಲವೇಳ್ಕುಂ ಕಾವ್ಯಕ್ಕೆ ತಾನಿತ್ತಂ ಶಾಸನದಗ್ರಹಾರಂ ॥
ಸಾರಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮಭಂಡಾರದಂತೆ ।
ಸಾರವಾದುದು ಬಿಟ್ಟಗ್ರಹಾರಮಾ ಬಜ್ಜೆಸಾಸಿರದೊಳಂ ಧರ್ಮಪುರಂ ॥[17]

ಧರ್ಮಾಪುರ ಪಂಪನಿಗೆ ಅರಿಕೇಸರಿಯಿಂದ ಅಗ್ರಹಾರವಾಗಿ ಚಿರಂತನ ಪ್ರೀತಿಯಾಗಿ ದೊರೆಯಿತು.

ಚಾಳುಕ್ಯರ 2ನೆಯ ತೈಲಪನು (ಕ್ರಿ.ಶ. 973-987) ರನ್ನಕವಿಗೆ ರಾಜಾಶ್ರಯವನ್ನು ದಯಪಾಲಿಸಿ ಸಾಹಸಭೀಮವಿಜಯ (ಗದಾಯುದ್ಧ)ವನ್ನು ಬರೆಯಿಸಿದನು. ಕವಿಗೆ ತನ್ನ ದೊರೆಯನ್ನು, ಪಂಪನು ಹೇಳಿದಂತೆ, ಕಥಾನಾಯಕನಿಗೆ ಹೋಲಿಸಿ ಹೇಳಲು ತುಂಬ ಆಸಕ್ತಿ ಇದ್ದಿತು. ಯಶಸ್ವಿಯಾಗಿ ಕೃತಿ ರಚನೆಯಾಯಿತು. ಪಂಡಿತರು ತಲೆದೂಗಿದರು. ಅರಸನಾದ ತೈಲಪನು ಕವಿ ರನ್ನನಿಗೆ ಕವಿಚಕ್ರವರ್ತಿ ಪದವಿಯನ್ನೂ ಚಿನ್ನ–ಆನೆ–ಛತ್ರಚಾಮರಗಳನ್ನೂ ಪ್ರೀತಿಯಿಂದ ಕೊಟ್ಟನು.

ರನ್ನನಿಗೆ ತನ್ನ ದೊರೆಯ ಬಗ್ಗೆ ಹೇಳಿಕೊಳ್ಳಲು ಬಲು ಹಿಗ್ಗು. ತನ್ನ ಕೀರ್ತಿಯನ್ನು ಎತ್ತಿ ಹೇಳಲು ಇನ್ನೂ ಹಿಗ್ಗು.

ಪಡೆಯೆಡೆಯ ಕಡೆಯ ಬಡವ ।
ರ್ಕುಡೆ ಪಡೆದನೊ ಚಕ್ರವರ್ತಿಯೊಳ್ತೈಲಪನೊಳ್ ॥
ಪಡೆದಂ ಮಹಿಮೋನ್ನತಿಯಂ ।
ಪಡೆದಂ ಕವಿಚಕ್ರವರ್ತಿವೆಸರಂ ರನ್ನಂ ॥[18]

16, 17. ಬೆಳ್ಳಾವೆ ವೆಂಕಟನಾರಾಯಣಪ್ಪ : ಪಂಪಭಾರತಂ (1973) ಪು. 404 ; 404-405

18. ಕೆ. ವಿ. ಕೃಷ್ಣಭಟ್ಟ : ಸಾಹಸಭೀಮ ವಿಜಯಂ, ಪು. 8

ಸಾಮಾನ್ಯರಿಂದಲ್ಲ, ಚಕ್ರವರ್ತಿಯಿಂದ 'ಕವಿಚಕ್ರವರ್ತಿ' ಬಿರುದು ತನಗೆ ಬಂದಿದೆ! ಎನ್ನುತ್ತಾನೆ.

ಮತಿ ಕೋಶಂ ಪದವಿದ್ಯೆ ಕಂಠಿಕೆ ಜಸಂ ಶ್ವೇತಾತಪತ್ರಂ ಸರ।
ಸ್ವತಿ ಮಾದೇವಿ ಪದೋಕ್ತಿ ಭೇರಿಕಳಿತಂ ಸಿಂಹಾಸನಂ ಸದಲಂ॥
ಕೃತಿ ಚಂಚಚ್ಚಮರೀಜಮಾಗೆ ಕವಿತಾಸಾಮ್ರಾಜ್ಯಮಂ ತಾಳ್ದಿದು।
ನ್ನುತಿಯಿಂದಂ ಕವಿಚಕ್ರವರ್ತಿವೆಸರೇಂ ರನ್ನಂಗೆ ಮೈವೆತ್ತುದೋ॥[19]

ಕವಿಯಾದ ತಾನು ಹೇಗೆ ಚಕ್ರವರ್ತಿತ್ವವನ್ನು ಹೊಂದಿ, ಕವಿತಾ ಸಾಮ್ರಾಜ್ಯವನ್ನು ಆಳುತ್ತಿರುವೆನೆಂಬುದರ ವಿವರಣೆ ಕೊಟ್ಟಿದ್ದಾನೆ—ರನ್ನ!

ರನ್ನನು ತೈಲಪನಿಗಾಗಿ ಗದಾಯುದ್ಧ ಬರೆದಂತೆ, ಅತ್ತಿಮಬ್ಬೆಗಾಗಿ ಅಜಿತ ಪುರಾಣವನ್ನು ಬರೆದಿದ್ದಾನೆ. ತೈಲಪನನ್ನು ಕೊಂಡಾಡಿದಂತೆ ಅತ್ತಿಮಬ್ಬೆಯನ್ನೂ ಮನವಾರೆ ಕೊಂಡಾಡಿದ್ದಾನೆ. ಒಂದು ಲೌಕಿಕ, ಇನ್ನೊಂದು ಧಾರ್ಮಿಕ ಕೃತಿ ರಚಿಸಿ ಪಂಪನು ಕೀರ್ತಿ ಹೊಂದಿದಂತೆ ರನ್ನನೂ ಗದಾಯುದ್ಧವನ್ನು ಲೌಕಿಕ ಕಾವ್ಯವಾಗಿಯೂ, ಅಜಿತ ಪುರಾಣವನ್ನು ಧಾರ್ಮಿಕ ಕಾವ್ಯವಾಗಿಯೂ ಬರೆದು ತನ್ನ ಆಶೆಯನ್ನು ಈಡೇರಿಸಿಕೊಂಡಿದ್ದಾನೆ. ಪಂಪನಿಗೆ ಕವಿಚಕ್ರವರ್ತಿಯ ಪದವಿಯೂ ಸಿಗಲಿಲ್ಲ; ಧಾರ್ಮಿಕ ಕಾವ್ಯಬರೆಯಲು ಆಶ್ರಯವೂ ಸಿಗಲಿಲ್ಲ. ಆ ದೃಷ್ಟಿಯಿಂದ ರನ್ನಕವಿ ಸುದೈವಿಯಾಗಿದ್ದಾನೆನ್ನಬಹುದು. ತನ್ನ ಎರಡೂ ಕೃತಿಗಳಿಗೆ ಆಶ್ರಯ ದಾತರನ್ನು ಹೊಂದಿದ್ದಾನೆ. ಅತ್ತಿಮಬ್ಬೆಯ ಬಗ್ಗೆ ಇರುವ ಆತನ ಗೌರವ ತೈಲಪನ ಬಗ್ಗೆ ಇರುವ ಗೌರವಕ್ಕಿಂತಲೂ ಹಿರಿದು. ಅಂತೆಯೇ ಅವಳ ವ್ಯಕ್ತಿತ್ವವನ್ನು ಬಹಳ ಎತ್ತರವುಟ್ಟದಲ್ಲಿ ಚಿತ್ರಿಸಿದ್ದಾನೆ.

ಪಿರಿದುಂ ಬೂತುಗನಾತನಿನಮಳನಾತಂಗಂ ನೊಳಂಬಾತಕಂ।
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ॥
ಪಿರಿಯಂ ಶಂಕರಗಂಡನಲ್ತೆ ಪಿರಿಯಂ ತದ್ಬಾರಮಂ ಪೊತ್ತು ನಿ।
ತ್ತರಿಸುತಿರ್ಪುದರಿಂದ ನೀನೆ ಪಿರಿಯೈ ಶ್ರೀ ದಾನಚಿಂತಾಮಣೀ॥[20]

ಭೂತುಗ, ಅಮಳ, ನೊಳಂಬಾಂತಕ, ಚಾವುಂಡರಾಯ, ಶಂಕರಗಂಡ ಇವರು ಒಬ್ಬರಿಗಿಂತ ಒಬ್ಬರು ಧಾರ್ಮಿಕ ಕಾರ್ಯದಲ್ಲಿ ಕಳಕಳಿಯಿಂದ ಕೆಲಸ ಮಾಡುವ ಹಿರಿಯ ವ್ಯಕ್ತಿಗಳು. ಅವರೆಲ್ಲರಿಗಿಂತಲೂ ಅತ್ತಿಮಬ್ಬೆ ಹಿರಿಯ ವ್ಯಕ್ತಿತ್ವ ಉಳ್ಳವಳು ಎಂದು ಕವಿ ರನ್ನನು ಅವಳನ್ನು ಕುರಿತು ವರ್ಣನೆ ಮಾಡಿದ್ದಾನೆ.

ದಯೆಯಂ ತಾಳಿದ ಜೈನಧರ್ಮರುಚಿಯಂ ಕೈಕೊಂಡು ಸಮ್ಯಕ್ತ್ವ ಶು।
ದ್ಧಿಯನೀಕಾಲದೊಳಪ್ಪುಕೆಯ್ದು ಭುವನಕ್ಕಾಶ್ಚರ್ಯಮಪ್ಪಂತು ಕೀ॥
ರ್ತಿಯನಾವರ್ಜಿಸುತಿರ್ಪುದಾವ ಚರಿತ ಪ್ರಾರಂಭದಿಂ ಚಕ್ರವ।
ರ್ತಿಯುಮಂ ಪೆರ್ಚಿಸಿದೊಳ್ಪು ನಿನ್ನೊಳೆಸೆಗುಂ ಶ್ರೀ ದಾನಚಿಂತಾಮಣೀ॥[21]

---

19. ಆರ್. ನ. ; ಕ. ಕ. ಚ. (1961) ಪು. 66
20-21. ರನ್ನನ ಅಜಿತನಾಥ ಪುರಾಣ

ಚಕ್ರವರ್ತಿಯನ್ನೂ ಮೀರಿಸಿದ ಕೀರ್ತಿ ಅತ್ತಿಮಬ್ಬೆಯದು ಎಂದು ಲೋಕಕ್ಕೆ ಆಶ್ಚರ್ಯ !

ಪೊನ್ನನ ಶಾಂತಿಪುರಾಣವನ್ನು ಪ್ರತಿ ಮಾಡಿಸುವ ಒಂದು ಕಾರ್ಯನಿಮಿತ್ತವಾಗಿ ಅತ್ತಿಮಬ್ಬೆ ರನ್ನಕವಿಯನ್ನು ಕಂಡಳು. ಅಜಿತಪುರಾಣ ಬರೆಯಿಸಿದಳು. ಚಕ್ರವರ್ತಿಗೆ ಬಹುಶಃ ಆವಳ ಮುಖಾಂತರವೇ ರನ್ನನ ಪರಿಚಯವಾಗಿರಬೇಕು. ಅತ್ತಿಮಬ್ಬೆ ರನ್ನನ ಬಾಳಿನ ಭಾಗ್ಯದೇವತೆಯಾಗಿದ್ದಾಳೆ. ಖನಿಯೊಳಗಿನ ರತ್ನ ಕಿರೀಟವೇರಿ ಹೊಳೆದುದು ಅತ್ತಿಮಬ್ಬೆಯ ಪುಣ್ಯದ ಪ್ರಭಾವದಿಂದ ಎಂದೇ ಹೇಳಬಹುದು.

ಆಮೇಲೆ,

ಚಾಳುಕ್ಯರ ಆಹವಮಲ್ಲನ (1042-1068) ಆಶ್ರಯ ಹೊಂದಿ ನರಗುಂದದ ಶ್ರೀಧರಾಚಾರ್ಯನು 'ಜಾತಕತಿಲಕ'ವೆಂಬ ಜ್ಯೋತಿಷ ಗ್ರಂಥವನ್ನು ಬರೆದನು. ಇದು ಜೈನ ಜ್ಯೋತಿಷ ಶಾಸ್ತ್ರಗಳಲ್ಲಿ ಬಹುಮುಖ್ಯವಾದುದು.

ಚಾಳುಕ್ಯರ ಭುವನೈಕಮಲ್ಲ ಸೋಮೆಶ್ವರ (ಕ್ರಿ. ಶ. 1068-1076) ನ ಪಸಾಯಿತನಾದ ಲಕ್ಷ್ಮಣನೃಪನ ಕೈಯಲ್ಲೆ ಮಂತ್ರಿಯಾಗಿದ್ದ ಶಾಂತಿನಾಥನು ಸುಕುಮಾರ ಚರಿತವನ್ನು ಬರೆದನು. ಅವನ ಮೇಲಿನ ಪ್ರೀತಿಗಾಗಿ ದೊರೆ ಭುವನೈಕಮಲ್ಲ ಸೋಮೇಶ್ವರನು ಅವನಿಗಾಗಿ ಶಾಂತಿನಾಥ ಜಿನಾಲಯವನ್ನು ಕಟ್ಟಿಸಿಕೊಟ್ಟು, ಅದರ ಯೋಗಕ್ಷೇಮವನ್ನು ನೋಡಿಕೊಳ್ಳಲು ಉಂಬಳಿ ಬಿಟ್ಟನು (ಎಸ್.ಐ.ಐ., ಕ್ರಿ.ಶ. 1068).

ಚಾಳುಕ್ಯರ ಆಹವಮಲ್ಲನ (ಕ್ರಿ.ಶ. 1042-1068) ಮಗನೂ, ವಿಕ್ರಮಾದಿತ್ಯನ ತಮ್ಮನೂ ಆದ ಕೀರ್ತಿವರ್ಮನು ಗೋವೈದ್ಯ ಗ್ರಂಥವನ್ನು ಬರೆದಿದ್ದಾನೆ. ಈ ಕೀರ್ತಿವರ್ಮನ ಮಿತ್ರನಾದ ಬ್ರಹ್ಮಶಿವನು ಸಮಯ ಪರೀಕ್ಷೆ, ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರಗಳನ್ನು ಬರೆದು ತ್ರೈಲೋಕ್ಯಮಲ್ಲನಿಂದ ಕವಿಚಕ್ರವರ್ತಿ ಪದವಿಯನ್ನು ಹೊಂದಿ ಗೌರವಕ್ಕೆ ಪಾತ್ರನಾದನು.

ಎರಡನೆಯ ನಾಗವರ್ಮನು (ಕ್ರಿ.ಶ. 1042) ವರ್ಧಮಾನಪುರಾಣವನ್ನು ಬರೆದದ್ದು 1ನೆಯ ಜಗದೇಕಮಲ್ಲನಲ್ಲಿಯೇ (ಕ್ರಿ.ಶ. 1015–1042) ಎಂದು ತೋರುತ್ತದೆ. ಈ ಗ್ರಂಥ ಈಚೆಗೆ ಸಿಕ್ಕು ಮೈಸೂರು ವಿಶ್ವವಿದ್ಯಾನಿಲಯದಿಂದ 1974 ರಲ್ಲಿ ಪ್ರಕಟವಾಗಿದೆ.

ಹೀಗೆ ಚಾಳುಕ್ಯರ ಆಶ್ರಯದಲ್ಲಿ ಸಾಹಿತ್ಯಸೃಷ್ಟಿಯಾದುದನ್ನು ಗಮನಿಸಬಹುದು.

(4) ಹೊಯ್ಸಳರು

ಹೊಯ್ಸಳರ ಒಂದನೆಯ ಬಲ್ಲಾಳ (ಕ್ರಿ.ಶ. 1100–1106)ನ ಆಶ್ರಯದಲ್ಲಿ ಅಭಿನವ ಪಂಪ (ನಾಗಚಂದ್ರ)ನೂ, ಕಂತಿಯೂ ಇದ್ದರೆಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಹೊಂದಿದ್ದಾರೆ. ಚಾಳುಕ್ಯರ ಆಶ್ರಯದಲ್ಲಿಯೇ ಅಭಿನವ ಪಂಪನು ಇದ್ದಿರಬಹುದೆಂದು ಈಚೆಗೆ ಕೆಲವು ಅಭಿಪ್ರಾಯಗಳು ಪ್ರಕಟವಾಗಿವೆ.[22] ಕವಿ ನಾಗಚಂದ್ರನು (ಅಭಿನವ ಪಂಪನು) ತನ್ನ ಆಶ್ರಯದಾತನ ಬಗ್ಗೆ ಉಳಿದವರು ಹೇಳುವಂತೆ ಯಾವ ಮಾತನ್ನೂ ಹೇಳಿಲ್ಲ. ಆದರೆ, ರಾಜಾಶ್ರಯದಲ್ಲಿ ಇದ್ದಿರಬಹುದೆಂದು ತರ್ಕಿಸಲು ಅವಕಾಶವಿದೆ.[23] ಏನಿದ್ದರೂ, ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆದು ನಿರ್ಧಾರ ಸ್ಪಷ್ಟವಾಗಬೇಕಾಗಿದೆ.

ಹೊಯ್ಸಳರ ಎರಡನೆಯ ಬಲ್ಲಾಳನ (ಕ್ರಿ.ಶ. 1173–1220) ದಂಡನಾಯಕರಾಗಿದ್ದ ಬಾಹುಬಲಿ–ಭರತ ಸಹೋದರರ ಆಶ್ರಯದಲ್ಲಿ ರಾಜಾದಿತ್ಯನು ಗಣಿತಶಾಸ್ತ್ರಗಳನ್ನು ಕನ್ನಡ ಪದ್ಯಗಳಲ್ಲಿ ರಚಿಸಿದ್ದಾನೆ. ಅದೇ ಕವಿ ಸೇವುಣರ ಭಿಲ್ಲಮನ (ಕ್ರಿ.ಶ. 1187-1193) ಆಶ್ರಯದಲ್ಲಿ ಕೆಲವು ಗಣಿತ ಕೃತಿಗಳನ್ನು ರಚಿಸಿರುವುದಾಗಿಯೂ ತಿಳಿಸುತ್ತದೆ.

ಹೊಯ್ಸಳರ ಎರಡನೆಯ ಬಲ್ಲಾಳನ (ಕ್ರಿ.ಶ. 1173–1220) ಸೆಜ್ಜೆವಳ್ಳನಾಗಿದ್ದ ಪದ್ಮನಾಭನ ಆಶ್ರಯದಲ್ಲಿ ನೇಮಿಚಂದ್ರಕವಿ ನೇಮಿನಾಥಪುರಾಣ ಬರೆದಿದ್ದಾನೆ. ಕವಿ ನೇಮಿಚಂದ್ರನು ತನ್ನ ಆಶ್ರಯದಾತನ ಬಗೆಗೆ ಹೀಗೆ ಹೇಳಿದ್ದಾನೆ:

> ಆ ಪದ್ಮನಾಭದೇವಂ ।
> ಶ್ರೀಪತಿಪುಣ್ಯಪ್ರಭಾವದಿಂ ನೇಮಿಯ ವಿ ॥
> ದ್ಯಾಪೃಥುಳ ಜಳಧಿಭವಕೃತಿ ।
> ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ ॥[24]

ಅಲ್ಲದೆ, ನೇಮಿನಾಥಪುರಾಣದ ಪ್ರತಿ ಆಶ್ವಾಸಗಳ ಕೊನೆಯಲ್ಲಿ ಹೀಗೆ ಹೇಳಲಾಗಿದೆ: 'ಚತುರ್ಭಾಷಾಕವಿಚಕ್ರವರ್ತಿ ನೇಮಿಚಂದ್ರಕೃತಮುಂ ಶ್ರೀಮತ್ ಪ್ರತಾಪಚಕ್ರವರ್ತಿ ಶ್ರೀವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಪದವೀವಿರಾಜಿತ ಸಜ್ಜೆವಳ್ಳ ಪದ್ಮನಾಭದೇವಕಾರಿತಮುಮಪ್ಪ ನೇಮಿನಾಥಪುರಾಣದೊಳ್.'

---

22 ಡಾ. ಬಿ. ಬಿ. ಹೆಂಡಿ : ಮಲ್ಲಿನಾಥಪುರಾಣ (ಪ್ರಸ್ತಾವನೆ) ಮತ್ತು ಡಾ. ಎಂ. ಎಂ ಕಲಬುರ್ಗಿ : ಮಲ್ಲಿನಾಥಪುರಾಣ ಸಂಗ್ರಹ (ಪ್ರಸ್ತಾವನೆ) ನೋಡಬಹುದು.

23 ಅದೇ

24 ಡಾ. ಬಿ. ಎಸ್. ಕುಲಕರ್ಣಿ: ನೇಮಿನಾಥ ಪುರಾಣಂ (1968) ಪು. 8

ಎರಡನೆಯ ಬಲ್ಲಾಳನ ಇಬ್ಬರು ಬೇರೆ ಬೇರೆ ಮಂತ್ರಿಗಳ ಆಶ್ರಯದಲ್ಲಿ ಕೃಷ್ಣ ಕಥೆಯನ್ನು ಜೈನ (ನೇಮಿನಾಥ ಪುರಾಣ) ಮತ್ತು ವೈಷ್ಣವ (ಜಗನ್ನಾಥ ವಿಜಯ) ಸಂಪ್ರದಾಯಗಳಲ್ಲಿ ನೇಮಿಚಂದ್ರ–ರುದ್ರಭಟ್ಟ ಕವಿಗಳು ಸ್ಪರ್ಧೆಯಿಂದ ಕೃತಿಗಳನ್ನು ರಚಿಸಿರುವಂತೆ ತೋರುತ್ತದೆ.

ಎರಡನೆಯ ಬಲ್ಲಾಳನ ಇನ್ನೊಬ್ಬ ಮಂತ್ರಿಯಾಗಿದ್ದ ರೇಚಣನ ಆಶ್ರಯದಲ್ಲಿ ಆಚಣ್ಣನು (ಸು. ಕ್ರಿ.ಶ. 1190) ವರ್ಧಮಾನ ಪುರಾಣವನ್ನು ರಚಿಸಿದ್ದಾನೆ. ತಾನು ರಚಿಸಿದ ಕೃತಿ ವಸುಧೈಕಬಾಂಧವನ ಬಂಧುರಭಾಗ್ಯನ ದಂಡನಾಥರೇಚರಸನ ಮಾನಸ ಪ್ರಿಯಮೆನಿಪ್ಪ ಜಗನ್ನುತ ವರ್ಧಮಾನಚರಿತಂ ಎಂದು ಕವಿಗೆ ಅಭಿಮಾನವಿದೆ. 'ಶ್ರೀ ಕರಣಾಗ್ರಗಣ್ಯಂ ಅಭಿಮಾನಿ ಜಿನೇಂದ್ರಮತಾಬ್ಜಭಾನು ಪುಣ್ಯಾಕರಂ ಅರ್ಥಿ ಕಲ್ಪತರು' ಎಂದು ಕವಿ ರೇಚಣ್ಣನನ್ನು ಹೊಗಳಿದ್ದಾನೆ.

ಹೊಯ್ಸಳರ ಎರಡನೆಯ ಬಲ್ಲಾಳ (ಕ್ರಿ.ಶ. 1173–1220) ರಾಯನಿಂದಲೇ ಜನ್ನನಿಗೆ ಕವಿಚಕ್ರವರ್ತಿ ಬಿರುದು ದೊರೆತುದು. ಯಶೋಧರಚರಿತೆಯಲ್ಲಿ ಜನ್ನನು ಆ ವಿಷಯವಾಗಿ ಹೇಳಿಕೊಂಡಿದ್ದಾನೆ :

ಕನ್ನರನಾದರದಿಂ ಕುಡೆ ।
ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ ॥
ಮನ್ನಿಸಿ ಬಲ್ಲಾಳಂ ಕುಡೆ ।
ಜನ್ನಂ ಕವಿಚಕ್ರವರ್ತಿವೆಸರಂ ಪಡೆದರ್ ॥ 25

ಕೃಷ್ಣನೃಪನಿಂದ ಪೊನ್ನನು, ತೈಲಪರಾಜನಿಂದ ರನ್ನನು, ಬಲ್ಲಾಳರಾಜನಿಂದ ಜನ್ನನು ಕವಿಚಕ್ರವರ್ತಿ ಎಂಬ ಹೆಸರನ್ನು ಹೊಂದಿದುದಾಗಿ ಹೇಳಲಾಗಿದೆ.

ಜನ್ನಕವಿ ತನಗೆ ಆಶ್ರಯನೀಡಿದ ಬಲ್ಲಾಳರಾಜನ ಗುಣವರ್ಣನೆ, ಶೌರ್ಯದ ವರ್ಣನೆ ಮಾಡಿದ್ದಾನೆ.

ಧೀರನಿಧಿ ಬಿಟ್ಟದೇವನೊ ।
ಓರಗೆ ಬಲ್ಲಾಳನಿಂತು ನರಸಿಂಹ ಸುತಂ ॥
ಗಾರೆಣೆ ಗಗನಂ ಗಾಗನಾ ।
ಕಾರಮೆನಲ್ ತಮ್ಮೊಳೆಣೆ ಪಿತಾಮಹಪೌತ್ರರ್ ॥ 26
ಆರಾರಿಗೆ ಬಲ್ಲಾಳನ ।
ದಾಳಿಮ ದಾವಣಿಯ ತುರಗದಳ ಖುರಹತಿಯಿಂ ॥
ಪೇಳೆ ಪೆಸರಿಲ್ಲದಂತಿರೆ ।
ಪಾಳಾದುವು ವೈರಿದುರ್ಗಮೆನಿತೊಳವನಿತುಂ ॥ 27

---

25 ಕೆ. ವಿ. ರಾಘವಾಚಾರ್ : ಯಶೋಧರಚರಿತೆ (1941), ಪು. 58
26-27 ಅದೇ, ಪು. 56, 57.

ಅಜ್ಜ ಮೊಮ್ಮಕ್ಕಳು ತಮ್ಮ ತಮ್ಮಲ್ಲಿ ಸಮಾನರೆನ್ನುವಂತೆ ಬಿಟ್ಟಿದೇವ-ಬಲ್ಲಾಳರ ಸಮಾನರಾಗಿದ್ದಾರೆ,–ಹೇಗೆಂದರೆ, ಗಗನವು ಗಗನಾಕಾರವಾಗಿರುವಂತೆ! ಬಲ್ಲಾಳ ರಾಯನ ಕುದುರೆಯ ಖುರಕ್ಕೆ ತಾಗಿ ವೈರಿ ದುರ್ಗಗಳೆಲ್ಲ ಹೇಳಿಹೆಸರಿಲ್ಲದಂತೆ ಹಾಳಾದುವಂತೆ !

ಕವಿತೆಗೆ ಆಶ್ರಯ ಕೊಟ್ಟ ದೊರೆಗಳಲ್ಲಿ ತನ್ನ ದೊರೆಯೇ ಶ್ರೇಷ್ಠನೆಂದು ಜನ್ನಕವಿ ಬಲ್ಲಾಳದೊರೆಯನ್ನು ಕುರಿತು ಹೇಳುತ್ತಾನೆ :

ನೆಗಳ್ದ ನೃಪರೊಳಗೆ ಮುಂ ಕವಿ ।
ತೆಗೆ ಮುಂಜಂ ಭೋಜನುತ್ಪಲಂ ಶ್ರೀಹರ್ಷಂ ॥
ಮಿಗಿಲವರಿಂ ಬಲ್ಲಾಳಂ ।
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥ [28]

ಮುಂಜ–ಭೋಜ–ಉತ್ಪಲ–ಶ್ರೀಹರ್ಷ ರಾಜರಿಗಿಂತಲೂ ಬಲ್ಲಾಳನು ಕ್ರಮವಾಗಿ 1,2,3,4,5 ಪಟ್ಟು ಕವಿತೆಗೆ ಮಿಗಿಲಾದವನೆಂದು ಹೊಗಳಿದ್ದಾನೆ. ನೇಮಿ–ಜನ್ನ–ರುದ್ರಭಟ್ಟ–ಆಚಣ್ಣ– ರಾಜಾದಿತ್ಯ ಮುಂತಾದ ಕವಿಗಳು ಎರಡನೆಯ ಬಲ್ಲಾಳನ ಆಶ್ರಯದಿಂದಲೇ ಬೆಳಕು ಕಂಡವರು. ಬಲ್ಲಾಳ ರಾಜನ ಆಳಿಕೆಯಲ್ಲಿ ಸಾಹಿತ್ಯಸೃಷ್ಟಿ ಆದಷ್ಟು ಬೇರೆ ದೊರೆಗಳ ಕಾಲದಲ್ಲಿ ಆಗಿಲ್ಲ. ಆ ದೃಷ್ಟಿಯಿಂದ ನೋಡಿದಾಗ ಜನ್ನನ ಹೊಗಳಿಕೆ ನ್ಯಾಯವಾದುದೆನಿಸುತ್ತದೆ; ಅಷ್ಟೇ ಅಲ್ಲ ಅತಿಶಯೋಕ್ತಿ ಅಲ್ಲವೆಂದು ತೋರುತ್ತದೆ.

ಆ ನೃಪನ ಸಭೆಯೊಳಖಿಳ ಕ ।
ಳಾನಿಪುಣರ ನಟ್ಟನಡುವೆ ಬೆಟ್ಟೊತ್ತಿ ಗೆಲಲ್ ॥
ತಾನೆ ಚತುರ್ವಿಧ ಪಂಡಿತ ।
ನೇನೆಂಬುದೊ ಸುಕವಿ ಭಾಳಲೋಚನನಳವಂ ॥ [29] ॥

ಅಂಥ ರಸಿಕದೊರೆಯಾದ ಬಲ್ಲಾಳರಾಯನ ಸಭೆಯಲ್ಲಿ ಬೆಟ್ಟೊತ್ತಿ ಗೆಲ್ಲುವ ಸಾಮರ್ಥ್ಯ ತನಗಿದ್ದುದಕ್ಕೆ ಕವಿ ಜನ್ನನಿಗೆ ಹಿರಿಯ ಹೆಮ್ಮೆ ಎನಿಸಿದೆ!

ಜನ್ನಕವಿ ಕ್ರಿ.ಶ. 1209 ರಲ್ಲಿ ವೀರಬಲ್ಲಾಳನ ಆಶ್ರಯದಲ್ಲಿ ಯಶೋಧರ ಚರಿತ್ರೆಯನ್ನೂ, ಕ್ರಿ.ಶ. 1230 ರಲ್ಲಿ ವೀರಬಲ್ಲಾಳನ ಮಗನಾದ ವೀರನರಸಿಂಹನ (ಕ್ರಿ.ಶ. 1220–1235) ಆಶ್ರಯದಲ್ಲಿ ಅನಂತನಾಥಪುರಾಣವನ್ನು ಬರೆದಿದ್ದಾನೆ. ಎರಡೂ ಕೃತಿಗಳ ಮಧ್ಯದಲ್ಲಿ ಸುಮಾರು 21 ವರ್ಷಗಳ ಅಂತರವಿದೆ. ತಂದೆಯ ಕಾಲಕ್ಕೆ ಕವಿಚಕ್ರವರ್ತಿ ಎನಿಸಿದ ಜನ್ನ ಮಗನಾದ ನರಸಿಂಹನ ಕಾಲಕ್ಕೆ ರಾಜ್ಯದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬ. ಆಗ ಅವನು ಚಿಕ್ಕ ವಯಸ್ಸಿನ ದೊರೆಯ

28 ಕೆ. ವಿ. ರಾಘವಾಚಾರ್ : ಯಶೋಧರ ಚರಿತೆ (1941) ಪು. 57
29 ಆರ್. ನ. : ಕ. ಕ. ಚ. (1961) ಪು. 378, 380

ಪಾಲಿಗೆ ಸರ್ವಸ್ವವಾಗಿದ್ದಂತೆ ತೋರುತ್ತದೆ. ಅಂತೆಯೆ ಜನ್ನಕವಿ ಅನಂತನಾಥ ಪುರಾಣದಲ್ಲಿ ಹೀಗೆ ಹೇಳಿದುದುಂಟು :

ನರಸಿಂಹನ ಚೋಳಕುಳೋ ।
ದ್ಧರಣನ ಸರ್ವಜ್ಞಭೂಪನೋಲಗದೊಳ್ನಿಂ ॥
ದಿರೆ ದಂಡಾಧೀಶಂ ಕು ।
ಳ್ಳಿರೆ ಮಂತ್ರಿ ತೊಡಂಕೆ ಕವಿಜನಾರ್ದನ ದೇವಂ ॥ [30]

ನಿಂತರೆ ಸೇನಾಪತಿ, ಕುಳಿತರೆ ಮಂತ್ರಿ, ಬರೆಯುಲು ತೊಡಗಿದರೆ ಕವಿ–ಹೀಗೆ ಜನ್ನನು ದೊರೆಗೆ ಅನಂತಮುಖದ ಸೇವೆಯನ್ನು ಸಲ್ಲಿಸುತ್ತಿರುವುದು, ಕವಿಯ ಯೋಗ್ಯತೆ ಯನ್ನು ಬೆಳಕಿಗೆ ತಂದಿದೆ.

ಬರೆಯಲ್ಮೇಣ್ಮಚ್ಚರದಿಂ ।
ಕೊರೆಯಲ್ಮೇಣ್ಕೈಯ್ಗೆ ಪಲಗೆ ಬರೆ ಕಾವ್ಯಕಲಾ ॥
ಪರಿಣತೆಯೊಳ್ ಖಳ್ಗಕಳಾ ।
ಪರಿಣತೆಯೊಳ್ ಭಾಳನೇತ್ರನೆನಿಪಂ ಜನ್ನಂ ॥ [31] ॥

ಜನ್ನಕವಿ ಹಣೆಗಣ್ಣನಂತೆ ಮಹಾಭಯಂಕರನು ; ಕೈಗೆ ಖಡ್ಗ ಬಂದರೂ ಅಷ್ಟೆ ; ಲೇಖನ ಬಂದರೂ ಅಷ್ಟೆ. ಎರಡರಲ್ಲಿಯೂ ನೈಪುಣ್ಯವನ್ನು ತೋರಿಸಬಲ್ಲ ಮಹಾ ಶಕ್ತಿ ಕವಿಗುಂಟು. ಕವಿ–ಕಲಿ ಪಂಪನಂತಹ ವ್ಯಕ್ತಿತ್ವ–ಜನ್ನ ಕವಿಯದು.

ಕವಿತಾ ಕೌತುಕದಿಂ ಮಹಾಪ್ರಭುತೆಯಿಂದೌದಾರ್ಯದಿಂ ಭೋಗರೂ ।
ಪವಿಳಾಸೋದಯದಿಂದೆ ಜನ್ನಮರಸಂ ಸಂದಿರ್ದು ಚೆಲ್ವಾಯ್ತು ಯಾ ॥
ದವಸಿಂಹಂ ನರಸಿಂಹರಾಯನ ಸಭಾರಾಜೋತ್ಸವಂ ಚಂದ್ರನಿ ।
ರ್ದ ವಸಂತಂ ಮಳಯಾನಿಳಂ ಸೊಗಯಿಸಿರ್ದುದ್ಯಾನಮೆಂತಂತೆವೊಲ್ ॥ [32] ॥

ನರಸಿಂಹನ ಸಭೆಯಲ್ಲಿ–ವಸಂತ ಋತುವಿನ ಚಂದ್ರ, ತಂಗಾಳಿ ತೀಡುವ ಕೈದೋಟ ಹೇಗೆ ಚೆಲ್ವಾಗಿ ಒಪ್ಪುತ್ತವೋ ಹಾಗೆ ಜನ್ನಕವಿ ಒಪ್ಪುತ್ತಾನೆ, ಎಂದು ಹೇಳಿದ್ದು ಸ್ವಾರಸ್ಯಪೂರ್ಣವಾಗಿದೆ. ಬಹುಶಃ ಜನ್ನನಂತಹ ಸುದೈವಿ, ಸುಖಿ, ಭಾಗ್ಯಶಾಲಿ, ಮತ್ತು ಮಹತ್ವಪೂರ್ಣ ಸ್ಥಾನಮಾನಗಳನ್ನು ಹೊಂದಿದ ವ್ಯಕ್ತಿ ಕನ್ನಡ ಕವಿಗಳಲ್ಲಿ ಮತ್ತೆ ಯಾರನ್ನೂ ಕಾಣೆವು.

(5) ಸೌಂದತ್ತಿಯ ರಟ್ಟರು

(1) ಸೌಂದತ್ತಿಯ ರಟ್ಟರ ಲಕ್ಷ್ಮೀದೇವನಲ್ಲಿ (ಕ್ರಿ.ಶ. 1170-1190) ನೇಮಿಚಂದ್ರನು ಲೀಲಾವತಿಯನ್ನು ಬರೆದನೆಂದು ಡಾ. ಬಿ. ಎಸ್. ಕುಲಕರ್ಣಿಯವರು

30 ಆರ್. ನ. : ಕ. ಕ. ಚ. (196) ಪು. 378, 380

31, 32. ಜನ್ನನ ಅನಂತನಾಥ ಪುರಾಣ : ಡಿ. ಶ್ರೀನಿವಾಸಾಚಾರ್ (1930) ಪು. 10

ಈಚೆಗೆ ತಮ್ಮ ಮಹಾಪ್ರಬಂಧದಲ್ಲಿ ಹೇಳಿದ್ದಾರೆ. ಆರ್. ನರಸಿಂಹಾಚಾರ್ಯರು ಶಿಲಾಹಾರ ಗಂಡರಾದಿತ್ಯನ ಮಗನಾದ ಲಕ್ಷ್ಮರಾಜನ ಆಶ್ರಯದಲ್ಲಿ ನೇಮಿಚಂದ್ರನು ಲೀಲಾವತಿ ಬರೆದನೆಂದು ತಿಳಿದಿದ್ದರು. (2) ಚಂದ್ರಪ್ರಭ ಪುರಾಣ ಬರೆದ ಅಗ್ಗಳನಿಗೆ ಆಶ್ರಯ ನೀಡಿದವರು ಸೌಂದತ್ತಿಯ ರಟ್ಟರೇ. (3) ಪಾರ್ಶ್ವನಾಥ ಪುರಾಣವನ್ನು ಬರೆದ ಪಾರ್ಶ್ವಪಂಡಿತನು ಬೆಳಗಾವಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಸೌಂದತ್ತಿ ರಟ್ಟರ ಮನೆತನದ 4 ನೆಯ ಕಾಯವೀರ್ಯ (1202-1220)ನ ಆಸ್ಥಾನದ ಕವಿಯಾಗಿದ್ದನು. (4) ಬಾಳಚಂದ್ರ ಕವಿಕಂದರ್ಪನು ಅದೇ ರಾಜನಲ್ಲಿ ಆಶ್ರಯ ಪಡೆದಿದ್ದನು. (5) ಪುಷ್ಪದಂತ ಪುರಾಣವನ್ನು ಬರೆದ 2ನೆಯ ಗುಣವರ್ಮ (ಸು. ಕ್ರಿ.ಶ. 1215) ನು 4 ನೆಯ ಕಾರ್ತವೀರ್ಯನ ಕೈಕೆಳಗೆ ನಾಳ್ಪ್ರಭುವಾಗಿದ್ದ ಶಾಂತಿವರ್ಮನ ಆಶ್ರಯ ಹೊಂದಿದ್ದನು.

(6) ಶಿಲಾಹಾರರು

ಕರಾಡ ಕೊಲ್ಲಾಪೂರಗಳನ್ನು ರಾಜಧಾನಿಗಳನ್ನಾಗಿ ಮಾಡಿ ಆಳಿದ ಶಿಲಾಹಾರ ದೊರೆಗಳೂ ಕನ್ನಡಿಗರು. ಕನ್ನಡ ಕವಿಗಳಿಗೆ ಆಶ್ರಯದಾತರು. ಶಿಲಾಹಾರ ಗಂಡರಾದಿತ್ಯನ ಮಗನಾದ ಲಕ್ಷ್ಮಣರಾಜನ ಆಜ್ಞಾನುಸಾರವಾಗಿ ಕವಿಕರ್ಣಪಾರ್ಯನು ನೇಮಿನಾಥ ಪುರಾಣ ಬರೆದುದಾಗಿ ತಿಳಿಯುತ್ತದೆ.

(7) ಕೊಂಗಾಳ್ವರು - ಚೆಂಗಾಳ್ವರು

(1) ವೀರಕೊಂಗಾಳ್ವನ (ಸು.ಕ್ರಿ.ಶ. 1120) ಆಶ್ರಯದಲ್ಲಿ ಮೌಕ್ತಿಕ ಕವಿ ಚಂದ್ರನಾಥಾಷ್ಟಕವನ್ನು ಬರೆದನು. (2) 3ನೆಯ ಮಂಗರಸನು ಚೆಂಗಾಳ್ವರ ಮಂತ್ರಿಗಳ ವಂಶದವನು. ಕಲ್ಲಹಳ್ಳಿಯ ಪ್ರಭು (ಇಂದು ಕರ್ನಾಟಕ ಮುಖ್ಯಮಂತ್ರಿಗಳಾದ ದೇವರಾಜ ಅರಸರು ಇದೇ ವಂಶದವರು) ವಿನ ಮಗನಾದ 3ನೆಯ ಮಂಗರಸನು ಸಮ್ಯಕ್ತ್ವಕೌಮುದಿ, ಜಯನೃಪಕಾವ್ಯ, ನೇಮಿಜಿನೇಶಸಂಗತಿ, ಮುಂತಾದ ಕೃತಿಗಳನ್ನು ಬರೆದನು.

(8) ವಿಜಯನಗರದ ಅರಸರು

(1) 1ನೆಯ ಹರಿಹರನ ಆಳಿಕೆಯಲ್ಲಿ (ಕ್ರಿ.ಶ. 1336-1353) ಮುಗಳಿಪುರದ ಅಧಿಪನಾದ 1ನೆಯ ಮಂಗರಸನು ಖಗೇಂದ್ರಮಣಿದರ್ಪಣ ಬರೆದನು. (2) 2ನೆಯ ಹರಿಹರನ (ಕ್ರಿ.ಶ. 1377-1404) ಆಸ್ಥಾನ ಕವಿಯಾಗಿದ್ದ ಮಧುರನು ಧರ್ಮನಾಥ ಪುರಾಣವನ್ನು ಬರೆದನು. ಕೊಟ್ಟಬಾಗೆಯ ವಿಭು ಮಲ್ಲಿಕಾರ್ಜುನನು ಮಧುರನ ಬಳಿಗೆ ಬಂದು ನಾನಾ ವಸ್ತು ಪ್ರತಿಪತ್ತಿಯನ್ನು ಸಲ್ಲಿಸಿ ರಾಜರಾಯಗುರು ಎನಿಸಿದ ವರ್ಧಮಾನಮುನಿಸನ್ನಿಧಿಗೊಯ್ದು ಅವರಿಂದ ಹೇಳಿಸಿ ಧರ್ಮನಾಥ ಪುರಾಣ

ಬರೆಯಿಸಲು ಹಚ್ಚಿದನು. ಆಮೇಲೆ ಹರಿಹರರಾಯನ ಪ್ರಧಾನ ಮುದ್ದದಂಡೇಶನ ಆಶ್ರಯ ದೊರೆತು, ಮುಂದೆ ಹರಿಹರನ ಆಸ್ಥಾನ ಕವಿಯಾದನು. 1ನೆಯ ದೇವರಾಯ (ಕ್ರಿ.ಶ. 1410) ನ ಮಂತ್ರಿ ಲಕ್ಷ್ಮೀಧರನಿಗೆ ಗಣೇಶ ಪ್ರತಿಷ್ಠೆಯ ಸಮಯಕ್ಕೆ ಶಾಸನ ಬರೆದು ಗೌರವಕ್ಕೆ ಪಾತ್ರನಾದನು. (3) ಶಬ್ದಾನುಶಾಸನವನ್ನು ಬರೆದ ಭಟ್ಟಾಕಳಂಕನು ವಿಜಯನಗರ 1ನೆಯ ಶ್ರೀರಂಗರಾಯನ (ಕ್ರಿ.ಶ. 1573–1584) ಆಸ್ಥಾನದಲ್ಲಿ ಸಾರತ್ರಯವನ್ನೂ ಅಲಂಕಾರತ್ರಯವನ್ನೂ ಓದಿ ಕೀರ್ತಿ ಪಡೆದಂತೆ ಬೀಳಗಿ ಶಾಸನದಿಂದ ತಿಳಿಯುತ್ತದೆ. ಅದೇ ಶಾಸನದಲ್ಲಿ ವಿಜಯನಗರದ 1ನೆಯ ವೆಂಕಟಪತಿರಾಯನ (ಕ್ರಿ.ಶ. 1586-1617) ಆಳಿಕೆಯಲ್ಲಿಯೂ ಬಾಳಿದಂತೆ ತಿಳಿಯುತ್ತದೆ.

(9) ತುಳು ದೇಶದ ಅರಸರು

ತುಳು ದೇಶದ ಬೇರೆ ಬೇರೆ ಅರಸರು ಸು. ಕ್ರಿ.ಶ. 1500 ರಿಂದ 1761 ರ ವರೆಗೆ ಜೈನ ಧರ್ಮಕ್ಕೂ ಜೈನ ಕವಿಗಳಿಗೂ ಬಲವಾದ ಬೆನ್ನಾಸರವಾಗಿ ನಿಂತಿದ್ದರು. (1) ಭೈರವಸುತ ಪಾಂಡ್ಯರಾಯನ ಆಶೆಯಂತೆ ಕಲ್ಯಾಣಕೀರ್ತಿ ಕವಿ (ಕ್ರಿ.ಶ. 1439) ಜ್ಞಾನ ಚಂದ್ರಾಭ್ಯುದಯವನ್ನೂ, (2) ಹೈವನಾಡಿನ ರಾಜನಾದ ಸಂಗೀತಪುರದ ಸಂಗಮನಿಗಾಗಿ ಕೋಟೀಶ್ವರನು (ಸು. ಕ್ರಿ.ಶ. 1500) ಜೀವಂಧರಷಟ್ಪದಿಯನ್ನೂ, (3) ತುಳು ಭೈರರಸ ಒಡೆಯರ ಆಸ್ಥಾನದಲ್ಲಿ ಶೃಂಗಾರಕವಿ ರತ್ನಾಕರ ವರ್ಣಿ (ಕ್ರಿ.ಶ. 1557) ಭರತೇಶ ವೈಭವವೆಂಬ ಮಹಾಕಾವ್ಯವನ್ನೂ ರಚಿಸಿ ಕೀರ್ತಿಯನ್ನು ಹೊಂದಿದರು. (4) ಹೈವಕೊಂಕಣದ ಸಾಳ್ವಮಲ್ಲನ ಆಸ್ಥಾನಕವಿ ಸಾಳ್ವನು ಜಿನಭಾರತ, ರಸರತ್ನಾಕರ ಮುಂತಾದ ಗ್ರಂಥಗಳನ್ನೂ ಬರೆದನು. (5) ಕೆಲವಸ ಸಿಂಹಾಸನದ ಅರಿರಾಯರ ಗಂಡರ ದಾವಣಿ ಭೈರವೇಂದ್ರನ ಆಸ್ಥಾನದಲ್ಲಿ ಬಾಹುಬಲಿ ನಾಗಕುಮಾರ ಚರಿತೆಯನ್ನೂ, (6) ಚಂದ್ರಮಕವಿ ಅದೇ ಅರಸರ ಆಶ್ರಯದಲ್ಲಿ ಕ್ರಿ.ಶ. 1646 ರಲ್ಲಿ ಕಾರ್ಕಳದ ಗೊಮ್ಮಟೇಶ್ವರ ಚರಿತೆಯನ್ನೂ, (7) ಗೆರಸೊಪ್ಪೆಯ ಭೈರವರಾಯನ ಆಶ್ರಯದಲ್ಲಿ ಆದಿಯಪ್ಪನು ಧನ್ಯಕುಮಾರ ಚರಿತೆಯನ್ನೂ, (8) ಸಂಗೀತಪುರದ ಸಂಗಮರಾಯನ ಪುತ್ರನ ಆಶ್ರಯದಲ್ಲಿ ಪಾಯಣ್ಣನು (ಕ್ರಿ.ಶ. 1748) ಅಹಿಂಸಾ ಚರಿತೆಯನ್ನೂ ಬರೆದರು. (9) ತುಳು ಲಕ್ಷ್ಮಣ ಬಂಗರಾಜನ ಆಸ್ಥಾನದಲ್ಲಿ ಚಂದ್ರಶೇಖರ ಕವಿ ಬರೆದ ರಾಮಚಂದ್ರ ಚರಿತ್ರದ ಅರ್ಧಭಾಗವನ್ನು ತೌಳವ ದೇಶದ ಮೂಲಿಕೆ ರಾಜನಾದ ಚೆನ್ನರಾಯನ ಆಶ್ರಿತ ಕವಿ ಪದ್ಮನಾಭನು ಮುಂದುವರೆಸಿ ಕ್ರಿ.ಶ. 1750 ರಲ್ಲಿ ಪೂರ್ಣ ಮುಗಿಸಿದನು. (10) ಚೌಟರ ಚೆನ್ನಮಾಂಬೆಯ ಆಶ್ರಯದಲ್ಲಿ ಪದ್ಮನಾಭನು ಪದ್ಮಾವತಿ ಚರಿತ್ರೆಯನ್ನೂ, (11) ಚೌಟರ ರಾಣಿ ಅಬ್ಬಕ್ಕದೇವಿಯ ಆಶ್ರಯದಲ್ಲಿ ಪಟ್ಟಾಭಿರಾಮನು (ಅಜೈನ) ರತ್ನಶೇಖರ ಚರಿತೆಯನ್ನೂ, (12) ಚಂದ್ರಶೇಖರ ಚಿಕ್ಕರಾಯನ ರಾಣಿವಾಸದ

ಚೆನ್ನಮ್ಮಾದೇವಿಗಾಗಿ ಸುರಾಲನು (ಕ್ರಿ.ಶ. 1761) ಪದ್ಮಾವತಿ ಚರಿತ್ರೆಯನ್ನೂ ಬರೆದುದಾಗಿ ತಿಳಿಯುತ್ತದೆ.

(10) ಮೈಸೂರು ಅರಸರು

(1) ಮೈಸೂರು ಒಡೆಯರಾದ ರಾಜನೃಪ (ಕ್ರಿ. ಶ. 1578–1617) ನ ಆಶ್ರಯದಲ್ಲಿ ರಾಮಚಂದ್ರಕವಿ ಅಶ್ವಶಾಸ್ತ್ರವನ್ನೂ (2) ಪದ್ಮಣ ಪಂಡಿತನು ಹಯ ಸಾಸಮುಚ್ಚಯವನ್ನೂ ಬರೆದರು. (2) ಖಾಸಾ ಚಾಮರಾಜನ (ಕ್ರಿ.ಶ. 1776–1796) ಮಹಿಷಿ ದೇವೀರಮ್ಮಣ್ಣಿಯ ಪ್ರೇರಣೆಯಿಂದ ದೇವಚಂದ್ರನು ರಾಜಾವಳಿ ಕಥೆ ಬರೆದನು. ಅಲ್ಲದೆ, ಬ್ರಿಟಿಷ್ ಅಧಿಕಾರಿಯಾದ ಮೆಕಂಜಿಯ ಪ್ರೋತ್ಸಾಹವೂ ಇದ್ದಿತು. ಆದ್ದರಿಂದ ದೇವಚಂದ್ರನು 12 ಕೃತಿಗಳನ್ನು ಬರೆದನು.

ಇನ್ನೂ ಕೆಲವು ಪಾಳೆಗಾರರು ಹಾಗೂ ಪುಟ್ಟ ದೊರೆಗಳು ಜೈನ ಕವಿಗಳಿಗೆ ಆಶ್ರಯ ಕೊಟ್ಟು ಕೃತಿ ರಚನೆ ಮಾಡಿಸಿದ್ದಾರೆ. (1) ಪಿರಿಯ ಪಟ್ಟಣದ ವಿರೂಪ ರಾಜನ ಆಶ್ರಿತನಾದ ದೊಡ್ಡಯ್ಯನು ಚಂದ್ರಪ್ರಭ ಚರಿತೆಯನ್ನೂ, (2) ಚಿಕ್ಕರಾಜ ಚಮೂಪನ ಆಶ್ರಯದಲ್ಲಿ ದೇವಕವಿ ಕುಸುಮಾವಳಿಯನ್ನೂ, (3) ಕೇತನಾಯಕನ ಪ್ರೋತ್ಸಾಹದಿಂದ ಮಹಾಬಲನು ನೇಮಿನಾಥ ಪುರಾಣವನ್ನೂ, (4) ಅಮ್ಮಿನ ಭಾವಿಯ ಹೊನ್ನಬಂಡಿ ದೇವರಾಜನ ಪ್ರೇರಣೆಯಿಂದ ವಿಜಯಣ್ಣನು (ಕ್ರಿ. ಶ. 1448) ದ್ವಾದಶಾನುಪ್ರೇಕ್ಷೆಯನ್ನೂ, ಅವತಿನಾಥ ಪ್ರಭುವಿಗಾಗಿ ಚಿಕ್ಕರಸನ ಸೊಣ್ಣ ಭೈರೇಗೌಡ ಚರಿತ್ರೆಯನ್ನೂ ಬರೆದರೆಂದು ತಿಳಿದಿದೆ. ಈಚೆಗೆ ಪದ್ಮರಾಜ ಪಂಡಿತ ಬ್ರಹ್ಮಸೂರಿಗಳೂ (24 ಕೃತಿಗಳು), ಎ. ಶಾಂತಿರಾಜಶಾಸ್ತ್ರಿಗಳೂ, ಸುಬ್ಬರಾಯ ಶಾಸ್ತ್ರಿಗಳೂ ಮೈಸೂರು ಒಡೆಯರ ಆಶ್ರಯದಲ್ಲಿ ಕೃತಿ ರಚನೆ ಮಾಡಿದರು. ಒಟ್ಟಿಗೆ ಪಂಪನಿಂದ ಧರಣೇಂದ್ರಯ್ಯನವರೆಗೂ ಜೈನ ಕವಿಗಳಿಗೆ ರಾಜಾಶ್ರಯ ತಪ್ಪಿಲ್ಲ. ಈಗ ವಿಶ್ವವಿದ್ಯಾನಿಲಯ, ಭಾರತೀಯ ಜ್ಞಾನ ಪೀಠಗಳಂಥ ಸಂಸ್ಥೆಗಳು (ಅವೂ ಆಧುನಿಕ ರಾಜಾಶ್ರಯಗಳೇ) ಡಾ. ಉಪಾಧ್ಯೆಯಂಥವರಿಂದ ಕೃತಿ ರಚನೆಗೆ ಪ್ರಚೋದನೆ ಕೊಡುತ್ತಿವೆ.

ಈ ವಿವರಗಳಿಂದ ಕೆಲವು ಚಮತ್ಕಾರಿಕ ಅಂಶಗಳು ಪ್ರಕಟವಾಗಿವೆ: (1) ಪಂಪ – ಪೊನ್ನ – ರನ್ನರು ಜೈನ ಕವಿಗಳಾಗಿದ್ದರೂ ಅವರಿಗೆ ಆಶ್ರಯ ನೀಡಿದ ಅರಿಕೇಸರಿ – 3 ನೆಯ ಕೃಷ್ಣ – 2ನೆಯ ತೈಲಪ ಅರಸರು ವೈಷ್ಣವರಾಗಿದ್ದರು. ಅವರಿಗಾಗಿ ಬರೆದ ಭಾರತ ರಾಮಾಯಣಗಳು ಜೈನ ಕೃತಿಗಳಾಗಿರದೆ ಲೌಕಿಕ ಕಾವ್ಯಗಳಾಗಿ ಇತಿಹಾಸ ಗರ್ಭಿತವಾದ ವೈದಿಕ ಭಾರತ – ರಾಮಾಯಣಗಳಾಗಿವೆ. ಅದರಂತೆ ನೃಪತುಂಗನು ವೈಷ್ಣವನಾಗಿಯೇ ಇದ್ದು ಜೈನಕವಿಯಾದ ಶ್ರೀವಿಜಯನಿಗೆ ಆಶ್ರಯ ನೀಡಿದನೆಂದು ಈಚೆಗೆ ತಿಳಿಯಲಾಗಿದೆ. (2) ಇದೂ ಅಲ್ಲದೆ ಜೈನ ಕವಿಗಳಿಗೆ

ಆಶ್ರಯ ನೀಡಿದ ಚಾಳುಕ್ಯ ಹೊಯ್ಸಳ ಅರಸರೂ, ವಿಜಯನಗರ ರಾಯರೂ ಮೈಸೂರು ಒಡೆಯರು ಅಜೈನರಾಗಿಯೇ ಇದ್ದು ಕಾವ್ಯ, ವ್ಯಾಕರಣ, ಅಲಂಕಾರ. ಮತ್ತು ವಿವಿಧ ಶಾಸ್ತ್ರಗಳನ್ನೂ ಜೈನ ಕವಿಗಳಿಂದ ಬರೆಸಿದರು. ಚಿಕ್ಕರಸನ ಸೊಣ್ಣ ಭೈರೇಗೌಡನ ಚರಿತ್ರೆ (ಸು. ಕ್ರಿ.ಶ. 1680) ಅಜೈನರಾಜನ ಚರಿತ್ರೆಯಾಗಿದ್ದುದರಿಂದಲೋ ಏನೋ ಶಿವ–ವಿಷ್ಣು–ಬ್ರಹ್ಮ ಸ್ತುತಿಯಿಂದಲೇ ಕಾವ್ಯ ಪ್ರಾರಂಭವಾಗಿದೆ. ಎಲ್ಲಿಯೂ ಜಿನಸ್ತುತಿ ಇಲ್ಲ. ಆದರೆ ಕವಿ ತಾನು ಮಾತ್ರ ಜೈನನೆಂದು ಹೇಳಿಕೊಂಡಿದ್ದಾನೆ. ಜೈನ ಕವಿಗಳು ಜೈನೇತರ ಕೃತಿಗಳನ್ನು ತಾದಾತ್ಮ್ಯಭಾವದಿಂದ ಬರೆಯುವಲ್ಲಿ ವಿಕ್ರಮ ಸಾಧಿಸಿದ್ದಾರೆಂದೇ ಹೇಳಬಹುದು. ಇದು ಜೈನ ಕವಿಯ ರಚನೆ ಎಂದು ಗೊತ್ತಾಗುವುದೇ ಶಕ್ಯವಿಲ್ಲದಷ್ಟು ದೂರಕ್ಕೆ ಅವರು ಕ್ರಮಿಸಬಲ್ಲರು.

(3) ಜೈನ ಕವಿಗಳು ಲೌಕಿಕ ಕಾವ್ಯದ ಜೊತೆಗೆ ಧಾರ್ಮಿಕ ಕಾವ್ಯವನ್ನು ಬರೆಯುವದನ್ನು ಅಲಕ್ಷಿಸಿದವರಲ್ಲ. ತಮ್ಮ ಕಾವ್ಯಶಕ್ತಿಯನ್ನು ಧರ್ಮಸೇವೆಗೆ ದುಡಿಸದೆ ಬಿಟ್ಟರೆ ಅವರಿಗೆ ಸಮಾಧಾನವಿಲ್ಲ.

(4) ಚೌಟರ ಅಬ್ಬಕ್ಕದೇವಿಯ ಆಶ್ರಯದಲ್ಲಿ ಅಜೈನನಾದ ಪಟ್ಟಾಭಿರಾಮನು ಜೈನಕೃತಿ ರತ್ನಶೇಖರ ಚರಿತ್ರೆ ಬರೆದುದು ಒಂದು ಕ್ವಚಿತ್ತಾದ ಘಟನೆಯಾಗಿದೆ.

(5) ಜೈನ ಪ್ರಭಾವಕ್ಕೆ ಒಳಗಾದ ಅನೇಕ ವೈಷ್ಣವ ರಾಜರೂ, ಅನೇಕ ವೈಷ್ಣವ ಕವಿಗಳೂ ಉಂಟು. ನೃಪತುಂಗ, ಅರಿಕೇಸರಿ, ತೈಲಪ, ಕೃಷ್ಣರು ವೈಷ್ಣವರೆಂದು ಹೇಳಲಾಗಿದ್ದರೂ, ಜೈನ ಕವಿಗಳಿಗೇಕೆ ಪ್ರೋತ್ಸಾಹ ಕೊಟ್ಟರು ? ವೈಷ್ಣವ ಕವಿಗಳಿಗೇಕೆ ಪ್ರೋತ್ಸಾಹ ಕೊಡಲಿಲ್ಲ ? ಬಹುಶಃ ಅವರು ಜೈನ ತತ್ವ ಪ್ರಭಾವಕ್ಕೆ ಒಳಗಾಗಿರಬೇಕು.

(6) ಹೊಯ್ಸಳ ವಿಷ್ಣುವರ್ಧನನು ಜೈನ ಧರ್ಮವನ್ನು ಬಿಟ್ಟು ವೈಷ್ಣವ ಧರ್ಮವನ್ನು ಸ್ವೀಕರಿಸಿದ್ದನೆಂದು ಹೇಳಲಾಗಿದ್ದರೂ, ಜೈನ ಧರ್ಮವನ್ನು ತಿರಸ್ಕರಿಸಿರಲಿಲ್ಲ. ಅವನು ತನ್ನ ರಾಣಿ ಶಾಂತಲೆಯ ಜೈನ ನಿಷ್ಠೆಗೆ, ಮಂತ್ರಿಗಳ ಜೈನ ನಿಷ್ಠೆಗೆ ಎಂದೂ ಅಡ್ಡ ಬಂದವನಲ್ಲ. ಆದ್ದರಿಂದಲೇ ಹೊಯ್ಸಳ ಆಳಿಕೆಯಲ್ಲಿ ವಿಷ್ಣುವರ್ಧನ, 1ನೇ ಬಲ್ಲಾಳ, 2ನೇ ಬಲ್ಲಾಳ ಮುಂತಾದ ಅರಸರ ಕಾಲದಲ್ಲಿ ಜೈನ ಸಾಹಿತ್ಯವೇ ಹೆಚ್ಚಾಗಿ ಅಭಿವೃದ್ಧಿಯಾಗಿದೆ.

(7) ರುದ್ರಭಟ್ಟನೂ ಚೌಂಡರಸನೂ ಪಂಪನನ್ನು ಸ್ತುತಿಸುತ್ತಾರೆ. ಬ್ರಾಹ್ಮಣ ಕವಿಗಳಾದ ಇವರಿಗೆ ಜೈನ ಪಂಪಾದಿ ಕವಿಗಳ ಆದರ್ಶವಿದ್ದುದು, ದುರ್ಗಸಿಂಹನು ಜೈನ ಪರವಾದ ವಸುಭಾಗ ಭಟ್ಟನ ಪಂಚತಂತ್ರವನ್ನು ಅನುಸರಿಸಿದ್ದುದೂ ಗಮನಿಸತಕ್ಕ ಅಂಶಗಳಾಗಿವೆ. ಕುಮಾರರಾಮನ ಕಥೆಯನ್ನು ಬರೆದ ನಂಜುಂಡನು ವೀರಶೈವ ಕವಿಯಾಗಿದ್ದರೂ ಪಂಪ, ನೇಮಿಚಂದ್ರ, ಜನ್ನ, ಗುಣನಂದಿ, ನಾಗಚಂದ್ರ,

ರನ್ನ, ಶಾಂತಿವರ್ಮ, ಮಧುರ ಮುಂತಾದ ಜೈನ[33] ಕವಿಗಳ ಜೊತೆಗೆ ಹಂಪೆಯ ಹರಿಯಣ್ಣನನ್ನು ಸ್ತುತಿಸಿ ಕಾವ್ಯ ಪ್ರಾರಂಭಿಸುತ್ತಾನೆ. ಜೈನ ಕವಿಯಾದ 3ನೆಯ ಮಂಗರಸ (ಕ್ರಿ.ಶ. 1518) ನ ಸಹೋದರನ ಮಗನಾದ ನಂಜುಂಡನು ಮೊದಲು ಜೈನನಾಗಿದ್ದುದರಿಂದಲೇ ಹೀಗೆ ಮಾಡಿರಬಹುದು.

(8) ಜೈನ ಕವಿಗಳ ಪ್ರಭಾವಕ್ಕೆ ಒಳಗಾದ ಅನೇಕ ವೀರಶೈವ ಬ್ರಾಹ್ಮಣ ಕವಿಗಳು ಇದ್ದರೂ, ಆ ಋಣವನ್ನು ಅವರು ಹೇಳಿಕೊಂಡಿಲ್ಲ. ಆದರೂ ವಿಮರ್ಶಕರು ಆ ಪ್ರಭಾವವನ್ನು ಅಲ್ಲಲ್ಲಿ ಗುರುತಿಸಿ ಹೇಳಲು ಯತ್ನಿಸಿದುದುಂಟು.

(9) 12ನೆಯ ಶತಮಾನದ ತರುವಾಯ .ವೀರಶೈವಯುಗ ಪ್ರಾರಂಭವಾಗಿ ಜೈನರಿಗೆ ರಾಜಾಶ್ರಯವೇ ತಪ್ಪಿಹೋಯಿತು, ಜೈನ ಕವಿಗಳು ಇಲ್ಲವಾದರು ಎಂದು ಕೆಲವರು ತಪ್ಪು ಭಾವಿಸಿದ್ದಾರೆ. ಟಿ. ಎಸ್. ವೆಂಕಣ್ಣಯ್ಯನವರ ಕನ್ನಡ ಸಾಹಿತ್ಯ ಚರಿತ್ರೆ (ಕ್ರಿ.ಶ. 1958) ಪು. 142 ರಲ್ಲಿಯ ಈ ಹೇಳಿಕೆಯನ್ನು ಈ ಸಂದರ್ಭದಲ್ಲಿ ಗಮನಿಸಬಹುದು : '12ನೆಯ ಶತಮಾನದ ಅಂತ್ಯಭಾಗದಲ್ಲಿಯೂ, 13ನೆಯ ಶತಮಾನದಲ್ಲಿಯೂ, ಮೊದಲಿನಂತೆಯೇ ಜೈನ ಕವಿಗಳು ಗ್ರಂಥ ರಚನೆ ಮಾಡುತ್ತ ಹೋದರು. ಜೈನಲೇಖಕರು ವೀರಶೈವ – ಬಾಹ್ಮಣ ಕವಿಗಳಿಗಿಂತಲೂ ಸಂಖ್ಯೆಯಲ್ಲಿ ಹೆಚ್ಚಾಗಿದ್ದುದು ಮಾತ್ರವೇ ಅಲ್ಲದೆ, ಅವರಲ್ಲಿ ಅತ್ಯಂತ ಪ್ರಸಿದ್ಧರಾದ ನೇಮಿಚಂದ್ರ, ಅಗ್ಗಳ, ಜನ್ನ, ಆಂಡಯ್ಯ, ಕೇಶಿರಾಜ ಮುಂತಾದವರೆಲ್ಲರೂ ಗ್ರಂಥ ರಚನೆ ಮಾಡಿರುವುದು 12 – 13 ನೆಯ ಶತಮಾನದಲ್ಲಿಯೆ. ಯೋಗ್ಯತೆಯಲ್ಲಿಯೂ ಸಂಖ್ಯೆಯಲ್ಲಿಯೂ ಹೆಚ್ಚಾದ ಜೈನರು ಗ್ರಂಥ ರಚನೆ ಮಾಡಿದ ಕಾಲವನ್ನು ವೀರಶೈವ ಕಾಲವೆಂದು ಕರೆಯುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ'[34]—ಎಂದಿದ್ದಾರೆ.

(10) ವೀರಶೈವ ವಚನಕಾರರ ಸಮಯಕ್ಕೆ ಜೈನ ಸಾಹಿತ್ಯ ಸೂರ್ಯ ಅಸ್ತಂಗತನಾದನೆಂದು ಡಾ. ಎಂ. ಎಂ. ಕಲಬುರ್ಗಿಯವರು ಮಲ್ಲಿನಾಥ ಪುರಾಣ ಸಂಗ್ರಹ (ಕ್ರಿ.ಶ. 1974) ದ ಪ್ರಸ್ತಾವನೆ (ಪು. iii–iv) ರಲ್ಲಿ ಹೇಳಿದ ಅಭಿಪ್ರಾಯ ಸರಿಯಾದುದಲ್ಲ.[35] ಅದೇ ಪ್ರೊ. ಮಾಳವಾಡರು ಈ ವಿಷಯದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಹೀಗೆ ಹೇಳಿದ್ದಾರೆ: '12 ನೆಯ ಶತಮಾನದ ಮಧ್ಯದಲ್ಲಿ ಉಂಟಾದ ವೀರಶೈವ ಧಾರ್ಮಿಕ ಜಾಗೃತಿಯ ಕೆಲವು ವರ್ಷಗಳ ಮೇಲೆ ವೀರಶೈವ ಕವಿಗಳು ತೀರ ಇಲ್ಲದಂತೆ ಆಗಿ ಜೈನ ಕವಿಗಳೇ ಹೆಚ್ಚಿರುವುದು ಒಂದು ಗಮನಾರ್ಹ

---

33. ಆರ್. ನ. : ಕ. ಕ. ಚ. (1973)–II, ಪು 149–150
34. ಟಿ. ಎಸ್. ವೆಂಕಣ್ಣಯ್ಯ : ಕನ್ನಡ ಸಾಹಿತ್ಯ ಚರಿತ್ರೆ (1958) ಪು. 142
35. ಡಾ. ಎಂ. ಎಂ. ಕಲಬುರ್ಗಿ : ಮಲ್ಲಿನಾಥ ಪುರಾಣ ಸಂಗ್ರಹ (1974), ಪ್ರಸ್ತಾವನೆ, iii–iv

ವಾದ ಸಂಗತಿಯಾಗಿದೆ'[36] – ಸಾಹಿತ್ಯ ಸಂಗಮ (ಕ್ರಿ. ಶ. 1970) ಪು. 22 ರಲ್ಲಿ. ಅದೇ ಗ್ರಂಥದ 30 ನೆಯ ಪುಟದಲ್ಲಿ ಪ್ರೊ. ಮಾಳವಾಡರು '13ನೆಯ ಶತಮಾನವು ಜೈನರ ಪುನರುತ್ಥಾನ ಕಾಲವಷ್ಟೇ ಅಲ್ಲ, ಅವರ ಪ್ರಾಬಲ್ಯ ಕಾಲವೆಂದೂ ಒಪ್ಪಬೇಕಾಗುತ್ತದೆ'[37] ಎಂದು ಹೇಳಿದುದು ನ್ಯಾಯವಾಗಿದೆ. ಚಾಳುಕ್ಯರು ಅಜೈನರೆಂದು ಹೇಳಿದರೂ ಜೈನರಿಗೆ ವಿರೋಧಿಯಾಗಿರದ್ದರಿಂದಲೂ, ಎಂ. ಪಿ. ಪಾಟೀಲರು ಹೇಳಿದಂತೆ[38] ಕಲ್ಯಾಣಕ್ರಾಂತಿ ಜೈನರ ವಿರುದ್ಧ ಇರಲಿಲ್ಲವಾದ್ದರಿಂದ ಜೈನ ಸಾಹಿತ್ಯಕ್ಕೆ ಅಡ್ಡಿಬಾರದೇ ಇದ್ದುದು ತೀರ ಸ್ವಾಭಾವಿಕವಾಗಿದೆ. ಆದ್ದರಿಂದಲೇ ರಂ. ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆ (ಕ್ರಿ.ಶ. 1971) ಪು. 207 ರಲ್ಲಿ '12ನೆ ಶತಮಾನದ ಘಟನೆಗಳು ನಡೆದಿರಲಿಲ್ಲವೇನೋ ಎನ್ನುವಂತೆ 10ನೇ ಶತಮಾನದ ಪ್ರೌಢ ಪರಂಪರೆಯನ್ನು 13ನೆ ಶತಮಾನದ ಸಾಹಿತ್ಯ ಮುಂದುವರಿಸಿರುತ್ತದೆ' ಎಂದು ಹೇಳಿದುದು ಯೋಗ್ಯವಾಗಿದೆ, ಸರಿಯಾಗಿದೆ.

ವಿಜಯನಗರದ ಅರಸು ಪ್ರೌಢದೇವರಾಯನ ಕಾಲಕ್ಕೆ ಮಾತ್ರ ಜೈನ ಧರ್ಮಕ್ಕೆ ನಿಜವಾದ ಆಘಾತವಾಗಿ ಜೈನ ಕವಿಗಳಿಗೆ ಆಶ್ರಯ ತಪ್ಪಿಹೋದರೂ, ತೌಳವ ದೇಶದ ಅರಸರು 18ನೇ ಶತಮಾನದವರೆಗೆ ಜೈನ ಧರ್ಮಕ್ಕೆ ಮತ್ತು ಜೈನ ಕವಿಗಳಿಗೆ ಆಶ್ರಯ ನೀಡುತ್ತಲೇ ಬಂದುದರಿಂದ ರತ್ನಾಕರವರ್ಣಿಯಂತಹ ಕವಿಯನ್ನು ಕಾಣುವ ಭಾಗ್ಯ ಕನ್ನಡನಾಡಿಗೆ ದೊರೆಯಿತು. ಭಟ್ಟಾಕಳಂಕನಂತಹ ಪ್ರಕಾಂಡ ವೈಯ್ಯಾಕರಣಿಯನ್ನೂ ಕನ್ನಡ ದೇಶ ಪಡೆಯಿತು.

ಮೈಸೂರು ಒಡೆಯರ ಆಶ್ರಯವೂ ಜೈನ ಕವಿಗಳು ಇಂದಿನವರೆಗೂ ಬದುಕುವುದಕ್ಕೆ ಕಾರಣವಾಯಿತು ಎಂದು ಹೇಳಬಹುದು. ಉಜ್ವಲ ಬುನಾದಿ ಇರುವ, ಮತ್ತು ಹಿರಿಯ ಸಾಂಸ್ಕೃತಿಕ ಹಿನ್ನೆಲೆ ಇರುವ ಜೈನ ಪರಂಪರೆ ಕನ್ನಡ ನಾಡಿನಲ್ಲಿ ಎಂದಿಗೂ ಬತ್ತದೆಂದು ತೋರುತ್ತದೆ.

ರಾಜಾಶ್ರಯದಿಂದ ಕೀಳುಮಟ್ಟದ ಸಾಹಿತ್ಯ ಸೃಷ್ಟಿಯಾಗುವುದೆಂದು ಕೆಲವರು ಭಯ ವ್ಯಕ್ತಮಾಡಿದಂತೆ ತೋರುತ್ತದೆ. ಕೀಳು ಮೇಲು ಎರಡು ತರದ ಸಾಹಿತ್ಯ ಸೃಷ್ಟಿಯಾಗಿ ಕೀಳು ಅಳಿದು ಮೇಲು ಉಳಿಯಬಹುದಾಗಿದೆ. ಇಂದಿನವರೆಗೆ ಹಾಗೆ ಉಳಿದೂ ಬಂದಿದೆ.

ರಾಜಾಶ್ರಯವಿಲ್ಲದಿದ್ದರೆ ಜೈನ ಸಾಹಿತ್ಯ ಹಾಗೂ ಸಂಸ್ಕೃತಿ ಇಷ್ಟೊಂದು ದೀರ್ಘಕಾಲ ಬದುಕುತ್ತಿರಲಿಲ್ಲವೇನೋ ಎನಿಸುತ್ತಿದೆ. ಇಂದಿಗೂ ರಾಜಾಶ್ರಯದಿಂದಲೇ ಇಂಥ ಸಾಹಿತ್ಯ ಚರ್ಚೆಗಳು ನಡೆಯಲು ಸಾಧ್ಯವಾಗಿದೆ.

36-37. ಸ. ಸ. ಮಾಳವಾಡ : ಸಾಹಿತ್ಯ ಸಂಗಮ (1970)–ಪು. 22 : 30.

38. ಮಲ್ಲನಗೌಡ ಪಾಟೀಲ : ಬಸವೇಶ್ವರ ಚರಿತ್ರೆಯ ಮೇಲೆ ಹೊಸ ಬೆಳಕು (1966) ಪು. 47

ಕುಟುಂಬ ಯೋಜನೆ

ಎಚ್. ಎಸ್. ಭೀಮನಗೌಡರ

ಕೈಯಲ್ಲಿ ಪೆನ್ನು ಇದೆಯೆಂದು
ಇಷ್ಟುದ್ದ ಪದ್ಯ ಗೀಚಿ
ಮೂಲೆಗೆಸೆದರೆ ಅದು
ಓದುಗನ ಮನದಲ್ಲಿ
ಜೀವಂತ ಬೆಳೆಯಬೇಕು
ಎಂಬ ವಿಚಾರ ಬೇಡವೇ ?

ಅರಗಿಣಿಯೇ ಎನ್ನುವಂಥ ಹೆಂಡತಿ
ಅಥವಾ ಗಂಡ
ಬೆಚ್ಚನ್ನ ಒಂದು ಮನೆ
ಮತ್ತೇನು ? ಹಂದಿಯ ಹಾಗೆ
ಡಝನ್‌ಗಟ್ಟಲೆ ಮಕ್ಕಳ ಗೀಚಿದ್ದೇ ಗೀಚಿದ್ದು.

ನಾಗರಿಕರಯ್ಯ ನಾವು
ಈಗಿದ್ದ ನೀರು ಬೇಗ ಹರಿದುಹೋಗಬಾರದೆಂದು
ನದಿಗೆ ಒಡ್ಡು ಜಡಿಯುವುದೇ ನಮ್ಮ ಗುರಿ.

ಎಂದ ಮೇಲೆ
ಹೊಸ ನೀರ ಇಷ್ಟಿಷ್ಟೆ ಇಷ್ಟಿಷ್ಟೆ
ಆರತಿಗೊಂದು ಕೀರುತಿಗೊಂದು
ಬೇಕೆಂಥರೆ ಗೀಚಬಹುದು

ಹಳೆಯಬೀಡಿನ ಹಲವು ಶಾಸನಗಳು : ಕಾಲ ಹಾಗೂ ವಿಷಯ ವಿಮರ್ಶೆ

ಎಸ್. ಶೆಟ್ಟರ್

ಎ.ಕ. V, ಬೇಲೂರು ತಾಲೂಕಿನ ಸಂ. 94ರಿಂದ 97 (ಮುಂದೆ ಬೇ. 94-97 ಎಂದು)ವರೆಗಿನ ಐದು ಶಾಸನಗಳ ಕಾಲವನ್ನಾಗಲೀ, ವಿವರ-ಭಾಷಾಂತರವನ್ನಾಗಲೀ, ಬಿ. ಎಲ್. ರೈಸ್ ಅವರು ಕೊಟ್ಟಿಲ್ಲ. ಕಳೆದ ಶತಮಾನದ ಕೊನೆಯ ದಶಕಗಳಲ್ಲಿಯೇ ಅತ್ಯಂತ ದುರವಸ್ಥೆಯಲ್ಲಿ ಕಂಡುಬಂದ ಈ ಶಾಸನಗಳ ಪೂರ್ಣ ಪಾಠವನ್ನು ಕೊಡುವುದು ಅವರಿಗಾದಂತೆ ತೋರುವುದಿಲ್ಲ-ಈ ಸಂಪುಟ ಪರಿಷ್ಕರಿಸುವವರಿಂದ ಈ ಪ್ರಯತ್ನ ಆವಶ್ಯಕವಾಗಿ ನಡೆಯಬೇಕಾಗಿದೆ. ಈ ಶಾಸನಗಳ ನಿಶ್ಚಿತ ಅಥವಾ ಸುಮಾರು ಕಾಲವನ್ನಾದರೂ ಸೂಚಿಸುವುದು, ಮತ್ತು ಅವುಗಳಲ್ಲಿ ದೊರೆಯುವ ವಿವರವನ್ನು ಭಾಷಾಂತರ ವಿಭಾಗದಲ್ಲಿ ಗಮನಕ್ಕೆ ತರುವುದು, ಬಹು ಅವಶ್ಯ.

ನಮ್ಮ ಅಭ್ಯಾಸದಲ್ಲಿ ಕಂಡುಬಂದಿರುವ ಹಲವು ಅಂಶಗಳನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

1 ಬೇ. 94 ರಿಂದ 97 : ಈ ಶಾಸನಗಳು ಅಲ್ಲಲ್ಲಿ ತ್ರುಟಿತಗೊಂಡಿವೆ. ಹೊಯ್ಸಳೇಶ್ವರ ದೇವಾಲಯದ ಪರಿಚಾರಕ ವರ್ಗದವರು ಬಿಟ್ಟ ಅಲ್ಪ ಕಾಣಿಕೆಗಳ ದಾಖಲು ಮಾಡುವುದು ಇವುಗಳ ಮುಖ್ಯ ಉದ್ದೇಶ, ಇಲ್ಲಿ ಆಳುವ ಅರಸನ ಹೆಸರಾಗಲೀ, ಗುರು ಪರಂಪರೆಯಾಗಲೀ ಇಲ್ಲ-ಸಂವತ್ಸರ, ಮಾಸ, ದಿನದ ವಿವರ ಈ ಶಾಸನಗಳಲ್ಲಿ ಇದ್ದರೂ, ಆ ಭಾಗ ತ್ರುಟಿತಗೊಂಡುದರಿಂದ ಸ್ಪಷ್ಟ ವಿವರವಿಂದು ನಮಗೆ ದೊರೆಯದಾಗಿದೆ. ಅಲ್ಲದೇ, ಶಕವರ್ಷದ ಸಂಖ್ಯೆ ಯಾವುದರಲ್ಲೂ ಕಾಣೆವು. ಬೇ. 94-96 ಮೂರು ಶಾಸನಗಳಲ್ಲಿ ಸೋವಣ್ಣನೆಂಬ ವ್ಯಕ್ತಿಯ ಹೆಸರಿದೆ. ಈತನು ಮಾದಂಣನ ಮಗನೆಂದೂ (ಬೇ. 95) ಮತ್ತು ಹೊಯ್ಸಳೇಶ್ವರ ದೇವಾಲಯದ ಆಚಾರ್ಯ (ಬೇ. 96) ನೆಂದೂ, ತಿಳಿದು ಬರುವುದು. ದತ್ತಿ ಕೊಟ್ಟವರ ಹೆಸರು ಈ ಮೂರು ಶಾಸನಗಳಲ್ಲಿಯೂ ಅಳಿಸಿದೆ-ಇದರಿಂದಾಗಿ ಈಗ ಪ್ರಕಟವಾಗಿರುವ ಪಾಠದಿಂದ ಅವರ ವಿವರ ತಿಳಿಯುವುದು ದುಸ್ಸಾಧ್ಯ. ಆದರೆ, "ಸೋವಂಣ್ನ ಕೊಂಡು" ಎಂದು ಎರಡು ಶಾಸನಗಳಲ್ಲಿ, "ಸೋವಂಣ್ನಗಳಿಗೆ ಕೊಟ್ಟ" ಎಂದು ಒಂದು ಶಾಸನದಲ್ಲಿ ಬರುವ ಉಲ್ಲೇಖಗಳಿಂದ, ದೇವಾಲಯದ

ಪರವಾಗಿ ಈ ಆಚಾರ್ಯನು ದತ್ತಿ ಸ್ವೀಕರಿಸಿ, ಅವನ್ನು ಪರಿಪಾಲಿಸಿಕೊಂಡು ಬರುವ ಹೊಣೆ ಹೊತ್ತಿದ್ದನೆಂದು ತಿಳಿಯಬಹುದು. "ಸೋವಂಣ ಕೊಂಡು ಆ 15 ಮ... ಎಂಣೆಗೆ ಬಡಿ ಪ 2 ವ ಕೊಡುತ್ತ ಬಹನು", ಎಂಬ ವಾಕ್ಯದಿಂದ (ಬೇ. 95) ಇದು ಸ್ಪಷ್ಟಗೊಳ್ಳುವುದು.

ಸೋವಂಣ್ಣ ಹೆಸರಿನ ಸಹಾಯದಿಂದ ಮಾತ್ರ ಈ ಶಾಸನಗಳ ಕಾಲ (ಶತಮಾನ) ನಿರ್ಣಯ ಕಷ್ಟಸಾಧ್ಯ. ಕ್ರಿ.ಶ. 1280ರಲ್ಲಿ (ಬೇ. 89) ಸೋವಂಣ್ಣ ನೆಂಬುವನು ನಾರಾಯಣಪುರದಲ್ಲಿ ದತ್ತಿ ಪಡೆದ ವಿಷಯವಿದೆ—ಆದರೆ ಅವನು 'ಕೆಜಿೇಯ ವಿಷ್ಣುಭಟ್ಟ'ನ ಮಗನೆಂದಿರುವುದರಿಂದ, ಇವರಿಬ್ಬರೂ ಭಿನ್ನ ವ್ಯಕ್ತಿಗಳೆಂದು ಭಾವಿಸಬಹುದು. ಹಳೆಯಬೀಡಿನ ಮತ್ತೊಂದು ಕ್ರಿ.ಶ. 1281ರ ಶಾಸನದಲ್ಲಿ (ಬೇ. 90) "ಪಾಪರಸರ ಸೋವಂಣ್ಣ" ಎಂಬುವನ ಉಲ್ಲೇಖವಿದೆ. ಈತನೂ ಬೇ. 94–96ರಲ್ಲಿ ಬರುವ ಸೋವಂಣ್ಣನಿಗಿಂತ ಭಿನ್ನ.

ಆದರೆ ಬೇ. 94ನೆಯ ಶಾಸನವನ್ನು ಎಚ್ಚರಿಕೆಯಿಂದ ಅಭ್ಯಾಸಮಾಡಿ, ಬೇರೆ ಶಾಸನಗಳಲ್ಲಿ ದೊರೆಯುವ ವಿವರಗಳನ್ನು ಗಮನದಲ್ಲಿಟ್ಟುಕೊಂಡು, ಆ ಶಾಸನದಲ್ಲಿ ತ್ರುಟಿತಗೊಂಡ ನಾಲ್ಕನೆಯ ಸಾಲನ್ನು ಸರಿಪಡಿಸಿದರೆ, ಕಾಲ ನಿರ್ಣಯಕ್ಕೆ ಸ್ವಲ್ಪ ಸಹಾಯ ದೊರೆಯುವುದೆಂದು ಕಾಣುವುದು. ಈಗ ಪ್ರಕಟವಾಗಿರುವ (ಸಾಲು 4) "ಆನೆಯ...ವೆ ಆ ದೇವರ" ಎಂದಿರುವುದನ್ನು, "ಆನೆಯ [ಮೌಳ]ವೆ ಆ ದೇವರ" ಎಂದು ಸರಿಪಡಿಸಬಹುದೆಂದು ನಮಗನಿಸುವುದು. ಈ ಆನೆಯ ಮೌಳವ್ವೆ ಅಥವಾ ಮಾಳವೆ [ಮಾಳವ್ವೆ] ಹೊಯ್ಸಳೇಶ್ವರ ದೇವಾಲಯದ ಪಾತ್ರದವರಲ್ಲಿ ಒಬ್ಬಳು. ಪ್ರವೃತ್ತಿಯಿಂದ ಬಹು ಉದಾರಿ ಎಂದು ತೋರುವುದು. ತನ್ನ ಅಲ್ಪ ಆದಾಯ ದಿಂದ ಕನಿಷ್ಟ ನಾಲ್ಕು ಬಾರಿಯಾದರೂ ದೇವರ ಸೇವೆಗೆ ಕಾಣಿಕೆ ಕೊಟ್ಟಳೆಂದು ಹಳೆಯಬೀಡಿನ ಶಾಸನಗಳಿಂದ ತಿಳಿದುಬರುವುದು. ಈ ಶಾಸನಗಳ (ಬೇ. 104, 107, 110 ಅಲ್ಲದೇ ಈಗ ವಿಮರ್ಶೆಯಲ್ಲಿರುವ ಬೇ. 95 ಶಾಸನ) ಕಾಲ ಪರಿಮಿತಿ ಕ್ರಿ.ಶ. 1273 (ಬೇ. 107) ರಿಂದ 1280 (ಬೇ. 104), ಅಂದರೆ ಅವಳು ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದಳೆಂದು ಸುಲಭವಾಗಿ ಗ್ರಹಿಸಬಹುದು. ಬೇ. 94ರಲ್ಲಿ "ವಿಷು ಸಂವಚ್ಛರದ ವೈಶಾಖ ಸು...ವಾರದಂದು" ಎಂಬ ರೂಹುವಿನಿಂದ, ಕ್ರಿ.ಶ. 1281, ಮೇ ತಿಂಗಳಲ್ಲಿ ಈ ಶಾಸನವನ್ನು ಬರೆಸಲಾಯಿತೆಂದು ತೀರ್ಮಾನಿಸಬಹುದು. ಆಗ ಆಳುತ್ತಿದ್ದ ಹೊಯ್ಸಳ ಅರಸ ಮುಮ್ಮಡಿ ನಾರಸಿಂಹ.

ಬೇ. 95-96ರಲ್ಲಿ ಆನೆಯ ಮಾಳವ್ವೆಯ ಹೆಸರಿಲ್ಲ—ಕಾರಣ ಇವನ್ನು ಬೇ. 94 ರಿಂದ ಬೇರ್ಪಡಿಸಬೇಕು. ಆದರೆ ಬೇ. 94ರಲ್ಲಿ ಕಂಡುಬರುವ ಸೋವಂಣ್ಣನ ಹೆಸರು ಬೇ. 95-96ರಲ್ಲೂ ಕಂಡುಬರುವುದು. ಮಾಳವ್ವೆ-ಸೋವಂಣ್ಣರ ಹೆಸರು

ಕ್ರಿ.ಶ. 1281ರ (ಬೇ 94) ಶಾಸನದಲ್ಲಿ ಕೂಡಿಬರುವುದರಿಂದ, ಸೋವಣ್ಣನೂ ಹದಿಮೂರನೆಯ ಶತಮಾನದ ಕೊನೆಯಾರ್ಧದಲ್ಲಿ ಹೊಯ್ಸಳೇಶ್ವರ ದೇವಾಲಯದ ಪರಿಚಾರಕ ವರ್ಗಕ್ಕೆ ಸೇರಿದವನಾಗಿದ್ದನೆಂದು ಊಹಿಸಬಹುದು. ಈ ಆಧಾರದಿಂದ, ಬೇ. 95ರಲ್ಲಿ ಬರುವ "ಮನುಮಥ ಸಂವಯಿ ಶಾಖ ಸು 1 ಆ"ವನ್ನು ಕ್ರಿ.ಶ. 17, ಏಪ್ರಿಲ್, 1295, ದೊಡನೆ ಸರಿಯಾಗಿ ಹೊಂದಾಣಿಕೆ ಮಾಡಬಹುದು. ಆಗ ಆಳುತ್ತಿದ್ದ ಹೊಯ್ಸಳ ಅರಸ ಮುಮ್ಮಡಿ ಬಲ್ಲಾಳ. ಇದೇ ಬಗೆಯಲ್ಲಿ ಬೇ. 96ರಲ್ಲಿ ಬರುವ "ಭಾದ್ರಪದ ಶು1ಆ" ಎಂದು ಮಾತ್ರ ಬರುವ ವಿವರದಿಂದ, ಕ್ರಿ.ಶ. 1 ಆಗಸ್ಟ್, 1277ಕ್ಕಾಗಲೀ ಕ್ರಿ. ಶ. 13 ಆಗಸ್ಟ್, 1284 ಕ್ಕಾಗಲೀ ಸೇರಿದುದೆಂದು ಊಹಿಸಬಹುದು. ಸೋವಣ್ಣನು ಕ್ರಿ.ಶ. 1281 ರಿಂದ 1295ರ ಕಾಲದಲ್ಲಿ ಸೇವಾ ಕಾರ್ಯದಲ್ಲಿ ತೊಢಗಿದ್ದನೆಂದು (ಬೇ. 94 ಮತ್ತು ಬೇ. 95 ರಿಂದ) ಸ್ಪಷ್ಟವಾಗಿ ನಮಗೆ ತಿಳಿದು ಬಂದಿರುವುದರಿಂದ, ಬೇ. 96ನ್ನು ಕ್ರಿ.ಶ. 13 ಆಗಸ್ಟ್, 1284ರ ಕಾಲದ್ದೆಂದು ಬಗೆದರೆ ಹೆಚ್ಚು ಸಮ್ಮತವೆನಿಸಬಹುದು.

ಬೇ. 97ರಲ್ಲಿ ಸೋವಣ್ಣನ ಹೆಸರಾಗಲೀ, ಆನೆಯ ಮಾಳವ್ವೆಯ ಹೆಸರಾಗಲೀ ಇಲ್ಲ–ಕಾರಣ ಇದನ್ನು ಪ್ರತ್ಯೇಕ ವರ್ಗಕ್ಕೆ ಸೇರಿಸಬೇಕು. ಈ ಶಾಸನ ದಲ್ಲಿ ಮಹಾ ಪ್ರಧಾನ ಹರಿಹರ ದಂಣ್ಣಾಯಕನು "ದುಂದುಭಿ ಸಂವತ್ಸರದ ಭಾದ್ರಪದ ಶು॥ 15, ಬೃ"ಹಸ್ಪತಿವಾರ ಹೊಯ್ಸಳೇಶ್ವರ ದೇವಾಲಯಕ್ಕೆ ಕೊಟ್ಟ ದತ್ತಿಯ ಉಲ್ಲೇಖವಿದೆ. ಇಲ್ಲಿಯೂ ಶಕವರ್ಷವಿಲ್ಲ, ಹೊಯ್ಸಳರ ಶಾಸನಗಳಲ್ಲಿ ಹಲವಾರು ಹರಿಹರ ದಣ್ಣಾಯಕರು ಬರುವರು—ಇಮ್ಮಡಿ ಬಲ್ಲಾಳನ ಕಾಲದಲ್ಲಿ (1216) ಆಸಂದಿಯಲ್ಲಿ ಬಲ್ಲೇಶ್ವರ ದೇವಾಲಯ ಕಟ್ಟಿಸಿದ ಹರಿಹರ ದಣ್ಣಾಯಕ (ಎ.ಕ. VI, Kd 151) ಹಾಗೂ ಭಂಡಾರವಾಡದ ಮುಖ್ಯನಾಗಿದ್ದ, ಅರಸಿಕೆರೆಯಲ್ಲಿ ಕ್ರಿ.ಶ. 1173ರಲ್ಲಿ ಲಕ್ಷ್ಮಿಯ ದೇವಾಲಯ ಕಟ್ಟಿಸಿದ, ಹರಿಹರ ದಣ್ಣಾಯಕ (ಎ. ಕ. V, AK 71) ಇಮ್ಮಡಿ ನರಸಿಂಹನ ಕಾಲದಲ್ಲಿ (ಕ್ರಿ.ಶ. 1235) ಬಸುರಾಳಿ ನಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿದ ಅಡ್ಡಾಯುದ ಹರಿಹರ ದಣ್ಣಾಯಕ (ಎ.ಕ. III Md. 121) ಕುಂಟನ ಮಡುವಿನಲ್ಲಿ ದತ್ತಿ ಹಾಗೂ ಜಲವನ್ನು ಬ್ರಾಹ್ಮಣರಿಗೆ ಕ್ರಿ.ಶ. 1291 (?)ರಲ್ಲಿ ಪುನರ್ವ್ಯವಸ್ಥೆ ಮಾಡಿದ ಮಹಾಪ್ರಧಾನಿ ಹರಿಹರ ದಣ್ಣಾಯಕ (ಎ.ಕ. VI, Tk 55) ಇವರಲ್ಲಿ ಹಲವರು.

ಪ್ರಸ್ತುತ ಶಾಸನದಲ್ಲಿ ಕೊಟ್ಟ ವಿವರಗಳು ಕ್ರಿ.ಶ. 31, ಆಗಸ್ಟ್ 1262ಕ್ಕೆ ಸರಿಹೋಗುವುದರಿಂದ, ಮೇಲೆ ಹೇಳಿದ ದಣ್ಣಾಯಕರಲ್ಲಿ ಕೊನೆಯ ಇಬ್ಬರು ಈ ಕಾಲಕ್ಕೆ ತುಂಬಾ ಸನಿಹದವರಾಗಿರುವರು. ಆದರೆ ಬಸುರಾಳಿನ ಅಥವಾ ಕುಂಟನ ಮಡುವಿನ ಧರ್ಮಕಾರ್ಯದಲ್ಲಿ ತೊಡಗಿದ ಹರಿಹರ ಹಾಗೂ ಪ್ರಸ್ತುತ ಶಾಸನ ದಲ್ಲಿಯ ಹರಿಹರ ಒಬ್ಬನೇ ಎಂದು ಖಚಿತವಾಗಿ ಹೇಳುವುದು ದುಸ್ಸಾಧ್ಯ.

* * * *

ಮೇಲಿನ ಐದು ಶಾಸನಗಳಲ್ಲದೇ, ಹೊಯ್ಸಳೇಶ್ವರ ದೇವಾಲಯದಲ್ಲಿ ಕೊರೆಯಲಾದ ಹದಿಮೂರು ಶಾಸನಗಳ ಮತ್ತೊಂದು ಗುಂಪು (ಬೇ. 99 ರಿಂದ ಬೇ. 111 ರ ವರೆಗಿನ ಶಾಸನಗಳು) ನಮ್ಮ ಗಮನ ಸೆಳೆಯುವುದು. ಇವುಗಳಲ್ಲಿ ಪ್ರತಿಯೊಂದು ಶಾಸನದ ಕಾಲವನ್ನು ಬಿ. ಎಲ್. ರೈಸರು ನಿರ್ಧರಿಸುವ ಗೊಡವೆಗೆ ಹೋಗದೇ ಅವೆಲ್ಲ "ಸುಮಾರು ಕ್ರಿ. ಶ. 1220 ರಿಂದ 1300" ಕ್ಕೆ ಸೇರಿರಬಹುದೆಂದು ಸೂಚಿಸಿರುವರು. ಇವುಗಳ ಅಸಮರ್ಪಕ ಸ್ಥಿತಿಯ ಕಾರಣದಿಂದಲೋ ಮತ್ತಿನ್ನಾವ ಕಾರಣದಿಂದಲೋ ಇವುಗಳ ಭಾಷಾಂತರವನ್ನೂ ಅವರು ಕೊಟ್ಟಿಲ್ಲ. ಮತ್ತು ಸಂಪುಟದ ಆರಂಭದಲ್ಲಿರುವ "ಶಾಸನ ವಿಂಗಡಣ ಪಟ್ಟಿ"ಯಲ್ಲೂ ಅವಕ್ಕೆ ಸ್ಥಾನ ಕೊಟ್ಟಿಲ್ಲ.

ಈ ಹದಿಮೂರು ಶಾಸನಗಳಲ್ಲಿ, ಮೂರಕ್ಕೆ ಮಾತ್ರ (ಬೇ. 104, 107 ಮತ್ತು 110) ಶಕ ಸಂವತ್ಸರ ಹಾಗೂ ಇನ್ನುಳಿದ ವಿವರ ದೊರೆಯುವುದು ; ಉಳಿದ ಹತ್ತರಲ್ಲಿ ಹಲವು ಶಕಸಂಖ್ಯೆ ಇರದೆ ಸಂವತ್ಸರ ಮಾತ್ರ ಹೊಂದಿದ್ದರೆ, ಹಲವು ದಿನಾಂಕದ ಯಾವ ವಿವರವನ್ನೂ ಹೊಂದಿಲ್ಲ. ಇವಾವೂ ಆಳುವ ಅರಸನ ಅಥವಾ ಗುರುಪರಂಪರೆಯ ರೂಹು ಹೊಂದಿಲ್ಲ. ಆದರೆ, ದೇವಾಲಯದ ಆಡಳಿತ ಹಾಗೂ ಸಮಾಜದ ಘಟಕಗಳ ಇತಿಹಾಸದ ಬಗ್ಗೆ ಇವು ಸಾಕಷ್ಟು ಬೆಳಕು ಚೆಲ್ಲುವುದರಿಂದ, ಇವುಗಳ ಅಭ್ಯಾಸ ಉಳಿದ ಶಾಸನಗಳಷ್ಟೇ ಮುಖ್ಯವಾಗಿದೆ.

ನಮ್ಮ ಅಭ್ಯಾಸದಲ್ಲಿ ದೊರೆತ ಹಲವು ವಿವರಗಳನ್ನಿಲ್ಲಿ ಕೊಡಲಾಗಿದೆ :

1. ಬೇ 99 : ಮೂಲಗಾಱ ಬಿಟ್ಟಯ್ಯನು "ಹೇಮಳಂಬಿ ಸಂವತ್ಸರದ ಆಶ್ವಯುಜ ಸು 10 ಬೃ[ಹಸ್ಪತಿವಾರ]" ಹೊಯ್ಸಳೇಶ್ವರ ದೇವರಿಗೆ ಬಿಟ್ಟ ಕಾಣಿಕೆಯ ವರದಿ. ಇಲ್ಲಿ ಆಳುವ ಅರಸನ ಹೆಸರಿಲ್ಲ. ಈ ಬಿಟ್ಟಯ್ಯನ ಬಗ್ಗೆ ಹಳೆಯಬೀಡಿನ ಯಾವ ಶಾಸನದಲ್ಲೂ ವಿವರ ದೊರೆತಂತೆ ಕಂಡುಬರುವುದಿಲ್ಲ. ಕ್ರಿ.ಶ. ದೊಂದಿಗೆ ಹೊಂದಾಣಿಕೆ ಮಾಡಿದಾಗ, ಈ ಶಾಸನದ ಕಾಲ ಕ್ರಿ. ಶ. 27, ಸೆಪ್ಟೆಂಬರ್ 1297 ಆಗುವುದು. ಆದರೆ ವಾರದ ದಿನ ಗುರುವಾರವಾಗದೇ ಶುಕ್ರವಾರ ಆಗುವುದು.

ಅಂದರೆ ಬೇ 99, ಕ್ರಿ. ಶ. 1297 ರಲ್ಲಿ, ಮುಮ್ಮಡಿ ಬಲ್ಲಾಳನ ಆಳಿಕೆಯ ಕಾಲದಲ್ಲಿ ಬಿಟ್ಟ ಕಾಣಿಕೆಯ ದಾಖಲೆ ಎಂದಂತಾಗುವುದು.

2. **ಬೇ 100** : 'ಹೇಮಳಂಬಿ ಸಂವತ್ಸರದ ಆಶ್ವಯುಜ ಸು 1 ಸೋ' (ಮವಾರ) ಈ ಶಾಸನವನ್ನು ಪ್ರಕಟಿಸಲಾಯಿತು. ಹದಿಮೂರನೆಯ ಶತಮಾನದಲ್ಲಿ ಈ ವಿವರಗಳು ಕ್ರಿ. ಶ. 19, ಸೆಪ್ಟೆಂಬರ್ 1297 ಕ್ಕೆ ಸರಿಹೊಂದುವವು ; ಆದರೆ ವಾರದ ದಿನ ಸೋಮವಾರವಾಗದೇ ಶುಕ್ರವಾರವಾಗುವುದು. ಇದು ಹದಿಮೂರ

ನೆಯ ಶತಮಾನದ ಶಾಸನವೆಂದು ಊಹಿಸಲು, ಆಳುವ ಅರಸನ ಉಲ್ಲೇಖವಿಲ್ಲದಿದ್ದರೂ, ಉಳಿದ ಉಲ್ಲೇಖಗಳು ಸಹಾಯ ನೀಡುವವು.

ಈ ಶಾಸನದಲ್ಲಿ ಹೊಯ್ಸಳೇಶ್ವರ-ಪಂಚಿಕೇಶ್ವರ ದೇವರ ಪರಿಚಾರಕವರ್ಗದವರು ಕೊಟ್ಟ ಚಿಕ್ಕ ಪುಟ್ಟ ಕಾಣಿಕೆಗಳನ್ನು ದಾಖಲುಗೊಳಿಸಲಾಗಿದೆ. ಅವರಲ್ಲಿ ಸೇನಬೋವ ಕಾಚರಸನ ಮಗ ಮಾಚಯ್ಯ ಒಬ್ಬ. 'ಸೇನಬೋವ ಮಾಚಯ್ಯನೆಂಬವನು ಈ ಸ್ಥಳದ ಇನ್ನೊಂದು ಶಾಸನದಲ್ಲಿ ಉಲ್ಲೇಖಿತಗೊಂಡಿರುವ (ನೋಡಿ ಬೇ. 105) ಈ ಎರಡು ಉಲ್ಲೇಖಗಳೂ ಒಬ್ಬನಿಗೇ ಸಂಬಂಧಿಸಿವೆಯೇ ? ಎಂಬ ಅನುಮಾನ ಬಾರದೆ ಇರದು. (ಬೇ. 105 ರ ಕೆಳಗೆ ಹೆಚ್ಚಿನ ವಿವರಕ್ಕೆ ನೋಡಿ.)

ಕೋಲುಕಾಱ ದಾಸಯ್ಯನೆಂಬವನು ಇಲ್ಲಿ ಬರುವ ಮತ್ತೊಬ್ಬ ವ್ಯಕ್ತಿ. ಈ ದೇವಾಲಯದ ಮತ್ತೊಂದು ಶಾಸನದಲ್ಲಿ (ಬೇ 101) ಇವನ ಬಗ್ಗೆ ಪ್ರಸ್ತಾಪ ದೊರೆಯುವುದು. ಈ ಪ್ರಸ್ತಾಪದಿಂದ ಅವನು ಕೋಲುಕಾಱ ಅಯ್ಯಪ್ಪನೆಂಬವನ ಕಿರಿಯ ಸೋದರನಾಗಿದ್ದನೆಂದು ತಿಳಿಯಬಹುದು. ಅಯ್ಯಪ್ಪದೇವನ ಮತ್ತೊಂದು ಉಲ್ಲೇಖ ಬೇ. 103 ರಲ್ಲಿ ದೊರೆಯುವುದು. (ಬೇ. 103 ಹಾಗೂ 105ರ ಕೆಳಗೆ ಹೆಚ್ಚಿನ ವಿವರ ಕಾಣಿರಿ.)

ಕಂಬ್ಬಾೞಿ ನಾಚರಸ ಹಾಗೂ ಅವನ ಅಳಿಯ ಅಪ್ಪಣರು ದತ್ತಿಕೊಟ್ಟ ಉಲ್ಲೇಖ ಈ ಶಾಸನದಲ್ಲಿ ಬರುವುದು. ನಾಚರಸನ ಬಗ್ಗೆ ಹೆಚ್ಚು ತಿಳಿಯಲು ನಮಗೆ ಆಗಿಲ್ಲ. ಆದರೆ ಅವನ ಅಳಿಯ ಅಪ್ಪಣ್ಣ ಬಹುಶಃ ಹೊಯ್ಸಳೇಶ್ವರ ದೇವಸ್ಥಾನದ ಸೂರ್ಯದೇವರ ಸಿಂಗಾರಿಯಾಗಿರಬಹುದೆಂದು ಊಹಿಸಲು ನಮಗೆ ಅನುವು ದೊರೆತಿದೆ. ಬೇ. 101 ಮತ್ತು 103 ರಲ್ಲಿ ಸೂರ್ಯದೇವರ ಸಿಂಗಾರಿಯಪ್ಪಣ್ಣನ ಕಾಣಿಕೆಗಳ ಉಲ್ಲೇಖಗಳಿವೆ. ಇದೇ ಬಗೆಯಲ್ಲಿ ಪ್ರಸ್ತುತ ಶಾಸನವಲ್ಲಿ ಬರುವ ಮಾರಬೋವನ ಉಲ್ಲೇಖವನ್ನು ಬೇ. 103 ರಲ್ಲಿಯೂ ನಾವು ಕಾಣಬಹುದು.

ಈ ಅಭ್ಯಾಸದಿಂದ ಬೇ. 100, ಬೇ. 101 ಮತ್ತು ಬೇ. 103–ಈ ಮೂರು ಶಾಸನಗಳು ಒಂದೇ ಕಾಲ ಘಟಕಕ್ಕೆ ಸೇರಿವ ಶಾಸನಗಳೆಂಬ ವಿಷಯ ಸ್ಪಷ್ಟವಾಗುವುದು. ಇದರಿಂದ ಬೇ. 100ನೆಯ ಶಾಸನ ಮುಮ್ಮಡಿ ಬಲ್ಲಾಳನ ಆಳಿಕೆಯ ಕಾಲದಲ್ಲಿ ಕ್ರಿ. ಶ. **1297** ರಲ್ಲಿ, ಕೊಟ್ಟ ಕಾಣಿಕೆಗಳ ದಾಖಲೆ ಎಂದು ಖಚಿತಪಡಿಸಿಕೊಳ್ಳಬಹುದು.

3. ಬೇ. 101 ಈ ಶಾಸನವನ್ನು "ಖರ ಸಂವತ್ಸರದ ಭಾದ್ರಪದ ಬಹುಳ ಪಂಚಮಿ......ಪಂದು" ಪ್ರಕಟಿಸಲಾಯಿತು. ಇದು ಕ್ರಿ. ಶ. 14, ಸೆಪ್ಟೆಂಬರ್, 1291, ಶುಕ್ರವಾರಕ್ಕೆ ಸರಿಯಾಗಿ ಹೊಂದಿಕೆಯಾಗುವುದು.

ಈ ಶಾಸನದಲ್ಲೂ ಹೊಯ್ಸಳೇಶ್ವರ–ಪಂಚಿಕೇಶ್ವರ ದೇವರುಗಳ ಪರಿಚಾರಕ ವರ್ಗವು ಕೊಟ್ಟ ಚಿಕ್ಕ–ಪುಟ್ಟ ಕಾಣಿಕೆಗಳ ವಿವರಗಳಿವೆ. ಒಟ್ಟಾರೆ ಕನಿಷ್ಟ 22 ವ್ಯಕ್ತಿಗಳು ವತ್ತಿ ಕೊಟ್ಟ ಪಟ್ಟಿ ಇಲ್ಲಿದೆ. ಇಲ್ಲಿ ಕಾಣುವ ವ್ಯಕ್ತಿಗಳ ಹೆಸರು, ಇದೇ ದೇವಾಲಯದಲ್ಲಿ ಕೊರೆದಿರುವ ಬೇರೆ ಶಾಸನಗಳಲ್ಲೂ ಕಂಡುಬರುವವು. ಅದರ ವಿವರ ಇಂತಿದೆ :

(ಅ) ಇಲ್ಲಿ ಬರುವ ಆಚಾರ್ಯ ರಾಮಂಣ್ಣ, ನರಸಿಂಹದೇವರ ನರಸಿಂಹ ಭಟ್ಟ. ಪುರಾಣದ ಹಿರಿಯಣ್ಣ; ಕೇಶವದೀಕ್ಷಿತ, ಪುರಾಣದ ದ್ರೋಣಭಟ್ಟ, ಬಾಲಶಿಕ್ಷೆಯ ಚಾಮೇಶ್ವರಭಟ್ಟ, ಯಜುರ್ವೇದ ಖಂಡಿತದ ಜಕ್ಕಣ್ಣ, ಪರಿಚಾರಕ ಹೊಯ್ಸಣದೇವ, ಸಿಂಗಾರಿ ಅಪ್ಪಂಣಗಳು ಬೇ. 103 ರಲ್ಲಿಯೂ ಬರುವರು.

(ಆ) ಸಿಂಗಾರಿಯಪ್ಪಣ್ಣ, ಕೋಲುಕಾಱ ಅಯ್ಯಪ್ಪ ಹಾಗೂ ಅಯ್ಯಪ್ಪನ ತಮ್ಮ ದಾಸಯ್ಯ ಬೇ. 100 ರಲ್ಲಿ ಈಗಾಗಲೇ ಕಾಣಲಾಗಿದೆ.

(ಇ) ಅಲ್ಲದೇ ಸಾವಾಸಿ ಪಿಸ್ಸಣ್ಣ ಬೇ. 110ರಲ್ಲಿ; ಆರಾಧನೆ ಅಪ್ಪಂಣ ಹಾಗೂ ಪೆರುಮಾಳೆದೇವರು ಬೇ. 115 ರಲ್ಲೂ; ಇಲ್ಲಿಯ ಪುರಾಣದ ಶ್ರೀರಂಗ ಭಟ್ಟನು ಬೇ. 104 ರಲ್ಲಿ ಪುರಾಣದ ಶ್ರೀರಂಗ ಭಟ್ಟೋಪಾಧ್ಯಾಯನೆಂದೂ ಅಲ್ಲದೇ, ಅವನಿಗೆ ಹೈವಂಣನೆಂಬ ಮಗನಿದ್ದನೆಂದೂ ತಿಳಿದುಬರುವುದು.

(ಈ) ಈ ಶಾಸನದಲ್ಲಿ ಬರುವ ಆರಾಧನೆಯ ಹಿರಿಯಣನಿಗೂ, ಬೇ. 89 ರಲ್ಲಿರುವ ಪುರಾಣದ ಹಿರಿಯಣ್ಣ, ಬೇ. 103ರಲ್ಲಿರುವ ಸೂರ್ಯದೇವರ ಸಿಂಗಾರಿ ಹಿರಿಯಣ್ಣ ಹಾಗೂ ಆರಾಧನೆಯ ಹಿರಿಯಂಣ್ಣ, ಖಂಡಿಕದ ಹಿರಿಯಂಣ್ಣ, ಪೂಜಾರಿ ಹಿರಿಯಣ್ಣ ಮತ್ತು ಹಿರಿಯಂಣ ಹಾಗೂ ಬೇ. 109 ರಲ್ಲಿ ಬರುವ ಕೋಲುಕಾರ ಹಿರಿಯಂಣಗಳೆಲ್ಲ, ಒಬ್ಬನೇ ವ್ಯಕ್ತಿಯಾಗಿರದಿದ್ದರೂ ಇಲ್ಲಿಯ ಒಂದೆರಡು ಉಲ್ಲೇಖಿಗಳಾದರೂ ಹಿರಿಯಂಣನಿಗೆ ಸಂಬಂಧಿಸಿರುವುದೇನೂ ಅಸಂಭವವಲ್ಲ.

ಈ ಎಲ್ಲ ವಿವರಗಳಿಂದ ಬೇಲೂರು 100, 101, 103 ಹಾಗೂ 104 ಸಂಖ್ಯೆಯ ನಾಲ್ಕು ಶಾಸನಗಳು ಒಂದೇ ಕಾಲ ಘಟಕಕ್ಕೆ ಸೇರಿದ ಶಾಸನಗಳಾಗಿರುವವೆಂಬುದು ಸ್ಪಷ್ಟ. ಬೇಲೂರು 101 ರಲ್ಲಿ ಬರುವ ಅರ್ಧಸಂಖ್ಯೆ ದಾನಿಗಳು ಬೇ. 103 ರಲ್ಲೂ, ಬರುವುದರಿಂದ, ಈ ಎರಡು ಶಾಸನಗಳ ಕಾಲಾಂತರ ಅತ್ಯಲ್ಪವಾಗಿರಲು ಸಾಧ್ಯ.

ಅಂದರೆ, ಬೇ. 101 ಮುಮ್ಮಡಿ ನಾರಸಿಂಹನ ಕಾಲದ, ಕ್ರಿ.ಶ. 1291ರಲ್ಲಿ ಪ್ರಕಟಿಸಿದ ಶಾಸನವೆಂದು ತೀರ್ಮಾನಿಸಬಹುದು.

4. ಬೇ. 102 : ಈ ಶಾಸನದಲ್ಲಿ ಕೊಟ್ಟಿರುವ 'ಹೇಮಳಂಬಿ ಸಂವತ್ಸರದ ಭಾದ್ರಪದ ಸು 14 ಆ' [ದಿತ್ಯವಾರ] ಎಂಬ ವಿವರದಿಂದ (ಇದೇ ಧಾಟಿಯಲ್ಲಿ

ಆರಂಭವಾಗಿರುವ ಬೇ. 99 ಹಾಗೂ 100 ನೊಡನೆ ಹೋಲಿಸಿ ನೋಡಿ) ಈ ಶಾಸನವನ್ನು ಕ್ರಿ.ಶ. 1, ಸೆಪ್ಟೆಂಬರ್, 1297ರಲ್ಲಿ ಬರೆಸಲಾಯಿತೆಂದು ತಿರ್ಮಾನಿಸ ಬಹುದು. ಆದರೆ ಈ ಶಾಸನದಲ್ಲಿ ಬರುವ ಮೂವರು ದಾನಿಗಳ - ಸಿಂಗಿಮಾವ, ಸಿಂಹಯ್ಯ ಹಾಗೂ ಮಾರದೇ [ವ]ರ— ಬಗ್ಗೆ ಹೆಚ್ಚು ವಿವರ ದೊರೆಯುತ್ತಿಲ್ಲ.

5. ಬೇ. 103 : ಈ ಶಾಸನದಲ್ಲೆಲ್ಲೂ ದಿನಾಂಕದ ಸೂಚನೆ ಇಲ್ಲ. ಆದರೆ ಬೇ. 100 - 101 ಶಾಸನಗಳಂತೆ ಈ ಶಾಸನವೂ ಹೊಯ್ಸಳೇಶ್ವರ ದೇವಾಲಯದ ಪರಿಚಾರಕ ವರ್ಗದವರು ಕೊಟ್ಟ ಚಿಕ್ಕ ಪುಟ್ಟ ಕಾಣಿಕೆಗಳ ದಾಖಲಾಗಿದೆ. ದೇವಾ ಲಯದ ಆಡಳಿತ - ಆದಾಯದ ಅಧ್ಯಾಯಕ್ಕೆ ಇದು ಬಹುಮುಖ್ಯ ಶಾಸನವಾಗಿದೆ. ಅಲ್ಲಲ್ಲಿ ತ್ರುಟಿತಗೊಂಡಿರುವ ಈ ಶಾಸನದಲ್ಲಿ ಕನಿಷ್ಟ 55 ದಾನಿಗಳ ಹೆಸರನ್ನು (ಪುನರುಕ್ತಿಗೊಂಡ ಹೆಸರನ್ನೊಳಗೊಂಡು) ಓದಲು ಸಾಧ್ಯವಾಗಿದೆ. ಈ ಶಾಸನದಲ್ಲಿ ಬರುವ ವ್ಯಕ್ತಿಗಳು ಹೆಸರು ಮತ್ತು ಇನ್ನುಳಿದ ವಿವರಗಳ ಬಗ್ಗೆ ಅಲ್ಲಲ್ಲಿ ಅನುಮಾನ ಉಂಟಾಗುವುದರಿಂದ, ಇದರ ಪಾಠವನ್ನು ಮತ್ತೊಮ್ಮೆ ಪರಿಶೀಲಿಸಬೇಕಾದ ಅವಶ್ಯಕತೆ ಇದೆಯೇನೋ ಎಂದು ನಮಗನಿಸುವುದು. ಅಲ್ಲದೇ, ಈಗ ತ್ರುಟಿತಗೊಂಡ ಭಾಗ ಗಳಲ್ಲಿ ಹಲವನ್ನಾದರೂ ಎಚ್ಚರಿಕೆಯಿಂದ ಪರೀಕ್ಷಿಸಿ, ಬೇರೆ ಶಾಸನಗಳ ಸಹಾಯದಿಂದ ಸರಿಪಡಿಸಬಹುದೆಂದು ತೋರಿಬರುವುದು. ಉದಾ : ಸಾಲು 47-48 ರಲ್ಲಿ ಬರುವ "ಳ ಆಚಾರ್ಯ್ಯ ರಾಯಣ್ಣ" ಎಂದಿರುವುದನ್ನು [ಕು] ಳ ಆಚಾರ್ಯ್ಯ ರಾಯಣ್ಣ" ನೆಂದು ಓದಬೇಕು. ಸಾಲು 33ರಲ್ಲಿ ಬರುವ ವಿವರದೊಡನೆ ಇದು ಹೊಂದಾಣಿಕೆ-ಯಾಗುವುದು. ಇದರಂತೆ ಸಾಲು 56ರಲ್ಲಿರುವ "...ದನೆಯ ಹಿರಿಯಣ್ಣ ಗದ್ಯಾಣ ಪೆರಡು" ಎಂದಿರುವುದನ್ನು [ಆರಾ] ಧನೆಯ ಹಿರಿಯಣ್ಣ ಗದ್ಯಾಣಪೆರಡು" ಎಂದು ಸರಿಮಾಡಿಕೊಂಡರೆ, ಈ ಹಿರಿಯಣ್ಣನೂ ಬೇ. 101ರಲ್ಲಿ ಬರುವ ಈ ಹೆಸರಿನ ವ್ಯಕ್ತಿಯೂ ಒಬ್ಬನೇ ಎಂಬ ವಿಷಯದ ಮನವರಿಕೆಯಾಗುವುದು.

ಪ್ರಸ್ತುತ ಶಾಸನದಲ್ಲಿ ಬರುವ ವ್ಯಕ್ತಿಗಳಲ್ಲಿ ಯಾರು ಯಾರು ಬೇ. 101ರಲ್ಲಿ ಬರುವರೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ಈ ಆಧಾರದ ಮೇಲೆ ಬೇ. 103ನ್ನು ಮುಮ್ಮಡಿ ನಾರಸಿಂಹನ ಕಾಲದ ಶಾಸನವೆಂದು ಗಣಿಸಿ, ಸು. ಕ್ರಿ.ಶ. 1291ರಲ್ಲಿ ಅದನ್ನು ಬರೆಸಿರಬಹುದೆಂದು ಊಹೆ ಮಾಡಬಹುದು.

6. ಬೇ. 104 : ಈ ಶಾಸನದ ಆರಂಭದಲ್ಲಿ ಬರುವ ವಿವರದಿಂದ, ಕ್ರಿ.ಶ. 2ನೆಯ ಮಾರ್ಚ್ 1280ರಲ್ಲಿ ಇದನ್ನು ಪ್ರಕಟಿಸಲಾಯಿತೆಂದು ತಿಳಿಯಬಹುದು. ಈ ಶಾಸನದಲ್ಲೂ ಪರಿಚಾರಕ ವರ್ಗದವರ ಕಾಣಿಕೆಗಳ ದಾಖಲಿದೆ; ಮೇಲಿನ ಶಾಸನಗಳ ಪರಂಪರೆಯಲ್ಲಿ ಇದನ್ನೂ ಕೊರೆಯಲಾಗಿದೆ.

ಪ್ರಸ್ತುತ ಶಾಸನದಲ್ಲಿ ಬರುವ ದಾನಿಗಳಲ್ಲಿ ಪುರಾಣದ ಶ್ರೀರಂಗ ಭಟ್ಟೋಪಾ-ಧ್ಯಾಯನು ಬೇ. 101ರಲ್ಲಿ ಬಂದಿರುವ ಬಗ್ಗೆ ಮೇಲೆ ನೋಡಲಾಗಿದೆ. ದೀಕ್ಷಿತರ

ದೇವಣ್ಣನೆಂಬ ವ್ಯಕ್ತಿಯು ಇಲ್ಲಿಯೂ, ಬೇ. 110ರಲ್ಲೂ, ಕಂಡು ಬರುವನು. ಬೇ. 103ರಲ್ಲಿ ಬರುವ ಪರಿಚಾರಕ ದೇವಣ್ಣ - ದೀವಟಿಕ ದೇವಣಗಳು ಇವನಿಗಿಂತ ಭಿನ್ನ ವ್ಯಕ್ತಿಗಳಾಗಿರಲು ಸಾಧ್ಯ.

ಬೇ. 104ರಲ್ಲಿ ಬರುವ ಮೂವರು ದಾನಿಗಳ ಹೆಸರು ಗಮನಾರ್ಹವಾಗಿವೆ. ಅವರು, 1. ಪಾತ್ರದ ಆನೆಯ ಮೌಳವೆ; 2. ಭಂಡಾರಿ ಪೊಂನಯ್ಯ ಮತ್ತು 3. ಭಂಡಾರಿ ರಾಮಂಣ. ಪಾತ್ರದ ಮೌಳವೆಯ ಬಗ್ಗೆ ಈಗಾಗಲೇ ಗಮನ ಸೆಳೆಯಲಾಗಿದೆ. (ಬೇ. 94ನ್ನು ನೋಡಿ). ಅವಳು ಕ್ರಿ.ಶ. 1273 - 1280ರ ಅವಧಿಯಲ್ಲಿ ಹೊಯ್ಸಳೇಶ್ವರ ದೇವಾಲಯದ ಪಾತ್ರದವಳಾಗಿ ಸೇವೆ ಸಲ್ಲಿಸಿ, ಕನಿಷ್ಟ ನಾಲ್ಕು ಬಾರಿಯಾದರೂ ಅಲ್ಪ ಕಾಣಿಕೆಗಳನ್ನು ಕೊಟ್ಟಳೆಂದು ತಿಳಿಯುವುದು. ಹೊಯ್ಸಳೇಶ್ವರ ದೇವರ ಭಂಡಾರಿ ಪೊಂನಯ್ಯನು ಪ್ರಸ್ತುತ ಶಾಸನದಲ್ಲಲ್ಲದೇ, ಇನ್ನೆರಡು ಶಾಸನಗಳಲ್ಲಿ (ಕ್ರಿ.ಶ. 1281ರ ಬೇ. 90 ಹಾಗೂ ಕ್ರಿ.ಶ. 1279ರ ಬೇ. 110) ಕಾಣಿಸಿಕೊಳ್ಳುವನು. ಅಂದರೆ ಪ್ರಸ್ತುತ ಶಾಸನವನ್ನೊಳಗೊಂಡು ಕ್ರಿ ಶ. 1279, 1280 ಮತ್ತು 1281ರಲ್ಲಿ, ಸತತವಾಗಿ ಪ್ರತಿ ವರ್ಷವೂ ಅವನು ದೇವಾಲಯದ ಭಂಡಾರಿಯಾಗಿ ಮುಂದುವರಿದನಲ್ಲದೇ, ದತ್ತಿ ಕೊಡುತ್ತಾ ಬಂದನೆಂದು ತಿಳಿಯುವುದು. ಬೇ. 110ರಲ್ಲಿ ಈತನು ಭಂಡಾರಿ ಭೀಮಂಣ್ಣ ಚಕ್ರವರ್ತಿಯ ಮಗ ಹಾಗೂ ಭಂಡಾರಿ ರಾಮಂಣ್ಣನ ಸೋದರನಾಗಿದ್ದನೆಂದು ಹೇಳಲಾಗಿದೆ. ಕ್ರಿ.ಶ. 1279ರಲ್ಲಿ ಪೊಂನಯ್ಯ-ರಾಮಂಣ್ಣರು ಜೊತೆ ಸೇರಿ ದಾನ ಕೊಟ್ಟರೆ, ಕ್ರಿ.ಶ. 1280ರಲ್ಲಿ ವೈಯಕ್ತಿಕವಾಗಿ ದಾನ ಕೊಟ್ಟ ಅಂಶ ಇಲ್ಲಿ ಸ್ಪಷ್ಟಗೊಂಡಿದೆ.

ಈ ಶಾಸನದಲ್ಲಿ ಬರುವ ಉಳಿದ ದಾನಿಗಳ ಬಗ್ಗೆ ಇದೇ ಬಗೆಯ ವಿವರಗಳನ್ನು ದೊರಕಿಸಲು ಸಾಧ್ಯವಾಗುವುದೇನೋ ಪರೀಕ್ಷಿಸಿ ನೋಡಬೇಕು. ಒಟ್ಟಾರೆ, ಈ ಶಾಸನದಲ್ಲಿ ದಿನಾಂಕದ ಸ್ಪಷ್ಟ ಉಲ್ಲೇಖ ಇರುವುದರಿಂದ, ಅದು ಕ್ರಿ.ಶ. ದೊಡನೆ ಸರಿಯಾಗಿ ಹೊಂದಾಣಿಕೆಯಾಗುವುದರಿಂದ, ದಿನಾಂಕವಿಲ್ಲದ ಹೊಯ್ಸಳೇಶ್ವರ ದೇವಾಲಯದ ಅನೇಕ ಶಾಸನಗಳ ದಿನಾಂಕ ನಿರ್ಧರಿಸಲು ಬಹು ಸಹಕಾರಿಯಾಗುವುದು.

7. ಬೇ. 105 : ಈ ಶಾಸನದಲ್ಲಿ ಕಾಲ ಸೂಚನೆ ಇಲ್ಲ. ಆಚಾರ್ಯ ಹಾಗೂ ಪರಿಚಾರಕ ವರ್ಗದವರಲ್ಲದೇ ಅಧ್ಯಕ್ಷ ದಾಮಂಣ ಹಾಗೂ ನಾಲ್ಕು ಸೇನಬೋವರು ಕೊಟ್ಟ ಕಾಣಿಕೆಗಳ ದಾಖಲೆ ಇಲ್ಲಿದೆ. ಐದನೆಯ ಸಾಲಿನಲ್ಲಿ "ಶ್ರೀಮತು ಪಿರಿಯರಸಿ ಕೇತಲದೇವಿಯರ ಸೇನಬೋವ" ಎಂದಿರುವುದರಿಂದ, ಈ ಶಾಸನದ ಕಾಲವನ್ನು ಊಹಿಸಲು ಅನುವು ಇದೆ. ಇವಳು ಇಮ್ಮಡಿ ಬಲ್ಲಾಳನ ಪಿರಿಯರಸಿ ಆಗಿದ್ದಳಲ್ಲದೇ, ದಕ್ಷ ಆಡಳಿತಗಾರಳೂ ಆಗಿದ್ದಳೆಂಬ ವಿಷಯ ಸುಸ್ಪಷ್ಟ. ಅವಳ ಸೇನಬೋವರು ಈ ಧರ್ಮಕಾರ್ಯದಲ್ಲಿ ಭಾಗಿಗಳಾಗಿದ್ದಂತೆ ಕಂಡುಬರುವುದು. ಈ ವಿವರದಿಂದ ಈ ಶಾಸನವನ್ನು ಇಮ್ಮಡಿ ಬಲ್ಲಾಳನ ಕಾಲಕ್ಕೆ–ಸು. ಕ್ರಿ.ಶ. 1180 ರಿಂದ 1220–

(ಅಂದರೆ ಹದಿಮೂರನೆಯ ಶತಮಾನದ ಆದಿಭಾಗಕ್ಕೆ) ಸೇರಿದ್ದೆಂದು ಊಹಿಸಬಹುದು. ಆದರೆ ಈ ಊಹೆಗೆ ತೊಡಕೊಡ್ಡಲು ಒಂದು ವಿವರ ಇದೇ ಶಾಸನದಲ್ಲಿದೆ. ಈ ಶಾಸನದ ಕೊನೆಯ ಸಾಲಿನಲ್ಲಿ ಕಾಣಿಸಿಕೊಳ್ಳುವ 'ಸೇನಬೋವ ಮಾಚಯ್ಯ', ಬೇ. 100ರಲ್ಲೂ ಕಾಣಿಸಿಕೊಳ್ಳುವನು. ಮೇಲೆ ನೋಡಿದಂತೆ ಬೇ. 100ರ ಕಾಲ ಕ್ರಿ.ಶ. 1297. ಒಬ್ಬ ವ್ಯಕ್ತಿಯು 77 (ಬಲ್ಲಾಳನ ಆಳಿಕೆಯ ಕಾಲದ ಕೊನೆ ಕ್ರಿ.ಶ. 1220) ವರ್ಷದಿಂದ 97 ವರ್ಷ ಜೀವಿಸುವುದು ಅಸಾಧ್ಯವೇನೂ ಅಲ್ಲ–ಆದರೆ ಈ ಕಾಲಾವಧಿಯಲ್ಲೆಲ್ಲ ಅವನು ಸೇನಬೋವ ಹುದ್ದೆಯಲ್ಲಿದ್ದನೇ ಎಂಬ ಸಂಶಯ ಬರುವುದು. ನಮಗೆ ತಿಳಿದಂತೆ ಹೆಗ್ಗಡೆ, ಸೇನಬೋವ, ಹೆಗ್ಗಡತಿ ಮೊದಲಾದ ಹುದ್ದೆಗಳು ವಂಶಪಾರಂಪರ್ಯವಾಗಿ ಬಂದ ಹುದ್ದೆಯಾದುದರಿಂದ, ಕೇತಲ ದೇವಿಯ ಕಾಲದಲ್ಲಿ ಸೇನಬೋವನಾದ ಮಾಚಯ್ಯ ಕ್ರಿ.ಶ. 1297ರಲ್ಲಿ ಆ ಹುದ್ದೆಯ ಹೆಸರನ್ನು ಮಾತ್ರ ಉಳಿಸಿಕೊಂಡಿರಲು ಸಾಧ್ಯ.

ಇದು ಏನೇ ಆಗಲಿ, ಕೇತಲದೇವಿಯ ಹೆಸರಿನ ಉಲ್ಲೇಖದ ಆಧಾರದಮೇಲೆ ಬೇ. 105ನ್ನು ಸು. ಕ್ರಿ.ಶ. 1220ಕ್ಕೆ ಸೇರಿಸಬಹುದೆಂದು ನಮಗನಿಸುವುದು.

8. ಬೇ. 106 : ಇಲ್ಲಿ ಕೊಟ್ಟಿರುವ "ತಾರಣ ಸಂವತ್ಸರದ ಚೈತ್ರ ಶುದ್ಧ ಪಾಡಿವ ಶುಕ್ರವಾರ" ಎಂಬ ವಿವರದಿಂದ, ಈ ಶಾಸನದ ಕಾಲ ಕ್ರಿ.ಶ. ಮಾರ್ಚ್ 19, 1284 ಎಂದು ತಿಳಿಯಬಹುದು. ಆದರೆ ವಾರದ ದಿನ ಶುಕ್ರವಾರವಾಗದೇ ಭಾನುವಾರ ಆಗುವುದು. ಇಲ್ಲಿ ಶಕ ಸಂಖ್ಯೆ ಇಲ್ಲದಿದ್ದರೂ, ಇದು ಹದಿಮೂರನೆಯ ಶತಮಾನದಂತ್ಯದ ಕಾಲಕ್ಕೆ ಸೇರಿದುದೆಂದು ಉಳಿದ ವಿವರಗಳಿಂದ ಊಹಿಸಬಹುದಾಗಿದೆ. ಪ್ರಸ್ತುತ ಶಾಸನವು ಬೇ. 104 ಹಾಗೂ ಬೇ. 107 ರ ಗತಿಯಲ್ಲಿ ಆರಂಭವಾಗುವುದು ಮತ್ತು ಹೊಯ್ಸಳೇಶ್ವರ ದೇವಾಲಯದ ಪಾತ್ರದವರ ಕಾಣಿಕೆಗಳ ದಾಖಲಾಗಿದೆ.

ಇಲ್ಲಿ ಉಲ್ಲೇಖಿಸಲಾಗಿರುವ ಮಹಾಪ್ರಧಾನ ಕುಮಾರ ಮಲ್ಲಿಕಾರ್ಜುನ ದಣ್ನಾಯಕನ ಮಗ ಬೊಂಮಣ ದಣ್ನಾಯಕನ ಬಗ್ಗೆ ಬೇರೆ ಶಾಸನಗಳಲ್ಲಿ ಏನಾದರೂ ವಿವರ ದೊರೆಯುವುದೇನೋ ನೋಡಬೇಕಾಗಿದೆ. ಅಲ್ಲಿ ನಮ್ಮ ಊಹೆಯನ್ನು ಪ್ರತಿರೋಧಿಸುವ ವಿಷಯ ದೊರೆಯದಿದ್ದರೆ, ಈ ಶಾಸನದ ಕಾಲವು ಕ್ರಿ. ಶ. 1284 ಹಾಗೂ ಮುಮ್ಮಡಿ ನಾರಸಿಂಹ ಹೊಯ್ಸಳನ ಆಳ್ವಿಕೆಯ ಕಾಲದಲ್ಲಿ ಮಾಡಿದ ದಾನಕ್ಕೆ ಸಂಬಂಧಿಸಿದ್ದು, ಎಂದು ಊಹಿಸಬಹುದು.

9. ಬೇ. 107: ಇಲ್ಲಿ ಬರುವ "ಶಕವರ್ಷ 1195 ನೆಯ ಶ್ರೀಮುಖ ಸಂವತ್ಸರದ ಮಾರ್ಗಶಿರ ಶುದ್ಧ 11" ರಿಂದ, ಈ ಶಾಸನದ ಕಾಲವು 22 ನವೆಂಬರ್ 1273 ಎಂದು ತೀರ್ಮಾನಿಸಬಹುದು. ಇದು ಪಾತ್ರದ ಆನೆಯ ಮಾಳವ್ವೆ ಕೊಟ್ಟ ಕಾಣಿಕೆಯನ್ನು

ಹೇಳುವುದು. ಇವಳ ಬಗ್ಗೆ ಈಗಾಗಲೇ ಎರಡು ಬಾರಿ ಪ್ರಸ್ತಾಪಿಸಿರುವುದರಿಂದ ಹೆಚ್ಚಿನ ಚರ್ಚೆ ಇಲ್ಲಿ ಅನವಶ್ಯಕ.

ಇಲ್ಲಿ ದೊರೆಯುವ ದಿನಾಂಕದ ಸ್ಪಷ್ಟ ಉಲ್ಲೇಖದಿಂದ ಈ ಶಾಸನದ ಕಾಲ **ಕ್ರಿ.ಶ. 1273** ಎಂದು ತಿಳಿಯಬಹುದಲ್ಲದೇ ಆನೆಯ ಮಾಳವ್ವ ಮತ್ತು ಅವಳೊಡನೆ ಇರುವ ಪರಿಚಾರಕ ವರ್ಗದವರು ಬರುವ ದಿನಾಂಕವಿಲ್ಲದ ಇನ್ನಿತರ ಶಾಸನದ ಕಾಲವನ್ನೂ ನಿಷ್ಕರ್ಷಿಸಲು ಅನುಕೂಲವಾಗಿದೆ.

ಪ್ರಸ್ತುತ ಶಾಸನದಲ್ಲಿ ಬರುವ ''ಮಹಾ ಪ್ರಧಾನಂ ಗೋಯಿಗೋವಳ ಗಂಡ ಪೆಂಡಾರ ಮಂನೆಯ ಜೂಬ...ದಂಣ್ನಾಯಕ''ರ ಬಗ್ಗೆ ಹೆಚ್ಚು ತಿಳಿಯಲು, ಈ ಶಾಸನದ ಮೂಲಪಾಠವನ್ನು ತಿಳಿಯಲು ಮತ್ತೊಮ್ಮೆ ಪ್ರಯತ್ನ ಮಾಡಬೇಕು.

10. ಬೇ. 108 : ಈ ಶಾಸನ ಕಾಲದ ಬಗ್ಗೆ ಪೂರ್ಣ ಅಥವಾ ಅಪೂರ್ಣ ವಿವರ ದೊರೆಯುವುದಿಲ್ಲ. ಆದರೆ, ಉಳಿದ ವಿವರಗಳಿಂದ ಅದನ್ನು ಊಹಿಸಲು ಸಾಧ್ಯ. ಅವುಗಳನ್ನಿಲ್ಲಿ ಪರಿಶೀಲಿಸುವ :

(1) ಗೌರೀದೇವಿಯ ಉಯ್ಯಾಲ ಬಾಯಿನಕ್ಕೆ ಇಬ್ಬರು ಪಾತ್ರದವರು ಹಾಗೂ ಒಬ್ಬ ನಾಯಕ ಕಾಣಿಕೆ ಕೊಟ್ಟಿರುವರು. ಬೇ. 107 ರಲ್ಲಿ ಆನೆಯ ಮಾಳವ್ವೆಯೂ ಗೌರೀದೇವಿಯ ಉಯ್ಯಾಲೆಯ ಬಾಯಿನಕ್ಕೆ ಕಾಣಿಕೆ ಕೊಟ್ಟಳೆಂದು ಇರುವುದರಿಂದ, ಬೇ. 108 ಆ ದಾಖಲೆಯ ಮುಂದುವರಿದ ಭಾಗವೆಂದು ಬಗೆದರೆ ತಪ್ಪಾಗಲಿಕ್ಕಿಲ್ಲ.

(2) ಪ್ರಸ್ತುತ ಶಾಸನದ ಸಾಲು 25-26 ರಲ್ಲಿ ಬರುವ ''ಪಾತ್ರದ ವಿಸ... ಲಖವ್ವೆ ಕೊ'' ಎಂದಿರುವುದನ್ನು ಬೇರೆಡೆ ಸಿಗುವ ವಿವರಗಳಿಂದ ಊಹಿಸಿ ''ಪಾತ್ರದ ವಿಸ್ಸ[ವ್ವೆಯ] ಲಖವ್ವೆ ಕೊ'' ಎಂದು ಸರಿಪಡಿಸಿಕೊಳ್ಳಬೇಕು. ಪಾತ್ರದ ವಿಸ್ಸವ್ವೆ ಹಾಗೂ ಅವಳ ಚಿಕ್ಕ ಸೋದರಿ ಲಖವೆ, ಹೊಯ್ಸಳದೇವರ ಕಂಬದ ಬೂಚವ್ವೆಯ ಮಕ್ಕಳು ಎಂಬ ವಿವರವನ್ನು ನಾವು ಬೇ. 110 (ಕ್ರಿ.ಶ. 1279 ರಿಂದ) ತಿಳಿಯಬಹುದು.

(3) ಸಾಲು 27-28ರಲ್ಲಿ ಕೊಟ್ಟಿರುವ ಪಾಠದ ಬಗ್ಗೆ ಸ್ವಲ್ಪ ಅನುಮಾನ ಬರುವುದು. ಸಾಲು 27ನ್ನು ''ಪಣವೈಯ್ದು ಪ 5'' ಎಂದು ಓದಲಾಗಿದೆ. ಅಕ್ಷರದಲ್ಲಿ ಬರೆದು ಅದನ್ನು ಸಂಖ್ಯೆಯಲ್ಲಿ ಪುನರುಕ್ತಿಗೊಳಿಸುವ ಸಂಪ್ರದಾಯ ಸಾಮಾನ್ಯ ರೂಢಿಯಲ್ಲಿದ್ದರೂ, ಹೊಯ್ಸಳೇಶ್ವರ ದೇವಾಲಯದ ಈ ಕಾಲದ ಶಾಸನಗಳಲ್ಲಿ ಅಕ್ಷರ ಅಥವಾ ಸಂಖ್ಯೆಯಲ್ಲಿ ದತ್ತಿಕೊಡುವುದನ್ನು ಮಾತ್ರ ನಾವು ಕಾಣುವೆವು. ಶಾಸನದ ಪಾಠವನ್ನು ಮತ್ತೊಮ್ಮೆ ಪರಿಶೀಲಿಸಿದರೆ ಈ ಬಗ್ಗೆ ಹೆಚ್ಚು ಬೆಳಕು ಚೆಲ್ಲಬಹುದು.

ನಮಗನಿಸಿದಂತೆ, ''ಪ 5'' ಎಂದಿರುವುದನ್ನು ''ಬೊ'' ಎಂದು ಓದಬೇಕು. ಆಗ ''ಬೊಮಜ ನಾಯಕನ ಮೊಂಮಳು ಪಾತ್ರದ ಚಂದವ್ವೆ'' ಎಂಬ ಪಾಠ ದೊರೆಯುವುದು. ಈ ಚಂದವ್ವೆ ಕೇತಲೇಶ್ವರ ದೇವಾಲಯದ ಪಾತ್ರದ ವರ್ಗಕ್ಕೆ ಸೇರಿದವಳೆಂದು ತಿಳಿಯುವುದು. ಬೇ. 110 ರಲ್ಲಿ ಬರುವ (ಸಾಲು 4) ''ಕೇತ ಲೇಶ್ವರದ ಬೊಂಮಜನಾಯಕನ ಮೊಂಮಳು ಪಾತ್ರದ ಚಂದವ್ವೆ'' ಎಂದಿರುವುದು ನಮ್ಮ ಊಹೆಗೆ ಪುಷ್ಟಿ ಕೊಡುವುದು.

ಈ ಎಲ್ಲ ವಿವರಗಳಿಂದ, ಈ ಶಾಸನವು ಸು. ಕ್ರಿ. ಶ. 1279 ರಲ್ಲಿ, ಅಂದರೆ ಮುಮ್ಮಡಿ ನರಸಿಂಹನ ಆಳಿಕೆಯ ಕಾಲದಲ್ಲಿ, ಕೊರೆಸಿದ ದತ್ತಿಯ ದಾಖಲೆ ಎಂದು ಊಹಿಸಬಹುದು.

11. ಬೇ. 109 : ಶಕಸಂಖ್ಯೆ ಇರದಿದ್ದರೂ, ಇಲ್ಲಿ ಬರುವ "ಶ್ರೀಮುಖ ಸಂವತ್ಸರದ ಪಾಲ್ಗುಣ ಶುದ್ಧ 6 ಆದಿವಾರ"ದಿಂದ, ಈ ಶಾಸನವು ಕ್ರಿ. ಶ. 14 ನೇ ಫೆಬ್ರುವರಿ, 1274 ರಂದು, ಪ್ರಕಟಿಸಲಾಯಿತೆಂದು ಊಹಿಸಬಹುದು. ಆದರೆ, ಆ ದಿನಾಂಕ ವಾರದ ದಿನ ಆದಿವಾರವಾಗದೇ ಬುಧವಾರವಾಗುವುದು.

ಅಲ್ಲಲ್ಲಿ ತ್ರುಟಿತಗೊಂಡಿರುವ ಈ ಶಾಸನದಲ್ಲಿ ಬರುವ 'ಕಲ್ಲವ್ವೆ' 'ವ್ರೊಲುವಾಜಿ ರಾಚೆಯ್ಯ'. 'ಸಿರಿಯವಿ'ಯರ ಬಗ್ಗೆ ಹೆಚ್ಚಿನ ವಿವರ ದೊರಕಿಸುವುದು ನಮಗೆ ಸಾಧ್ಯವಾಗಿಲ್ಲ. ಆದರೆ, 6 ನೆಯ ಸಾಲಿನಲ್ಲಿ ಬರುವ ''ಅವುಜಿಗ ಬೊಂಮಯ್ಯನ ಮಗ ಮಾಯಣನು'' ಎಂಬ ಉಲ್ಲೇಖದಿಂದ ಈ ಶಾಸನವನ್ನು ಬೇರೆಯ ಶಾಸನ ದೊಡನೆ ಹೋಲಿಸಲು ಸಾಧ್ಯವಾಗುವುದು. ಬೇ. 110 (ಕ್ರಿ.ಶ. 1279) ರಲ್ಲಿ ಮಾಯಣನ ಸೋದರಿಯರ ಹಾಗೂ ತಂದೆಯ ಹೆಸರು ಬರುವುವು. ಆ ಶಾಸನದ 3ನೆಯ ಸಾಲಿನಲ್ಲಿ : ''ಆ ದೇವರ [ಹೊಯ್ಸಳೇಶ್ವರ] ಅವುಜಿಗ ಬೊಂಮ್ಮೆಯ್ಯನ ಮಗಳು ಪಾತ್ರದ ನಾಗವೆ'' ಕೊಟ್ಟ ಕಾಣಿಕೆಯ ಉಲ್ಲೇಖವಿದೆ. ಈ ವಿವರದಿಂದ ಪಾತ್ರದ ಹೆಂಗಸರು ಸಂಸಾರಿಕರಾಗಿದ್ದರೆಂಬ ವಿಷಯ ತಿಳಿಯುವುದಲ್ಲದೇ, ಪ್ರಸ್ತುತ ಶಾಸನವು ಮುಮ್ಮಡಿ ನರಸಿಂಹನ ಆಳಿಕೆಯ ಕಾಲದಲ್ಲಿ, ಅಂದರೆ **ಸು. ಕ್ರಿ. ಶ. 1274** ರಲ್ಲಿ, ಬರೆಸಲಾಯಿತೆಂಬ ವಿಷಯವೂ ತಿಳಿಯುವುದು.

12. ಬೇ. 110 : ಈ ಶಾಸನದ ಕಾಲದ ಬಗ್ಗೆ ಸ್ಪಷ್ಟ ವಿವರವಿದೆ. ''ಶಕವರುಷ 1201 ನೆಯ ಪ್ರಮಾಥಿ ಸಂವತ್ಸರದ ಕಾರ್ತ್ತಿಕ ಸುದ್ಧ 10 ಬ್ರಿ'' [ಹಸ್ಪತಿವಾರ] ದಂದು, ಅಂದರೆ ಕ್ರಿ. ಶ. 16ನೇ ಅಕ್ಟೋಬರ್, 1279 ರಂದು, ಈ ಶಾಸನವನ್ನು ಹೊರಡಿಸಲಾಯಿತು. ಆದರೆ ಆ ದಿನಾಂಕ ವಾರದ ದಿನ ಬೃಹಸ್ಪತಿ ವಾರವಾಗದೇ ಸೋಮವಾರವಾಗುವುದು.

ಇಲ್ಲಿ ಬರುವ ದಾನಿಗಳಲ್ಲಿ ಪಾತ್ರದ ಆನೆಯ ಮಾಳವ್ವ (ಬೇ. 104 ನೋಡಿ), ಅವುಜಿ ಬಂಮ್ಮೆಯ (ಬೇ. 109 ನೋಡಿ), ಪಾತ್ರದ ಚಂದವೆ (ಬೇ. 108

ನೋಡಿ), ಭಂಡಾರಿ ಪೊಂನಯ್ಯ (ಬೇ. 104 ನೋಡಿ), ಸಾವಾಸಿ ವಿಸ್ಸಯ್ಯ (ಬೇ. 101 ನೋಡಿ), ಪಾತ್ರದ ವಿಸ್ಸಪ್ಪೆ (ಬೇ. 108 ನೋಡಿ) ಯರ ಬಗ್ಗೆ ಈಗಾಗಲೇ ವಿವೇಚಿಸಿರುವುದರಿಂದ, ಆ ವಿವರಗಳ ಪುನರ್ ಪ್ರಸ್ತಾಪ ಇಲ್ಲಿ ಅನವಶ್ಯಕ.

ಕ್ರಿ.ಶ. 16, ಅಕ್ಟೋಬರ್, 1279 ಎಂಬ ಸ್ಪಷ್ಟ ಉಲ್ಲೇಖವು ಈ ಶಾಸನದಲ್ಲಿರುವುದರಿಂದ, ದಿನಾಂಕವಿಲ್ಲದ ಉಳಿದ ಶಾಸನಗಳ ಬಗ್ಗೆ ಹೆಚ್ಚು ವಿವರ ತಿಳಿಯಲು ಸಹಾಯವಾಗಿರುವುದು.

13. ಬೇ. 111 : ಶಕಸಂಖ್ಯೆ ಇರದಿದ್ದರೂ "ಪ್ಲವ ಸಂ ಮಾಘ ಬ 14 ಸೊ" [ಮವಾರ] ಎಂಬ ವಿವರದಿಂದ, ಈ ಶಾಸನವನ್ನು ಕ್ರಿ.ಶ. 29, ಜನವರಿ, 1302 ರಲ್ಲಿ ಬರೆಯಲಾಯಿತೆಂದು ಊಹಿಸಲು ಸಾಧ್ಯವಾಗುವುದು.

ಪ್ರಸ್ತುತ ಶಾಸನದಲ್ಲಿ ಬರುವ "ಮ [ದ್ದ] ಳೆಯ ಮಯಿಲಯನ ಮಗಳು ಮಲವೆ"ಯ ಉಲ್ಲೇಖ ಹಳೇಬೀಡಿನ ಇತರ ಶಾಸನಗಳಲ್ಲಿ ಬಂದಂತೆ ನಮಗೆ ಕಂಡು ಬಂದಿಲ್ಲ. ಮಾಲೆಗಾಜ ದೇವಣ್ಣನ ಮಗ ಗುಡಿಗನ ಬಗ್ಗೆಯೂ ನಾವು ತಿಳಿಯೆವು ; ಆದರೆ ದೀವಟಿಕ ದೇವಣ ಬೇ. 103, ಪರಿಚಾರಕ ದೇವಣ್ಣ (ಬೇ. 103) ಹಾಗೂ ದೀಕ್ಷಿತ ದೇವಣ್ಣ (ಬೇ. 104) ಗಳ ಉಲ್ಲೇಖ ಹೊಯ್ಸಳೇಶ್ವರ ದೇವಾಲಯಗಳ ಶಾಸನಗಳಲ್ಲಿ ಬರುವುವು.

* * *

ಈ ಅಭ್ಯಾಸದಿಂದ ಒಂದೆರಡು ವಿಷಯಗಳು ವ್ಯಕ್ತವಾಗುವುವು. ರಾಜಕೀಯ ವಿಷಯಗಳನ್ನೊಳಗೊಳ್ಳದಿರುವುದರಿಂದ, ಸ್ವಲ್ಪಮಟ್ಟಿನ ಅನಾದರಕ್ಕೀಡಾಗಿರುವ ಈ ಹದಿನೆಂಟು ಹಳೆಯಬೀಡಿನ ಶಾಸನಗಳು, ದೇವಾಲಯದ ಆಡಳಿತ, ಹೊಯ್ಸಳೇಶ್ವರ ದೇವಾಲಯದ ಇತಿಹಾಸ, ಮತ್ತು ಸಾಮಾಜಿಕ ಹಾಗೂ ಔದ್ಯೋಗಿಕ ವರ್ಗಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಉಪಯುಕ್ತವಾದ ವಿವರಗಳನ್ನು ಕೊಡುವುವು ಎಂಬ ಮಾತು ಸ್ಪಷ್ಟ. ಅಲ್ಲಲ್ಲಿ ತ್ರುಟಿತಗೊಂಡಿದ್ದರೂ, ಕೂಲಂಕಷ ಅಭ್ಯಾಸದಿಂದ ತ್ರುಟಿತ ಭಾಗಗಳನ್ನು ಸರಿಪಡಿಸಿಕೊಳ್ಳಬಹುದೆಂಬುದನ್ನು ಇಲ್ಲಿ ತೋರಿಸಲಾಗಿದೆ. ಸಾವಿರಾರು ಶಾಸನಗಳನ್ನು ಸಂಪಾದಿಸುವ ಕಾರ್ಯದಲ್ಲಿ ತೊಡಗಿದ್ದ ಬಿ. ಎಲ್. ರೈಸ್‌ರವರಿಗೆ ಈ ಹಲವು ಶಾಸನಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಲು ಸಾಧ್ಯವಾಗಿರದೇ ಹೋಗಿರಬಹುದು—ಆದರೆ, ಈ ಸಂಪುಟವನ್ನು ಪರಿಷ್ಕರಣಗೊಳಿಸಿ, ಪುನಃ ಪ್ರಕಟಣೆಗೊಳಿಸುವ ಕಾಲವೀಗ ಬಂದುದರಿಂದ, ಈ ಎಲ್ಲ ಶಾಸನಗಳ ಪ್ರತಿಗಳನ್ನು ಮತ್ತೊಮ್ಮೆ ಪಡೆದು ಅಭ್ಯಾಸಮಾಡಿದರೆ, ರೈಸರು ಪ್ರಕಟಿಸಿದ ಪಾಠಗಳನ್ನೂ ತಿದ್ದಲು ಸಾಧ್ಯವಾಗಬಹುದು, ನಮ್ಮ ಸಲಹೆಯಲ್ಲಿ ಉಳಿದಿರುವ ದೋಷಗಳನ್ನೂ ಸರಿಪಡಿಸಲಾಗಬಹುದು.

ವಾಹಕೋತ್ತಮಗಳು (SUPER CONDUCTORS)


ಕೆ. ನಾಗರಾಜನ್

ಸರ್ವೇಸಾಮಾನ್ಯವಾಗಿ ಎಲ್ಲ ವಸ್ತುಗಳಿಗೂ ವಿದ್ಯುತ್ ಪ್ರವಾಹವನ್ನು ನಿರೋಧಿಸುವ ಸಾಮರ್ಥ್ಯವಿರುತ್ತದೆ. ಶುದ್ಧ ವಾಹಕಗಳಾದ ತಾಮ್ರ, ಪಾದರಸ ಮುಂತಾದ ಲೋಹ ಪದಾರ್ಥಗಳಲ್ಲಿ ಈ ಸಾಮರ್ಥ್ಯ ಕಡಿಮೆಯಿದ್ದು ವಿದ್ಯುತ್ ಸುಲಭವಾಗಿ ಹರಿಯಬಲ್ಲದು. ಮರ, ಮೇಣ ಮುಂತಾದ ವಾಹರೋಧಕ ಗಳಲ್ಲಿ (Insulators) ಈ ನಿರೋಧಶಕ್ತಿ ಅತಿ ಹೆಚ್ಚಾಗಿರುತ್ತದೆ. ಆದರೆ ಕೆಲವು ವಾಹಕಗಳನ್ನು 0°K ಮತ್ತು ಆ ಸುಮಾರಿನ ತಂಪಿಗೆ ಇಳಿಸಿದಾಗ ಈ ನಿರೋಧ ಶಕ್ತಿ ಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದರಿಂದ, ವಿದ್ಯುತ್ ಪ್ರವಾಹ ತಡೆಯಿಲ್ಲದೆ ಹರಿಯುತ್ತದೆ. ಈ ರೀತಿ ಅತ್ಯಂತ ಕಡಿಮೆ ಉಷ್ಣತೆಯಲ್ಲಿ ನಿರೋಧ ಶಕ್ತಿಯನ್ನು ಶೂನ್ಯಗೊಳಿಸಿಕೊಳ್ಳುವ ವಸ್ತುಗಳಿಗೆ ವಾಹಕೋತ್ತಮಗಳು ಅಥವಾ ಉನ್ನತ ವಾಹಕಗಳು (super-conductors) ಎಂದಿದೆ.

1911ರಲ್ಲಿ ವಿಜ್ಞಾನಿ ಕೆ. ಓನ್ಸ್ ಅತ್ಯಂತ ಕಡಿಮೆ ಉಷ್ಣತೆಯಲ್ಲಿ ಪಾದರಸದ ತಡೆಬಲವನ್ನು (resistance) ಅಳೆಯುತ್ತಿದ್ದಾಗ ಒಂದು ವಿಚಿತ್ರ ಸಂಗತಿ ಹೊರ ಹೊಮ್ಮಿತು. ಉಷ್ಣತೆ ಇಳಿಯುತ್ತಿದ್ದಂತೆ, ಶುದ್ಧ ಪಾದರಸದ ತಡೆಬಲ ಕಡಿಮೆ ಆಗುತ್ತ ಬಂದು, 4°K ಉಷ್ಣತೆಗೆ ಬಂದಾಗ ಸಂಪೂರ್ಣವಾಗಿ ನಾಶವಾಗಿತ್ತು, ಅಂದರೆ 4°K ಗಿಂತಲೂ ಕಡಿಮೆ ಉಷ್ಣತೆಯಲ್ಲಿ ಪಾದರಸದ ತಡೆಬಲ ಅಳತೆ ಮಾಡಲಾರದಷ್ಟು ಕಡಿಮೆಯಾಗಿತ್ತು. ಈ ರೀತಿ ಅತ್ಯಂತ ಕಡಿಮೆ ಉಷ್ಣತೆಯಲ್ಲಿ ವಸ್ತುಗಳು ತಮ್ಮ ತಡೆಬಲವನ್ನು ಕಳೆದುಕೊಳ್ಳುವ ತತ್ವಕ್ಕೆ ವಾಹಕೋತ್ತಮತೆ (super-conductivity) ಎಂದಿದೆ. ಅನೇಕ ವಸ್ತುಗಳು ಇದೇ ಗುಣವನ್ನು ತೋರುತ್ತವೆ.

ಒಂದು ವಾಹಕದ ಉಷ್ಣತೆಯನ್ನು ತಗ್ಗಿಸುತ್ತಿದ್ದಂತೆ ಅದರ ತಡೆಬಲ ಶೂನ್ಯ ವಾಗಿ, ಅದು ವಾಹಕೋತ್ತಮವಾಗಿ ಬದಲಾಗುವ ಉಷ್ಣತೆಗೆ ಸ್ಥಿತ್ಯಂತರ ಉಷ್ಣತೆ (transition temperature) Tc ಎಂದು ಹೆಸರಿದೆ. ಉದಾಹರಣೆಗೆ, ಮೇಲ್ಕಂಡ ಪ್ರಯೋಗದಲ್ಲಿ ಪಾದರಸದ ಸ್ಥಿತ್ಯಂತರ ಉಷ್ಣತೆ 4°K ಎಂದು ಹೇಳಬಹುದು. ಇದಕ್ಕಿಂತ ಕಡಿಮೆ ಉಷ್ಣತೆಯಲ್ಲಿ ವಸ್ತು ವಾಹಕೋತ್ತಮವಾಗಿದ್ದು, ಉಷ್ಣತೆ Tc

ಗಿಂತ ಹೆಚ್ಚಾದಲ್ಲಿ ವಾಹಕೋತ್ತಮತೆಯನ್ನು ಕಳೆದುಕೊಂಡು ಸಾಧಾರಣ ವಾಹಕ (conductor) ಆಗುತ್ತದೆ.



ಚಿತ್ರ 1

1. ತಡೆಬಲ ಓಮ್ಸ್‌ನಲ್ಲಿ 2. °kನಲ್ಲಿ 3. ಉಷ್ಣತೆ

[ಪಾದರಸದ ತಡೆಬಲ ಉಷ್ಣತೆ 4.2°Kನಲ್ಲಿ ಶೂನ್ಯವಾಗಿ ಅದು ವಾಹಕೋತ್ತಮವಾಗಿ ಬದಲಾಗುತ್ತದೆ.]

ಈ ಸ್ಥಿತ್ಯಂತರ ಉಷ್ಣತೆ (Tc) ಬೇರೆ ಬೇರೆ ವಸ್ತುಗಳಲ್ಲಿ ಬಗೆಬಗೆಯಾಗಿರುತ್ತದೆ. ಈ ಉಷ್ಣತೆ ಆ ವಸ್ತುವಿನಲ್ಲಿರುವ ಕಶ್ಮಲಗಳಿಂದ (impurities) ಹೆಚ್ಚು ಪ್ರಭಾವಿತವಾಗದಿದ್ದರೂ, ತವರ, ಇರಿಡಿಯಂ ಮುಂತಾದ ಲೋಹಗಳಲ್ಲಿರುವ ಕಶ್ಮಲ ಈ ಸ್ಥಿತ್ಯಂತರ ಉಷ್ಣತೆಯನ್ನು ಬದಲಾಯಿಸುತ್ತದೆ. ಕೆಲವು ಲೋಹಗಳು ಅಶುದ್ಧವಾಗಿದ್ದಲ್ಲಿ ವಾಹಕೋತ್ತಮಗಳಾಗದಿರುವುದೂ ಉಂಟು.

ಸುಮಾರು 26 ಧಾತುಗಳೂ ಮತ್ತು 400ಕ್ಕೂ ಮಿಗಿಲಾಗಿ ಸಂಯುಕ್ತಗಳು ಮತ್ತು ಮಿಶ್ರಲೋಹಗಳು ವಾಹಕೋತ್ತಮತೆಯನ್ನು ಹೊಂದಿವೆ. ಅಲ್ಲದೆ, ಎಲ್ಲ ಲೋಹಗಳೂ ಅಥವಾ ವಾಹಕಗಳೂ ವಾಹಕೋತ್ತಮಗಳಾಗಿರಲೇಬೇಕೆಂಬ ನಿಯಮವೂ ಇಲ್ಲ. ಕೆಲವು ಮಿಶ್ರಲೋಹಗಳು ವಾಹಕೋತ್ತಮಗಳಾಗಿದ್ದು, ಅವುಗಳಲ್ಲಿರುವ ಬಿಡಿ ಲೋಹಗಳು ವಾಹಕೋತ್ತಮತೆಯನ್ನು ಪಡೆಯದೇ ಇರುವ ಸಂಭವವೂ ಉಂಟು. ಸಾಧಾರಣ ಉಷ್ಣತೆಯಲ್ಲಿ ಅತ್ಯಂತ ಕಡಿಮೆ ವಾಹಕತ್ವ (conductivity) ಹೊಂದಿರುವ ಸೀಸ, ಟಂಗ್‌ಸ್ಟನ್ ಇತ್ಯಾದಿ ಲೋಹಗಳು ಕಡಿಮೆ ಉಷ್ಣತೆಯಲ್ಲಿ ಶ್ರೇಷ್ಠ ವಾಹಕೋತ್ತಮಗಳಾಗುತ್ತವೆ.

ವೈಶಿಷ್ಟ್ಯಗಳು

ಒಂದು ವಾಹಕೋತ್ತಮದ ಉಷ್ಣತೆಯನ್ನು Tc ಗಿಂತ ಹೆಚ್ಚಿಸಿದರೆ, ಅದರ ವಾಹಕೋತ್ತಮತೆ ನಾಶವಾಗುವ ಹಾಗೆಯೇ, ಆ ವಸ್ತುವನ್ನು ಪ್ರಬಲ ಕಾಂತ ಕ್ಷೇತ್ರದಲ್ಲಿ (magnetic field) ಇಟ್ಟಾಗಲೂ ನಾಶವಾಗುತ್ತದೆ. ವಾಹ ಕೋತ್ತಮತೆಯನ್ನು ಕಳೆದುಕೊಂಡು ತಡೆಬಲವನ್ನು ಮತ್ತೆ ಪಡೆಯುವ ಕಾಂತ ಕ್ಷೇತ್ರಕ್ಕೆ ಸಂಧಿಸ್ಥ ಕಾಂತಕ್ಷೇತ್ರ (critical field) (Hc) ಎಂದಿದೆ. ಅಂತೆಯೇ, ಒಂದು ವಾಹಕದಲ್ಲಿ ಹರಿಯುವ ವಿದ್ಯುತ್ಪ್ರವಾಹ ಕಾಂತಕ್ಷೇತ್ರವನ್ನುಂಟು ಮಾಡುವುದರಿಂದ, ಯಾವ ವಿದ್ಯುತ್ ಸಾಂದ್ರತೆಯಲ್ಲಿ (current density) ಉಂಟಾದ ಕಾಂತಕ್ಷೇತ್ರ ವಾಹಕೋತ್ತಮತೆಯನ್ನು ನಾಶಗೊಳಿಸುವುದೋ ಆ ವಿದ್ಯುತ್ ಸಾಂದ್ರತೆಗೆ ಸಂಧಿಸ್ಥ ಕಾಂತಕ್ಷೇತ್ರ (critical current density) I_c ಎನ್ನುತ್ತಾರೆ. ಆದ್ದರಿಂದ ಒಂದು ವಾಹಕೋತ್ತಮದಲ್ಲಿ ಹರಿಸಬಲ್ಲ, ವಿದ್ಯುತ್ ಪ್ರವಾಹಕ್ಕೂ ಒಂದು ಮಿತಿ ಇರುತ್ತದೆ. ಅದು Ic ಗಿಂತ ಹೆಚ್ಚಾದಲ್ಲಿ ತನ್ನ ವಾಹ ಕೋತ್ತಮತೆಯನ್ನು ಕಳೆದುಕೊಳ್ಳುತ್ತದೆ. ಒಂದು ವಸ್ತುವಿನ H_c (critical field) ಮತ್ತು I_c (critical current) ಗಳು ಒಂದನ್ನೊಂದು ಅವಲಂಬಿಸಿರು ವುದೇ ಅಲ್ಲದೆ, ಆ ವಸ್ತುವಿನ ಉಷ್ಣತೆಯಮೇಲೂ ಅವಲಂಬಿಸಿರುತ್ತವೆ. ಇದನ್ನು


$$H_c = H_o \left(1 - \frac{T^2}{T_c^2}\right)$$ ಎಂಬ ಸಮೀಕರಣದಿಂದ ತೋರಿಸಬಹುದು.

ಇಲ್ಲಿ H_o ಎಂಬುದು O°K ನಲ್ಲಿ ವಾಹಕೋತ್ತಮತೆಯನ್ನು ನಾಶಗೊಳಿಸಲು ಬೇಕಾದ ಕಾಂತಕ್ಷೇತ್ರ. ಮತ್ತು T°K ಆ ವಸ್ತುವಿನ ಉಷ್ಣತೆ.

ಮೈಸ್ನರ್ ಪರಿಣಾಮ


ಒಂದು ವಾಹಕೋತ್ತಮವನ್ನು ಯಾವುದಾದರೂ ಒಂದು ಕಾಂತಕ್ಷೇತ್ರದಲ್ಲಿರಿಸಿ ದಾಗ, ಕಾಂತರೇಖೆಗಳು ಆ ವಸ್ತುವಿನ ಮುಖಾಂತರ ಹಾದುಹೋಗದೆ, ಅದರ ಬದಿಗೆ ಸರಿಯುತ್ತವೆ. ಇದೇ ಮೈಸ್ನರ್ ಪರಿಣಾಮ.

ಒಂದು ದತ್ತಕಾಂತಕ್ಷೇತ್ರದಲ್ಲಿ ಒಂದು ವಸ್ತು ವರ್ತಿಸುವ ರೀತಿಯನ್ನು ಅವಲಂಬಿಸಿ ವಾಹಕೋತ್ತಮಗಳನ್ನು ಮೊದಲನೇ ಮತ್ತು ಎರಡನೇ (I & II type) ವಿಧದ ವಾಹಕೋತ್ತಮಗಳೆಂಬುದಾಗಿ ವಿಂಗಡಿಸಬಹುದು. ಈ ಮೈಸ್ನರ್ ಪರಿಣಾಮದಿಂದಾಗಿ ಕಾಂತಕ್ಷೇತ್ರದಿಂದ ವಾಹಕೋತ್ತಮ ನೂಕಲ್ಪಡುತ್ತ ದಾದ್ದರಿಂದ, ಅದನ್ನು ಕಾಂತಕ್ಷೇತ್ರದಲ್ಲಿ ಬೇರೆ ಯಾವ ಆಧಾರವೂ ಇಲ್ಲದೆ ತೇಲಿಸಬಹುದು.



ಚಿತ್ರ 2

ವಾಹಕೋತ್ತಮವಲ್ಲದ ವಸ್ತುವಿನಲ್ಲಿ
ಕಾಂತರೇಖೆಗಳು ಹಾದುಹೋಗುತ್ತವೆ.



ಚಿತ್ರ 3

ವಾಹಕೋತ್ತಮವೊಂದನ್ನು ಕಾಂತಕ್ಷೇತ್ರದಲ್ಲಿಟ್ಟಾಗ
ಕಾಂತರೇಖೆಗಳು ಬದಿಗೆ ಸರಿಯುತ್ತವೆ.

ಒಂದು ವಾಹಕೋತ್ತಮದ ತಡೆಬಲ ಸಂಪೂರ್ಣವಾಗಿ ಶೂನ್ಯ ಎನ್ನಲಾಗದಿದ್ದರೂ, ಎಂತಹ ಸೂಕ್ಷ್ಮ ಉಪಕರಣದಿಂದಲೂ ಅದನ್ನು ಅಳೆಯಲಾರದಷ್ಟು, ಕಡಿಮೆಯಿರುತ್ತದೆ ಎಂದರೆ ತಪ್ಪಾಗಲಾರದು. ಒಂದು ವಾಹಕೋತ್ತಮದಲ್ಲಿ ಹರಿಸುವ ವಿದ್ಯುತ್ಪ್ರವಾಹ, ಅದನ್ನು ಅದೇ ಉಷ್ಣತೆಯಲ್ಲಿಟ್ಟಾಗ, ಸಾವಿರಾರು ವರ್ಷಗಳ ನಂತರವೂ ವಿದ್ಯುತ್ಪ್ರವಾಹದ ಪ್ರಮಾಣ ಅಷ್ಟೇ ಮಟ್ಟದಲ್ಲಿರುತ್ತದೆ.

ಸಿದ್ಧಾಂತಗಳು

ಸಾಧಾರಣವಾಗಿ ವಾಹಕೋತ್ತಮತೆಯ ಮೂಲವನ್ನು ಕ್ವಾಂಟಂ ಸಿದ್ಧಾಂತ (Quantum Theory) ಸ್ಥಿರಪಡಿಸಿದರೂ, ಇದರ ಬಗ್ಗೆ 1956 ರವರೆಗೆ ಖಚಿತ ಅಭಿಪ್ರಾಯಗಳೇ ಇರಲಿಲ್ಲ. ಗಾರ್ಟರ್ ಮತ್ತು ಕ್ಯಾಸಿಮಿರ್ (1934) ಸಿದ್ಧಾಂತದ ಪ್ರಕಾರ ಒಂದು ವಾಹಕದಲ್ಲಿರುವ ವಾಹಕ ಎಲೆಕ್ಟ್ರಾನ್‌ಗಳು ಎರಡು ವಿಧದವಾಗಿ ವಿಂಗಡವಾಗುತ್ತವೆ. ಮೊದಲನೇ ವಿಧದವು ಮಾಮೂಲು ಗುಣಗಳನ್ನೇ ಹೊಂದಿರುತ್ತವೆ. ಆದರೆ ಎರಡನೆಯವು ಲೋಹದಲ್ಲಿ ಅತಿ ಕಡಮೆ ತಾಪದಲ್ಲಿ ಯಾವ

ಅಡೆತಡೆಯೂ ಇಲ್ಲದೆ ಸಂಚರಿಸುತ್ತವೆ. ಇವು ಸೂಪರ್ ಎಲೆಕ್ಟ್ರಾನ್‌ಗಳು. 0°K ತಾಪದಲ್ಲಿ, ಈ ಸೂಪರ್ ಎಲೆಕ್ಟ್ರಾನ್‌ಗಳ ಸಂಖ್ಯೆ ಅತಿಯಾಗಿದ್ದು (ಅಂದರೆ ಎಲ್ಲ ಎಲೆಕ್ಟ್ರಾನ್‌ಗಳೂ ಸೂಪರ್ ಎಲೆಕ್ಟ್ರಾನ್‌ಗಳಾಗಿರುತ್ತವೆ) ಉಷ್ಣತೆ ಹೆಚ್ಚಿದಂತೆ, ಅವುಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತದೆ. ಉಷ್ಣತೆ T_C ಆದಾಗ, ಎಲ್ಲ ಸೂಪರ್ ಎಲೆಕ್ಟ್ರಾನ್‌ಗಳೂ ಸಾಧಾರಣ ರೀತಿಯ ಎಲೆಕ್ಟ್ರಾನ್‌ಗಳಾಗಿ ಮಾರ್ಪಾಟಾಗುತ್ತವೆ.


ಈ ವಾಹಕೋತ್ತಮತೆಗೆ ಕಾರಣವಾದ T_C ಗಿಂತ ಹೆಚ್ಚಾದ ಉಷ್ಣತೆಯಲ್ಲಿ ಸೂಪರ್ ಎಲೆಕ್ಟ್ರಾನ್‌ಗಳು ಇಲ್ಲದ್ದರಿಂದ, ವಾಹಕೋತ್ತಮತೆ ನಾಶವಾಗುತ್ತದೆ. ಈ ರೀತಿ ಕಡಿಮೆ ಉಷ್ಣತೆಯಲ್ಲಿ ಎರಡು ರೀತಿಯ ಎಲೆಕ್ಟ್ರಾನ್‌ಗಳನ್ನು ಹೊಂದಿದ್ದು, ಸೂಪರ್ ಎಲೆಕ್ಟ್ರಾನ್‌ಗಳಿಂದ ವಾಹಕೋತ್ತಮತೆಯನ್ನು ಒಂದು ವಸ್ತು ಪಡೆಯುತ್ತದೆ ಎಂಬ ಈ ಮೇಲಿನ ಸಿದ್ಧಾಂತಕ್ಕೆ ದ್ವಿವಿಧ-ವಸ್ತು ಸಿದ್ಧಾಂತ (Two Fluid Theory) ಎಂದಿದೆ.

ನಂತರ, ಎಫ್. ಲಂಡನ್ ಮತ್ತು ಎಚ್. ಲಂಡನ್ (1935) ಸೋದರರು ಮ್ಯಾಕ್ಸ್‌ವೆಲ್ ಸಮೀಕರಣವನ್ನು ಲಂಡನ್ ಸಮೀಕರಣದೊಂದಿಗೆ ವಿಲೀನಗೊಳಿಸಿ ಈ ವಾಹಕೋತ್ತಮದ ಕೆಲವು ವಿದ್ಯುತ್-ಕಾಂತೀಯ ಗುಣಗಳನ್ನು ವಿವರಿಸಿದರು.

ಬಾರ್ಡೀನ್, ಕೂಪರ್ ಮತ್ತು ಶ್ರೈಫರ್ (1957) ತಮ್ಮ ಸಿದ್ಧಾಂತವನ್ನು ಹೊರಗೆಡಹಿದರು. ಇದಕ್ಕೆ ಬಿ.ಸಿ.ಎಸ್. ಸಿದ್ಧಾಂತ ಎನ್ನುವುದುಂಟು. ಇದರ ಪ್ರಕಾರ, ವಾಹಕೋತ್ತಮಕ್ಕೆ ಕಾರಣವಾದ ಎಲೆಕ್ಟ್ರಾನ್‌ಗಳು, ಎರಡೆರಡು ಎಲೆಕ್ಟ್ರಾನ್‌ಗಳಂತೆ ಜೋಡಿಗಳಾಗಿ ಸೇರಿಕೊಳ್ಳುತ್ತವೆ. ಒಂದು ಜೋಡಿಯಲ್ಲಿರುವ ಎಲೆಕ್ಟ್ರಾನ್‌ಗಳು, ಒಂದನ್ನೊಂದು ವಿರುದ್ಧ ಭ್ರಮಣ (Spin), ಸಮ ಮತ್ತು ವಿರುದ್ಧ ಭ್ರಾಮಕಗಳನ್ನು (Moments) ಹೊಂದಿರುತ್ತವೆ. ಈ ಎರಡು ಎಲೆಕ್ಟ್ರಾನ್‌ಗಳ ಬಂಧನಶಕ್ತಿ ಉಷ್ಣತೆಗನುಗುಣವಾಗಿ ಬದಲಾಯಿಸುತ್ತದೆ. ಈ ಬಂಧನಶಕ್ತಿ 0°K ನಲ್ಲಿ ಅತಿ ಹೆಚ್ಚಾಗಿರುತ್ತದೆ. ಎಲೆಕ್ಟ್ರಾನ್-ಫೋನಾನ್ (Phonon) ಪರಸ್ಪರ ಕ್ರಿಯೆ ವಾಹಕೋತ್ತಮಕ್ಕೆ ಕಾರಣವಾಗುತ್ತದೆ. ಉಷ್ಣತೆ ಹೆಚ್ಚಿದಂತೆ ಬಂಧನಶಕ್ತಿ ಕಡಿಮೆ ಆಗುತ್ತ ಬಂದು, ಉಷ್ಣತೆ T_C ಗೆ ಬಂದಕೂಡಲೇ, ಎಲ್ಲ ಎಲೆಕ್ಟ್ರಾನ್‌ಗಳೂ ಜೋಡಿ ಬಂಧನದಿಂದ ವಿಮುಕ್ತಿಹೊಂದಿ ಬಿಡಿಯಾದ ಎಲೆಕ್ಟ್ರಾನ್‌ಗಳಾಗುತ್ತವೆ. ಆಗ ವಸ್ತುವಿನ ವಾಹಕೋತ್ತಮತೆ ಕಳೆಯುತ್ತದೆ. ಕಡಿಮೆ ತಾಪದಲ್ಲಿ ಉತ್ಪತ್ತಿಯಾಗುವ ಈ ಎಲೆಕ್ಟ್ರಾನ್ ಜೋಡಿಗಳೇ ವಾಹಕೋತ್ತಮಕ್ಕೆ ಕಾರಣ ಎಂಬುದೇ ಈ ಸಿದ್ಧಾಂತದ ತಿರುಳು.

ಉಪಯೋಗಗಳು

ಪ್ರಬಲ ಕಾಂತ ಕ್ಷೇತ್ರಗಳನ್ನು ಪಡೆಯಲು ಈ ವಾಹಕೋತ್ತಮಗಳನ್ನು ಉಪಯೋಗಿಸುತ್ತಾರೆ. ವಾಹಕೋತ್ತಮವೊಂದರಿಂದ ಮಾಡಿದ ಉದ್ದನೆಯ ಸುರುಳಿಯ (Solenoid) ಮೂಲಕ ವಿದ್ಯುತ್ತನ್ನು ಹಾಯಿಸಿ ಹೆಚ್ಚು ಕಾಂತಶಕ್ತಿಯನ್ನು ಪಡೆಯಬಹುದು.



ಚಿತ್ರ 4


ಒಂದು ನೇರ ವಿದ್ಯುತ್ಕೋಶದಿಂದ (D. C. Power Supply) ಪಡೆದ ವಿದ್ಯುತ್ತನ್ನು S ಸುರುಳಿಯ ಮುಖಾಂತರ ಹಾಯಿಸಿದಾಗ ಕಾಂತಕ್ಷೇತ್ರ ಉಂಟಾಗುತ್ತದೆ. ಆವಶ್ಯಕ ಕಾಂತಕ್ಷೇತ್ರಕ್ಕೆ ಅನುಗುಣವಾದ ವಿದ್ಯುತ್ ಶಕ್ತಿಯನ್ನು ಹರಿಸಬೇಕು. ಆದರೆ ಆ ವಿದ್ಯುತ್ ಸಾಂದ್ರತೆ ಮೊದಲೇ ಹೇಳಿದಂತೆ ವಾಹಕೋತ್ತಮತೆಯನ್ನು ನಾಶಮಾಡದಂತೆ ಇರಬೇಕು. 1961 ರಲ್ಲಿ ಅಮೆರಿಕದ ಬೆಲ್ ಟೆಲಿಫೋನ್ ಪ್ರಯೋಗಶಾಲೆಯವರು ಇಂತಹ ಒಂದು ವಾಹಕೋತ್ತಮದಿಂದ ಸುಮಾರು 30 ಸಾವಿರ ಕಿಲೋಗೌಸ್‌ಗಳಷ್ಟು (ಗೌಸ್ ಎಂಬುದು ಕಾಂತಕ್ಷೇತ್ರಗಳನ್ನು ಅಳೆಯುವ ಮೂಲಮಾನ) ಕಾಂತಕ್ಷೇತ್ರವನ್ನು ಪಡೆದರು. ಈ ವಾಹಕೋತ್ತಮಗಳನ್ನು ಉಪಯೋಗಿಸುವುದರಿಂದ ಇವಕ್ಕೆ ತಗಲುವ ಖರ್ಚು ಕಡಿಮೆಯಾಗಿ, ಇವು ಆಕ್ರಮಿಸುವ ಸ್ಥಳ, ಇವನ್ನು ತಂಪುಮಾಡುವ ವಿಧಾನ ಈ ಎಲ್ಲ ವಿಷಯಗಳಲ್ಲೂ ವಾಹಕೋತ್ತಮಗಳು ಹೆಚ್ಚು ಪರಿಣಾಮಕಾರಿಯಾಗಿವೆ.

ಒಂದು ವಾಹಕೋತ್ತಮದ ತಡೆಬಲ ಹೆಚ್ಚು ಕಡಿಮೆ ಶೂನ್ಯವಾಗಿರುವುದರಿಂದ, ಅದರಲ್ಲಿ ವಿದ್ಯುತ್ ಪ್ರವಾಹವನ್ನು ಹೆಚ್ಚು ಶಕ್ತಿ ನಷ್ಟವಿಲ್ಲದೆ ಹರಿಸಬಹುದು.

ಈ ಒಂದು ಉಪಯೋಗವನ್ನು ನೆನಪು–ಶೇಖರಣ ಸಾಧನಗಳಲ್ಲಿ (Memory-Storage devices) ಅತಿ ಹೆಚ್ಚು ಕಾಲ ವಿಷಯಗಳನ್ನು ಸಂಗ್ರಹಿಸಲು ಪಡೆಯುತ್ತಾರೆ.

ಮೈಸ್ನರ್ ಪರಿಣಾಮವನ್ನು ಆಧರಿಸಿ, ವಾಹಕೋತ್ತಮಗಳಿಂದ ಪಡೆದ ಕಾಂತಮಸೂರಗಳನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಯಂತ್ರಗಳಲ್ಲಿ ಅಳವಡಿಸಲು ಉಪಯೋಗಿಸುತ್ತಾರೆ. ಗಗನನೌಕೆಗಳು ಮತ್ತು ಕ್ಷಿಪಣಿಗಳಲ್ಲಿ ಉಪಯೋಗಿಸುವ ಗೈರೋಸ್ಕೋಪ್‌ಗಳಲ್ಲಿ ಈ ವಾಹಕೋತ್ತಮಗಳ ಪಾತ್ರ ಹೆಚ್ಚಾಗಿದೆ.

ಕ್ರಯೋಟ್ರಾನ್ (Cryotron) ಎಂಬ ಘನ-ಸ್ಥಿತಿ ಎಲೆಕ್ಟ್ರಾನಿಕ್ಸ್ ಸಾಧನದಲ್ಲಿ (Solid State Electronic device) ಈ ವಾಹಕೋತ್ತಮಗಳ ಪಾತ್ರ ಬಹು ಮುಖ್ಯ. ಇದರಲ್ಲಿ ಟ್ಯಾಂಟಲಂ ಎಂಬ ವಾಹಕೋತ್ತಮವೊಂದರ ಸುತ್ತಲೂ ($T_c = 4{\cdot}5°k$) ಇನ್ನೊಂದು ನಿಯೋಬಿಯಂ ($T_c = 9{\cdot}1°k$) ವಾಹಕೋತ್ತಮದ ಸುರುಳಿಯನ್ನು ಸುತ್ತಿರುತ್ತದೆ (ಚಿತ್ರ 5).



ಚಿತ್ರ 5

1. ನಿಯೋಬಿಯಂ ಸುರುಳಿ 2. ಟ್ಯಾಂಟಲಂ

ವಾಹಕೋತ್ತಮ ಟ್ಯಾಂಟಲಂನ ಮೂಲಕ ವಿದ್ಯುತ್ ಪ್ರವಾಹ ಹರಿಯುತ್ತಿದೆ ಎಂದು ಭಾವಿಸೋಣ. ನಿಯೋಬಿಯಂ ಸುರುಳಿ ಮುಖಾಂತರ ಆವಶ್ಯಕ ವಿದ್ಯುತ್ತನ್ನು ಹರಿಸಿದರೆ ಅದು ಉಂಟುಮಾಡುವ ಕಾಂತಕ್ಷೇತ್ರ ಟ್ಯಾಂಟಲಂನ ವಾಹಕೋತ್ತಮತೆಯನ್ನು ನಿಶ್ಶೇಷಗೊಳಿಸಿ, ವಿದ್ಯುತ್ಪ್ರವಾಹವನ್ನು ತಡೆಗಟ್ಟುತ್ತದೆ. ಹೀಗೆ ಕ್ರಯೋಟ್ರಾನ್ ಸಾಧನ ಒಂದು ವಿದ್ಯುತ್ ಪಲ್ಲವದಂತೆ (Electric Switch)

ವರ್ತಿಸುತ್ತದೆ. ಸಾಧಾರಣ ಪಲ್ಲವಗಳಲ್ಲಿ ಉಂಟಾಗಬಹುದಾದ ಶಕ್ತಿ ನಷ್ಟಗಳು ಇದರಲ್ಲಿ ಆಗುವುದಿಲ್ಲ. ಈ ಕ್ರಯೋಟ್ರಾನ್‌ಗಳನ್ನು ಕಂಡುಹಿಡಿದವನು ಡಡ್ಲಿ. ಎ. ಬಕ್. ಈಚೆಗೆ ತಯಾರಾಗಿ ಬಂದಿರುವ ಪದರ (film) ಕ್ರಯೋಟ್ರಾನ್‌ಗಳು ಟ್ರಾನ್ಸಿಸ್ಟರ್‌ಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಇವನ್ನು ಕಂಪ್ಯೂಟರ್‌ಗಳ ವಿದ್ಯುನ್ಮಂಡಲಗಳಲ್ಲಿ ಹೆಚ್ಚಾಗಿ ಅಳವಡಿಸಲಾಗುತ್ತಿದೆ.

ಇತ್ತೀಚಿನ ಸಂಶೋಧನೆಗಳಿಂದ ಅತಿ ಒತ್ತಡಗಳಲ್ಲೂ ವಸ್ತುಗಳಲ್ಲಿ ವಾಹಕೋತ್ತಮತೆ ಉಂಟಾಗುವುದನ್ನು ನಿರ್ಧರಿಸುವ ಪ್ರಯತ್ನಗಳು ನಡೆಯುತ್ತಿವೆ. ಗುರುಗ್ರಹದಲ್ಲಿ ಲೋಹಸಂಬಂಧ ಜಲಜನಕ ಇರಬಹುದೆಂದು ಡಾ. ಕೊಠಾರಿ (1937) ತಿಳಿಸಿರುತ್ತಾರೆ. ಅಮೆರಿಕ ಮತ್ತು ರಷ್ಯದಲ್ಲಿ, ಈ ಲೋಹ ಸಂಬಂಧ ಜಲಜನಕವನ್ನು ಪ್ರಯೋಗ ಶಾಲೆಗಳಲ್ಲಿ ತಯಾರಿಸುವ ಯತ್ನವೂ ನಡೆಯುತ್ತಿದೆ. ಅನೇಕ ಪ್ರಮುಖ ಸಿದ್ಧಾಂತಿಗಳು ಈ ಲೋಹಸಂಬಂಧ ಜಲಜನಕ ಸಾಧಾರಣ ಗೃಹತಾಪದಲ್ಲಿ ವಾಹಕೋತ್ತಮವಾಗಿರುತ್ತದೆಂದು ನಂಬಿರುತ್ತಾರೆ. ಇದು ನಿಜವೇ ಆದಲ್ಲಿ ಈ ವಾಹಕೋತ್ತಮತೆ ವಿಜ್ಞಾನದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸುತ್ತದೆ ಎಂಬುದರಲ್ಲಿ ನಿಸ್ಸಂದೇಹ.

ಗ್ರಂಥ ಋಣ

1. *Low Temperature Physics :* L. C. Jackson
2. *Super Conductivity :* E. A. Lynton
3. *Science Reporter*, Vol. II, No. 9
4. *Journal of Physics Education*, Vol. II, No. 2

ಆಕಾಶದ ಕಡೆಗೆ ನೋಡು

ಬಿಷ್ಣು ದೆ
ಅನು : ಮೀರಾ ಚಕ್ರವರ್ತಿ
ಬಿ. ವೈ. ಲಲಿತಾಂಬ

ವೃಥಾ ಮತ್ತೆ ಅತ್ತಿತ್ತ ಅಲೆದಾಡಿ
ವಿಪಾಶೆಯ[1] ಶೂನ್ಯ ತೀರದಲ್ಲಿ ಆಕಂಠ ಅತ್ತರೆ
ಏನು ತಾನೆ ಪ್ರಯೋಜನ ?
ಮುಕ್ತಿ ಇಲ್ಲ ಶೋಕದ ಅತೀತದಲ್ಲಿ,
ಮಣ್ಣು ತೊಳೆದ ಕಟ್ಟೆ ಒಡೆದ ಸ್ಮೃತಿಯ ಗತಿಯಲ್ಲಿ.
ಕ್ಷೋಭ ಮಾತ್ರ ಅಪಲಾಪ ; ಇನ್ನಿಲ್ಲ,
ಪಕ್ಕದಲ್ಲಲ್ಲ, ಆಕಾಶದ ಕಡೆಗೆ ನೋಡು ; ಸ್ನಾನ ಮಾಡು ;
ಮುಳುಗು ಹಾಕು ಗುಡುಗಿನಲ್ಲಿ ಮತ್ತೆ ಮಿಂಚಿನಲ್ಲಿ,
ಆಷಾಢದ ಶರತ್-ಕೊನೆಯ ವೃಷ್ಟಿಯಲ್ಲಿ,
ಬೀಜಕಂಪ್ರ ಶ್ರಾವಣದ ಧಾರೆಯಲ್ಲಿ, ಕಾರ್ತಿಕದ ಮಂಜಿನಲ್ಲಿ ಸವಾಸ್ನ ಶೋಭಿಸುತ್ತಿದೆ.
ಬಯಲು ಬಯಲಿನಲ್ಲಿ, ಇಲ್ಲಿ, ಅಲ್ಲಿ, ಪ್ರಾಂತ ಪ್ರಾಂತದಲ್ಲಿ, ದೇಹ ಮನದಲ್ಲಿ
ಎಲ್ಲಾ ದೇಶದಲ್ಲಿ, ವಿಪಾಶೆಯ ಅಶ್ರುಜಲ ಕಳೆದು ಹೋಗುವಲ್ಲಿ
ಕಪಿಲ ಗಂಗೆಯ ಕ್ಷಾರಹೀನ ಕಣ್ಣುಗಳಲ್ಲಿ,
ಮುಮೂರ್ಷುವಿನ ರೂಪನಾರಾಯಣದಲ್ಲಿ,
ಪ್ರಾಥಮಿಕ ಅಸ್ತಿತ್ವದ ಉಷೆಯಲ್ಲಿ.

---

1 ವಿಪಾಶೆ : ಬಿಯಾಸ್ ನದಿ.

ಮೀಡಿಯ—ಒಂದು ಪ್ರತಿಕ್ರಿಯೆ

ಕೆ. ರಾಜೇಶ್ವರಿ

ಗ್ರೀಕ್ ಸಾಂಪ್ರದಾಯಿಕ ನಾಟಕ ರಚನೆಗಳ ಸಾಲಿನಲ್ಲಿ ಯುರಿಪಿಡಿಸನ ನಾಟಕಗಳು ತಮ್ಮ ವಸ್ತು, ತಂತ್ರ, ನಿರೂಪಣೆಗಳ ಗುಣದಿಂದ ಭಿನ್ನವಾಗಿ ವಿಶಿಷ್ಟವಾಗಿ ಕಾಣಿಸುತ್ತವೆ.

'ಮೀಡಿಯ' ನಾಟಕ ಅಂದಿನ ಯುಗಮಾನಕ್ಕೆ ವಸ್ತುನಿಷ್ಠತೆಯಲ್ಲಿ ಪರಂಪರೆಯನ್ನು ದಾಟಿ, ಕಹಿದಾಂಪತ್ಯದ ವಿಕೃತರೂಪ. ಪರಿಣಾಮವಾಗಿ ಉಂಟಾದ ತೀವ್ರವಾದ ಘೋರ ಫಲ. ಇವುಗಳ ಸತ್ವಶಾಲಿ ಅಭಿವ್ಯಕ್ತಿಯಿಂದ ವಾಸ್ತವವಾಗಿದ್ದು ಎಲ್ಲ ಕಾಲಕ್ಕೂ ನಿಲ್ಲುವ ತಾಜಾ ವಸ್ತುವಾಗಿದೆ.

ಈ ನಾಟಕದಲ್ಲಿ ಎರಡು ಘಟ್ಟಗಳಿವೆ :

1. ಜೇಸನ್‌ನನ್ನು ಪಡೆಯಲು ಮೀಡಿಯ ಮಾಡಿದ ಕೃತ್ಯಗಳು–ಇವು ಜೇಸನ್‌ನ ಪಾಲಿಗೆ ಉಪಕಾರ ಮಾಡಲು ಒದಗಿದ ವಿಘ್ನಗಳನ್ನು ಅರಳು ಮುರಿಯುವ ರೀತಿಯ ಭಯಾನಕತೆಯನ್ನು ಹೇಗೋಹಾಗೆ ತಾನು ಬಯಸಿದ್ದನ್ನು ಪಡೆಯಲು ಏನನ್ನಾದರೂ ಮಾಡಬಲ್ಲಂಥ ಅತಿ ಎದೆಗಾರಿಕೆಯ ಒಂದು ರೀತಿಯಲ್ಲಿ ಅಮಾನುಷ ಎಂಬಂತೆ ತೋರುವ ಅವಳ ಘಾತಕತನವನ್ನು 'ದಾದಿ'ಯ ಮಾತಿನಲ್ಲಿ ಹೇಳಿಸಿರುವುದು Playback ತಂತ್ರದಂತಿದೆ.

ಈ ತಂತ್ರ ಮೀಡಿಯಳ ಗುಣವನ್ನು, ಪರಿಚಯವನ್ನು ವಿಶೇಷ ಪರಿಣಾಮಕಾರಿಯಾಗಿ ಕಂಡುಕೊಳ್ಳಲು ನೆರವಾಗುವಂತೆ, ಮುಂದೆ ನಾಟಕದ ಎಲ್ಲ ತಿರುವಿಗೆ, ಅಂತ್ಯಕ್ಕೆ ಇಂಬಾಗುವ ಅವಳೆಲ್ಲ ಕೃತ್ಯಕ್ಕೂ ನಾಂದಿನುಡಿಗಳಂತಿದೆ.

2. ನಾಟಕದ ವಸ್ತು ಅನ್ಯಪಾತ್ರಗಳ, ಮೇಳದ, ಪ್ರಮುಖ ಪಾತ್ರದ ಪರಸ್ಪರ ಸಂಭಾಷಣೆ, ಸ್ವಗತಗಳ ಮುಖೇನ ಮೈಚಾಚುತ್ತಾ ಹೋಗುವುದು.

ಮೇಲುವರ್ಗ (ನಾಗರಿಕ)ದವನಾದ ಜೇಸನ್ ಕೆಳವರ್ಗ (ಅನಾಗರಿಕ)ದ ಹೆಣ್ಣಾದ ಮೀಡಿಯಳನ್ನು ಮದುವೆಯಾಗಿ ತನ್ನ ದೇಶಕ್ಕೆ ಕರೆತರುವುದರಲ್ಲಿ ವರ್ಗ ತಾರತಮ್ಯ ಕಾಣದಿರುವುದು ಇಂದಿಗೂ ಮೆಚ್ಚುಗೆಗೆ ಪಾತ್ರವಾದ ವಿಷಯವಾದರೂ, ಅದು ಪರಸ್ಪರ ಪ್ರೀತಿಯಿಂದಾದುದಲ್ಲ ಎಂದೂ, ತನ್ನ ಪ್ರಗತಿಗೆ ನೆರವಾದ

ಮೀಡಿಯಳನ್ನು ಕೈಹಿಡಿದ ಜೇಸನ್‌ನ ವ್ಯಾಪಾರಿಬುದ್ಧಿ, ಕಾಮುವಶಳಾಗಿ ತನಗೆ ಅನ್ನವಿಕ್ಕಿದವರನ್ನೂ ಕೊಂದು ಬಂದ ಮೀಡಿಯಳ ಕಳಂಕಿತಗುಣ ಕ್ರಮೇಣ ತೋರಿ ಬಂದಾಗ ಅದರಲ್ಲಿ ಮಹತ್ವ ಕಾಣೆವು.

ಆ ಮಹತಿ ಕಾಣುವುದೆಂದರೆ—ಈ ಇಬ್ಬರ ಸ್ವಭಾವಗಳೂ ತಮ್ಮ ತಮ್ಮ ನಿಟ್ಟಿನಲ್ಲಿ ಹರಿದೋಡಿ ಒಂದನ್ನೊಂದು ಮೆಟ್ಟಿನಿಲ್ಲಬೇಕೆಂದು ಅಂತರ್ಯದಲ್ಲೇ ಯೋಚಿಸಿ ಫಲಕಾಣುವುದರಲ್ಲಿ. ಈ ದೃಷ್ಟಿಯಿಂದ ಜೇಸನ್ ಸೋಲುತ್ತಾನೆ. ಮೊದಲಿನಿಂದಲೂ ತನ್ನ ಯಶಃಕಾಮನೆಗಾಗಿಯೇ ಹಂಬಲಿಸುವ ಆತ ಮಾಡಬೇಕಾದುದೆಲ್ಲವನ್ನೂ ಕುಯುಕ್ತಿಯಿಂದ ಆದರೆ ಸಪುರವಾದ ನಾಗರಿಕ ಹೊದಿಕೆಯಿಂದ ಮಾಡುತ್ತಾ ಹೋಗುವನು. "ಹಾವೂ ಸಾಯಬಾರದು ; ಕೋಲೂ ಮುರಿಯಬಾರದು" ಎಂಬ ಗುಣವುಳ್ಳ ಈತ ಯವುಳದಲ್ಲೇ ಏಕತೆ ಸಾಧಿಸುವ ಅಭೀಪ್ಸೆ ಇದ್ದವನಾದರೂ ಅದಕ್ಕೆ ನಿಷ್ಠುರ ನೇರ್ಪು ಇಲ್ಲದೆ ತಾನಿಕ್ಕಿಕೊಂಡ ಇಕ್ಕಳದಲ್ಲಿ ತಾನೇ ಸಿಲುಕಿ ಇಬ್ಬಂದಿಯಾದ. ತಲ್ಲಣಗೊಂಡು ಅಸಹಾಯಕನಾಗುತ್ತಾನೆ ; ನಿರಂತರ ದುಃಖಿಯಾಗುತ್ತಾನೆ. ಮೀಡಿಯಳನ್ನೂ ಸಮಾಧಾನಿಸುವ, ರಾಜಕುಮಾರಿಯನ್ನೂ ಸುಖಿಸುವ ಇವನ ನಡತೆಗೆ ಎರಡು ಮುಖವಿದ್ದರೂ ಇವನ ವ್ಯಾವಹಾರಿಕವಾದ ಯೋಚನಾಬದ್ಧ ಆಕಾಂಕ್ಷೆಗೆ ಒಂದೇ ಮುಖ. ಅದೆಂದರೆ—ಮೀಡಿಯಳನ್ನು ತೊರೆದು ನಿರಂತರ ಐಶ್ವರ್ಯ, ಪ್ರಭುತ್ವ ಪದವಿಗಾಗಿ ರಾಜಕುವರಿಯನ್ನು ವರಿಸುವುದು, ಮೀಡಿಯಳೊಡನೆ ಆತ ತೋರುವ ಧೂರ್ತ ಅನುಕಂಪ, ತಾನು ಮಾಡುವುದೆಲ್ಲಾ ಮಕ್ಕಳ ಸುಖಕ್ಕಾಗಿ ಎಂಬ ಕಪಟ ನಿಸ್ವಾರ್ಥ—ಈ ಎಲ್ಲಾ ಗೋಸುಂಬೆತನ ನೋಟಕರಿಗೆ ತಲುಪುವ ವೇಳೆಯಲ್ಲೇ ಮೀಡಿಯಳಿಗೂ ತಲುಪಿ ಅವಳೂ ಅವನ ಪಾಲಿಗೆ ಆ ಮಾತುಗಳನ್ನೇ ಉಪಯೋಗಿಸಿಕೊಂಡು ಪ್ರತೀಕಾರ ತೋರಿಸುವಲ್ಲಿ ಗೋಸುಂಬೆಯಾಗುತ್ತಾಳೆ. ಜೇಸನ್ ಮೀಡಿಯಳನ್ನು ಇಷ್ಟಿಷ್ಟೇ ಚಿಂತನೆಗೊಳಪಡಿಸಿದರೆ, ಮೀಡಿಯ ಜೇಸನ್‌ನನ್ನು ಇಡಿಯಾಗಿ ಸರ್ವತ್ರ ಚಿಂತನೆಗೊಳಪಡಿಸುವುದರಲ್ಲಿ ನಾಗರಿಕ-ಅನಾಗರಿಕ ಕೃತ್ಯಗಳ ಹಿಂದಿನ ಫಲಪ್ರಮಾಣವನ್ನು ಗುರುತಿಸಬಹುದು.

ಜೇಸನ್‌ನ ಪ್ರೇಮತೀವ್ರತೆ ಮೀಡಿಯಳ ಭಾಗಕ್ಕೆ ನಂತರ ಅಸಹ್ಯದ ತುದಿಗೇರಿದೆ ; ಪ್ರೇಮವಿದ್ದೆಡೆ ಮತ್ಸರ ಜ್ವಲಂತಗೊಂಡು ಪ್ರತೀಕಾರ ಮನೆಮಾಡಿದೆ. ಈ ಭರದ ಸ್ಥಿತಿಯಲ್ಲಿ ಅವಳು ಮೇಳದೊಡನೆ ಆಡುವ ಮಾತು ಸ್ತ್ರೀಗೆ ಸಂದಾಯವಾಗಿದ್ದ ಸಾಮಾಜಿಕ ಸ್ಥಾನಭದ್ರತೆಯನ್ನು ವಿಡಂಬಿಸುವ, ತನ್ಮೂಲಕ ವ್ಯವಸ್ಥೆಯನ್ನೇ ಅಲುಗಾಡಿಸುವ ನಿಷ್ಠುರ ಸತ್ಯಗಳಾಗಿವೆ. ಜೊತೆಗೇ ಮೇಳದ ಅನುಕಂಪೆಯನ್ನೂ ತತ್‌ಕ್ಷಣದಲ್ಲಿ ಸುಲಭವಾಗಿ ದೊರಕಿಸಿಕೊಳ್ಳುವಂತಿದೆ. ಪ್ರೇಮವಂಚಿತಳಾಗಿ ಅದರ ನಿವಾರಣೆಗೆ ರಕ್ತದ ಓಕುಳಿಯಾಡುವಲ್ಲಿ ಇವಳ ಗುಣದ ಭೀಭತ್ಸತೆಯನ್ನು ಮನತಟ್ಟುವಂತೆ ಅನುಭವಿಸಿದರೂ ಜೇಸನ್‌ನಂಥ ಗಂಡಿಗೆ ಮೀಡಿಯಳಂಥ

ಹೆಣ್ಣು ಮಾಡಿದ ಈ ಪ್ರತೀಕಾರ ಗ್ರೀಕ್ ಪರಂಪರೆಗೆ ಒಟ್ಟು ನಾಟಕದ ರುದ್ರತೆಯು ಹಂತಕ್ಕೆ ಒಪ್ಪವಾಗಿ ಹತ್ತುವ ತುದಿಯಾಗಿದೆ.

ವ್ಯವಸ್ಥೆಯನ್ನು ಪ್ರಶ್ನಿಸಿ, ಮುರಿದು ರಕ್ತಕ್ರಾಂತಿಯ ಮೂಲಕ ಅಭೀಪ್ಸಿತಳಾದ ಮೀಡಿಯ ಹೆಣ್ಣಿಗಿದ್ದ ಸ್ಥಾನವನ್ನು ಮೀರಿರುವಲ್ಲಿ ಕ್ರಾಂತಿಯುತ ಮನೋಭಾವವಿದ್ದರೂ ಇವಳ ಕ್ರಾಂತಿಗೆ ಸೀಮಿತದೃಷ್ಟಿಯಿದೆ; ಎಂಥ ಎಡರು ತೊಡರು ಬಂದರೂ ನಿರಂತರವಾದ ಜ್ವಲಂತತೆ, ವೈಶಾಲ್ಯತೆಯನ್ನು ಅಪ್ಪಟಕ್ರಾಂತಿಯ ಮೇಲ್ಮೈಲಕ್ಷಣವಾಗಿರಿಸಿಕೊಂಡು ಅದರ ಎದುರು ಇವಳ ಕ್ರಾಂತಿಯನ್ನು ನಿಲ್ಲಿಸಿದಾಗ ಅದಕ್ಕೆ ಅನೇಕ ಸಂಕುಚಿತತೆಗಳಿವೆ.

1. ಇವಳು ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವವಳಾದರೂ ಅದರಲ್ಲಿ ತನಗೆ ಅನ್ವಯವಾಗುವಂಥ ಸ್ತ್ರೀಸ್ಥಾನಮಾನದ ಬುನಾದಿಗೆ ಮಾತ್ರ ಕೊಡಲಿ ಏಟು ತಾಕಿಸಿದ್ದಾಳೆ. ಕ್ರಾಂತಿ ಇಡೀ ವ್ಯವಸ್ಥೆಯನ್ನೇ, ಅದರ ಎಲ್ಲಾ ಆಯಾಮಗಳನ್ನೇ ಕಲಕುವಂಥದ್ದಾಗಿರಬೇಕು.

2. ಮೀಡಿಯಳ ಕ್ರಾಂತಿ ಸ್ವಾರ್ಥಪರದ್ದು; ಪ್ರತಿಕಾರ ಮೂಲದ್ದು. ನೈಜಕ್ರಾಂತಿಗೆ ಇಂಥ ಪ್ರೇರಣೆ ಖಂಡಿತ ಸಲ್ಲದು. ಅದರ ಉಗಮಕ್ಕೆ ಸಾರ್ವತ್ರಿಕವಾದ ವಿಶಾಲವಾದ ದೃಷ್ಟಿಯಿರಬೇಕು.

3. ತನ್ನ ಅಭೀಪ್ಸೆ ನೆರವೇರಿಸಿಕೊಂಡ ಕ್ರಾಂತಿ ತನ್ನ ಕಾಲಮಾನಕ್ಕೇ, ಕ್ರಾಂತಿನೇಕಾರನ ತಲೆಮಾರಿಗೇ ಮುಗಿಯುವಂತಾಗಬಾರದು; ಅದು ಕಾಲನ ಹಿಡಿತಕ್ಕೆ ಸಿಗದೆ ಸತ್ವಶಾಲಿಯಾಗಿ, ನಿತ್ಯ ಆಯುಷ್ಮಂತವಾಗಿರಬೇಕು. ಮೀಡಿಯಳ ಕ್ರಾಂತಿ ಈ ದೃಷ್ಟಿಕೋನಕ್ಕೆ ವಿರುದ್ಧವಾಗಿದೆ. ತನ್ನ ಪ್ರತೀಕಾರ ತೀರಿಸಿಕೊಂಡ ಅವಳು ಅಷ್ಟಕ್ಕೇ ತಣ್ಣಗಾಗುತ್ತಾಳೆ. ಅವಳ ಆರ್ಭಟ, ಕೋಪಾವಿಷ್ಟತೆಗಳೆಲ್ಲಾ ತನ್ನ ಆಸೆ ಫಲವಾದಾಗಲೇ ಇಳಿದುಬಿಡುತ್ತವೆ. ನಿಜವಾದ ಕ್ರಾಂತಿಕಾರನ ಕೋಪ ಜ್ವಾಲಾಮುಖಿಯಂತೆ–ಗುಪ್ತವಾಗಿದ್ದು ಎಂದೋ ಸ್ಫೋಟಿಸುವಂಥದ್ದು; ಮತ್ತೆ ಮತ್ತೆ ಆಸ್ಫೋಟಗೊಳ್ಳುವಂಥದ್ದು. ಮೀಡಿಯಳ ಕೋಪ ಸ್ಫೋಟವಾಯಿತಾದರೂ ಅದು ಅಣುಬಾಂಬಿನಂತೆ. ಮೊದಲೇ ಸಿಗದಿಯಾಗಿಬಿಟ್ಟಿರುತ್ತದೆ. ಅದು ಸ್ಫೋಟಿಸಿ ಪರಿಣಾಮವುಂಟುಮಾಡಿ ತಣ್ಣಗಾಗಿ ಬಿಡುತ್ತದೆ ಎಂದು.

ಹೀಗಾಗಿ ಅವಳ ಪ್ರತಿಕಾರ ವ್ಯವಸ್ಥೆಯನ್ನು ಪ್ರಶ್ನಿಸುವ ಕ್ರಾಂತಿಯಂತೆ ಕಂಡರೂ ಅದು ಶೀತಲಗೊಂಡು ಸಫಲ ಕಾಣದಿರುವಲ್ಲಿ ಬಂಡಾಯವಾಗಿಬಿಡುತ್ತದೆ. ವ್ಯವಸ್ಥೆಯ ಬದಲಾವಣೆಯನ್ನು ತನ್ನ ಆಕಾಂಕ್ಷೆಗಳ ಚೌಕಟ್ಟಿನಲ್ಲಿ ಮಾಡಹೊರಟರೂ ಮತ್ತೆ ಅದೇ ವ್ಯವಸ್ಥೆಗೇ ಬಂದು ಸಿಕ್ಕಿಕೊಳ್ಳುವಲ್ಲಿ ಅವಳ ಹೋರಾಟ ಸಂಕುಚಿತವಾದ ಸಿರ್ಪಿಕಾರ ಗುರಿಯಿಂದ ಉಂಟಾದ್ದೆಂದೂ, ಬಂಡಾಯವಾದುದರಿಂದ ಸರ್ವತ್ರ

ಸ್ಥಾನಮಾನದ ಅಂಗೀಕಾರ ದೊರೆಯದೆ ಅವಳೆಲ್ಲ ಸಂಚು, ಕಾರ್ಯ, ಮಾತುಕತೆಗಳನ್ನು ಸಾರ್ವತ್ರಿಕ ಮೌಲ್ಯದ ಒರೆಗಲ್ಲಿಸಲ್ಲಿಟ್ಟಾಗ ಜೊಳ್ಳಾಗಿಬಿಡುತ್ತದೆ. ಮೀಡಿಯಳ ಪಾಲಿಗೆ ಅವಳ ಕೃತ್ಯ ಪೊಳ್ಳಾಗಲಾರದಾದರೂ ಅವಳಿಗೆ ಅದು ನಿತ್ಯ ಸುಖವನ್ನಂತೂ ತಂದೊಡ್ಡಲಿಲ್ಲ; ಆ ಸುಖದ ಸಾರವೇ ಅವಳ ಪಾಲಿಗೆ ಭಟ್ಟಿಯಾಗಿ ಇಳಿದುಬಂದಂತಿರುವ ಈ ಬಂಡಾಯ ಕ್ಷಣಿಕ ತೃಪ್ತಿಕೊಟ್ಟು ಮಿಂಚಿ ಮರೆಯಾಯಿತೇ ವಿನಃ ತನ್ನ ರೂಪಕ್ಕೆ ಸುಸ್ಥಿರತೆಯನ್ನು ದೊರಕಿಸಿಕೊಳ್ಳಲಿಲ್ಲ.

ಇದು ಮೀಡಿಯಳ ಹಾಗೆಯೇ ನಾಟಕದ ಸೋಲು ಎನಿಸಿ ನಿಂತುಬಿಡುತ್ತದೆ.

ಎಲೆಕ್ಟ್ರಾನಿಕ್ ಯುದ್ಧತಂತ್ರ

ಎಚ್. ಆರ್. ಕೃಷ್ಣಮೂರ್ತಿ

ಯುದ್ಧ, ದೇಶವೊಂದಕ್ಕೆ ಅನೇಕ ರೀತಿಗಳಲ್ಲಿ ಹಾನಿಕರವಾದರೂ ಅದಕ್ಕಾಗಿ ನಡೆಯುವ ಸಿದ್ಧತೆ, ಅಭ್ಯಾಸಗಳು ಅಪಾರ. ಪ್ರತಿ ದೇಶವೂ ಅಜ್ಞಾತ ವೈರಿಯ ಅವ್ಯಕ್ತ ಭಯದಿಂದ, ತನ್ನ ಯುದ್ಧೋಪಕರಣಗಳ ಸಾಮರ್ಥ್ಯವನ್ನು ಹೆಚ್ಚಿಸಿ ಕೊಳ್ಳಲು ಸತತವಾಗಿ ಶ್ರಮಿಸುತ್ತದೆ; ತನ್ನೆಲ್ಲ ಸಂಪನ್ಮೂಲಗಳನ್ನು ಬಳಸುತ್ತದೆ. ಇಂದಿನ ಯುದ್ಧದಲ್ಲಿ ಆಧುನಿಕ ಶಸ್ತ್ರಾಸ್ತ್ರಗಳ ಸಾಮರ್ಥ್ಯ ಕಲ್ಪನೆಗೂ ನಿಲುಕದಷ್ಟು ಅಪಾರ, ಅಷ್ಟೇ ನಿಖರ. ಈ ಎಲ್ಲ ಪ್ರಬಲ ಅಸ್ತ್ರಗಳ, ಅವುಗಳ ನೆರವಿನಿಂದ ನಡೆಯುವ ಯುದ್ಧಗಳ ಬೆನ್ನೆಲುಬು 'ಎಲೆಕ್ಟ್ರಾನಿಕ್ಸ್'. ಪ್ರತ್ಯೇಕವಾಗಿ ಬೆಳೆದು ಬಂದಿರುವ, ಅವ್ಯಾಹತವಾಗಿ ಕಲ್ಪನೆಯನ್ನೂ ಕಿರಿದುಮಾಡಿ ಬೆಳೆಯುತ್ತಿರುವ ವಿಭಾಗ ಎಲೆಕ್ಟ್ರಾನಿಕ್ಸ್ ಯುದ್ಧತಂತ್ರ.

ಎಲೆಕ್ಟ್ರಾನಿಕ್ ಯುದ್ಧತಂತ್ರದ ಆಧಾರ ಮೂಲ ರೇಡಿಯೋ ತರಂಗಗಳು ಸಂಪರ್ಕ ವ್ಯವಸ್ಥೆಯಲ್ಲಿ, ಸಂದೇಶವಾಹಕವಾಗಿ, ಗೂಢಚರ್ಯೆಯ ಉದ್ದೇಶಕ್ಕಾಗಿ ಕ್ಷಿಪಣಿಗಳ ನಿರ್ದೇಶನದಲ್ಲಿ, ಶತ್ರುಗಳ ವಿಮಾನ, ಹಡಗುಗಳ ಗುರುತಿಸುವಿಕೆಯಲ್ಲಿ ಇದರ ಪಾತ್ರ ಅಸಾಮಾನ್ಯ. ದೇಶವೊಂದರ ಯುದ್ಧ ಸಾಮರ್ಥ್ಯ ಅದರ ಎಲೆ ಕ್ಟ್ರಾನಿಕ್ಸ್ ವಿಭಾಗದ ಬೆಳವಣಿಗೆಯಲ್ಲಿದೆ.

ಎಲೆಕ್ಟ್ರಾನಿಕ್ ಯುದ್ಧತಂತ್ರವನ್ನು ವ್ಯಾಪಕವಾಗಿ 'ಎಲೆಕ್ಟ್ರಾನಿಕ್ ಪ್ರತಿರೋಧ ತಂತ್ರ' ಮತ್ತು 'ಎಲೆಕ್ಟ್ರಾನಿಕ್ ಪ್ರತಿ-ಪ್ರತಿರೋಧ ತಂತ್ರ' ಎಂದು ಎರಡು ಭಾಗ ವನ್ನಾಗಿಸಿದೆ. 'ಎಲೆಕ್ಟ್ರಾನಿಕ್ ಪ್ರತಿರೋಧ ತಂತ್ರ'ವನ್ನು 'ನಿಷ್ಕ್ರಿಯ' ಹಾಗೂ 'ಕ್ರಿಯಾಶಕ್ತ' ಎಂಬುದಾಗಿ ವಿಂಗಡಿಸಲಾಗಿದೆ.

ದೇಶದ ಯುದ್ಧ ಸನ್ನಾಹ, ವಿನ್ಯಾಸಗಳು ನಿಷ್ಕ್ರಿಯ ಯುದ್ಧತಂತ್ರದಿಂದ ಪ್ರಾರಂಭವಾಗುತ್ತವೆ. ವೈರಿಯ ಯುದ್ಧ ಸಿದ್ಧತೆಗಳು, ಅವರ ಯುದ್ಧ ಉಪ ಕರಣಗಳು, ರಾಡಾರ್ ಜಾಲದ ವ್ಯವಸ್ಥೆ, ವಾಯು-ಜಲ-ಭೂಪಡೆಗಳ ನೆಲೆ ಇವು ಗಳನ್ನು ಸೂಕ್ಷ್ಮ ವಿಧಾನಗಳಿಂದ ಪತ್ತೆಮಾಡುವ ಬೇಹುಗಾರಿಕೆ ಈ ವಿಭಾಗಕ್ಕೆ ಸೇರಿದೆ. ಈ ಉದ್ದೇಶಕ್ಕಾಗಿ ಉಪಕರಣಗಳನ್ನು ಹೊತ್ತ ನೌಕೆಗಳು, ವಿಮಾನಗಳು, ಉಪ ಗ್ರಹಗಳು ಉಪಯೋಗವಾಗುತ್ತವೆ. ಭೂಮಿ ಹಾಗೂ ಸಮುದ್ರಗಳಲ್ಲಿ ಹಲವೆಡೆ ನೆಲೆಯಾಗಿರುವ ಪ್ರಬಲ ಉಪಕರಣಗಳು ಇದರಲ್ಲಿ ಸಹಾಯಮಾಡುತ್ತವೆ. ಶತ್ರು

ವಿನ ಗಡಿ ಪ್ರದೇಶದಲ್ಲಿ, ಸಂದೇಶಗಳನ್ನು ಹೊತ್ತ ರೇಡಿಯೋ ತರಂಗಗಳನ್ನು ತಡೆದು, ಅದರಲ್ಲಿರುವ ರಹಸ್ಯರೂಪದ ಸಂದೇಶವನ್ನು ಬಿಡಿಸಲು ಪ್ರಯತ್ನಿಸ ಲಾಗುತ್ತದೆ. ಈ ರೀತಿ ಸಂಗ್ರಹಿಸಿದ ವಿಷಯಗಳ ಅಧ್ಯಯನಕ್ಕಾಗಿಯೇ ವಿಶೇಷ ವಾಗಿ ನಿರ್ಮಿಸಲಾದ ಪ್ರಯೋಗಶಾಲೆಗಳಿವೆ. ವೈರಿ, ಸಂಪರ್ಕ ವ್ಯವಸ್ಥೆಗಾಗಿ ಬಳಸುತ್ತಿರುವ ಪ್ರೇಷಕಗಳ ಸಂಖ್ಯೆ, ಅವುಗಳ ನೆಲೆ, ತರಂಗಗಳ ಕಂಪನಾಂಕ ಶಕ್ತಿ ಗಳನ್ನು ಗುರುತಿಸುವುದರಿಂದ, ಶತ್ರುವಿನ ಯುದ್ಧ ಯೋಜನೆಯ ಸ್ಥೂಲ ಪರಿಚಯ ಸಾಧ್ಯವಾಗುತ್ತದೆ. ನಿಷ್ಕ್ರಿಯ ಯುದ್ಧದಲ್ಲಿ ತೊಡಗಿರುವ ವಿಮಾನ ಮತ್ತು ನೌಕೆ ಗಳಿಗೆ ಅಪಾಯ ಎಂದಿಗೂ ತಪ್ಪಿದ್ದಲ್ಲ. ನಿಷ್ಕ್ರಿಯ ಯುದ್ಧದ ಬೇಹುಗಾರಿಕೆಯಲ್ಲಿ ತೊಡಗಿರುವ ಅಮೇರಿಕದ ಅನೇಕ ವಿಮಾನಗಳನ್ನು, ರಷ್ಯ ತಪ್ಪು ಮಾರ್ಗದರ್ಶನ ದಿಂದ ತನ್ನ ಗಡಿಯಲ್ಲಿ ಬರುವಂತೆ ಮಾಡಿದನಂತರ ಹೊಡೆದುರುಳಿಸಿದೆ. 'ಪ್ಯೂಬ್ಲೋ' ನೌಕೆಯನ್ನು ಉತ್ತರ ಕೊರಿಯಾ ವಶಪಡಿಸಿಕೊಂಡಿದ್ದು ಇದೇ ಕಾರಣಕ್ಕಾಗಿ.

ನಿಷ್ಕ್ರಿಯ ಯುದ್ಧತಂತ್ರದಿಂದ ದೊರೆತ ಮಾಹಿತಿಯ ಆಧಾರದ ಮೇಲೆ ದೇಶವೊಂದರ ಯುದ್ಧಯೋಜನೆ ರಚಿತವಾಗುತ್ತದೆ. ಕ್ರಿಯಾಶಕ್ತ ಯುದ್ಧತಂತ್ರ ಮುಂದಿನ ಕಾರ್ಯವನ್ನು ನಿರ್ವಹಿಸುತ್ತದೆ. ಶತ್ರುವಿನ ರೇಡಿಯೋ ತರಂಗಗಳನ್ನು ತಡೆಯುವುದು, ರಾಡಾರ್ ಗ್ರಾಹಕವನ್ನು ಶಬ್ದ ತರಂಗಗಳಿಂದ ಮುಚ್ಚುವುದು, ತರಂಗಗಳನ್ನು ಬದಲಿಸುವುದು, ಬೇಕಂತಲೇ ಪ್ರತಿಫಲಿಸುವುದು ಮುಂತಾದ ಕೆಲಸ ಗಳನ್ನು ಈ ವಿಭಾಗ ಮಾಡುತ್ತದೆ. ಕ್ರಿಯಾಶಕ್ತ ಸಮರದಲ್ಲಿ ತೊಡಗಿರುವ ವಿಮಾನ ಹಾಗೂ ನೌಕೆಗಳಲ್ಲಿ ಈ ಉದ್ದೇಶಕ್ಕಾಗಿ ಹಲವಾರು ಉಪಯುಕ್ತ ಸಲಕರಣೆಗಳಿರುತ್ತವೆ. ಇಂತಹ ಪಡೆ ಯುದ್ಧದಲ್ಲಿ ತೊಡಗಿದಾಗ, ಶತ್ರುವಿಗೆ, ತನ್ನ ಪಡೆಗಳ ಸ್ಥಾನ, ಪ್ರಮಾಣ, ಆಕ್ರಮಣದ ದಿಕ್ಕು, ಸಮಯಗಳ ಬಗೆಗೆ ಅತ್ಯಂತ ಕಡಿಮೆ ಮಾಹಿತಿ ಸಿಗುವಂತೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತದೆ. ಇದಕ್ಕಾಗಿ ಉಪಯೋಗಿಸುವ ವಿಧಾನಗಳು ಹಲವಾರು.

ಶತ್ರುವಿನ ಮೇಲೆ ಧಾಳಿಗೆ ಹೊರಟ ಸುಸಜ್ಜಿತ ವಿಮಾನವೊಂದು ಗುರಿಯನ್ನು ತಲುಪುವುದರಲ್ಲಿಯೇ ಅದನ್ನು ಶತ್ರುಗಳ ರಾಡಾರ್ ವ್ಯವಸ್ಥೆ ಗುರುತಿಸಿ, ತನ್ನವರಿಗೆ ಎಚ್ಚರಿಕೆ ನೀಡುತ್ತದೆ. ವಿಮಾನದ ಚಾಲಕನಿಗೆ ವಿಮಾನದಲ್ಲಿರುವ 'ರಾಡಾರ್ ಮುನ್ಸೂಚಕ ಗ್ರಾಹಕ'ದಿಂದ 'ತನ್ನನ್ನು ರಾಡಾರ್‌ನಿಂದ ಗುರುತಿಸಿ ಅನುಸರಿಸುತ್ತಿ ದಾರೆ'ಎಂಬ ವಿಷಯ ತಿಳಿಯುತ್ತದೆ. ವೈಮಾನಿಕ ಕೂಡಲೆ, ಚಾಫ್ ಡಿಸ್ಪೆನ್‌ಸರ್ ಉಪ ಕರಣದಿಂದ ನಿರ್ದಿಷ್ಟ ಆಕಾರಗಳಲ್ಲಿ ಕತ್ತರಿಸಿರುವ ಲೋಹದ ಪಟ್ಟಿಗಳನ್ನು ವಿಮಾನದ ಸುತ್ತ ವಿಸರ್ಜಿಸುತ್ತಾನೆ. ಗಾಳಿಯಲ್ಲಿ ಹರಡಿಕೊಳ್ಳುವ ಈ ಪಟ್ಟಿಗಳು, ಶತ್ರುವಿನ ರಾಡರ್ ತರಂಗಗಳಿಂದ ವಿಮಾನವನ್ನು ಸುಲಭವಾಗಿ ತಪ್ಪಿಸುತ್ತದೆ. ಪಟ್ಟಿಗಳಿಂದ ಪ್ರತಿಫಲಿತವಾದ ರೇಡಿಯೋ ತರಂಗಗಳು, ರಾಡಾರ್ ತೆರೆಯಮೇಲೆ ಸಣ್ಣ ಸಣ್ಣ

ಚುಕ್ಕೆಗಳ ರೂಪದಲ್ಲಿದ್ದು, ಅವುಗಳ ನಡುವೆ ವಿಮಾನವನ್ನು ಗುರುತಿಸುವುದು ಅಸಾಧ್ಯವಾಗುತ್ತದೆ. ಮೂವತ್ತು ವರುಷಗಳ ಹಿಂದೆ ಬಳಕೆಗೆ ಬಂದ ಈ ವಿಧಾನವೇ ಇಂದು, ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಬಳಕೆಯಲ್ಲಿದೆ.

ಶತ್ರುವಿನ ರಾಡಾರನ್ನು ನಿಷ್ಪ್ರಯೋಜಕಗೊಳಿಸಲು ವಿಮಾನಗಳು ಹಾಗೂ ನೌಕೆಗಳು ಉಪಯೋಗಿಸುವ ಇನ್ನೊಂದು ಕ್ರಮ ಪ್ರತಿಬಂಧಕ ವಾರ್ತಾ ಸಂಮರ್ದತೆ. ಈ ವಿಧಾನದಲ್ಲಿ ವಿಮಾನ ಮತ್ತು ನೌಕೆಗಳು, ವಿಸ್ತಾರವಾದ ಕಂಪನಗಳಲ್ಲಿ ಶಬ್ದ ತರಂಗಗಳನ್ನು ಪ್ರಸಾರಮಾಡಿ, ರಾಡಾರಿನ ರೇಡಿಯೋ ತರಂಗಗಳನ್ನು ತಡೆಗಟ್ಟುವುದರೊಡನೆ, ಅದನ್ನು ಬದಲಿಸಿ, ರಾಡಾರ್ ತೆರೆ ಈ ಶಬ್ದಗಳಿಂದ ತುಂಬಿಹೋಗುವಂತೆ ಮಾಡುತ್ತದೆ. ಈ ಕ್ರಮ ಯಶಸ್ವಿಯಾಗಲು ಅತ್ಯಂತ ಶಕ್ತಿಯುತವಾದ ಪ್ರೇಷಕಗಳನ್ನು ವಿಮಾನ ಹಾಗೂ ನೌಕೆಗಳಲ್ಲಿ ಕೊಂಡೊಯ್ಯಬೇಕಾಗುತ್ತದೆ. ನೌಕೆಯಲ್ಲಿ ಇದು ಸಾಧ್ಯವಾದರೂ ವಿಮಾನದಲ್ಲಿ ಕಷ್ಟಸಾಧ್ಯ. ಈ ಉಪಕರಣಗಳನ್ನು ಪ್ಯಾರಾಚೂಟ್‌ಗಳಿಂದ ಇಳಿಸಿ, ಅದರಿಂದಲೂ ಈ ಕೆಲಸವನ್ನು ಮಾಡಿಸಬಹುದು.

ಶತ್ರುವಿನಲ್ಲಿ ಭೀತಿಯನ್ನುಂಟುಮಾಡಿ ಅವನ ಧೈರ್ಯ ಉತ್ಸಾಹಗಳನ್ನು ಕುಗ್ಗಿಸಲು ಹಲವು ಸಲಕರಣೆಗಳಿವೆ. 'ಭ್ರಮಣ ಕೋನ ಪ್ರತಿಫಲಕ' ಹಾಗೂ ಲೂನ್‌ಬರ್ಗ್ ಮಸೂರ ಈ ಗುಂಪಿಗೆ ಸೇರಿದ ಉಪಕರಣಗಳು. ಅತ್ಯಂತ ಚಿಕ್ಕಪ್ರಮಾಣದ ಈ ಸಲಕರಣೆಗಳು ವಿಮಾನ ಅಥವಾ ಹಡಗೊಂದು ಪ್ರತಿಫಲಿಸುವಷ್ಟೇ ಪ್ರಮಾಣದಲ್ಲಿ ರೇಡಿಯೋ ತರಂಗಗಳನ್ನು ಪ್ರತಿಫಲಿಸುತ್ತದೆ. 'ಸ್ಕಾಡ್' ಇದೇ ರೀತಿಯ ಇನ್ನೊಂದು ಉಪಕರಣ. ಅಮೇರಿಕದ ವಿಮಾನದಳದ ದೈತ್ಯಾಕಾರದ ಬಾಂಬರ್ ಬಿ-52, ಈ ಸಾಧನವನ್ನು ಉಪಯೋಗಿಸುತ್ತದೆ. ಅದರ ವಿಶಾಲವಾದ ರೆಕ್ಕೆಯ ತಳಭಾಗದಲ್ಲಿ ಅನೇಕ ಸ್ಕಾಡ್‌ಗಳನ್ನು ಜೋಡಿಸಲಾಗಿರುತ್ತದೆ. ಆಕ್ರಮಣಕ್ಕೆ ತೆರಳಿದಾಗ, ಶತ್ರು ವಲಯದಲ್ಲಿ ಸ್ಕಾಡ್‌ಗಳನ್ನು ಹಾರಿಸಲಾಗುತ್ತದೆ. ಪ್ರತಿಯೊಂದು ಸ್ಕಾಡ್ ಸಾಧನವೂ, ಒಂದು ಬಿ–52 ಬಾಂಬರ್ ವಿಮಾನ ಪ್ರತಿಫಲಿಸುವಷ್ಟೇ ತರಂಗಗಳನ್ನು ಪ್ರತಿಫಲಿಸುತ್ತದೆ. ಇದರಿಂದಾಗಿ ರಾಡಾರ್ ತೆರೆಯಮೇಲೆ ಸಹಸ್ರಾರು ಬಿ–52 ಬಾಂಬರ್‌ಗಳು ಕಾಣುತ್ತವೆ. ಇದರಿಂದ ಗಲಿಬಿಲಿಗೊಂಡ ಶತ್ರು ಅಧೀರನಾಗಿ ತನ್ನೆಲ್ಲ ಬಲವನ್ನು ಈ ಹುಸಿ ವಿಮಾನಧಾಳಿಯನ್ನು ಎದುರಿಸಲು ನಿಯೋಜಿಸಿದಾಗ, ನಿಜವಾದ ಧಾಳಿ ಬೇರೆಯ ದಿಕ್ಕಿನಲ್ಲಿ ಆರಂಭವಾಗಿರುತ್ತದೆ.

ರಾಡಾರ್ ವಂಚಕ ಗೇರ್ ಇನ್ನೊಂದು ಯಶಸ್ವೀ ಯುದ್ಧತಂತ್ರ. ರಾಡಾರಿನ ಸಹಾಯದಿಂದ ವಿಮಾನ ಅಥವಾ ಹಡಗುಗಳನ್ನೂ ಪತ್ತೆಹಚ್ಚುವುದೇ ಅಲ್ಲದೆ, ಅವು ಇರಬಹುದಾದ ದೂರವನ್ನೂ ತಿಳಿಯಲು ಸಾಧ್ಯ. ರಾಡಾರಿನ ಪ್ರೇಷಕದಿಂದ ಹೊರಟ ರೇಡಿಯೋ ತರಂಗ, ಪ್ರತಿಫಲನಗೊಂಡು ಹಿಂತಿರುಗಿ ರಾಡಾರಿಗೆ ಬರಲು ತೆಗೆದುಕೊಳ್ಳುವ ಸಮಯವನ್ನು ನಿರ್ಧರಿಸುವುದರಿಂದ ಈ ದೂರವನ್ನು ಅಳೆಯಬಹುದು.

ಆದರೆ ಇದೇ ತತ್ತ್ವ ಮೋಸಮಾಡಲೂ ಸಹಾಯಕ. ಮೇಲಿನ ಯುದ್ಧತಂತ್ರದಲ್ಲಿ ಶತ್ರುವಿನ ರಾಡಾರಿನಿಂದ ಬರುವ ಶೋಧಕ ತರಂಗಗಳನ್ನು ವಿಮಾನದಲ್ಲಿರುವ ಗ್ರಾಹಕಗಳು, ಸ್ವಲ್ಪ ತಡಮಾಡಿ ಪ್ರತಿಫಲಿಸುತ್ತದೆ. ಇದರಿಂದ ವಿಮಾನ ಇರುವ ದೂರಕ್ಕಿಂತ ಹೆಚ್ಚು ದೂರದಲ್ಲಿ ಇರುವಂತೆ ಭಾಸವಾಗಿ ಸೂಕ್ತಕ್ರಮವನ್ನು ಕೈಗೊಳ್ಳಲು ಶತ್ರು ತಡಮಾಡಬಹುದು. ಈ ಕೆಲವು ನಿಮಿಷಗಳ ಅಥವಾ ಸಕೆಂಡುಗಳ ನಿಧಾನವೇ ಅವರಿಗೆ ಮಾರಕಪ್ರಾಯವಾಗಬಲ್ಲದು.

ಆಕ್ರಮಣಕಾರಿ ವಿಮಾನ ಅಥವಾ ಹಡಗಿನ ವಿರುದ್ಧ ಬಳಸಬಹುದಾದ ಅತ್ಯಂತ ಮಾರಕ ಹಾಗೂ ಯಶಸ್ವೀ ಅಸ್ತ್ರವೆಂದರೆ 'ಶಾಖದರ್ಶಿಕ್ಷಿಪಣಿ'. ಈ ಸಾಧನ ವಿಮಾನದಿಂದ ಉತ್ಪತ್ತಿಯಾಗುವ ಶಾಖವನ್ನು ಗುರುತಿಸಿ, ಶಾಖದ ಕೇಂದ್ರದತ್ತ ಅಪಾರ ವೇಗದಿಂದ ನುಗ್ಗಿ ಅದನ್ನು ನಾಶಮಾಡುತ್ತದೆ. ಇಂತಹ ಮಾರಕಾಸ್ತ್ರಗಳಿಂದ ತಪ್ಪಿಸಿಕೊಳ್ಳಲು ಹಲವಾರು ಉಪಾಯಗಳಿವೆ. ವಿಮಾನವೊಂದರತ್ತ, ಅದರ ಯಂತ್ರಗಳಿಂದ ಉತ್ಪತ್ತಿಯಾದ ಶಾಖದ ಜಾಡನ್ನು ಹಿಡಿದು, ಶಾಖದರ್ಶಿಕ್ಷಿಪಣಿಯೊಂದು ಧಾವಿಸುವುದು ವಿಮಾನ ಚಾಲಕನಿಗೆ ತಿಳಿದಕೂಡಲೇ, ಅತ್ಯಂತ ಶಾಖವುಳ್ಳ, ಅಪಾಯರಹಿತ ಆಸ್ಫೋಟನೆಯೊಂದನ್ನು ವಿಮಾನದಿಂದ ಸ್ವಲ್ಪ ದೂರದಲ್ಲಿ ಮಾಡುತ್ತಾನೆ. ವಿಮಾನದ ಯಂತ್ರಗಳ ಶಾಖಕ್ಕಿಂತ, ಈ ಆಸ್ಫೋಟನೆಯ ಶಾಖ ಅಧಿಕವಾಗಿರುವುದರಿಂದ, ಕ್ಷಿಪಣಿ ವಿಮಾನವನ್ನು ಬಿಟ್ಟು ಆಸ್ಫೋಟನೆಯ ಕೇಂದ್ರದತ್ತ ತಿರುಗಿ, ತನ್ನ ಗುರಿ ಕಳೆದುಕೊಂಡು ನಾಶವಾಗುತ್ತದೆ. ಇನ್ನೊಂದು ವಿಧಾನದಲ್ಲಿ ಕ್ಷಿಪಣಿ ವಿಮಾನದತ್ತ ಬರುತ್ತಿರುವಾಗ, ಚಾಲಕ ತಾತ್ಕಾಲಿಕವಾಗಿ ವಿಮಾನವನ್ನು ಸೂರ್ಯನತ್ತ ತಿರುಗಿಸಿ, ಸ್ವಲ್ಪಕಾಲದನಂತರ ಮತ್ತೆ ತನ್ನ ಮೊದಲಿನ ಪಥಕ್ಕೆ ಬರುತ್ತಾನೆ. ಈ ಬದಲಾವಣೆಯಲ್ಲಿ ಕ್ಷಿಪಣಿಯೂ ತನ್ನ ಹಾದಿಯನ್ನು ಬದಲಾಯಿಸುತ್ತದೆ. ಆದರೆ ಒಮ್ಮೆ ಸೂರ್ಯನತ್ತ ಹೊರಟು ಈ ಕ್ಷಿಪಣಿ, ಸೂರ್ಯನ ಶಾಖ ವಿಮಾನದ ಶಾಖಕ್ಕಿಂತ ಅಧಿಕವಾಗಿರುವುದರಿಂದ, ತನ್ನ ಪಥವನ್ನು ಬದಲಿಸದೆ ಸೂರ್ಯನತ್ತ ಧಾವಿಸಿ ನಾಶವಾಗುತ್ತದೆ. ಇದೇ ರೀತಿಯಲ್ಲಿ ನೌಕಾಯುದ್ಧದಲ್ಲಿ ಕೂಡ ಕೃತಕಶಾಖ ಕೇಂದ್ರಗಳ ಸೃಷ್ಟನೆಯಿಂದ, ಈ ಕ್ಷಿಪಣಿಗಳಿಂದ ತಪ್ಪಿಸಿಕೊಳ್ಳಲು ಸಾಧ್ಯ. ಈ ಉಪಾಯಗಳು ಯಶಸ್ವಿಯಾಗಬೇಕಾದಲ್ಲಿ ಕ್ಷಿಪಣಿ ಬರುತ್ತಿರುವುದನ್ನು ಬಹಳ ಮುಂಚೆಯೇ ಪತ್ತೆಹಚ್ಚುವ ಸಮರ್ಥ ಉಪಕರಣಗಳು ಅವಶ್ಯಕ. ಶಾಖದರ್ಶಿ ಕ್ಷಿಪಣಿ ಗುರಿಯುತ್ತ ಧಾವಿಸುವಾಗ ಅದರಿಂದ ಹೊರಡುವ ತರಂಗಗಳಿಂದ ಮಾತ್ರ ಅವನ್ನು ಗುರುತಿಸಲು ಸಾಧ್ಯ. ಆದರೆ ಇತ್ತೀಚೆಗೆ ಕ್ಷಿಪಣಿಯಿಂದ ಹೊರಡುವ ಎಲ್ಲ ತರಂಗಗಳನ್ನೂ ಉಪಕರಣಗಳಿಂದ ಪ್ರತಿಬಂಧಿಸಲಾಗುತ್ತದೆ. ಆದುದರಿಂದ ಕ್ಷಿಪಣಿಗಳನ್ನು ಮುಂಚಿತವಾಗಿಯೇ ಗುರುತಿಸುವ ಕೆಲಸ ಅತ್ಯಂತ ಕಷ್ಟಸಾಧ್ಯ.

ಯುದ್ಧ ಸಜ್ಜಿತ ವಿಮಾನಗಳನ್ನು ನಿರ್ಮಿಸುವಾಗ ವಿಮಾನದ ಭಾಗಗಳು ಆದಷ್ಟು ಕಡಿಮೆ ರೇಡಿಯೋ ತರಂಗಗಳನ್ನು ಪ್ರತಿಫಲಿಸುವಂತೆ ಯೋಜಿಸಲಾಗುತ್ತದೆ. ಇದರೊಡನೆ, ಯಂತ್ರಗಳನ್ನು ಶಾಖ ಕಡಿಮೆಮಾಡುವ ಉಪಕರಣಗಳಿಂದ ಸುತ್ತುಗಟ್ಟಿರುತ್ತಾರೆ. ಅಪಾರವೇಗದಿಂದ ವಿಮಾನ ಹಾರುವಾಗ ವಿಮಾನದ ನಿರ್ದಿಷ್ಟಭಾಗಗಳು ಅತ್ಯಂತ ಹೆಚ್ಚಿನ ಶಾಖದ ಕೇಂದ್ರಗಳಾಗುತ್ತವೆ. ಇಂತಹವನ್ನು ಕಡಿಮೆಮಾಡಬೇಕಾದುದು ಅತ್ಯವಶ್ಯಕ. ರೇಡಿಯೋ ತರಂಗಗಳನ್ನು ಪ್ರತಿಫಲಿಸದ ಸಂಪೂರ್ಣವಾಗಿ ಹೀರಿಕೊಳ್ಳುವ ವಸ್ತುಗಳ ಬಗೆಗೆ ಸಂಶೋಧನೆಗಳು ನಡೆಯುತ್ತಿವೆ. ಅಮೆರಿಕದ ವಿಮಾನದಳದವರು ಇಂತಹ ಒಂದು ವಸ್ತುವನ್ನು ಈಚೆಗೆ ಕಂಡುಹಿಡಿದು ಪರೀಕ್ಷಿಸುತ್ತಿದ್ದಾರಂತೆ. ಇದರಿಂದ ರಾಡಾರಿನ ಕಾರ್ಯವ್ಯಾಪ್ತಿ ಕಡಿಮೆಯಾಗಬಹುದು.

'ಎಲೆಕ್ಟ್ರಾನಿಕ್ ಪ್ರತಿ-ಪ್ರತಿರೋಧ ತಂತ್ರ' ರಕ್ಷಣಾದಳದವರು ಆಕ್ರಮಣಕಾರಿಯ ಪ್ರತಿರೋಧ ತಂತ್ರಕ್ಕೆ ಪ್ರತಿಯಾಗಿ ಬಳಸುವ ಯುದ್ಧ ರೀತಿ. ವೈರಿಯ ಪ್ರತಿಯೊಂದು ಉಪಾಯಕ್ಕೂ ಮತ್ತೊಂದು ಪ್ರತ್ಯುಪಾಯ ಇದ್ದೇ ತೀರುತ್ತದೆ. ಈ ಪ್ರತ್ಯುಪಾಯ ಅವರು ಬಳಸುವ ಉಪಕರಣ, ಅದರ ಸಾಮರ್ಥ್ಯ, ಸಾಧನದ ಕಾರ್ಯ ನಿರ್ದೇಶಿಸುವ ವ್ಯಕ್ತಿಯ ಅನುಭವ, ನಿಪುಣತೆಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ವಿಮಾನವೊಂದನ್ನು ರಾಡಾರ್ ಗುರುತಿಸಿದಾಗ, ಅದರಿಂದ ತಪ್ಪಿಸಿಕೊಳ್ಳಲು ಚಾಲಕ ಲೋಹದ ಪಟ್ಟಿಗಳನ್ನು ವಿಸರ್ಜಿಸಿ, ರಾಡಾರ್ ತೆರೆಯಮೇಲೆ ಅಸಂಖ್ಯ ಪ್ರತಿಬಿಂಬಗಳನ್ನು ಮೂಡಿಸಿ, ಗುರುತಿಸುವುದನ್ನು ಅಸಾಧ್ಯವನ್ನಾಗಿ ಮಾಡುತ್ತಾನೆ ಎಂದು ಈ ಮೊದಲೇ ಹೇಳಿದೆ. ಆದರೆ ನುರಿತ ರಾಡಾರ್ ತಂತ್ರಜ್ಞನೊಬ್ಬ, ಪ್ರತಿಬಿಂಬಗಳ 'ವೇಗದ ವೆಕ್ಟರ್' ಸಹಾಯದಿಂದ ವಿಮಾನವನ್ನು, ಲೋಹದ ಪಟ್ಟಿಗಳಿಂದ ಬೇರ್ಪಡಿಸಿ ಗುರುತಿಸಬಲ್ಲ. ರಾಡಾರಿನ ತರಂಗವನ್ನು ಅನುಸರಿಸಿ ವೈರಿ ಧಾಳಿಗೆ ಬರುತ್ತಿರುವಾಗ, ರಾಡಾರಿನ ತರಂಗಗಳ ಕಂಪನಾಂಕ, ದಿಕ್ಕುಗಳನ್ನು ಒಮ್ಮೆಗೇ ಬದಲಿಸಿ ವೈಮಾನಿಕನನ್ನು ಗಲಿಬಿಲಿಮಾಡಬಹುದು. ತಪ್ಪು ನಿರ್ದೇಶನಗಳನ್ನಿತ್ತು ಅವನ ಗುರಿಯನ್ನು ಬದಲಿಸಿ ಅಪಾಯಕ್ಕೀಡು ಮಾಡಬಹುದು. ಶಾಖದರ್ಶಿಕ್ಷಿಪಣಿಗಳಿಂದ ತಪ್ಪಿಸಿಕೊಳ್ಳಲು ವೈಮಾನಿಕ ಸೂರ್ಯನತ್ತ ತಿರುಗಿದರೆ, ಕ್ಷಿಪಣಿಯಲ್ಲಿ 'ಸ್ಮರಣ ಪಥ'ಗಳನ್ನು ಜೋಡಿಸುವುದರಿಂದ, ವಿಮಾನ ಎತ್ತೆತ್ತ ತಿರುಗಿದರೂ, ಕ್ಷಿಪಣಿಯೂ ಅತ್ತಕಡೆಗೇ ತಿರುಗುವಂತೆ ಮಾಡಿ ವಿಮಾನವನ್ನು ನಾಶಮಾಡಬಹುದು. ಸಂಪರ್ಕವ್ಯವಸ್ಥೆಯಲ್ಲಿ ಸುದ್ದಿಗಳನ್ನು ಕಳುಹಿಸುವಾಗ 'ಸ್ಥಾನಚೆದರಿಕ' ವಿಧಾನದಿಂದ ಕಳುಹಿಸಿದಾಗ, ಅವನ್ನು ತಡೆಯುವುದು, ಬದಲಿಸುವುದು, ಸಂಕೇತಗಳನ್ನು ಬಿಡಿಸುವುದು ಕಷ್ಟವಾಗುತ್ತದೆ. ನಿಷ್ಕ್ರಿಯ ಯುದ್ಧದಲ್ಲಿ ತೊಡಗಿರುವ ವಿಮಾನವೊಂದು ಗಡಿಯಲ್ಲಿ ಹಾರಿದಾಗ ಅಲ್ಲಿನ ಸಂಪರ್ಕ ವ್ಯವಸ್ಥೆಗಳನ್ನು, ರಾಡಾರ್ ನೆಲೆಗಳನ್ನು ಕ್ಷಣಕಾಲ ಸ್ತಬ್ಧವಾಗಿರುವುದರಿಂದ ಶತ್ರುವಿಗೆ ಯಾವ ಮಾಹಿತಿಯೂ

ದೊರೆಯದಂತೆ ಮಾಡಬಹುದು. ರಷ್ಯದ ಉಪಗ್ರಹ ಅಮೆರಿಕದಮೇಲೆ ಹಾದು ಹೋಗುವಾಗ ಈ 'ತಾತ್ಕಾಲಿಕ ಸ್ಥಗಿತ' ನೀತಿಯನ್ನು ಅನುಸರಿಸಲಾಗುತ್ತದೆ.

ಎಲೆಕ್ಟ್ರಾನಿಕ್ ಸಮರದಲ್ಲಿ, ಸಾಧನಗಳ ಹಿಂದಿದ್ದು ಅವುಗಳನ್ನು ನಿರ್ದೇಶಿಸುವ ವ್ಯಕ್ತಿಗಳು, ಈ ಉಪಕರಣಗಳಷ್ಟೇ ಮುಖ್ಯ. ಈ ವ್ಯಕ್ತಿಗಳ ಚುರುಕು, ಕುಶಲತೆ, ಅನುಭವಗಳು ದೇಶದ ರಕ್ಷಣಾವಿಭಾಗಕ್ಕೆ ಅತ್ಯಮೂಲ್ಯವಾದ ಆಸ್ತಿ. ಎರಡು ದೇಶಗಳ ನಡುವಿನ ಸಮರದಲ್ಲಿ ಪ್ರಬಲವಾದ ಎಲೆಕ್ಟ್ರಾನಿಕ್ ಭೂಮಿಕೆ ಹೊಂದಿರುವ ದೇಶ ಮೇಲುಗೈ ಪಡೆಯುವುದರಿಂದ, ದೇಶವೊಂದು ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಈ ವಿಭಾಗಕ್ಕೆ ಹೆಚ್ಚಿನ ಗಮನಕೊಡಬೇಕಾದುದು ಅತ್ಯವಶ್ಯಕ.

ಬದುಕು

ಎಚ್. ಎಚ್. ಗಂಗಾಧರಾಚಾರ್

ದುಡಿದು ತಿನ್ನುವ, ತಿಂದು ಬದುಕುವ
ಬದುಕಿ ಸಾಯುವ ಅನಿವಾರ್ಯತೆಗಳಿಗೆ ಅಂಟಿಕೊಂಡು
ಅರ್ಥಕಾಮಗಳೆಂಬ ಮೆಟ್ಟಲುಗಳನ್ನೇರಲು
ಕ್ಷಣಕ್ಷಣಕ್ಕೂ ಕುದಿಯುತ್ತೇವೆ.
ಹಿಂಗದ ದಾಹಕ್ಕೆ ವೈರಕ್ತ ಬಸಿಯುತ್ತೇವೆ.
ಸೃಷ್ಟಿಯ ಪ್ರತಿಕ್ಷಣದಲ್ಲಿ ಹುಟ್ಟುವ
ಪ್ರತಿಕೂಸೂ ಮುಟ್ಟುವ ಘಟ್ಟ ಇಷ್ಟೇ ಆದರೂ,
ದುರ್ಬಲ ಮತ್ತು ಪ್ರಬಲ, ಬಡವ ಮತ್ತು ಬಲ್ಲಿದ
ಏರುಪೇರು ತಲೆದೋರಿ
ತಕ್ಕಡಿ ದಂಡಿಗೆ ಸಮತಲ ನಿಲ್ಲುವುದಿಲ್ಲ ;
ಸಮತೆಗಾಗಿ ನಿರಂತರ ಹೋರಾಟವೂ ತಪ್ಪುವುದಿಲ್ಲ.
ಈ ಹೋರಾಟವೇ 'ಬದುಕು' ಎನ್ನೋಣವೆ ?
ಅಥವಾ ಬದುಕಿನ ವ್ಯಾಖ್ಯಾನ ವ್ಯರ್ಥವೆಂದುಕೊಂಡು
ಕಣ್ಣುಮುಚ್ಚಿ, ಬಂದದ್ದನ್ನೇ ಅನುಭವಿಸೋಣವೆ ?
ಬೆಟ್ಟಕ್ಕೆ ಕಲ್ಲು ಹೊತ್ತಹಾಗೆ,
ಸಮುದ್ರಕ್ಕೆ ನೀರು ಸುರಿದ ಹಾಗೆ,
ಬದುಕಿನುದ್ದಕ್ಕೂ ಪಡೆದ ಅನುಭವಗಳು
ಬದುಕಿನ ಚಕ್ರವ್ಯೂಹ ಭೇದಿಸಲಾಗದಿದ್ದಾಗ
ಅಸಹಾಯಕತೆ ಆವಿರ್ಭವಿಸುತ್ತದೆ ;
ಸಾಧನೆ ಶೂನ್ಯವೆನಿಸುತ್ತದೆ.

ಗಣಿತ ಭಾಷೆಯ ಬೀಜಾಕ್ಷರ: ಗಣ

ಡಿ. ಎಸ್. ನಾಗಭೂಷಣ

ಗಣಿತ ಶಾಸ್ತ್ರ ವಿಜ್ಞಾನಗಳಲ್ಲೆಲ್ಲಾ ಅತ್ಯಂತ ಮಹತ್ವದ ವಿಜ್ಞಾನವೆನಿಸಿದೆ. ಭೌತಶಾಸ್ತ್ರದಿಂದ ಹಿಡಿದು, ಉನ್ನತ ವೈದ್ಯ ವಿಜ್ಞಾನದವರೆಗೆ, ಅರ್ಥಶಾಸ್ತ್ರದಿಂದ ಹಿಡಿದು ಸಮಾಜಶಾಸ್ತ್ರದವರೆಗೆ, ಇದರ ಅನ್ವಯ ವ್ಯಾಪಿಸಿದೆ. ಗಣಿತ ಶಾಸ್ತ್ರವನ್ನು ಶುದ್ಧ ಗಣಿತ ಹಾಗೂ ಅನ್ವಯ ಗಣಿತವೆಂದು ಎರಡು ವಿಭಾಗಗಳನ್ನಾಗಿ ಮಾಡಿದ್ದರೂ, ಅದು ಗಣಿತ ಅಧ್ಯಯನದ ಆಂತರಿಕ ಅನುಕೂಲತೆಗಳ ದೃಷ್ಟಿಯಿಂದಲೇ ಹೊರತು, ಬೇರೆ ವಿಜ್ಞಾನಗಳಲ್ಲಿನ ಗಣಿತಶಾಸ್ತ್ರದ ಅನ್ವಯದ ದೃಷ್ಟಿಯಿಂದ ನೋಡಿದಾಗ, ಈ ವಿಭಾಗಗಳು ಅಪ್ರಸ್ತುತವಾಗಿ ಕಾಣುತ್ತದೆ. ಏಕೆಂದರೆ, ಗಣಿತದ ಮೂಲ ಲಕ್ಷಣ ವೆಂದರೆ ಅದು ವಾಹಕ ಗುಣ ಹೊಂದಿರುವುದು. ವಿದ್ಯುತ್ ಪ್ರವಹನಕ್ಕೆ ಒಂದು ಮಾಧ್ಯಮದ ಅವಶ್ಯಕತೆ ಇದ್ದಂತೆ, ಶಾಸ್ತ್ರೀಯ ನಿರೂಪಣೆಗೆ ಗಣಿತ ಶಾಸ್ತ್ರ ಮಾಧ್ಯಮವಾಗಿದೆ: ಅರ್ಥಾತ್ ಭಾಷೆಯಾಗಿದೆ. ಅದು ಶುದ್ಧ ಗಣಿತವೇ ಇರಲಿ, ಅಥವಾ ಅನ್ವಯ ಗಣಿತವೇ ಇರಲಿ—ಅದು ಕೊನೆಗೊಳ್ಳುವುದು ತನ್ನ ವಾಹಕ ಗುಣದಲ್ಲಿಯೇ! ಶುದ್ಧಗಣಿತ, ಅನ್ವಯಗಣಿತಕ್ಕಿಂತ ಬೇರೆಯಾಗಿರದೆ, ಅದು, ಅನ್ವಯ ಗಣಿತಶಾಸ್ತ್ರದ ನಿಲುವಿಗೆ ಅಗತ್ಯವಾದ ಮೂಲತತ್ವಗಳನ್ನು ಸಿದ್ಧಪಡಿಸುತ್ತದಷ್ಟೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಶುದ್ಧ ಗಣಿತ ಶಾಸ್ತ್ರದ ಅಮೂರ್ತತೆ, ಅನ್ವಯ ಗಣಿತ ಶಾಸ್ತ್ರದಲ್ಲಿ ಮೂರ್ತರೂಪ ಪಡೆದುಕೊಳ್ಳುತ್ತದಷ್ಟೆ.

ಗಣಿತವು ವಿಜ್ಞಾನದ ನಿರೂಪಣೆಗೆ ಭಾಷೆಯಾಗಿ ದುಡಿಯುವ ಒಂದು ಅಪೂರ್ವ ಶಾಸ್ತ್ರ. ಮೂಲ ಉದಾಹರಣೆಯಾಗಿಯೇ ತೆಗೆದುಕೊಂಡರೆ, ಲೆಕ್ಕಶಾಸ್ತ್ರದ 'ಅಂಕಿ'ಗಳು ಮತ್ತೇನೂ ಆಗಿರದೆ 'ವಸ್ತು'ವಿನ 'ಪ್ರಮಾಣ'ವನ್ನು ತಿಳಿಸುವ (ಗಣಿತೀಯ) 'ಶಬ್ದ'ಗಳಾಗಿವೆ. ಉನ್ನತ ವಿಜ್ಞಾನದಲ್ಲಿ ಕಂಡುಬರುವ ಇತರ 'ವಸ್ತು'ಗಳ ಬಗ್ಗೆ ವಿವರಗಳನ್ನು ನೀಡಲೂ ಸಹ ಗಣಿತ ಶಾಸ್ತ್ರವನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಈ ಶತಮಾನದಲ್ಲಿ ವಿಜ್ಞಾನ ಬೆಳೆಯುತ್ತಿರುವ ವೇಗ, ಅದು ಕಂಡುಕೊಳ್ಳುತ್ತಿರುವ ಆಳ, ವ್ಯಾಪಿಸುತ್ತಿರುವ ವಿಸ್ತಾರ ಹಾಗೂ ಪಡೆದುಕೊಳ್ಳುತ್ತಿರುವ ಅರ್ಥಗಳನ್ನು ಗಮನಿಸಿದಾಗ, ವಿಜ್ಞಾನದ ಉನ್ನತೋನ್ನತ ಪರಿಕಲ್ಪನೆಗಳ ನಿಖರ ಅಭಿವ್ಯಕ್ತಿಗೆ ಅತ್ಯಂತ ಬಿಗಿಯಾದ, ಸೂಕ್ಷ್ಮವಾದ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ವಿಜ್ಞಾನದ ಬೆಳವಣಿಗೆಯ ವೇಗಕ್ಕೆ ಪೂರಕವಾಗುವಂತೆ— ಸಂಕ್ಷಿಪ್ತವಾಗಿರುವ ಭಾಷೆಯು ಅಗತ್ಯದ

ಅರಿವಾಗುತ್ತದೆ. ಈ ಅಗತ್ಯದ ಅರಿವಿನಿಂದಲೇ ವಿಜ್ಞಾನಿಗಳು ಗಣಿತವನ್ನು ಅತ್ಯಂತ ದೃಢವಾದ ಭಾಷೆಯನ್ನಾಗಿ ಪರಿವರ್ತಿಸಲು ತಮ್ಮೆಲ್ಲಾ ಸಂಶೋಧನಾತ್ಮಕ ಪ್ರತಿಭೆಯನ್ನು ಮೀಸಲಿರಿಸಿದರು. ಆಶ್ಚರ್ಯಕರ ಸಂಗತಿಯೆಂದರೆ, ಗಣಿತವು ಇತರ ವಿಜ್ಞಾನಗಳಿಂದ ಪ್ರತ್ಯೇಕವಾಗಿ ನಿಲ್ಲದೆ, ತನ್ನನ್ನು ಉಪಯೋಗಿಸಿಕೊಳ್ಳಲೆಳಿಸುವ ಪರಿಕಲ್ಪನೆಗಳೊಂದಿಗೇ ಬೆಸೆದುಕೊಂಡು ನಡೆದಿದೆ. ಉದಾಹರಣೆಗೆ, ಉನ್ನತ ಮಟ್ಟದಲ್ಲಿ ಭೌತಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳನ್ನು ಪ್ರತ್ಯೇಕ ವಿಷಯಗಳೆಂದು ಕಾಣುವುದಿಲ್ಲ. ಅಲ್ಲದೆ ಹಿಂದಿನ ಎಲ್ಲಾ ಉನ್ನತ ಭೌತಶಾಸ್ತ್ರಜ್ಞರೂ ಉತ್ತಮ ಗಣಿತಜ್ಞರಾಗಿದ್ದರು. (ಹಾಗೇ ಎಲ್ಲಾ ಉನ್ನತ ಗಣಿತಜ್ಞರೂ ಪ್ರಸಿದ್ಧ ತತ್ವಜ್ಞಾನಿಗಳಾಗಿದ್ದರು!) ಇದಕ್ಕೆ ಕಾರಣವೆಂದರೆ ಗಣಿತಶಾಸ್ತ್ರ ಸಿದ್ಧ ಭಾಷೆಯಾಗಿರದೆ, ಹೊಸ ಹೊಸ ಪರಿಕಲ್ಪನೆಗಳು ಸೃಷ್ಟಿಯಾದಂತೆ, ಅವುಗಳ ಅಗತ್ಯಕ್ಕನುಗುಣವಾಗಿ ಗಣಿತ 'ಶಬ್ದ'ಗಳನ್ನು ಪರಸ್ಪರ ಘರ್ಷಿಸಿ ಹೊಸ ಹೊಸ ಹೊಳಹುಗಳನ್ನು ಕಾಣಬೇಕಾಗುತ್ತದೆ. ಈ ದಿಸೆಯಲ್ಲಿಯೇ ಚಲನ ಶಾಸ್ತ್ರದ ಜತೆಗೇ 'ಸದಿಶಾ' (Vector)ದ ಪರಿಕಲ್ಪನೆಯೂ, ಸ್ಥಿತಿಸ್ಥಾಪಕತ್ವ ಹಾಗೂ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತದ ಜತೆಗೇ 'ಬಿಗುಕ' (tensor) ದಂತಹ ಗಣಿತೀಯ ಪರಿಕಲ್ಪನೆಗಳು ಸೃಷ್ಟಿಯಾದವು. ಚಲನ ಶಾಸ್ತ್ರವನ್ನು 'ಸದಿಶಾ'ಎಂಬ ಗಣಿತೀಯ ಸಾಂಕೇತಿಕ ಶಬ್ದ/ಪರಿಕಲ್ಪನೆಯ ಮೂಲಕವೂ, ಸ್ಥಿತಿಸ್ಥಾಪಕತ್ವ ಹಾಗೂ ಸಾಪೇಕ್ಷ ಸಿದ್ಧಾಂತಗಳನ್ನು, 'ಬಿಗುಕ'ಗಳೆಂಬ ಗಣಿತೀಯ ಶಬ್ದಗಳ ಮೂಲಕ ಅಭಿವ್ಯಕ್ತಗೊಳಿಸಲಾಗುವುದು.

ಆದರೆ ಗಣಿತ ಶಾಸ್ತ್ರವನ್ನು ವಿಜ್ಞಾನದ ಅಭಿವ್ಯಕ್ತಿ ಮಾಧ್ಯಮವೆಂದು ಸಮಗ್ರವಾಗಿ ಅವಲೋಕಿಸಿದಾಗ ಕಂಡುಬರುವ ಗಮನಾರ್ಹ ಅಂಶವೆಂದರೆ, ಈ ಗಣಿತ ಭಾಷೆಯ ಅಕ್ಷರಮಾಲೆ ಏಕಾಕ್ಷರಿಯಾಗಿರುವುದು. ಮೇಲೆ ಉದಾಹರಿಸಿದ ಗಣಿತೀಯ ಶಬ್ದಗಳೂ ಸೇರಿದಂತೆ ಎಲ್ಲಾ ಗಣಿತೀಯ ಶಬ್ದಗಳೂ ಈ ಏಕಾಕ್ಷರದಿಂದಲೇ ಉದ್ಭವವಾಗಿರುವುದು. ಗಣಿತ ಭಾಷೆಯ ಈ ಏಕಾಕ್ಷರವೇ 'ಗಣ' ಎಂಬುದು. ಸಾಹಿತ್ಯ ಭಾಷೆಯೂ ಸೇರಿದಂತೆ ಮತ್ತಾವ ಭಾಷೆಗೂ ಈ ವಿಶೇಷ ಗುಣವಿರುವುದು ಕಂಡುಬರುವುದಿಲ್ಲ. ಇದು ಗಣಿತ ಭಾಷೆಯ ಅನನ್ಯ ಗುಣವಾಗಿದೆ. ಗಣಿತ ಭಾಷೆಯ ಸಂಕ್ಷಿಪ್ತತೆ ಹಾಗೂ ನಿಖರತೆಗಳು ಅಡಗಿರುವುದೇ ಈ ಅನನ್ಯ ಗುಣದಲ್ಲಿ!

'ಗಣ'ವೆಂದರೆ ಮತ್ತೇನೂ ಆಗಿರದೆ, ಸಾಮಾನ್ಯವಾಗಿ ಅರ್ಥವಾಗುವಂತೆಯೇ ಹೆಚ್ಚು ಕಡಿಮೆ, 'ಗುಂಪು', 'ಸಂಗ್ರಹ' ಅಥವಾ 'ಸಮುಚ್ಚಯ' ಎಂದರ್ಥವಾಗುತ್ತದೆ. ಆದರೆ ವಿಜ್ಞಾನಗಳಲ್ಲೆಲ್ಲಾ ಅತ್ಯಂತ ಶಿಸ್ತುಪೂರ್ಣ ಶಾಸ್ತ್ರವೆನಿಸಿರುವ ಗಣಿತದಲ್ಲಿ 'ಹೆಚ್ಚು ಕಡಿಮೆ' ಎಂಬ ಪದಕ್ಕೆ ಆಸ್ಪದವೇ ಇಲ್ಲ! ಗಣಿತಾರ್ಥದ ಆವರಣದಲ್ಲಿ 'ಗಣ' ಎಂಬುದು, 'ಗುಂಪು', 'ಸಂಗ್ರಹ' ಅಥವಾ 'ಸಮುಚ್ಚಯ'ಗಳಿಗಿಂತ ಹೆಚ್ಚು ನಿಖರವಾದ ಹಾಗೂ ಸ್ಪಷ್ಟವಾದ ಅರ್ಥಪಡೆದಿದೆ. ಉದಾಹರಣೆಗೆ ನಾಲ್ಕು ಸೀಸದ

ಕಡ್ಡಿಗಳ ಸಂಗ್ರಹ 'ಗಣ' ಎಂದೆನಿಸಿಕೊಳ್ಳುತ್ತದೆ; ಆದರೆ ಬಾಲವಿರುವ ನಾಲ್ಕು ಮಂದಿ ಮನುಷ್ಯರ ಗುಂಪು 'ಗಣ' ಎನಿಸಿಕೊಳ್ಳುವುದಿಲ್ಲ. ಈ ಎರಡು ಉದಾಹರಣೆಗಳನ್ನಿಟ್ಟುಕೊಂಡು ಈಗ 'ಗಣ'ದ ಗೂಢಾರ್ಥವನ್ನು ವ್ಯಾಖ್ಯಾನಿಸೋಣ. ನಾಲ್ಕು ಸೀಸದ ಕಡ್ಡಿಗಳ ಸಂಗ್ರಹವನ್ನೇ ತೆಗೆದುಕೊಳ್ಳಿ. ಅವುಗಳಲ್ಲಿ ಒಂದು ನೀಲಿ, ಒಂದು ಕೆಂಪು, ಒಂದು ಹಸಿರು ಮತ್ತು ಒಂದು ಕಪ್ಪು ಬಣ್ಣದ್ದಾಗಿರಲಿ. ಈ ವಿವಿಧ ಬಣ್ಣದ ಪ್ರತಿಯೊಂದು ಸೀಸದ ಕಡ್ಡಿಯನ್ನೂ ಆ ಸಂಗ್ರಹದ 'ಮೂಲಾಂಶ' ಎಂದು ಕರೆಯೋಣ (ಕರೆಯಲಾಗುತ್ತದೆ). ಸೀಸದಕಡ್ಡಿ ಎಂಬುದು ನಮಗೆ ಚಿರಪರಿಚಿತವಾಗಿರುವ ಮತ್ತು ಅದರ ಲಕ್ಷಣದ ಬಗ್ಗೆ ನಮ್ಮಲ್ಲಿ ಯಾವ ಆಶ್ಚರ್ಯ, ಪ್ರಶ್ನೆ ಅಥವಾ ಸಂಶಯವನ್ನು ಹುಟ್ಟಿಸದ ವಸ್ತುವಾಗಿದೆ. ಈ ದೃಷ್ಟಿಯಿಂದ ಎರಡನೇ ಸಂಗ್ರಹವನ್ನು ಗಮನಿಸೋಣ. **ಬಾಲವಿರುವ ನಾಲ್ಕು ಜನರು!** ಈ ಪದ ಸಮುಚ್ಚಯವೇ ನಮ್ಮಲ್ಲಿ ಆಶ್ಚರ್ಯ, ಪ್ರಶ್ನೆ ಹಾಗೂ ಸಂಶಯಗಳನ್ನು ಹುಟ್ಟಿಸುತ್ತದೆ! ಮನುಷ್ಯನಿಗೆ ಬಾಲವಿರುತ್ತಸೆಯೇ? ಬಾಲವಿದ್ದಲ್ಲಿ, ಆ ಪ್ರಾಣಿಯನ್ನು ಮನುಷ್ಯ ಎಂದ ಕರೆಯಲು ಸಾಧ್ಯವೇ? 'ಮನುಷ್ಯ' ಎಂದೊಡನೆ ನಮ್ಮ ಮುಂದೆ ಚಿತ್ರಿತವಾಗುವುದಕ್ಕಿಂತ ಅಥವಾ ಅರ್ಥವಾಗುವುದಕ್ಕಿಂತ, ಈ ಸಂಗ್ರಹದ ಮೂಲಾಂಶಗಳು ಭಿನ್ನವಾಗಿವೆ. ಅರ್ಥಾತ್ ಈ ಸಂಗ್ರಹದ ಮೂಲಾಂಶಗಳು ಸಂದಿಗ್ಧಾರ್ಥ ಹೊಂದಿವೆ. ಆದುದರಿಂದ ಈ ಎರಡನೇ ಸಂಗ್ರಹವನ್ನು ಗಣವೇದು ಕರೆಯಲಾಗುವುದಿಲ್ಲ. ಅಂದರೆ, ಈ ಎರಡೂ ಸಂಗ್ರಹಗಳ ಪರಿಶೀಲನೆಯಿಂದ ನಮಗೆ ವ್ಯಕ್ತವಾಗುವ ಅಂಶವಿಷ್ಟು: ಒಂದು ಸಂಗ್ರಹ ಗಣ ಎನಿಸಿಕೊಳ್ಳಬೇಕಾದರೆ, ಅದರ ಪ್ರತಿಯೊಂದು ಮೂಲಾಂಶವೂ ಸುವ್ಯಾಖ್ಯಿತ (well defined) ವಾಗಿರಬೇಕು. ಗಣಗಳ ಉದಾಹರಣೆ ಹೇಳಬೇಕಾದರೆ, ಹಿಂದೆ ನೀಡಿದ ಸೀಸದ ಕಡ್ಡಿಗಳ ಉದಾಹರಣೆಯಂತೆಯೇ ಹಲವಾರನ್ನು ಹೇಳಬಹುದು: (i) ಭಾರತದ ದಕ್ಷಿಣ ರಾಜ್ಯಗಳ ಗಣ, (ii) ಆಕಾಶದಲ್ಲಿನ ನಾಲ್ಕು ನಕ್ಷತ್ರಗಳ ಗಣ, (iii) 6 ಕ್ಕಿಂತ ಹೆಚ್ಚು ಆದರೆ 12 ಕ್ಕಿಂತ ಕಡಿಮೆ ಇರುವ ಪೂರ್ಣಾಂಕಗಳ ಗಣ—ಹೀಗೇ ಬೇಕಾದಷ್ಟು ಗಣಗಳ ಉದಾಹರಣೆ ಕೊಡಬಹುದು. ಈ ಮೇಲಿನ ಉದಾಹರಣೆಗಳಲ್ಲಿ, ಕ್ರಮವಾಗಿ ರಾಜ್ಯಗಳು, ನಕ್ಷತ್ರಗಳು, ಹಾಗೂ 7, 8, 9, 10, 11—ಈ ಅಂಕಗಳು ಆಯಾ ಗಣಗಳ ಮೂಲಾಂಶಗಳೆಂಬುದನ್ನು ಗಮನಿಸಿ. ಗಣಿತದಲ್ಲಿ, ಗಣವೊಂದನ್ನು, ಆ ಗಣದ ಮೂಲಾಂಶಗಳನ್ನು ಬಿಡಿ ಬಿಡಿಯಾಗಿ ಪುಷ್ಪಾವರಣಗಳ ನಡುವೆ ಬರೆಯುವುದರ ಮೂಲಕ ಅಭಿವ್ಯಕ್ತಿಸುತ್ತೇವೆ.

ಉದಾಹರಣೆಗೆ ಮೇಲೆ ತಿಳಿಸಿದ (iii) ನೇ ಗಣವನ್ನು ಹೀಗೆ ಗುರುತಿಸುತ್ತೇವೆ:

$$\{7, 8, 9, 10, 11\}$$

ಅಥವಾ ಈ ಗಣಕ್ಕೆ, ಇಷ್ಟಬಂದ ಸಂಕ್ಷಿಪ್ತವಾದ ಹೆಸರೊಂದನ್ನಿಟ್ಟು–ಉದಾಹರಣೆಗೆ ಮೇಲಿನ ಗಣಕ್ಕೆ N ಎಂದು ಹೆಸರಿಡೋಣ–ಹೀಗೆ ಬರೆಯುತ್ತೇವೆ:

N : {7, 8, 9, 10, 11}

ಹೀಗೆಯೇ (i) ನೇ ಗಣಕ್ಕೆ S ಎಂದು ಹೆಸರಿಟ್ಟು ಹೀಗೆ ಗುರುತಿಸಬಹುದು :

S : {ಕರ್ನಾಟಕ, ಆಂಧ್ರ, ಕೇರಳ, ತಮಿಳುನಾಡು}

ಮೇಲಿನ N ಮತ್ತು S ಎಂಬ ಎರಡು ಗಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಗಣದ ಬಗ್ಗೆ ಮತ್ತಷ್ಟು ತಿಳಿಯೋಣ. ಮೇಲಿನ N ಗಣದ ಮೂಲಾಂಶಗಳು ಎಲ್ಲಿಂದ ಬಂದಿವೆ ? ಅವು ಬಹು ವಿಸ್ತಾರವಾದ ಪೂರ್ಣಾಂಕಗಳ (integers) ಗಣದ ಮೂಲಾಂಶಗಳಾಗಿವೆ.

ಪೂರ್ಣಾಂಕಗಳ ಗಣವನ್ನು (ಅದನ್ನು M ಎಂದು ಕರೆಯೋಣ) ಹೀಗೆ ಬರೆಯಬಹುದು.

M : {.........–n,.........–2, –1, 0, 1, 2,.........n,......}

M ಎಂಬುದು ಅಮಿತ ಗಣ (Infinite set) ; ಏಕೆಂದರೆ ಅದರ ಮೂಲಾಂಶಗಳು ಅಮಿತವಾಗಿವೆ ! ಆದುದರಿಂದ M ಎಂಬುದು N ನಂತಹ ಪುಟ್ಟ ಗಣಗಳನ್ನು ಒಳಗೊಂಡಿದ್ದು, ಅಂತಹ ಗಣಗಳಿಗೆ 'ವಿಶ್ವರೂಪಿ' ಯಾಗಿದೆ ! ಆದುದರಿಂದ M ಅನ್ನು N ನ 'ವಿಶ್ವಗಣ' ಎಂದು ಕರೆಯುತ್ತೇವೆ. ಹಾಗೆಯೇ ಮೇಲೆ ನಮೂದಿಸಿದ S ಗಣಕ್ಕೆ, ಭಾರತದ ಎಲ್ಲಾ ರಾಜ್ಯಗಳನ್ನೂ ಮೂಲಾಂಶಗಳನ್ನಾಗುಳ್ಳ ಗಣವು ವಿಶ್ವಗಣವಾಗಿದೆ. ಆಕಾಶದಲ್ಲಿನ ನಾಲ್ಕು ನಕ್ಷತ್ರಗಳ ಗಣಕ್ಕೆ ಆಕಾಶದ ಎಲ್ಲಾ ನಕ್ಷತ್ರಗಳಿಂದಾದ ಗಣವು ವಿಶ್ವಗಣವಾಗಿದೆ.

ಗಣ ಹಾಗೂ ಅದರ ವಿಶ್ವಗಣದ ನಡುವಣ ಸಂಬಂಧಕ್ಕೆ ಪೂರಕಗಣ ಎಂಬುದು ಅರ್ಥ ತುಂಬುತ್ತದೆ. ಒಂದು ಗಣದ ಮೂಲಾಂಶಗಳನ್ನು ವಿಶ್ವಗಣದಿಂದ ಹೊರತೆಗೆದಾಗ ವಿಶ್ವಗಣದಲ್ಲಿ ಉಳಿದುಹೋದ ಮೂಲಾಂಶಗಳಿಂದಾದ ಗಣವೇ ಆ ಮೊದಲ ಗಣದ ಪೂರಕಗಣ.

ಉದಾಹರಣೆಗೆ N ನ ಪೂರಕಗಣ - ಅದನ್ನು N^1 ಎಂದು ಬರೆಯೋಣ—

N^1 = {..... —n,... —2,-1,0,1,2,3,4,5,6,12,13,...n,...}

ಗಣ ಎಂದಾಕ್ಷಣ ಅದರಲ್ಲಿ ಬಹು ಮೂಲಾಂಶಗಳೇ ಇರಬೇಕೆಂದೇನೂ ವ್ಯಾಖ್ಯೆ ಮಾಡಿಲ್ಲವಲ್ಲ! ಮೂಲಾಂಶವು ಸುವ್ಯಾಖ್ಯಿತವಾಗಿರಬೇಕಷ್ಟೆ. ಈಗ ಧನಾತ್ಮಕ (positive) ಪೂ ಆಗಿರದ ಮತ್ತು ಋಣಾತ್ಮಕ (negative) ಪೂ

ಆಗಿರದ ಸಂಖ್ಯೆಗಳ ಗಣವನ್ನು ಪರಿಶೀಲಿಸೋಣ. ಈ ಎರಡೂ ಗುಣಗಳನ್ನು ಹೊಂದಿರುವ ಏಕೈಕ ಸಂಖ್ಯೆ ಎಂದರೆ 0 (ಸೊನ್ನೆ) ಮಾತ್ರ! ಈ ಗಣವನ್ನು Z ಎಂದು ಕರೆಯೋಣ. Z : {0}

ಇಂತಹ (ಅಂದರೆ, ಒಂದೇ ಒಂದು ಮೂಲಾಂಶವಿರುವ) ಗಣವನ್ನು ಏಕಾಂಶ (Singleton) ಗಣವೆಂದು ಕರೆಯಲಾಗುವುದು.

ಇನ್ನೂ ಆಶ್ಚರ್ಯದ ಸಂಗತಿಗೆ ಬರೋಣ. 3 ಕ್ಕಿಂತ ಹೆಚ್ಚು, ಆದರೆ 4ಕ್ಕಿಂತ ಕಡಿಮೆ ಇರುವ **ಪೂರ್ಣಾಂಕ**ಗಳ ಗಣವನ್ನು ಪರಿಶೀಲಿಸೋಣ. ಯೋಚಿಸಿ! 3 ಮತ್ತು 4 ರ ನಡುವೆ ಯಾವುದೇ ಪೂರ್ಣಾಂಕವಿಲ್ಲ. ಏಕೆಂದರೆ ಮೂರರನಂತರದ ಪೂರ್ಣಾಂಶವೆಂದರೆ ನಾಲ್ಕೇ! ಆದುದರಿಂದ ಪ್ರಸ್ತುತ ಗಣದಲ್ಲಿ ಒಂದು ಮೂಲಾಂಶವೂ ಇಲ್ಲ ; ಶೂನ್ಯ ! ಇಂತಹ ಗಣಗಳನ್ನು ಶೂನ್ಯ ಗಣ (Null set) ಎಂದು ಕರೆಯುಲಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಶೂನ್ಯ ಗಣಗಳನ್ನೂ ϕ (ಫೈ) ಎಂಬ ಚಿಹ್ನೆಯಿಂದ ಗುರುತಿಸುವ ರೂಢಿಯಿದೆ.

ಈಗ ಮೇಲೆ ತಿಳಿಸಿದ N ಗಣವನ್ನು ತೆಗೆದುಕೊಳ್ಳೋಣ.

N : {6,7,8,9,10,11}

N_1 ಎಂಬುದು ಮತ್ತೊಂದು ಗಣವಾಗಿರಲಿ.

N_1 : {7, 9, 10}

N ಮತ್ತು N_1 ನಡುವಣ ಸಂಬಂಧವೇನು ? ಇವನ್ನು ನೀವು ಗಮನಿಸಿರಬೇಕು. N_1 ಗಣದ ಪ್ರತಿ ಮೂಲಾಂಶವೂ N ಗಣದ ಮೂಲಾಂಶವಾಗಿದೆ. ಅಂದರೆ N_1 ಗಣವು N ಗಣದ ಒಂದು ಭಾಗವಾಗಿದೆ. ಗಣಿತದ ಪರಿಭಾಷೆಯಲ್ಲಿ N_1 ಗಣವು N ಗಣದ ಉಪಗಣವಾಗಿದೆ ಎಂದು ಕರೆಯಲಾಗುತ್ತದೆ. ಸಾಂಕೇತಿಕವಾಗಿ ಅದನ್ನು $N_1 \subset N$ ಎಂದು ಬರೆಯಲಾಗುತ್ತದೆ.

ಈಗ ಗಣ ಸಿದ್ಧಾಂತದ ಪ್ರಮುಖ ವಿಷಯಕ್ಕೆ ಬರೋಣ. ಎರಡು ಗಣಗಳ ಸೇರ್ಪಡೆ ಅಥವಾ ವಿಲೀನ ಎಂದರೇನು ? ಉದಾಹರಣೆಗೆ,

P : {1, 2, 3, 4} ಹಾಗೂ Q : {1, 3, 7, 8, 9} ಎಂಬ ಎರಡು ಗಣಗಳಿರಲಿ.

ಆಗ ಈ ಎರಡು ಗಣಗಳ ಸೇರ್ಪಡೆಯನ್ನು ಹೀಗೆ ಬರೆಯುತ್ತೇವೆ :

$P \cup Q$: {1, 2, 3, 4, 7, 8, 9}

ಅಂದರೆ, $P \cup Q$ ಎಂಬುದು ಮತ್ತೊಂದು ಗಣವಾಗಿದ್ದು, ಈ ಸೇರ್ಪಡೆಯನ್ನು 'ಸಂಯೋಗ'ವೆಂದೂ, $(P \cup Q)$ ಎಂಬುದನ್ನು 'P ಸಂಯೋಗ Q' ಎಂದು ಓದಲಾಗುತ್ತವೆ. $\cup$ ಚಿಹ್ನೆಯು ಸಂಯೋಗವನ್ನು ಪ್ರತಿನಿಧಿಸುತ್ತದೆ.

$P \subset (P \cup Q)$

ಮತ್ತು $Q \subset (P \cup Q)$ ಎಂಬುದನ್ನು ಗಮನಿಸಿ.

ಎರಡು ಗಣಗಳ ನಡುವಣ ಸಂಯೋಗ ಪ್ರಕ್ರಿಯೆಯಂತೆಯೇ, P ಮತ್ತು Qಗಳ ನಡುವಣ ಮತ್ತೊಂದು ಪ್ರಕ್ರಿಯೆ ಎಂದರೆ, ಎರಡೂ ಗಣಗಳಲ್ಲಿ ಸಾಮಾನ್ಯವಾಗಿರುವ ಮೂಲಾಂಶಗಳ ಗಣ. ಉದಾಹರಣೆಗೆ ಮೇಲಿನ P ಮತ್ತು Q—ಈ ಎರಡರಲ್ಲೂ ಇರುವ ಮೂಲಾಂಶಳು ಯಾವುವು ? ಅವು : 1, 3.

ಈ ಗಣವನ್ನು ನಾವು $P \cap Q : \{1, 3\}$ ಎಂದು ಬರೆಯುತ್ತೇವೆ. ಎರಡು ಗಣಗಳ ನಡುವಣ ಈ ಘರ್ಷಣಾತ್ಮಕ ಸಂಬಂಧವನ್ನು 'ಛೇದನ' ಎಂದು ಕರೆಯಲಾಗುತ್ತದೆ. $(P \cap Q)$ ಎನ್ನುವುದನ್ನು P ಛೇಧನ Q ಎಂದು ಓದಲಾಗುವುದು. $\cap$ ಚಿಹ್ನೆಯು ಛೇಧನವನ್ನು ಪ್ರತಿನಿಧಿಸುತ್ತದೆ.

ಇದು ಗಣಸಿದ್ಧಾಂತದ ಮೂಲ ಭಾವನೆಗಳು. ವಿಶ್ವಗಣ, ಪೂರಕಗಣ, ಉಪಗಣ—ಇವು ಗಣಗಳ ನಡುವಣ ಸಂಬಂಧವನ್ನು ಹೇಳಿದರೆ, 'ಸಂಯೋಗ' ಹಾಗೂ 'ಛೇದನ' ಪ್ರಕ್ರಿಯೆಗಳು ಎರಡು ಗಣಗಳ ನಡುವಣ ಸಂಪರ್ಕದ ಬಗ್ಗೆ ಹೇಳುತ್ತೇವೆ.

ಗಣ ಎಂದಾಕ್ಷಣ ಅದು, ಅಂಕೆ ಸಂಖ್ಯೆಗಳ ಗಣವೆಂದೇನೂ ಆಗಬೇಕಿಲ್ಲ. ಗಣಿತದಲ್ಲಿ ಪ್ರಮುಖವಾಗಿ ಸಂಖ್ಯೆಗಳ ಗಣ ಪ್ರಸ್ತಾಪಕ್ಕೆ ಬರುವುದರಿಂದ, ಹಾಗೂ ಅಂಕೆ ಸಂಖ್ಯೆಗಳು ಚಿರಪರಿಚಿತವಾದ ಗಣಿತೀಯ ಅಂಶಗಳಾಗಿರುವುದರಿಂದ, ಅಂಕೆ ಸಂಖ್ಯೆಗಳ ಗಣದ ಉದಾಹರಣೆಗಳನ್ನು ತೆಗೆದುಕೊಳ್ಳಬೇಕಾಯಿತಷ್ಟೆ.

ಗಣಿತದಲ್ಲಿ ಪ್ರತಿಯೊಂದು ಅಂಶವನ್ನೂ ಗಣ ಸ್ವರೂಪಕ್ಕೆ ಪರಿವರ್ತಿಸಲಾಗಿದೆ (ಒಂದೇ ಮೂಲಾಂಶವಿರುವ ಮತ್ತು ಮೂಲಾಂಶವೇ ಇಲ್ಲದ ಗಣಗಳೂ ಇರಬಹುದೆಂಬುದನ್ನು ನೆನಪಿಡಿ.) ಗಣಿತದಲ್ಲಿ ಯಾವುದೇ ಪರಿಕಲ್ಪನೆಯನ್ನು ಗಣ ಪದಗಳಲ್ಲಿ ಅಭಿವ್ಯಕ್ತಮಾಡಬಹುದಾಗಿದೆ ; ಅರ್ಥಾತ್ ಎಲ್ಲವೂ ಗಣಸ್ವರೂಪವಾಗಿದೆ. ಉದಾಹರಣೆಯೊಂದರೊಡನೆ ವಿವರಿಸುವ ಮೊದಲು ಗಣ ಹಾಗೂ ಅದರ ಮೂಲಾಂಶಗಳ ನಡುವಣ ಸಂಬಂಧವನ್ನು ಹೇಗೆ ಸೂಚಿಸಲಾಗುತ್ತದೆಂಬುದನ್ನು ತಿಳಿಯೋಣ.

$A : \{7, 8, 9, 10\}$ ಎಂಬ ಗಣವೊಂದಿರಲಿ.

ಈಗ, 7, A ಗಣದ ಮೂಲಾಂಶವಾಗಿದೆ. ಅದನ್ನು $7 \in A$ ಎಂದು ಸಾಂಕೇತಿಕವಾಗಿ ಬರೆಯಲಾಗುತ್ತದೆ. ಆದರೆ 6, A ಗಣದ ಮೂಲಾಂಶವಲ್ಲ. ಅದನ್ನು $6 \notin A$ ಎಂದು ಸಾಂಕೇತಿಕವಾಗಿ ಬರೆಯಲಾಗುತ್ತದೆ. ಹೀಗೇ $9 \in A$, $10 \in A$; ಆದರೆ $5 \notin A$, $11 \notin A$.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಎರಡು ಗಣಗಳ ಸಂಯೋಗ ಹಾಗೂ ಛೇದನಗಳ ಬಗ್ಗೆ ಮತ್ತಷ್ಟು ತಿಳಿಯೋಣ.

A ಮತ್ತು B ಎಂಬ ಎರಡು ಗಣಗಳಿರಲಿ. ಈಗ $(A \cup B)$ ಗಣದ ಲಕ್ಷಣ ವೇನು ? ಅಂದರೆ, $(A \cup B)$ ಗಣದಲ್ಲಿ ಯಾವ ಮೂಲಾಂಶಗಳಿರುತ್ತವೆ ? ಹಿಂದೆ ವಿವರಿಸಿದ ಗಣಗಳ ಸಂಯೋಗದ ವ್ಯಾಖ್ಯೆಯನ್ನು ನೆನಸಿಕೊಂಡರೆ ಇದು ಗೊತ್ತಾಗುತ್ತದೆ: x ಎಂಬುದು $(A \cup B)$ ಗಣದ ಮೂಲಾಂಶವಾಗಿರಬೇಕಾದರೆ ಅದು A **ಅಥವಾ** B ಗಣಗಳಲ್ಲಿ ಕನಿಷ್ಠಪಕ್ಷ ಯಾವುದಾದರೊಂದರ ಮೂಲಾಂಶವಾಗಿರಬೇಕು. ಅಂದರೆ,

x ಎಂಬುದು $(A \cup B)$ ಗಣದ ಮೂಲಾಂಶವಾಗಿರಬೇಕಾದರೆ, x ಎಂಬುದು A ಗಣದ ಮೂಲಾಂಶವಾಗಿರಬೇಕು **ಅಥವಾ** x ಎಂಬುದು B ಗಣದ ಮೂಲಾಂಶವಾಗಿರಬೇಕು.

ಇದನ್ನು ಸಾಂಕೇತಿಕವಾಗಿ ಹೀಗೆ ಬರೆಯಬಹುದು :

$$x \in (A \cup B) \Rightarrow x \in A \text{ ಅಥವಾ } x \in B$$

ಈ ಹೇಳಿಕೆಯ ವಿಲೋಮವೂ (converse) ಸಹ ನಿಜವೆಂಬುದನ್ನು ಗಮನಿಸಿ. ಅಂದರೆ,

$$x \in A \text{ ಅಥವಾ } x \in B \Rightarrow x \in (A \cup B)$$

ಆದುದರಿಂದ ಈ ಎರಡೂ ಹೇಳಿಕೆಗಳನ್ನು ಸಂಯುಕ್ತವಾಗಿ ಹೀಗೆ ಬರೆಯಬಹುದು :

$$x \in (A \cup B) \Longleftrightarrow x \in A \text{ ಅಥವಾ } x \in B$$

ಈ ಮೇಲಿನ ಸಂಯುಕ್ತ ಹೇಳಿಕೆಯು ಗಣಗಳ ಸಂಯೋಗವನ್ನು ಅತ್ಯಂತ ಸೂಕ್ತವಾಗಿ ವಿವರಿಸುತ್ತದೆ.

ಹೀಗೇ, A_1, A_2, A_3 ಎಂಬ ಮೂರು ಗಣಗಳನ್ನು ತೆಗೆದುಕೊಂಡರೆ,

$$x \in (A_1 \cup A_2) \cup A_3 \Longleftrightarrow x \in A_1 \text{ ಅಥವಾ } x \in A_2 \text{ ಅಥವಾ } x \in A_3$$

ಇದೇ ರೀತಿಯಲ್ಲಿ ಮೂರು ಅಥವಾ ಅದಕ್ಕೂ ಹೆಚ್ಚು ಸಂಖ್ಯೆಯ ಗಣಗಳ ಸಂಯೋಗವನ್ನು ವಿವರಿಸಬಹುದು !

ಈಗ ಗಣಗಳ ಛೇದನಕ್ಕೆ ಬರೋಣ. x ಎಂಬುದು A ಮತ್ತು B ಗಳ ಛೇದನದ ಮೂಲಾಂಶವಾಗಿರಬೇಕಿದ್ದರೆ, ಅದು A ಮತ್ತು B – ಈ ಎರಡೂ ಗಣಗಳ ಮೂಲಾಂಶವಾಗಿರಬೇಕು. ಅಂದರೆ ಸಾಂಕೇತಿಕವಾಗಿ,

$$x \in (A \cap B) \Rightarrow x \in A \text{ ಮತ್ತು } x \in B$$

ಇದರ ವಿಲೋಮವೂ ಸಹ ನಿಜವಾಗಿರುವುದರಿಂದ, ಮೇಲಿನಂತೆಯೇ ಒಟ್ಟಿನಲ್ಲಿ ಹೀಗೆ ಬರೆಯಬಹುದು :

$$x \in (A \cap B) \Longleftrightarrow x \in A \text{ ಮತ್ತು } x \in B.$$

ಹೀಗೇ ಮೂರು ಅಥವಾ ಹೆಚ್ಚಿನ ಗಣಗಳ ಛೇದನವನ್ನು ವಿವರಿಸಬಹುದು. ಉದಾಹರಣೆಗೆ

$$x \in (A \cap B) \cap C \Longleftrightarrow x \in A \text{ ಮತ್ತು } x \in B \text{ ಮತ್ತು } x \in C.$$

ಈಗ ಗಣ ಸಿದ್ಧಾಂತವನ್ನು ಸಮಸ್ಯೆಗಳನ್ನು ಬಿಡಿಸಲು ಹೇಗೆ ಅನ್ವಯಿಸಲಾಗುತ್ತದೆ ಎಂಬುದನ್ನು ತಿಳಿಯುವ ಮೊದಲು, ಮತ್ತೊಂದು ಸಂಗತಿ ತಿಳಿಸೋಣ. ಸಮಸ್ಯೆಗಳನ್ನು ಬಿಡಿಸಲು ಅಥವಾ ನಿರೂಪಿಸಲು ಗಣಸಿದ್ಧಾಂತವನ್ನು ಹಸಿಹಸಿಯಾಗಿಯೇ ಉಪಯೋಗಿಸಲಾಗುವುದಿಲ್ಲ. ಭಾಷೆಯೆಂದಮೇಲೆ ವ್ಯಾಕರಣವಿರಲೇಬೇಕಲ್ಲ ! ವ್ಯಾಕರಣವಿಲ್ಲದ ಭಾಷೆ ಅನೇಕ ಸಂದಿಗ್ಧಗಳನ್ನು ತಂದೊಡ್ಡುವುದು ಸಹಜ. ಈ ಸಂದಿಗ್ಧಗಳಿಗೆ ಅವಕಾಶ ನೀಡಬಾರದೆಂದೇ ಕೆಲವು ಮೂಲಭೂತ ನಿಯಮಗಳನ್ನು ಒಪ್ಪಿಕೊಳ್ಳಲಾಗಿದೆ. (ದೇಶಕ್ಕೆ ಒಂದು ಸಂವಿಧಾನವಿದ್ದಂತೆ). ಗಣಿತ ಭಾಷೆಯ ವಾಕ್ಯ ರಚನೆಗೆ (ಅಂದರೆ 'ಗಣ' ಪದಗಳ ನಡುವೆ ಅರ್ಥಪೂರ್ಣ ಸಂಬಂಧವೇರ್ಪಡಿಸುವುದು) ಒಪ್ಪಿಕೊಳ್ಳಲಾಗಿರುವ ನಿಯಮಗಳ ಶಾಸ್ತ್ರವೇ ಗಣಿತ ತರ್ಕ ಶಾಸ್ತ್ರ. ಇದು, ಗಣಿತ ಭಾಷೆಗೆ ವ್ಯಾಕರಣವಿದ್ದಂತೆ. ಈ ವ್ಯಾಕರಣದ ಸೂತ್ರಗಳಿಗನುಸಾರವಾಗಿ 'ಗಣ' ಪದಗಳ ನಡುವೆ ಛೇದನ ಹಾಗೂ ಸಂಯೋಗ ಪ್ರಕ್ರಿಯೆಗಳ ಮೂಲಕ ಸಂಬಂಧ ಕಲ್ಪಿಸಿ ಒಂದು ಸಮಸ್ಯೆಯನ್ನು–ಅದು ಭೌತ ಶಾಸ್ತ್ರಕ್ಕಾಗಲೀ ಅಥವಾ ಸಮಾಜ ವಿಜ್ಞಾನಕ್ಕಾಗಲೀ ಸಂಬಂಧಿಸಿರಲಿ–ಗಣಿತ ಭಾಷೆಯ ಮೂಲಕ ಅರ್ಥೈಸಿಸಲಾಗುವುದು. ಇದಕ್ಕೊಂದು ಸರಳ ಉದಾಹರಣೆಯಾಗಿ, ಮೂರು ಕಾಲುವೆಗಳಲ್ಲಿನ ನೀರಿನ ಹರಿವಿಗೆ ಸಂಬಂಧಪಟ್ಟ ಸಮಸ್ಯೆಯೊಂದನ್ನು ನೋಡೋಣ. A, B ಮತ್ತು C ಎಂಬ ಮೂರು ಕಾಲುವೆಗಳು ಒಂದು ಜಲಾಶಯದಿಂದ ಹೊರಟು ಮತ್ತೆ ಒಂದೆಡೆ ಸಂಗಮವಾಗಿ D ಎಂಬ ದೊಡ್ಡ ಕಾಲುವೆಯಾಗಿ ಮುಂದೆ

ಹರಿಯುತ್ತದೆ ಎಂದು ಭಾವಿಸೋಣ. ಈ A, B ಮತ್ತು C ಕಾಲುವೆಗಳಿಗೆ ಪ್ರತಿಯೊಂದಕ್ಕೂ ಅಡ್ಡವಾಗಿ ತೂಬುಗಳನ್ನು (ನೀರನ್ನು ನಿಲ್ಲಿಸುವ ಅಥವಾ ಹರಿಯಬಿಡುವ ವ್ಯವಸ್ಥೆ–ವಿದ್ಯುತ್ ಪ್ರವಾಹಕ್ಕೆ switch ಇದ್ದಂತೆ) ನಿರ್ಮಿಸಲಾಗಿದೆ ಎಂದು ತಿಳಿಯೋಣ. ಈಗ D ಕಾಲುವೆಯಲ್ಲಿ ನೀರಿರಬೇಕಾದರೆ A **ಅಥವಾ** B **ಅಥವಾ** C ಕಾಲುವೆಗಳಲ್ಲಿ ಒಂದರ ತೂಬನ್ನಾದರೂ ತೆರದಿರಬೇಕು ಎಂದರ್ಥ. ಇದೇ ವಿಷಯವನ್ನು ಹೀಗೆ ವಿವರಿಸಬಹುದು : D ಕಾಲುವೆಯಲ್ಲಿ ನೀರಿದ್ದರೆ, ಅದು, A, B ಮತ್ತು C –ಈ ಮೂರು ಕಾಲುವೆಗಳಲ್ಲಿ ಕನಿಷ್ಠ ಪಕ್ಷ ಯಾವುದಾದರೊಂದು ಕಾಲುವೆಯ ನೀರಾಗಿರಬೇಕು. (ಈ ನೀರು D ಗೆ ಬರಬೇಕಿದ್ದರೆ, ಯಾವುದಾದರೊಂದರ ತೂಬನ್ನು ತೆರದಿರಲೇಬೇಕಲ್ಲ !) ಈಗ D ಕಾಲುವೆಯಲ್ಲಿನ ಆ ನೀರನ್ನು x ಎಂದಿಟ್ಟುಕೊಂಡರೆ, ಈ ಸಮಸ್ಯೆಯನ್ನು ಹೀಗೆ ನಿರೂಪಿಸಬಹುದು :

$$x \in D \Longleftrightarrow x \in A \text{ ಅಥವಾ } x \in B \text{ ಅಥವಾ } x \in C$$

ಆದರೆ Dಯು A, B ಮತ್ತು Cಗಳ ಸಂಗಮ ತಾನೆ ? ಆದುದರಿಂದ ಮೇಲಿನ ಹೇಳಿಕೆಯನ್ನು ಹೀಗೆ ಬರೆಯಬಹುದು :

$$x \in (A \cup B) \cup C \Longleftrightarrow x \in A \text{ ಅಥವಾ } x \in B \text{ ಅಥವಾ } x \in C$$

ಈ ಹೇಳಿಕೆಯು ಮತ್ತೇನೂ ಆಗಿರದೆ, A, B ಮತ್ತು C ಗಣಗಳ ಸಂಯೋಗದ ವಿವರಣೆಯಾಗಿದೆ ! ಹೀಗೆ ಸಮಸ್ಯೆಯೊಂದನ್ನು ಗಣ ಪದಗಳಲ್ಲಿನ ಭಾಷೆಗೆ ಪರಿವರ್ತಿಸಬಹುದು (ಇಲ್ಲಿನ ಗಣಿತ ತರ್ಕದ ಪಾತ್ರವೆಂದರೆ, '**ಅಥವಾ**' ಎಂಬ ಪದಕ್ಕೆ ಅರ್ಥ ಸೂಚಿಸಿರುವುದು ; ಗಣಿತ ತರ್ಕದ ಪ್ರಕಾರ, ಎರಡು ವಾಕ್ಯಗಳು 'ಅಥವಾ' ಎಂಬ ಪದದಿಂದ ಬಂಧಿತವಾಗಿ ಸಂಯುಕ್ತ ವಾಕ್ಯವಾಗಿದ್ದರೆ, ಆ ಸಂಯುಕ್ತ ವಾಕ್ಯವು ನಿಜವಾಗಬೇಕಾದರೆ ಆ ಎರಡು ಬಿಡಿ ವಾಕ್ಯಗಳಲ್ಲಿ ಯಾವುದಾದರೊಂದು ನಿಜವಾಗಿದ್ದರೆ ಸಾಕು !) ಇದೇ ರೀತಿಯಲ್ಲಿ '**ಮತ್ತು**' ಎಂಬ ಪದವು ಎರಡು ವಾಕ್ಯಗಳನ್ನು ಬಂಧಿಸಿ ಒಂದು ಸಂಯುಕ್ತ ವಾಕ್ಯವನ್ನು ನಿರ್ಮಿಸಿದ್ದರೆ, ಆ ಸಂಯುಕ್ತ ವಾಕ್ಯವು ನಿಜವಾಗಬೇಕಾದರೆ, ಆ ಎರಡೂ ಬಿಡಿ ವಾಕ್ಯಗಳೂ ನಿಜವಾಗಿರಬೇಕು. ಗಣಿತ ತರ್ಕದ ಈ ನಿಯಮವನ್ನು ಉಪಯೋಗಿಸಿಕೊಂಡು, ಗಣ ಸಿದ್ಧಾಂತದ ಛೇದನ ಪ್ರಕ್ರಿಯೆಯ ಮೂಲಕ ಮೇಲಿನಂಥಹುದೇ ಮತ್ತೊಂದು ಸಮಸ್ಯೆಯನ್ನು ರೂಪಿಸಲು ಪ್ರಯತ್ನಿಸಿ. (ಈ ಸಂದರ್ಭದಲ್ಲಿ A, B ಮತ್ತು C ಕಾಲುವೆಗಳು ಒಂದೆಡೆ ಕೂಡಿ ಹರಿಯುವುವೋ ಅಥವಾ ಇನ್ನಾವ ರೀತಿಯಲ್ಲಿ ಹರಿಯಬೇಕು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಿ.)

ಹೀಗೆಯೇ ಸಮಸ್ಯೆಗಳನ್ನು ಗಣಿತೀಯವಾಗಿ ಅಭಿವ್ಯಕ್ತಿಸಬಹುದು. ಇಲ್ಲಿನ ಕಾಲುವೆಗಳಿಗೆ ಬದಲಾಗಿ ವಿದ್ಯುತ್ ಹರಿಯುವ ತಂತೀ (ಅಥವಾ ಇನ್ನಾವುದೇ

ಮಾಧ್ಯಮ) ಗಳನ್ನು ಪರಿಗಣಿಸಿದರೆ, ಇದೇ ಸಮಸ್ಯೆಗಳು ವಿದ್ಯುತ್ ಜಾಲಗಳ ಸಮಸ್ಯೆಯಾಗುತ್ತದೆ. ತೂಬುಗಳಿಗೆ ಬದಲಾಗಿ 'ಸ್ವಿಚ್' ಎಂದಾಗುತ್ತದೆ. ಮೇಲೆ ವಿವರಿಸಿದ ಮೊದಲನೆಯ ಸಮಸ್ಯೆಯು ಸಮಾನಾಂತರ ವಿದ್ಯುತ್‌ಜಾಲ ವ್ಯವಸ್ಥೆ (parallel circuit) ಯನ್ನು ಪ್ರತಿನಿಧಿಸಿದರೆ, ಓದುಗನಿಗೇ ಬಿಟ್ಟಿರುವ ಸಮಸ್ಯೆಯು ಸರಣೀಕೃತ ವಿದ್ಯುತ್ ಜಾಲ ವ್ಯವಸ್ಥೆ (series circuit) ಯನ್ನು ಪ್ರತಿನಿಧಿಸುತ್ತದೆ. ಆದುದರಿಂದ ಹೀಗೆ, ವಿದ್ಯುತ್ ಜಾಲಗಳಲ್ಲಿನ ವಿದ್ಯುತ್ ಹರಿವನ್ನು ಸಹ ಗಣ ಪದಗಳ ಮೂಲಕ ವ್ಯಕ್ತಪಡಿಸಬಹುದು. ಆದರೆ ಮೇಲೆ ವಿವರಿಸಿದ ಸಮಸ್ಯೆಗಳು ಅತ್ಯಂತ ಸರಳವಾದವುಗಳು. ವಿದ್ಯುತ್ ಜಾಲದ ಸಮಸ್ಯೆಯನ್ನೇ ತೆಗೆದುಕೊಂಡರೆ, ಸಮನಾಂತರ ಹಾಗೂ ಸರಣೀಕೃತ ವ್ಯವಸ್ಥೆಗಳನ್ನು ಮಿಶ್ರಮಾಡಿದ ವಿದ್ಯುತ್ ಜಾಲವಿರಬಹುದು–ಅಥವಾ ಇನ್ನೂ ಇತರ ಕ್ಲಿಷ್ಟತೆಗಳನ್ನೊಳಗೊಂಡ ಸಮಸ್ಯೆಗಳನ್ನು ಅಧ್ಯಯನಮಾಡಬೇಕಾಗಬಹುದು ! ಈಗ ಅತ್ಯಂತ ಪ್ರಯೋಜನಕಾರಿ ಎನಿಸಿರುವ 'ELECTRONICS' ವಿಷಯವು ಸಂಪೂರ್ಣವಾಗಿ ವಿದ್ಯುತ್ ಜಾಲಗಳ ಅಧ್ಯಯನವೇ ಆಗಿದೆ. (ಇಲ್ಲಿ ವಿದ್ಯುತ್ತು ಉತ್ತಮ ವಾಹಕಗಳಲ್ಲಿ ಹರಿಯುವ ಬದಲು, ವಿದ್ಯುತ್‌ನಿಶ್ಚೇತನ–dielectric–ಮಾಧ್ಯಮದ ಮೂಲಕ ಹರಿಯುತ್ತದೆ,) ಇತ್ತೀಚೆಗೆ ವಿಜ್ಞಾನದ ಪವಾಡವೆನಿಸಿರುವ ಗಣಕಯಂತ್ರಗಳು ಈ Electronic ತತ್ವಗಳ ಆಧಾರದಿಂದ ನಿರ್ಮಿಸಿದ ಮಹಾನ್ ಯಂತ್ರಗಳೇ ಆಗಿವೆ. ಇಲ್ಲೂ ಸಹ ವಿದ್ಯುತ್ ಜಾಲಗಳ ತೀವ್ರ ಅಧ್ಯಯನ ಅವಶ್ಯಕ. ಈ ಸಂದರ್ಭಗಳಲ್ಲಿ ಸಮಸ್ಯೆಗಳು ಅತ್ಯಂತ ಸಂಕೀರ್ಣ ಸ್ವರೂಪದಲ್ಲಿರುತ್ತವೆ. ಅಂತಹ ಸಂಕೀರ್ಣ ಸಮಸ್ಯೆಗಳನ್ನು ಗಣಿತೀಯ ಭಾಷೆಯಲ್ಲಿ ನಿರೂಪಿಸಲು ಬೂಲಿಯನ್ (Boolean) ಎಂಬ ಗಣಿತಜ್ಞ, ಬೂಲಿಯನ್ ಬೀಜಗಣಿತ ಎಂಬ ಶಾಸ್ತ್ರವನ್ನು ಸೃಷ್ಟಿಸಿದ. ಇದು ಗಣ ಸಿದ್ಧಾಂತದ ತತ್ವಗಳನ್ನು ವಿದ್ಯುತ್‌ಜಾಲಗಳ ವಿನ್ಯಾಸದ ಆಧಾರದ ಮೇಲೆ ನಿರೂಪಿಸಿರುವ ವಿಜ್ಞಾನವಾಗಿದೆ.

ಇದೆಲ್ಲಾ ಗಣಸಿದ್ಧಾಂತದ ನೇರ ಅನ್ವಯವಾದರೆ, ಗಣಗಳ ಆಧಾರದಮೇಲೆ ಉನ್ನತಮಟ್ಟದಲ್ಲಿ ಅನೇಕಾನೇಕ ವಾಹಕಶೀಲ ಸಿದ್ಧಾಂತಗಳನ್ನೂ ಸಹ ರೂಪಿಸಲಾಗಿದೆ. ಗಣಿತದ ಅತ್ಯಂತ ಪ್ರಮುಖ ಪರಿಕಲ್ಪನೆಯಾಗಿರುವ ಉತ್ಪನ್ನ ವಾಕ್ಯ (function) ಎರಡು ಗಣಗಳ ಮೂಲಾಂಶಗಳ ನಡುವಣ ಶಾಸ್ತ್ರೀಯ ಸಂಬಂಧವನ್ನು ವಿವರಿಸುತ್ತದೆ. ಇಡೀ ಗಣಿತಶಾಸ್ತ್ರವು ಉತ್ಪನ್ನವಾಕ್ಯದ ವಿವಿಧ ಗುಣಲಕ್ಷಣಗಳ ಅಧ್ಯಯನವಾಗಿದೆ. ಹೀಗೆ ಪರೋಕ್ಷವಾಗಿ ಇಡೀ ಗಣಿತ ಶಾಸ್ತ್ರವು ಗಣಗಳ ವಿವಿಧ ಲಕ್ಷಣಗಳ ಅಧ್ಯಯನವಾಗಿದೆ. ಗಣಿತಶಾಸ್ತ್ರದ ಅತ್ಯಂತ ಆಧುನಿಕ ವಿಭಾಗವಾದ ಸಂಸ್ಥಿತಿ ಶಾಸ್ತ್ರವೂ (Topology) ಸಹ ಸಹಜ ಸಂಖ್ಯೆಗಳು (Real Numbers), ಮಿಶ್ರ ಸಂಖ್ಯೆಗಳು (Complex Numbers) ಮುಂತಾದ ಮೂರ್ತ ಹಾಗೂ ಇತರ

ಅಮೂರ್ತ ಗಣಿತೀಯ ಅಂಶಗಳನ್ನು ಗಣವೊಂದರ ಚೌಕಟ್ಟಿನಲ್ಲಿರಿಸಿ, ಅವುಗಳ ಅಧ್ಯಯನ ಮಾಡುವುದೇ ಆಗಿದೆ. ಈ ಶಾಸ್ತ್ರದ ಅತ್ಯಂತ ಪ್ರಮುಖ ಪರಿಕಲ್ಪನೆ ಯಾದ ಸಂಸ್ಥಿತೀಯ ಸಮಷ್ಟಿಯು (Topological space) ಭೌತಶಾಸ್ತ್ರದ ಮೂಲ ಕಲ್ಪನೆಗಳಿಗೆ ಆಧಾರವಾದ ಸದಿಶಸಮಷ್ಟಿ (vector space) ಹಾಗೂ ದೂರಾತ್ಮಕ ಸಮಷ್ಟಿ (Metric space) ಮುಂತಾದವುಗಳ ಸಾರ್ವತ್ರಿಕ ರೂಪ ವಾಗಿದೆ. ಇವುಗಳೆಲ್ಲದರ ಬೀಜವಸ್ತು ಗಣವೇ ಆಗಿದೆ. ಸಂಸ್ಥಿತಿಶಾಸ್ತ್ರದ ಮೂಲ ತತ್ವಗಳನ್ನು ಆಧರಿಸಿದ ಉತ್ಪನ್ನವಾಕ್ಯ ವಿಶ್ಲೇಷಣೆ (Functional Analysis) ಹಾಗೂ ನಕ್ಷಾಸಿದ್ಧಾಂತ (Graph Theory) ಸಹ ಪರೋಕ್ಷವಾಗಿ ಗಣ ಹಾಗೂ ಅದರ ಮೂಲಾಂಶಗಳ ಅಧ್ಯಯನವಾಗಿದೆ. ಈ ಆಧುನಿಕ ಗಣಿತಶಾಸ್ತ್ರದ ವಿಭಾಗಗಳು ಯಂತ್ರಶಾಸ್ತ್ರ ತಂತ್ರಶಾಸ್ತ್ರ ಮುಂತಾದ ಶಾಸ್ತ್ರಗಳ ಅತ್ಯಾಧುನಿಕ ಪರಿಕಲ್ಪನೆಗಳ ಅರ್ಥ ನಿರೂಪಣೆಗೆ ಭಾಷೆಯನ್ನು ಒದಗಿಸುತ್ತವೆ.

ಹೀಗೆ ಗಣದ ಪರಿಕಲ್ಪನೆಯು ಗಣಿತೀಯ ಭಾಷೆಯು ತುಂಬಾ ಒಂದಲ್ಲ ಒಂದು ರೂಪದಲ್ಲಿ ಹಾಸುಹೊಕ್ಕಾಗಿದೆ. ಗಣಿತಭಾಷೆಯ ಎಲ್ಲಾ ವಿವರಗಳೂ ಗಣದ ಪರಿ ಕಲ್ಪನೆಯಿಂದಲೇ. ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಉದ್ಭವ ವಾಗಿರುತ್ತವೆ. ಗಣಿತಶಾಸ್ತ್ರದಲ್ಲಿ ಯಾವುದೇ ಸಂಶೋಧನಾತ್ಮಕ ಸಮಸ್ಯೆಯನ್ನೆತ್ತಿ ಕೊಂಡರೂ ಆ ಸಮಸ್ಯೆಯ ಬೇರು 'ಗಣ' ಪರಿಕಲ್ಪನೆಯ ನೆಲದಲ್ಲಿಯೇ ಇಳಿದಿರು ತ್ತದೆ. ಹಾಗೆ ನೋಡಿದರೆ ಗಣದ ಸ್ವರೂಪದ ಸಂಪೂರ್ಣ ವಿಶ್ಲೇಷಣೆಯೇ ಅಥವಾ ಅದರ ಪೂರ್ಣಾರ್ಥದ ಅನ್ವೇಷಣೆಯೇ ಗಣಿತ ಶಾಸ್ತ್ರದ ಅಧ್ಯಯನವೇನೋ ಎಂದು ಅನುಮಾನ ಉಂಟಾಗುತ್ತದೆ !

ಮಡಿವಾಳಯ್ಯನ ವಚನಗಳು

ಎಸ್. ಉಮಾಪತಿ

ಅಜಾತ ವಿಜಾತವೆನಲು ಬೇಡ
ಹದಿನೆಂಟು ಜಾತದೊಳಗೆ
ಆವಜಾತನಾದಡಾಗಲಿ ;
ಗುರುವಿನ ಉಪದೇಶದಿಂದ
ದಾಸೋಹ ಮಾಡುವುದು ಶಿವಾಚಾರ,
ಗುರುಕೊಟ್ಟ ಮೂಱು ಮುದ್ರೆ ಲಾಂಛನವ
ಹೊತ್ತು ಮರಳಿ ವೇಷವಳಿದು
ಗುರುದ್ರೋಹಿಯಾಗಿ ಬಂದವರ
ದಾಸೋಹವ ಮಾಡಲು ಶಿವಾಚಾರಕ್ಕೆ
ಹೇಸಿಕೆಯಾಗದೆ ಕಲಿದೇವರ ದೇವಯ್ಯ ! ॥ 1 ॥

ಗುರುವಿಡಿದು ಲಿಂಗವ ಕಂಡೆ
ಲಿಂಗವಿಡಿದು ಜಂಗಮವ ಕಂಡೆ
ಜಂಗಮವಿಡಿದು ಪಾದತೀರ್ಥ
ಪ್ರಸಾದವ ಕಂಡೆ. ಪಾದತೀರ್ಥ
ಪ್ರಸಾದದಿಂದ ಪರವ ಕಂಡೆ,
ಇಂತೀ ಪರವ ತೋಱದ ಗುರು
ವಿನಾಜ್ಞೆಯಂ ಮಿಾಱದ ದುರಾಚಾರಿಗಳ
ಮುಖವ ನೋಡಲಾಗದು ಎಂದ
ಕಲಿದೇವರ ದೇವಯ್ಯ ! ॥ 2 ॥

ಗುರುವಿನ ಉಪದೇಶವ ಕೇಳದವ ನರಕಿ
ಗುರುಚರಣವ ಪೂಜೆಯ ಮಾಡದವ ನರಕಿ
ಗುರುವ ಕಂಡು ಕರವ ಮುಗಿಯದವನೆ ನರಕಿ
ಗುರುಮುಟ್ಟಿ ಹೊಲೆ ಜನ್ಮವ ಕಳೆಯದವನೆ ನರಕಿ
ಗುರುಪ್ರಸಾದವ ರುಚಿಯನಱಿಯದವನೆ ನರಕಿ
ಗುರುಲಿಂಗ ಚರವೆನ್ನದವನೆ ನರಕಿ
ಗುರುನಿಂದೆ ಪರನಿಂದೆ ಚರನಿಂದೆಯ
ನಾಡುವ ಪರವಾದಿಗಳ ಮನೆಯಲ್ಲಿ
ಆಹಾರವ ಕೊಂಡರೆ ಅಘೋರ ನರಕ
ತಪ್ಪದೆಂದ ಕಲಿದೇವರ ದೇವಯ್ಯ ! ॥ 3 ॥

ಅಂಗದ ಮೇಲೆ ಲಿಂಗವ ಧರಿಸಿ
ಮಹಾ ಲಿಂಗವಂತರೆನಿಸಿಕೊಂಬವರು
ನೀವು ಕೇಳಿರೋ !
ಮನೆಗೆ ಒಂದು ದೇವರು !
ನಿಮಗೆ ಒಂದು ದೇವರು !
ಅಂಗನೆ ಅನ್ಯ ದೈವವನರ್ಚಿಸಿ
ಮಿಕ್ಕ ಕೂಳ ಲಿಂಗಕ್ಕೆ ತೋಱಿಸಿ
ಭುಂಜಿಸುವ ಲಿಂಗ ದ್ರೋಹಿಗಳ
ನುಡಿಯ ಕೇಳಲಾಗದೆಂದ ಕಲಿದೇವರ ದೇವಯ್ಯ ॥ 4 ॥

ಕಸಗೊಂಡ ಭೂಮಿಯಲ್ಲಿ
ಸಸಿ ಪಲ್ಲವಿಸುವುದೇನಯ್ಯ !
ಹುಸಿ ಇದ್ದಲ್ಲಿ ಪರದೊರಕೊಂಬುದೇನಯ್ಯ !
ವ್ಯಸನದಿಚ್ಛೆಗೆ ಮನ ಹರಿವನ್ನಕ್ಕ
ಪರವು ದೊರಕೊಂಬುದೇನಯ್ಯ !
ಬಸವ ಗತಿ ಬಸವ ಮತಿ ಎನುತ್ತ
ಭಸ್ಮವ ಹಿರಿದಾಗಿ ಧರಿಸಿಕೊಂಡು
ಇರುವವರ ಭಕ್ತರೆನ್ನಬಹುದೇನಯ್ಯ !
ಅಶನವು ಭವಿ ಪಾಕ ; ಅನ್ಯದೈವದೆಂಜಲು ;
ಆಪೋಷನೆ ಎಂದರೆ ಬಿಡರು,
ವ್ಯಶನಕ್ಕೆ ವೇಶಿ ದಾಸಿಯ ಹೊಲತಿ
ಡೊಂಬಿತಿಯರ ಎಂಜಲಿಗೆ ಹೇಸದೆ
ಮಾಡುವನ ಭಕ್ತಿಯ ತೆಱನೆಂತೆಂದರೆ ;
ಶ್ವಾನನು ಪಾಕುಳದೊಳಗೆ ಹೊರಳಿದ
ತೆಱನೆಂದ ಕಲಿದೇವರ ದೇವಯ್ಯ ! ॥ 5 ॥

ಗೀತ ಪಾತ್ರ ಭೈರೂಪ ಸೂಳೆ
ಡೊಂಬಿತಿ ತಾಳ ದಂಡಿಗಿ ಸೂಕ (?)
ವೈಸಿಕದ ಆಳಾಪಕ್ಕೆ ಮರುಳಾಗಿ
ತಲೆದೂಗುತಿಪ್ಪರು
ಸರ್ಪನು ಸ್ವರವನು ತಾ ಕೇಳಿದಂತೆ
ಗೋಕ್ಷತ್ರ ಒಯಿಧಿಪ ಕಾಕಃ ಪುರಾಣ (?)
ಪರಧನ ಪರಸತಿ, ಗೌತಮು
ದುರ್ಯೋಧನ ಕೀಚಕ ರಾವಳ ಮೊದಲಾಗಿ
ಸತ್ತು ಹೋದವರ ಸಂಗತಿಯ ಕೇಳಿದರೆ
ಕೆಟ್ಟ ಮೈ ಸುವರ್ಣವಾಯಿತೆಂಬ
ಭ್ರಷ್ಟನಾಯಿ ನುಡಿಯ ಕೇಳಿ

ಕೃತಾರ್ಥರಾದೆವೆಂಬ ಮತಿಗೇಡಿ ನಾಯಿಗಳಿಗೆ,
ಶಿವಗತಿ ಧರ್ಮ ಮಾರ್ಗವ ಹೇಳಿದವರಿಗೆ
ಅದೆಂತೆಂದರೆ ;
ಸತ್ತ ಹೆಣದ ಮುಂದೆ ಪಂಚ ಮಹಾ
ವಾದ್ಯವ ಬಾರಿಸಿದ ತೆಱನಂತಾಯಿತ್ತು
ಕಲಿದೇವರ ದೇವಯ್ಯ ! ॥ 6 ॥

ಮುನ್ನ ಶಿವ ಕೊಟ್ಟ ಆಯುಷ್ಯ
[ಉಂಟೆಂದು] ವ್ಯಾಪ್ತಿಸುವ ಗುಹೆಯಿಂ
ಇನ್ನು ತೆಗೆವರುಂಟೆ ?
ಉನ್ನತ ಉತ್ಪತ್ತ್ಯವೆಲ್ಲಾ ಶಿವನಿಂದಾಯಿತ್ತು
ನಿನ್ನ ಧನವನುಂಡು ತಮ್ಮ
ಅಜ್ಞಾನದಿಂದ ತಾವಱಿಯದೆ ಹೋಗಿ,
ತನ್ನ ಕಾಡಿನ ಮೇಲೆ ಕಾಗೆಗೆ
ಕಾಳ ಚಲ್ಲಿ ಪಿತರುಂಡರೆಂದು
ಕುನ್ನಿಗಳು ಮರುಳಾದರು ನೋಡ !
ಕಲಿದೇವರ ದೇವಾ ! ॥ 7 ॥

ಆಗಮದ ಹೊಲಬನಱಿಯದ
ಕುನ್ನಿಗಳು ಶ್ರೀಗುರು ಲಿಂಗ ಜಂಗಮದ
ನೆಲೆಯನಱಿಯದೆ ಹೋಗಿ
ಬಾಗಿಲ ದಾಟುವ ಮರನ
ದೇವರೆಂದು ಪೂಜಿಸಿ ;
ಬರುತ್ತ ಹೋಗುತ್ತ ಮರನ ಒದ್ದು ;
ಹರಸಿಕೊಂಬರು ಎಂಬತ್ತು ನಾಲ್ಕು
ಲಕ್ಷ ಜೀವ ರಾಶಿಗೆ
ಕಾಗೆ ಕನಿಷ್ಠ, ಆ ಕಾಗೆಯ
ಬಾಯಲು ಮಾತಾಪಿತರುಂಡರೆಂದು
ಓಗರವನಿಕ್ಕಿ, ಬಳಿಕ ಉಂಬವರ
ಪಂಥಿಯಲ್ಲಿ ಶ್ರೀ ಗುರು ಕಾರುಣ್ಯವ
ಪಡದ ಭಕ್ತನು ಅಲ್ಲಿ ಹೋಗಿ
ಲಿಂಗಾರ್ಪಣವ ಮಾಡಿದರೆ ಅವನು
ಕಾಗೆಗಿಂದ ಕನಿಕಷ್ಟವೆಂದನು
ಕಲಿದೇವರ ದೇವಯ್ಯನು ॥ 8 ॥

ಸೂಳೆ ಶೃಂಗಾರವ ಮಾಡಿದರೇನು
ಪುರುಷನುಳ್ಳ ಮುತ್ತೈದೆಯಾಹಳೆ ?
ಭಕ್ತರ ನುಡಿ ಗಡಣದಲ್ಲಿ ಇರಬೇಕು.

ಗುರು ಸಾಹಿತ್ಯ ಸಂಬಂಧವ ಮಾಡಲು
ಅವರೆಲ್ಲಾ ಭಕ್ತರಾಗಬಲ್ಲರೆ !
ಭಕ್ತಿ ಹೀನರ ಗೃಹದಲ್ಲಿ ಅರ್ಥಪ್ರಾಣ
ಸವದರೆ, ಪೂರ್ವ ಶಿವತತ್ವ
ಶಿವಲಿಂಗ ವೆಂದಱಿಯದೆ ;
ಭಕ್ತರಾಗಿ ಕೆಟ್ಟೆವು.
ನಮ್ಮ ಮನೆದೈವ ಮುನಿದವು
ಧನ ಧಾನ್ಯ ಹೋಯಿತ್ತು
ದರಿದ್ರ ವೆಡೆಗೊಂಡಿತ್ತು
ಕೆಟ್ಟೆವೆಂಬ ಅನಾಚಾರಿಗಳ ನುಡಿಯ
ಕೇಳಲಾಗದು ! ಎಂದ ಕಲಿ ದೇವರ ದೇವ ॥ 9 ॥

ದೇವನೊಬ್ಬನು ಜಗವ ಕಾವಾತ ಕೊಲುವಾತ
ದೇವರು ಮುನಿದರೆ ಮರಳಿ ಕಾವವರುಂಟೆ !
ಸಾವಿನೊಳಗಾಗಿ ಹೋಹ ಸಮಸ್ತ ಭೂತಂಗಳು,
ದೇವನ ಸರಿ ಎಂದಾರಾಧಿಸಿ,
ಅಚಳಿತ ಪದವಿಯ ಬೇಡುವ
ಗುರುದ್ರೋಹಿಗಳ ನುಡಿಗಳ
ಕೇಳಲಾಗದು ಕಲಿದೇವರ ದೇವಯ್ಯ ॥ 10 ॥

ಉಂಬ ಕೂಳಿಗೆ ಉಪದೇಶವ
ಮಾಡುವ ಚುಂಬಕರು ಹೆಚ್ಚಿ
ಭಕ್ತಿಯ ಪಥವ ಕೆಡಿಸಿದರು
ಡೊಂಬ ಡೋಹರ ಹೊಲೆಯರು
ಮಾದೆಗರು ಉಪದೇಶವಿಲ್ಲದವರು
ಪಿಂಬೆರ ಅನಾಚಾರಿಯ ಆರಾಧಿಸಿ
ಶಂಭುವಿನ ಸರಿ ಎಂದು
ಅವರೊಳಗೆ ಹಲವರು ಕೊಂಬನೂದುವ
ಸೊಣಕನ ಕೊರಳಲ್ಲಿ ಬಾರ ಕವಡೆಯ
ಕಟ್ಟಿಕೊಂಡು ನಾಯಾಗಿ ಬಗುಳುವರು
ಕಂಬದ ಬೊಂಬೆಯ ಮಾಡಿ
ಮೈಲಾರ ಭೈರವ ಅಯಿರ (?)
ಧೂಳ ಕೇತನೆಂಬ ಕಾಳುದೈವವ
ಊರೂರದಪ್ಪದೆ ತಿರಿತಿಂಬ
ಡಂಬಕರ ಕಯ್ಯಲ್ಲಿ ಉಪದೇಶವ
ಕೊಂಡವರು, ಗುರುಲಿಂಗ ಜಂಗಮದ
ಹೊಲಬನಱಿಯದೆ ಭಂಗಿತರಾದರು,

ಅಂಗದ ಮೇಲಣ ಸೂತಕ ಹಿಂಗದು ;
ಅನ್ಯ ದೈವದ ಜಾತ್ರೆಯ ಹೋಗಿ
ನಾಡ ನರಕದಲ್ಲಿ ಬೆರಣಿಯ
ಮಾಡುವ ನಾನಾ ಜಾತಿಗಳು ಹರಕೆಯ
ಹಿಂಗಿಸದೆ ಗುರು ಕಾರುಣ್ಯವ
ಕೊಟ್ಟವಂಗೆ ಕುಂಭಿನಿ ಪಾತಕ
ತಪ್ಪದೆಂದ ಕಲಿದೇವರ ದೇವಯ್ಯ ‖ 11 ‖

ಇರುಳು ಹಗಲು ಎಂದಱಿಯದೆ
ಅಂಧಕನ ಕೈಯಲ್ಲಿ ಕೈದೀವಟಿಗೆ
ಇದ್ದರೇನು ಸದಾಚಾರಕ್ಕೆ ಯೋಗ್ಯನಹನೆ !
ಭಕ್ತರ ಗೃಹದಲ್ಲಿ ತುಡುಗುಣಿ ತಿಂದ
ಸೂಕರ ಹೊಲಸಿಂಗೆಱಗಿದ
ತೆಱನಂತೆ ಕಲಿದೇವರ ದೇವಯ್ಯ ‖ 12 ‖

ಕರ್ಮ ಬದ್ಧಿ ಎಡೆಗೊಂಡಿತ್ತು
ಕರ್ಮಕ್ಕೊಳಗಾಗಿ ಹೋಗಬೇಡೆಂದು
ಷೋಡಶ ಉಪಚಾರದಿಂದ ಶ್ರೀಗುರು
ಭಕ್ತಿಯನಱುದು ಸತ್ಯಸದಾಚಾರದ
ಧರ್ಮ ನೆಲೆಗೊಳಬೇಕೆಂದು
ಸಾಹಿತ್ಯ ಸಂಬಂಧವ ಕೊಟ್ಟು
ಶ್ರೀ ಗುರು ಉಪದೇಶ ಹೇಳಿದ
ಮಾರ್ಗವಿಡಿದು ನಡೆಯಲೊಲ್ಲದೆ
ನಾಯಿ ಜಾತಿಗಳು ಕೀಳು ದೈವದ
ಜಾತ್ರೆಗೆ ಹೋಗಿ ಬೆನ್ನ ಸೀಳಿ
ಸಿಡಿಯ ಮರನೇಱಕೊಂಡು
ಅಂಗ ಲಿಂಗವು ಸಂಗಾತ ಒದ್ದಾಡುವ
ಭಂಗಿತರು ತಾವು ಬೆಳ್ಳಿ ತಗಡಿನ
ದೇವರ ಮಾಡಿ ಮನೆದೇವರೆಂದು
ಕೊರಳಲ್ಲಿ ಕಟ್ಟಿಕೊಂಡು, ಬಱಬಂದರೆ
ಜೋಳಕ್ಕೆ ಮಾಱುತಿಂಬ ಕೀಳು
ಜಾತಿಗಳು ಏಳೇಳು ಜನ್ಮಕ್ಕಾಗಿಯಾಗಿ
ತನ್ನ ಬಾಯಲುಂಬ ನರಕ
ತಪ್ಪದೆಂದನು ಕಲಿದೇವರ ದೇವಯ್ಯ ‖ 13 ‖

ಒಂದೆ ಭಾವದಿಂದ ಗುರು ಲಿಂಗಾರ್ಚನೆ
ಪೂಜೆಯಂ ಮಾಡಿ, ಹಿಂದಣ ಭವ
ಜನ್ಮ ದಂದುಗವನೆ ಗೆಲಿದು

ಶಿವನ ಫಲುಸಂದ ಪ್ರಮಥರ ಸರಿ
ಎನಿಸಿಕೊಂಬುದು ಸಾಮಾನ್ಯವಲ್ಲ
ಕಂದನ ಶಿವಗರ್ಪಿತವ ಮಾಡಿ
ಸಿರಿಯಾಳ ಸೆಟ್ಟಿ ಕೈಲಾಸವ ಕಾಬುದು
ಸಂದೇಹವಾಗಿಹುದೆಂದ.
ಹೃದಯದ ಅಂಧಕಾರ ಹರೆಯಲೆಂದು
ಗುರುದೇವನು ಬೆಳಗ ತೋಱಿದ.
ಹಿಂದಣ ಸೂತಕ ತೊಳೆಯಲೆಂದು
ನಿಂದರು ಮಾಯಾ ಬಂಧನದಲ್ಲಿ ಸಿಕ್ಕಿ
ಗುರುವಿಂಗೆ ವಂದನೆಯ ಮಾಡದೆ
ಶಿವಗತಿಗೆ ಸಂದೆನೆಂಬ ಸ್ವಾಮಿ ದ್ರೋಹಿ
ಗಳಿಗೆ ಎಂದು ಗತಿಯಿಲ್ಲ ಎಂದನು
ಕಲಿದೇವರ ದೇವಯ್ಯ ! ॥ 14 ॥

ಹೆತ್ತ ತಾಯಿ ತಂದೆ ಬಂಧು ಬಳಗ
ಸತಿ ಸುತರಾದ ಸೋದರರುಗಳಲ್ಲಿ
ಭವಿಯಾಗಿದ್ದವರ ಮೋಹ ಬಿಟ್ಟಲ್ಲದೆ
ಶಿವಭಕ್ತಿ ನೆಲೆ ಸಿಕ್ಕದು,
ಭಕ್ತಿಯ ಪಥವನಱಿಯದೆ ಯುಕ್ತಿ
ಹೀನರು ತಮ್ಮ ಹೆತ್ತ ತಾಯಿತಂದೆ
ಲೋಭಕ್ಕೆ ಸಾಹಿತ್ಯ ಸಂಬಂಧವ ಕೊಂಡು
ಮೃತ್ಯು ಮಾರಿ ಎಂಜಲ ತಿಂಬ
ನಾಯಿಯ ಹೊಲೆ ಸೂತಕ ಬಿಡದೆ ಹೋಯಿತ್ತು
ಕಟಿಗ ಕೂರಲಗಿನ ಮನೆಯಲ್ಲಿ
ಸಿಕ್ಕಿಸಿಕೊಂಡು ಸತ್ತು ಹೋದವರ
ಸಿಂಹದ ಹೋಲಿಕೆಗೆ ಮರನ ಚೋಹವ ಮಾಡಿ
ಹೊತ್ತುಕೊಂಡು ಬಿಳಗೊಳನುಂಬ (?)
ದುಃಕರ್ಮಿಗಳು ಶಿವಭಕ್ತಂಗೆ ಸರಿ ಎಂದು
ಬಗುಳುವ ನಾಯಿಗೆ ಹತ್ತೆಂಟು ಬಾರಿ
ತಿರುಗುವ ನರಕ ತಪ್ಪದೆಂದ
ಕಲಿದೇವರ ದೇವಯ್ಯ ! ॥ 15 ॥

ನರರ ಹೊಗಳಿದರೆ ಗತಿಯಿಲ್ಲ
ಸುರರ ಹೊಗಳಿದರೆ ಗತಿಯಿಲ್ಲ
ಹರಿಬ್ರಹ್ಮ ಇಂದ್ರಾದಿ ಚಂದ್ರಾದಿಗಳ
ಹೊಗಳಿದರೆ ಗತಿಯಿಲ್ಲ
ಪರಸತಿ ಪರಧನಗಳಿಗಳುಪಿ

ದುರ್ಯೋಧನ ಕೀಚಕ ರಾವಳರೆಂಬುವರು
ಮರಣವಾಗಿ ಹೋದವರ ಸಂಗತಿಯ
ಹೇಳಿ ಕೇಳಿದರೇನು ಗತಿಯಿಲ್ಲ.
ಶ್ರೀ ಗುರುವಿನ ಚರಣವನಱಿಯದ
ಕಿಱುಕುಳ ದೈವದ ಬೋಧೆಯ ಹೇಳಿ
ಆನು ಬದುಕಿದೆನೆಂಬ ಕವಿ ಗಮಕಿ ನಾನಲ್ಲ
ಹರ ನಿಮ್ಮ ನೆನವ ಶರಣರ ಚರಣದ
ಗತಿಯಲ್ಲಿ ಇಪ್ಪೆನೆಂದ ಕಲಿದೇವರ ದೇವಯ್ಯ ॥ 16 ॥

ಕಾಲಿಲಿ ಕೂರಲಗ ಮೊನೆಯಲ್ಲಿಱುಸಿಕೊಂಡು
ಸತ್ತು ಹೋದವರ ಸಮರ್ಥಿಕೆಯ
ಹೊಗಳಿ ಹೊಟ್ಟೆಯ ಹೊರೆವ ಕವಿಗಳು
ಒಂದು ಕೋಟಾನು ಕೋಟಿ.
ಅರ್ಥವುಳ್ಳವರ ಅಗ್ಗಳಿಕೆಯ
ಹೊಗಳುವ ಕವಿಗಳು ಕೋಟಾನು ಕೋಟಿ.
ಲಿಂಗವ ಹೊಗಳಿ ಹೊಗಳಿ ಅಂಗದಸೂತಕ
ಹಿಂಗಿಸಿ ಜಂಗಮದ ದಾಸೋಹದಿಂದ
ಸರ್ವಾಂಗ ಲಿಂಗಿಯಾದ
ಭಕ್ತನಂಗಳವೆನಗೆ ವಾರಣಾಸಿ,
ಗಾಯತ್ರಿ ಮಲ ಪ್ರಹರಿಯಿಂದಧಿಕವಯ್ಯ!
ಕಲಿ ದೇವರ ದೇವಯ್ಯ! ॥ 17 ॥

ಹೆಣ್ಣಿಗಾಡಿ ಸತ್ತವರಿಗೆ ಜನನ ಮರಣ.
ಹೊನ್ನಿಂಗಾಡಿ ಸತ್ತವರಿಗೆ ಜನನ ಮರಣ
ಶಿವಭಕ್ತರಿಗಾಗಿ ಶಿವಾಚಾರಕ್ಕೆ ಸತ್ತರೆ
ಮುಕ್ತಿಯ ಪಥವುಂಟು ಕಾಣಾ
ಕಲಿ ದೇವರ ದೇವಾ ॥ 18 ॥

ಹರನೊಡ್ಡಿದ ಮಾಯವು
ಹರಿಯಾ ಹತ್ತು ಭವಕ್ಕೆ ತಂದಿತ್ತು.
ಅರುಹನೆಂಬವನ ಬತ್ತಲೆ ಬರಿಸಿತ್ತು
ಪರವು ತಾನೆಂಬವನ ಬ್ರಹ್ಮನ ಶಿರವ
ಹೋಗಾಡಿತ್ತು.
ಗುರುಲಿಂಗ ಜಂಗಮದ ಹವಣ
ನಱಿಯಬೇಕೆಂದು ತಂದೆ ತಾಯಿ
ಗುರುವೆಂದು ಹೊತ್ತು ತಿರುಗಿದ
ಚೌಂಡಲಯ್ಯ ಒಂದೆ ಬಾಣದಲ್ಲಿ

ಗುರಿಯಾಗಿ ಸತ್ತ ಕೇಡ ನೋಡಾ!
ಇಂತಿದಿನಱಿಯದೆ ಮರದ ನರಜೀವಿಗಳು
ಸುರೆಯ ದೈವದ ಸೇವೆಯ ಮಾಡಿ
ಇತ್ತ ಹರನ ಹೊಗಳಿ ;
ವೇದಶಾಸ್ತ್ರ, ಪುರಾಣಾಗಮಂಗಳ ನರಿತರಿತು
ಮರಳಿ ಅನ್ಯದೈವಕ್ಕೆಱಗುವ
ದುರಾತ್ಮರಿಗೆ ಇಹಪರವಿಲ್ಲವೆಂದ
ಕಲಿದೇವರ ದೇವಾ ॥ 19 ॥

ಗುರು ಲಿಂಗ ಜಂಗಮದ ಪಾದತೀರ್ಥ
ಪ್ರಸಾದವಂ ಸಂಬಂಧಿಸಿದ ಕಾರಣ
ಶಾಶ್ವತ ಪದವಿಯ ಪಡೆದೆನೆಂಬ
ದೂಷಕ ನಿಂದಕರು ಪರವಾದಿಗಳಿಗೆ
ನಾಗನಾಥ ಪುನಃ ? ಇಲ್ಲ ಎಂದೆನಿಸಿದ
ಹೊಲತಿ ಡೊಂಬಿತಿಯರ ಅಧರವ ಸವಿವ
ಅನಾಚಾರಿಗಳು ಸದ್ಗುರು ಲಿಂಗಜಂಗಮದ
ಪ್ರಸಾದ ಎಂಜಲೆಂದು ಹೊಲೆ ದೈವದ
ಎಂಜಲವ ಭುಂಜಿಸುವ, ಕುಲವ
ಮೆಱೆವ ಕುಜಾತಿಗಳ ನುಡಿಯ ಕೇಳ
ಲಾಗದು ಎಂದ ಕಲಿದೇವರ ದೇವಾ ॥ 20 ॥

ನಿತ್ಯ ನೇಮವ ಮಾಡದ
ಒಡಲ ಹೊರವನೆ ಹೊಲೆಯನು
ತತ್ವವ ನುಡಿದರೇನು !
ಒಂದು ನಿಜವಿಲ್ಲದೆ ಇಹನೆ ಹೊಲೆಯನು.
ಅರ್ಥದಾಸೆಗೆ ಪ್ರಾಣವ ಹತ
ಮಾಡುವನೆ ಹೊಲೆಯ !
ಸತ್ಯ ಸದ್ಗುಣ ಹಿತಾರ್ಥ ಧರ್ಮ
ವಿಲ್ಲವೆಂಬವನೆ ಹೊಲೆಯ !
ಭಕ್ತಿ ಮುಕ್ತಿಯ ಪಥವನು ಹುಸಿ
ಎಂಬುವನೆ ಹೊಲೆಯ !
ಗುರುಲಿಂಗ ಜಂಗಮದ ಪಾದತೀರ್ಥ
ಪ್ರಸಾದವನೊಲ್ಲೆನೆಂಬುವನೆ ಹೊಲೆಯ!
ಮತ್ತೆ ಪಶು ಘಾತಕವ ಮಾಡುವವನೆ
ಹೊಲೆಯ !
ಇಂತು ಏಳು ಹೊಲೆಯ ಹಿಂಗಿಸದೆ
ತನ್ನ ಕುಲದ ಹೆಮ್ಮೆಯ ಮೇಱೆವ

ಕುನ್ನಿಗಳ ನುಡಿಯ ಕೇಳಲಾಗದು
ಎಂದ ಕಲಿದೇವರ ದೇವ ॥ 21 ॥

ಅಂಧಕಾರ ದೆಸೆಯಿಂದ ಚಂದ್ರನ
ಪ್ರಭೆಯಾಯಿತು !
ನಿಂದಕರ ನುಡಿಯ ಏಡಿಸಲ್ಕೆ
ಶಿವಭಕ್ತಿಯ ಪ್ರಭೆಯಾಯಿತು !
ಅಹುದೆಂದಡಲ್ಲವೆಂದತಿಗಳವರು
ಕುತರ್ಕ ಶಾಸ್ತ್ರದಿಂದ ಯಮಗತಿಗರ
ಕೂಡೆ, ನಾನಾ ಜನ್ಮಕ್ಕೀಡದೆ ಶಿವಾಚಾರದ
ಪಥವ ತೋಱಿಸಯ್ಯ ಕಲಿದೇವರದೇವಾ ॥ 22 ॥

ಭೂತಳ ಹದಿನಾಲ್ಕಕ್ಕೆ ಕರ್ತನೆಂಬ
ಶಿವನನಾರಾಧಿಸಲೊಲ್ಲದೆ
ಲಿಂಗವಂತರೆಂಬ ಸೂತಕದ
ನುಡಿಯ ಕೇಳಲಾಗದು
ಸತ್ತ ಕುಱಿ ಕೋಣ ಕೋಳಿಯ
ಬೇಡುವ ಭೂತ ಪ್ರೇತ ಅನ್ಯದೈವದ
ಎಂಜಲ ಭುಂಜಿಸುವ ನರನಿಗೆ
ಏಳೇಳು ಜನ್ಮ ನರಕ ತಪ್ಪದೆಂದ
ಕಲಿದೇವರ ದೇವಯ್ಯ ॥ 23 ॥

ಶ್ವಾನ ಮುಟ್ಟಿದ ಎಂಜಲನು
ಮಾನವರು ಕೇಳ್ವರು,
ಶ್ವಾನನಿಂದ ಕಡೆ ಕಷ್ಟ
ಸುರೆ ದೈವದ ಎಂಜಲ ತಂದು
ಆನಂದವೆಂಬ ಲಿಂಗಕ್ಕೆ ತೋಱಿ
ಭುಂಜಿಸುವಂಗೆ, ಆ ಶ್ವಾನ ಸೂಕರ
ಗಂಗೆಯ ಮಿಂದಱಿತೆಸಂತೆ
ಕಲಿದೇವರ ದೇವಾ ॥ 24 ॥

(ಮುಂದುವರಿಯುವುದು)

ಕರ್ನಾಟಕದ ಜೈನಧರ್ಮದಲ್ಲಿ ಯುದ್ಧ ಮತ್ತು ಅಹಿಂಸೆಗಳ ಕಲ್ಪನೆ*

ಎಂ. ಚಿದಾನಂದಮೂರ್ತಿ

I

ಸೋಮದೇವನ ಯಶಸ್ತಿಲಕ ಚಂಪುವಿನಲ್ಲಿ "ಧರ್ಮವೆಂದರೇನು?" ಎಂಬ ಪ್ರಶ್ನೆಯನ್ನು ಕೇಳಿ ಅದಕ್ಕೆ ಹೀಗೆ ಉತ್ತರವನ್ನು ನೀಡಿದೆ: "ಯಾವುದು ಎಲ್ಲಾ ಜೀವಿಗಳಿಗೂ ದಯೆಯನ್ನು ತೋರುವುದೋ ಅದೇ ಧರ್ಮ".[1] ಪಂಪನ ಆದಿ ಪುರಾಣದ ಪ್ರಕಾರ (2.7) ಧರ್ಮಕ್ಕೆ ಅಂಗಗಳು ಇವು–ದಯೆ, ದಾನ, ತಪ, ಶೀಲ. ಇವುಗಳ ಸಹಾಯದಿಂದ ಧರ್ಮವು ಭವದಲ್ಲಿ ಮುಳುಗಿರುವ ಜನರನ್ನು ಎತ್ತಿ ಮುಕ್ತಿಗೆ ಕೊಂಡೊಯ್ಯುತ್ತದೆ, ಎಂದು ಪಂಪನ ಹೇಳಿಕೆ.[2] ಇಂತಹ ನೂರಾರು ಉಲ್ಲೇಖಗಳು ದಯೆ ಅಥವಾ ಅಹಿಂಸೆಯೇ ಜೈನಧರ್ಮದ ಅಡಿಗಲ್ಲೆಂಬುದನ್ನು ಸಾರಿ ಹೇಳುತ್ತವೆ. ("ಜೀವದಯೆ ಜೈನಧರ್ಮಂ").

ಅಹಿಂಸಾ ಎಂದರೆ ಕೊಲೆಯ ನಿಷೇಧ ಮಾತ್ರವಲ್ಲ. ಎಲ್ಲ ಬಗೆಯ ಹಿಂಸೆಗಳಿಂದಲೂ ದೂರವಿರುವುದನ್ನು ಅದು ಒಳಗೊಳ್ಳುತ್ತದೆ. ಉದಾಹರಣೆಗೆ, ಬೈಗಳು ಒಂದು ಬಗೆಯ ಹಿಂಸೆಯೇ ಆಗಬಹುದು. ಅಷ್ಟೇ ಅಲ್ಲ, ಹಿಂಸಿಸಬೇಕೆಂಬ ಭಾವನೆಯೂ ಕೂಡ ಅಥವಾ ಜೀವಿಗಳಿಗೆ ಕೆಡಕು ಮಾಡಬೇಕೆನ್ನುವ ಒಂದು ಆಲೋಚನೆ ಅಥವಾ ಸಂಕಲ್ಪವೂ ಕೂಡ ಹಿಂಸೆಯೇ. ನಿಜವಾದ ಅಹಿಂಸೆ ಅಂತಹ ಆಲೋಚನೆ ಅಥವಾ ಸಂಕಲ್ಪಗಳಿಂದಲೂ ಮುಕ್ತವಾಗಿರಬೇಕು. ಜೈನ ಸನ್ಯಾಸಿಯಾದವನು ಕೈಗೊಳ್ಳುವ 'ಮಹಾವ್ರತ'ಗಳಲ್ಲಿ ಅಹಿಂಸೆಯೂ ಒಂದು ಮತ್ತು

---

* 18-3-75 ರಂದು ಕರ್ನಾಟಕ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದಲ್ಲಿ ಏರ್ಪಡಿಸಿದ್ದ "ಕರ್ನಾಟಕ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ" ಎಂಬ ವಿಚಾರಗೋಷ್ಠಿಯ ಮುಂದೆ ಮಂಡಿಸಿದ ಇಂಗ್ಲಿಷ್ ಪ್ರಬಂಧದ ಕನ್ನಡ ರೂಪ. ಇಂಗ್ಲೀಷ್ ಪ್ರಬಂಧವು ಪೂಣೆ ವಿಶ್ವವಿದ್ಯಾಲಯ ಪ್ರಕಟಿಸುವ *Indian Philosophical Quarterly* (III, i: oct. 1975) ಪತ್ರಿಕೆಯಲ್ಲಿ ಪ್ರಕಟವಾಗಿದೆ.

1 K. K. Handiqui : *Yashastilaka and Indian Culture*, pp. 246-7 ("ಕೋ ಭಗವನ್ನಿಹ ಧರ್ಮ ಯತ್ರ ದಯಾ ಭೂಪ ಸರ್ವಸತ್ವಾನಾಂ".

2 "ಭವವಾರಾಶಿನಿಮಗ್ನರಂ ದಯೆ ದಾನಂ ತಪಂ ಶೀಲಮೆಂಬಿವೆ ಮೆಯ್ಯಾಗಿರೆ ಸಂದ ಧರ್ಮಮ ವಲಂ ಪೊತ್ತೆತ್ತುಗುಂ ಮುಕ್ತಿಪರ್ಯವಸಾನಂಬರಂ"

ಅವುಗಳಲ್ಲಿ ಅಹಿಂಸೆಯೇ ಅತ್ಯಂತ ಮುಖ್ಯವಾದುದು. ಅವನು ಅಹಿಂಸಾ ವ್ರತವನ್ನು ಎಚ್ಚರಿಕೆ ಮತ್ತು ಶ್ರದ್ಧೆಯಿಂದ ಪರಿಪಾಲಿಸಬೇಕು. ತಿಳಿದೋ ತಿಳಿಯದೋ ಮಾಡುವ ಅಥವಾ ಮಾಡಬಹುದಾದ ಎಲ್ಲ ಬಗೆಯ ಹಿಂಸಾ ಪ್ರಕಾರಗಳನ್ನು ಸಂಪೂರ್ಣ ವರ್ಜಿಸಬೇಕು.

ಇತರ ಎಲ್ಲ ಧರ್ಮಗಳಲ್ಲಿ ಹೇಗೋ ಹಾಗೆ ಜೈನಧರ್ಮದಲ್ಲೂ "ಸನ್ಯಾಸಿಯ ನಡವಳಿಕೆಯೇ ಎಲ್ಲರಿಗೂ ಮಾದರಿ. ಗೃಹಸ್ಥನಾದವನು ಆ ನಡವಳಿಕೆಯನ್ನು ಸಂಪೂರ್ಣವಾಗಿ ಅನುಸರಿಸಲು ಸಾಧ್ಯವಿಲ್ಲವಾದರೂ, ಕೆಲವು ವಿಶಿಷ್ಟ ವ್ರತಗಳನ್ನು ತೆಗೆದುಕೊಳ್ಳುವುದರ ಮೂಲಕ ಆ ಮಾದರಿಯ ಹತ್ತಿರಕ್ಕೆ ಹೋಗಲು ಪ್ರಯತ್ನಿಸುತ್ತಾನೆ."[3]

ಗೃಹಸ್ಥ ಅಥವಾ ಶ್ರಾವಕರಿಗೆ ವಿಧಿಸಲಾದ ವಿಶಿಷ್ಟ ವ್ರತಗಳು 'ಮಹಾವ್ರತ'ಗಳಷ್ಟು ಕಠಿಣವಲ್ಲ. ಆದ್ದರಿಂದಲೇ ಅವುಗಳನ್ನು 'ಅಣುವ್ರತ'ಗಳೆಂದು (ಚಿಕ್ಕ ವ್ರತಗಳು) ಕರೆಯುವುದು. ಅಣುವ್ರತಗಳು ಐದು-ಆದ್ದರಿಂದ ಅವನ್ನು 'ಪಂಚಾಣುವ್ರತ'ಗಳೆಂದೂ ಕರೆಯುತ್ತಾರೆ.[4] ಇವುಗಳಲ್ಲಿ ಮೊದಲನೆಯದು 'ಪ್ರಾಣಾತಿಪಾತ ವಿರಮಣವ್ರತ'-ಈ ವ್ರತದ ಪ್ರಕಾರ ಶ್ರಾವಕನು ಯಾವುದೇ ಜೀವಿಯನ್ನು ಎಂದೆಂದಿಗೂ ಉದ್ದೇಶಪೂರ್ವಕವಾಗಿ ಕೊಲ್ಲಕೂಡದು ಅಥವಾ ಹಿಂಸಿಸಲೂಕೂಡದು.

ವ್ಯವಹಾರದ ದೃಷ್ಟಿಯಿಂದ ನೋಡಿದರೆ ಇಂತಹ ವ್ರತವು ಮನುಷ್ಯನಿಂದ ಎಂದೆಂದಿಗೂ ಸಾಧಿಸಲಾಗದಂತಹ ಆದರ್ಶವೆಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಿಲ್ಲ. ಉದಾಹರಣೆಗೆ, ಒಬ್ಬ ಸನ್ಯಾಸಿ ಯುದ್ಧ ಮಾಡದೇ ಇರಲು ಸಾಧ್ಯವಿರಬಹುದು. ಆದರೆ ಸಾಮಾನ್ಯ ಗೃಹಸ್ಥರೇ ಬಹುಪಾಲು ಇರುವ ಸಮಾಜವೊಂದು ಜಯಾಕಾಂಕ್ಷೆಯಿಂದಲೋ ಆತ್ಮರಕ್ಷಣೆಗಾಗಿಯೋ ಯುದ್ಧವನ್ನು ಮಾಡದೇ ಇರಲು ಸಾಧ್ಯವೇ ಇಲ್ಲ. ಜೈನಧರ್ಮವು ಈ ಸಮಸ್ಯೆಯನ್ನು ಗುರುತಿಸಿದೆ ಮತ್ತು ಅದನ್ನು ತನ್ನದೇ ರೀತಿಯಲ್ಲಿ ಬಿಡಿಸಲೂ ಪ್ರಯತ್ನಿಸಿದೆ. ಸಾಧಾರಣವಾಗಿ ಶ್ರಾವಕನಾದವನು ತನ್ನ ಬಳಿ ಆಯುಧಗಳನ್ನು ಇರಿಸಿಕೊಳ್ಳುವಂತಿಲ್ಲ. ಅವುಗಳನ್ನು ಬೇರೆಯವರಿಗೆ ಸರಬರಾಜು ಮಾಡುವಂತೆಯೂ ಇಲ್ಲ. ಅವನು ಅಣುವ್ರತಗಳಿಗೆ ಸಹಾಯಕವಾಗುವಂತಹ ಮೂರು 'ಗುಣವ್ರತ'ಗಳನ್ನು ಅನುಸರಿಸಬೇಕೆಂಬ ನಿಯಮವನ್ನು ವಿಧಿಸಲಾಗಿದೆ. 'ಅನರ್ಥದಂಡ ವಿರತಿ' ಎಂಬುದು ಈ ಗುಣವ್ರತಗಳಲ್ಲಿ ಒಂದು. 'ಅನರ್ಥದಂಡ ವಿರತಿ'ಯ ಪ್ರಕಾರ—ಶ್ರಾವಕ ಆಯುಧಗಳನ್ನು ಇಟ್ಟುಕೊಳ್ಳುವುದಾಗಲೀ ಶಸ್ತ್ರವಿದ್ಯೆಯನ್ನು ಇನ್ನೊಬ್ಬನಿಗೆ ಬೋಧಿಸುವುದಾಗಲೀ ಪಾಪ

---

3 Jacobi : 'Jainism' (Encyclopaedia of Religion and Ethics)

4 "ಕೊಲೆ, ಪುಸಿ, ಕಳವು, ಪರದಾರ, ಅತಿಕಾಂಕ್ಷೆ ಎಂಬಿವಂ ತೊರೆವುದು ಅಣುವ್ರತಂಗಳ್"
(ಮಾಘಣಂದಿಯ ಪದಾರ್ಥಸಾರ. ಸಂ. ಎಂ. ಶಿ. ಪದ್ಮನಾಭಶರ್ಮ, ಪು. 149)

ಕೃತ್ಯವಾಗುತ್ತದೆ. ತತ್ವರತ್ನ ಪ್ರದೀಪಿಕೆ ಹೇಳುತ್ತದೆ (ಪು. 277)—ಶಸ್ತ್ರದಾನವು ಹಿಂಸೆಯ ಒಂದು ಪ್ರಕಾರವೇ ಆದಕಾರಣ ಅದನ್ನು ತ್ಯಜಿಸಬೇಕು. ("ವಿಷ ಕಂಟಕ ಶಸ್ತ್ರ ಅಗ್ನಿ ರಜ್ಜುಕ ದಂಡಾದಿಹಿಂಸೋಪಕರಣಪ್ರದಾನಂ ಹಿಂಸಾಪ್ರದಾನಂ")

ಶ್ರಾವಕನನ್ನು ಲಕ್ಷ್ಯದಲ್ಲಿರಿಸಿಕೊಂಡು ಹಿಂಸೆಯನ್ನು ನಾಲ್ಕು ಬಗೆಯಾಗಿ ವರ್ಗೀಕರಿಸಲಾಗಿದೆ[5] :

1 ಸಂಕಲ್ಪೀ

2 ವಿರೋಧೀ

3 ಆರಂಭೀ

4 ಉದ್ಯೋಗೀ

ಒಬ್ಬ ಮನುಷ್ಯ ತನ್ನನ್ನು ಸಂರಕ್ಷಿಸಿಕೊಳ್ಳುವಾಗಲೋ ಇತರರ ರಕ್ಷಣೆ ಮಾಡುತ್ತಿರುವಾಗಲೋ ಮಾಡಿದ ಹಿಂಸೆಯೇ ವಿರೋಧೀ ಹಿಂಸಾ. ತನ್ನ ನಾಡನ್ನೋ ಧರ್ಮವನ್ನೋ ಸಂರಕ್ಷಿಸಲಿಕ್ಕಾಗಿ ಯುದ್ಧವನ್ನು ಮಾಡಬಹುದು. ಎದುರುಬಿದ್ದ ಕಳ್ಳರನ್ನು ಕೊಲ್ಲುವ ಪ್ರಸಂಗ ಬರಬಹುದು. ಮೇಲಿನ ನಾಲ್ಕು ಹಿಂಸೆಗಳಲ್ಲಿ ಬೇಕೆಂದೇ ಮಾಡುವ ಹಿಂಸೆಯಾದ 'ಸಂಕಲ್ಪೀ'ಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಉಳಿದ ಮೂರು ಹಿಂಸೆಗಳೂ—ಒಂದು ದೃಷ್ಟಿಯಿಂದ ಅನಿವಾರ್ಯವಾದವು ; ಆದರೂ ಇಲ್ಲಿಯೂ ಶ್ರಾವಕನು ಎಚ್ಚರದಿಂದ ಇರಬೇಕೆಂದೂ ಆದಷ್ಟು ಸಂಯಮವನ್ನು ತೋರಬೇಕೆಂದೂ ಎಚ್ಚರಿಸಲಾಗಿದೆ. ಜೈನಧರ್ಮದ ನೀತಿ ನಿಯಮಗಳ ಬಗ್ಗೆ ಜೆ. ಜೈನಿಯವರು ಹೀಗೆ ಹೇಳುತ್ತಾರೆ : "ಜೈನನೀತಿಶಾಸ್ತ್ರವನ್ನು (Jaina ethics) ಎಲ್ಲ ಬಗೆಯ ಜನರನ್ನೂ ಲಕ್ಷ್ಯದಲ್ಲಿರಿಸಿಕೊಂಡು ರೂಪಿಸಲಾಗಿದೆ–ರಾಜರು, ಯೋಧರು, ವರ್ತಕರು, ಕುಶಲಕರ್ಮಿಗಳು, ರೈತರು, ಜೀವನದ ನಾನಾ ಕ್ಷೇತ್ರಗಳಲ್ಲಿರುವ ಎಲ್ಲ ಸ್ತ್ರೀ ಪುರುಷರಿಗೂ ಅನ್ವಯಿಸುವಂತೆ ರೂಪಿಸಿದ್ದಾರೆ. ಜೈನನೀತಿ ನಿಯಮಾವಳಿಯನ್ನು ನೋಡಿಕೊಂಡು ಅತಿ ಶ್ರೇಷ್ಠರಾದವರು ತಮ್ಮ ಕೆಲಸ ಕಾರ್ಯಗಳಿಗೆ ಸೂಕ್ತ ಮಾರ್ಗದರ್ಶನವನ್ನು ಪಡೆಯಬಹುದು. ಕನಿಷ್ಠವರ್ಗದವರೂ ಆ ನಿಯಮಾವಳಿಗಳನ್ನು ಅನುಸರಿಸಬಹುದು. 'ನಿನ್ನ ಕರ್ತವ್ಯವನ್ನು ಮಾಡು, ಎಷ್ಟು ಸಾಧ್ಯವೋ ಅಷ್ಟು ಸೌಮ್ಯವಾಗಿ ಮಾಡು'–ಇದು ಜೈನ ಧರ್ಮದ ಮುಖ್ಯ ಬೋಧನೆಯ ಸಾರಾಂಶ. ಅಹಿಂಸೆಯು ಒಬ್ಬನ ಕರ್ತವ್ಯಕ್ಕೆ ಅಡ್ಡಿಯಾಗಲಾರದು. ರಾಜನೋ, ನ್ಯಾಯಾಧೀಶನೋ ಕೊಲೆಪಾತಕನನ್ನು ಗಲ್ಲಿಗೇರಿಸುವ ಪ್ರಸಂಗ ಬರಬಹುದು. ಇದನ್ನು ಜೈನಧರ್ಮವು ಒಂದು ಕರ್ತವ್ಯವೆಂದು ವಿಧಿಸುತ್ತದೆ.

---

5 ಹೀರಾಲಾಲ್ ಜೈನ್: ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ(ಅನು-ಮಿರ್ಜಿ ಅಣ್ಣಾರಾವ್), ಪು. 318.

ಹಾಗೆಯೇ ಸೈನಿಕನೊಬ್ಬ ಯುದ್ಧರಂಗದಲ್ಲಿ ಯುದ್ಧಮಾಡುವುದು. ಪೂರ್ವ ಗ್ರಹದಿಂದ ಹೊರಟ ವಿಕೃತ ಅಭಿಪ್ರಾಯಗಳು ಮಾತ್ರ ಜೈನಧರ್ಮವನ್ನು ತಪ್ಪಾಗಿ ತಿಳಿಯುವಂತೆ ಮಾಡಿವೆ."[6]

ಇದು ಜೈನಧರ್ಮವು ಯುದ್ಧವನ್ನು ಕುರಿತಾದ ತತ್ತ್ವದ ಬಗ್ಗೆ ತಳೆದಿರುವ ನಿಲುವಿನ ಸಾರಾಂಶ. ಜೈನಧರ್ಮದಲ್ಲಿ ಯುದ್ಧವು ಸ್ವರಕ್ಷಣೆಗೆ ಮಾತ್ರ, ಆಕ್ರಮಣಕ್ಕಲ್ಲ. ತನ್ನ ಅಥವಾ ದೇಶದ ಪ್ರತಿಷ್ಠೆಯನ್ನು ಹೆಚ್ಚಿಸುವ ನೆಪದಲ್ಲೂ ಯುದ್ಧವನ್ನು ಮಾಡುವಂತಿಲ್ಲ. ಯುದ್ಧ ಅನಿವಾರ್ಯವಾದಾಗಲೂ ಹಿಂಸೆಯು ಕನಿಷ್ಠ ಪ್ರಮಾಣದಲ್ಲಿರಬೇಕು.

II

ಒಂದು ಸಮಾಜದ ಅಥವಾ ಧರ್ಮದ ನಂಬಿಕೆ, ಆದರ್ಶ, ಆಸೆ, ಆಕಾಂಕ್ಷೆಗಳನ್ನು ಕಥಾರೂಪವಾಗಿ ಹಿಡಿದಿಡುವ ಪುರಾಣ ಕತೆಗಳು ಏನು ಚಿತ್ರಿಸುತ್ತವೆಯೆಂಬುದನ್ನು ನೋಡೋಣ. ಜೈನಪುರಾಣಗಳಲ್ಲಿ ಬರುವ ತೀರ್ಥಂಕರರೆಲ್ಲರೂ ಕ್ಷತ್ರಿಯರು. ಜೈನಧರ್ಮವಂತೂ, ಉಳಿದ ವರ್ಣಗಳಿಗಿಂತ ಕ್ಷತ್ರಿಯ ವರ್ಣವೇ ಶ್ರೇಷ್ಠವೆಂದು ಉದ್ದಕ್ಕೂ ಪ್ರತಿಪಾದಿಸಿಕೊಂಡು ಬಂದಿದೆ. ಉದಾಹರಣೆಗೆ—ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ (2.23), ಕ್ಷತ್ರಿಯನೇ ಭೂಮಿಗೆ ಒಡೆಯನೆಂದೂ ಅವನೇ ಶ್ರೇಷ್ಠನೆಂದೂ ಹೇಳುತ್ತಾನೆ. ಮೊದಲನೆಯ ತೀರ್ಥಂಕರನೇ ಬ್ರಾಹ್ಮಣವರ್ಣವನ್ನುಳಿದು ಉಳಿದ ಮೂರು ವರ್ಣಗಳನ್ನು ಸೃಷ್ಟಿಸಿದನೆಂದು ನಂಬುತ್ತಾರೆ. ಕ್ಷತ್ರಿಯ ವರ್ಣಕ್ಕೆ ಅವನು ಮಾಡಿರುವ ಕರ್ತವ್ಯ ನಿಯಮಗಳು ಇವು—ಸತ್ಯ, ತ್ಯಾಗ, ಪ್ರಜಾಪಾಲನ, ಶರಣಾಗತ ರಕ್ಷಣ, ಪ್ರಹರಣ ಮತ್ತು ಕ್ಷಮಾ ಇತ್ಯಾದಿ (ಪಂಪನ ಆದಿಪುರಾಣ, 8.73, ವ). ಶಾಂತಿನಾಥನ ಸುಕುಮಾರಸ್ವಾಮಿ ಕತೆಯಲ್ಲಿ ಬರುವ ಅತಿಬಳ ರಾಜನನ್ನು 'ಜಿನಪಾದ ಪಂಕಜ ಭ್ರಮರ'ನೆಂದು ವರ್ಣಿಸಲಾಗಿದೆ. ಅದರ ಜೊತೆಗೆ, ಅವನು ತನ್ನ ದೇಶ ಮತ್ತು ಪ್ರಜೆಗಳ ರಕ್ಷಣೆಗಾಗಿ ಖಡ್ಗಧಾರಿಯೂ ಆಗಿದ್ದನೆಂದು ನಿರೂಪಿಸಲಾಗಿದೆ. (ಸುಕುಮಾರಸ್ವಾಮಿ ಚರಿತಂ, 1.79-80.) ಸೋಮದೇವ ತನ್ನ ನೀತಿವಾಕ್ಯಾಮೃತದಲ್ಲಿ, ತನ್ನ ಸೈನ್ಯವನ್ನು ಸರಿಯಾಗಿ ನೋಡಿಕೊಳ್ಳದ ದೊರೆಯು ಕರ್ತವ್ಯಭ್ರಷ್ಟನಾಗುತ್ತಾನೆ ಎಂದು ಹೇಳುತ್ತಾನೆ. ದೊರೆ ಯಶೋಧರನ ಖಡ್ಗವು ಶತ್ರುಗಳ ರಕ್ತದಿಂದ ಒದ್ದೆಯಾಗಿರುತ್ತಿತ್ತು ಎಂದು ಜನ್ನ ತನ್ನ ಯಶೋಧರ ಚರಿತೆಯಲ್ಲಿ ವರ್ಣಿಸಿದ್ದಾನೆ. ಇದೇ ವ್ಯಕ್ತಿ, ಹಿಟ್ಟಿನಿಂದ ಮಾಡಿದ ಕೋಳಿಯನ್ನು ಬಲಿಕೊಡುವುದರ ಮೂಲಕ 'ಪಾಪ ಕರ್ಮ'ವನ್ನೆಸಗಿದಂತಾಯ್ತು. ಏಕೆಂದರೆ ಇಲ್ಲಿಯ ಹಿಂಸೆಯು ಸಂಕಲ್ಪ ಹಿಂಸೆಯೇ. ಅವನು

6 *Outlines of Jainism* (1940), p. 72

ವಾಸ್ತವವಾಗಿ ಯಾವುದೇ ಪ್ರಾಣಿಹಿಂಸೆ ಮಾಡದಿದ್ದರೂ, ತಾನು ಬಲಿಯಾಗಿ ಏನನ್ನೋ ಕೊಡುತ್ತಿದ್ದೇನೆ ಎಂಬ ಹಿಂಸಾಭಾವದಿಂದ ತಪ್ಪಿಸಿಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ. ಈ ಹಿಂಸೆಯಿಂದಾಗಿ ಅವನು ಅನೇಕ ಭವಭವಗಳಲ್ಲಿ ತೊಳಲ ಬೇಕಾಯಿತು. ಜೀವಂಧರನ ಕತೆಯಲ್ಲಿ ಸತ್ಯಂಧರನೂ ಅವನ ಮಗ ಜೀವಂಧರನೂ ಅನೇಕ ಯುದ್ಧಗಳಲ್ಲಿ ಹೋರಾಡುವುದನ್ನು ಕಾಣುತ್ತೇವೆ. ಅಂತ್ಯದಲ್ಲಿ, ಜೀವಂಧರನು ತನ್ನ ರಾಜ್ಯತ್ಯಾಗ ಮಾಡುವಾಗ ತನ್ನ ಮಗನಿಗೆ ಯುದ್ಧದಲ್ಲಿ ಹೆದರಿ ಓಡಿಹೋಗ ಬಾರದೆಂದೂ 'ಧರ್ಮ'ವನ್ನು ಬಿಡಬಾರದೆಂದೂ, ಜಿನಪಾದವನ್ನು ತ್ಯಜಿಸಬಾರ ದೆಂದೂ ಬುದ್ಧಿವಾದ ಹೇಳುತ್ತಾನೆ. "ಧುರದೊಳೋಡದಿರು, ಧರ್ಮವ ತೊರೆಯ ದಿರು, ಜಿನಪಾದಪದ್ಮವ ಮರೆಯದಿರು''. ಇವೇ ಮೊದಲಾದ ಕತೆಗಳಿಂದ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ—ಯುದ್ಧ ಮಾಡುವುದಾಗಲಿ ಅಲ್ಲಿ ನಡೆಯುವ ಹಿಂಸೆ ಯಾಗಲಿ ಕ್ಷತ್ರಿಯನ ವೃತ್ತಿಯ ಒಂದು ಭಾಗ, ಅದು 'ಕ್ಷತ್ರಿಯ ಧರ್ಮ'. ವ್ಯಾಪಾರಿ ವ್ಯಾಪಾರ ಮಾಡುತ್ತಾನೆ, ರೈತ ಹೊಲ ಉಳುತ್ತಾನೆ, ನೇಯ್ಗೆಯವನು ನೇಯು ತ್ತಾನೆ ; ಅಂತೆಯೇ ಸೈನಿಕ ಯುದ್ಧ ಮಾಡುತ್ತಾನೆ. ಆದ್ದರಿಂದ ಯುದ್ಧವೆನ್ನುವುದು ತನ್ನಷ್ಟಕ್ಕೆ ತಾನೇ ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ. ಉಳುವಾಗ ರೈತ ಅನೇಕ ಜೀವಿಗಳನ್ನು ಹಿಂಸಿಸುತ್ತಾನೆ ; ಆದರೆ ಅದು ಅವನ ಸಂಕಲ್ಪದಿಂದಲ್ಲ. ಆಗಲೂ ಅವನು ಹಿಂಸೆಯನ್ನು ಕನಿಷ್ಠ ಪ್ರಮಾಣದಲ್ಲಿಡಲು ಪ್ರಯತ್ನಿಸಬಹುದು. ಹಾಗೆಯೇ ಒಬ್ಬ ಸೈನಿಕನೂ. ಜೈನಯೋಧ ತನ್ನ ಶತ್ರುವಿನ ಬಗ್ಗೆ ದ್ವೇಷ ಭಾವನೆಯನ್ನು ತಾಳಬಾರದೆಂದು ಜೈನಧರ್ಮವು ಬೋಧಿಸುತ್ತದೆ ಮತ್ತು ಅವನು ಹಿಂಸೆಯಲ್ಲೂ ಸಂಯಮವನ್ನು ತೋರಬೇಕು. ಆದ್ದರಿಂದಲೇ, ಸೈನಿಕನೊಬ್ಬ ತನ್ನ ವೃತ್ತಿಯನ್ನು ಅವಲಂಬಿಸಿಯೂ ತನ್ನ ಮತಧರ್ಮವನ್ನು ಅನುಸರಿಸುವುದು ಸಾಧ್ಯವಾಗುತ್ತದೆ.

ಯುದ್ಧಗಳು ಆತ್ಮರಕ್ಷಣೆಗಾಗಿ ಮಾತ್ರ. ಜೈನ ನೀತಿಶಾಸ್ತ್ರದ ಪ್ರಕಾರ ರಾಜರು ತಮ್ಮ ರಾಜ್ಯಗಳಿಂದ ಹೊರಗೆ ಹೋಗಿ ಬೇರೆ ದೇಶಗಳನ್ನು ಕಬಳಿಸುವುದು ನಿಷಿದ್ಧವಾದುದು. ರತ್ನಾಕರನ ಭರತೇಶ ವೈಭವದಲ್ಲಿ ಬರುವ ಭರತನು ತನ್ನ ದಿಗ್ವಿಜಯದ ಪ್ರಾರಂಭದಲ್ಲಿ ಜಿನನನ್ನು ಅರ್ಚಿಸಿ ಹರಕೆಯನ್ನು ಸ್ವೀಕರಿಸುವುದನ್ನು ಇಲ್ಲಿ ಸ್ಮರಿಸಬಹುದು. ಬೌದ್ಧ ಧರ್ಮದಂತೆಯೇ ಜೈನಧರ್ಮವೂ ಕೂಡ ಲೌಕಿಕ ವಿಜಯಕ್ಕಿಂತ ಧರ್ಮವಿಜಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದೆ. ತೀರ್ಥಂಕರರು ಸಂಪಾದಿಸಿದ ಧರ್ಮವಿಜಯಗಳನ್ನು ಎಲ್ಲ ಜೈನಕವಿಗಳೂ ಮನಸಾರೆ ಹೊಗಳಿದ್ದಾರೆ.

III

ಕರ್ನಾಟಕ ಸಂಸ್ಕೃತಿಗೆ ಜೈನಧರ್ಮವು ನೀಡಿರುವ ಅಮೂಲ್ಯ ಕೊಡುಗೆಗಳು ಹಲವಾರು. ಅವುಗಳಲ್ಲಿ ವೀರಪರಂಪರೆಗೆ ಅದರ ಕೊಡುಗೆ ಸಾಮಾನ್ಯವಾದುದೇನೂ

ಅಲ್ಲ. ಅಹಿಂಸೆಗೆ ಅತಿ ಪ್ರಾಮುಖ್ಯವನ್ನು ಕೊಟ್ಟು ಅದನ್ನೊಂದು ಅತ್ಯುನ್ನತ ಆದರ್ಶವೆಂದು ಘೋಷಿಸುವ ಧರ್ಮವೊಂದಕ್ಕೆ ಬಹುದೊಡ್ಡ ವೀರರು ಅಷ್ಟು ಸಂಖ್ಯೆಯಲ್ಲಿ ಅನುಯಾಯಿಗಳಾಗಿರುವುದು ವಿಲಕ್ಷಣ ಸಂಗತಿಯಾಗಿ ತೋರಬಹುದು. ಈ ಮುಂಚೆ ನಾವು ನೋಡಿದಂತೆ ಜೈನಧರ್ಮವು ಯುದ್ಧವನ್ನು ನಿರಾಕರಿಸಲಿಲ್ಲ. ಆದರ ಜೊತೆಗೇ ಅದು ಒಳ್ಳೆಯ ಕಾರಣಕ್ಕಾಗಿಯೂ ಯುದ್ಧ ಮಾಡುವುದನ್ನು ಎತ್ತಿ ಕೊಂಡಾಡಲಿಲ್ಲವೆನ್ನುವದನ್ನು ನಾವು ನೆನಪಿಡಬೇಕು. ಜೈನ ಧರ್ಮವು ಕೇವಲ ವ್ಯಾವಹಾರಿಕ ಕಾರಣಗಳಿಗಾಗಿ ತನ್ನ ನೀತಿ ಸಂಹಿತೆಯಲ್ಲಿ ಯುದ್ಧಕ್ಕೆ ಸ್ಥಾನ ಕಲ್ಪಿಸಿರು ವಂತೆ ತೋರುತ್ತದೆ. ಇದನ್ನು ಸಾಮಾನ್ಯ ಶ್ರಾವಕರು ಅರಿತಿದ್ದರೆಂಬುದು ಬಹಳ ಸಂದೇಹಾಸ್ಪದವಾದುದು. ಒಂದು ವೇಳೆ ಅದನ್ನು ಅವರು ಅರಿತಿದ್ದರೆಂದು ಭಾವಿಸಿದರೂ, ಕೊಲೆಯ ಬಗ್ಗೆ ಜೈನ ಸಂಹಿತೆಯು ವಿಧಿಸಿರುವ ಮಿತಿಗಳನ್ನು ಅಕ್ಷರಶಃ ಅನುಸರಿಸುವುದು ಅಸಾಧ್ಯದ ಮಾತೇ ಸರಿ. ಉದಾಹರಣೆಗೆ–ಒಬ್ಬ ದೊರೆ ಆತ್ಮರಕ್ಷಣೆ ಗಾಗಿಯೇ ಯುದ್ಧ ಮಾಡಬೇಕೆನ್ನುವುದು ಹೇಗೆ ಸಾಧ್ಯ? ಯಾರೇ ಆಗಲಿ ತನ್ನ ಶತ್ರುಗಳನ್ನು ದ್ವೇಷಿಸದಿರಲು ಹೇಗೆ ಸಾಧ್ಯ? ಸೈನಿಕ ಯುದ್ಧ ಭೂಮಿಯಲ್ಲಿ ಆದಷ್ಟು ಕಡಮೆ ಹಿಂಸೆ ಮಾಡಬೇಕೆನ್ನುವುದನ್ನು ಅನುಸರಿಸುವುದು ಹೇಗೆ? ಹೀಗಿದ್ದರೂ ಜೈನಧರ್ಮವು ಕೆಲವು ಅತ್ಯಂತ ಶ್ರೇಷ್ಠ ಯೋಧರನ್ನು ಕಂಡಿತು ಎಂಬುದು ಗಮನಿಸಬೇಕಾದ ಸಂಗತಿ.

ಜೈನಧರ್ಮಕ್ಕೆ ಕರ್ನಾಟಕದ ಬಹುತೇಕ ಎಲ್ಲ ಅಪ್ರಮುಖ, ಪ್ರಮುಖ ರಾಜ ವಂಶಗಳು ಆಶ್ರಯ ನೀಡಿದ್ದವಲ್ಲದೆ, ಕೆಲವು ದೊರೆಗಳು ಅದರ ನಿಷ್ಠಾವಂತ ಅನು ಯಾಯಿಗಳೂ ಆಗಿದ್ದರು. ಗಂಗರ ಶಾಸನಗಳಲ್ಲಿ ಉಕ್ತವಾಗಿರುವಂತೆ[7], ಸಿಂಹಣಂದಿ ಎಂಬ ಜೈನ ಮುನಿಯೇ ಆ ವಂಶವನ್ನು ಸ್ಥಾಪಿಸಲು ಮಾಧವನನ್ನು ಪ್ರಚೋದಿಸಿದವನು. ಈ ಮಹಾಮುನಿಯು ಮಾಧವನಿಗೆ ಕೊಟ್ಟ ಕೆಲವು ನೀತಿಬೋಧೆಗಳು ಗಮನಾರ್ಹ ವಾಗಿವೆ. ಅಪಾಯ ಬಂದರೂ ಯುದ್ಧಭೂಮಿಯಿಂದ ಓಡಿಹೋಗಬೇಡ ಎಂಬುದು ಅವುಗಳಲ್ಲಿ ಒಂದು. ("......ಆಹವಾಂಗಣದೊಳೋಡಿದೊಡಂ ಕಿಡುಗುಂ ಕುಲ ವ್ರತಂ"). ಮಾಧವನ ಬಳಿಕ ಬಂದ ಅನೇಕ ದೊರೆಗಳು ಜೈನ ಧರ್ಮಕ್ಕೆ ಪ್ರೋತ್ಸಾಹ ವನ್ನು ಕೊಟ್ಟು ಅದರ ಪ್ರಗತಿಗಾಗಿ ತಮ್ಮ ಸರ್ವಸ್ವವನ್ನೇ ಅರ್ಪಿಸಿದರು. ಅವರಲ್ಲಿ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಆಳಿದ ಮಾರಸಿಂಹನೂ ಒಬ್ಬ. ಶ್ರವಣ ಬೆಳಗೊಳದ ಒಂದು ಶಾಸನ ಅವನ ಸಲ್ಲೇಖನ ಮರಣವನ್ನು ವಿಸ್ತಾರವಾಗಿ ವರ್ಣಿ ಸಿದೆ.[8] ಅವನನ್ನು ದೊಡ್ಡ ಶೂರನೆಂದೂ ಅನೇಕ ಕೋಟೆಗಳನ್ನು ಗೆದ್ದವನೆಂದೂ ಅಲ್ಲಿ ಬಂದಿದೆ. ತನ್ನ ವಿಜಯಗಳಿಂದ ಸಂಪಾದಿಸಿದ ಹಣವನ್ನೆಲ್ಲ ಧರ್ಮಕ್ಕಾಗಿ ವಿನಿಯೋಗಿಸಿ

7. Ep. Carn. VII. SK 421, ಇತ್ಯಾದಿ
8. EC. II (Mysore, 1973). No. 64

ಲಾಗಿಟ್ಟನೆಂದು ಅಲ್ಲಿ ಹೇಳಿದೆ. (''ಪಲವೆಡೆಯೊಳ್ ಅರಿಯುರಂ ಸಿರಿಯುರುಮಂ ಕಾದಿ ಗೆಲ್ದು ಪಲವೆಡೆಗಳೊಳಂ ಮಹಾಧ್ವಜಮನೆತ್ತಿಸಿ ಮಹಾದಾನಂಗೆಯ್ದು ನೆಗಳ್ದ ವಿದ್ಯಾಧರಂ......ಧರ್ಮಾವತಾರಂ ಕದನ ಕರ್ಕಶಂ...'') ಬಾದಾಮಿ ಚಾಲುಕ್ಯರು ಬಹುಮಟ್ಟಿಗೆ ಶೈವರೋ ವೈಷ್ಣವರೋ ಆಗಿದ್ದರು. ಆದರೂ ಅವರು ಜೈನ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡಲು ಹಿಂದೆಗೆಯಲಿಲ್ಲ. ಈ ಸಂದರ್ಭದಲ್ಲಿ ಇಮ್ಮಡಿ ಪುಲಿಕೇಶಿಯ ದಿಗ್ವಿಜಯವನ್ನು ವರ್ಣಿಸುವ ರವಿಕೀರ್ತಿಯ ಐಹೊಳೆ ಶಾಸನವನ್ನು ನೆನೆಯಬಹುದು. ರವಿಕೀರ್ತಿಯು ಬಸದಿಯೊಂದನ್ನು ನಿರ್ಮಿಸಿದ ಸಂಗತಿ ಅಲ್ಲಿ ಬಂದಿದೆ. ಚಾಲುಕ್ಯರ ಬಳಿಕ ಬಂದ ರಾಷ್ಟ್ರಕೂಟರು ಜೈನಧರ್ಮಕ್ಕೆ ರಾಜರಿಂದ ದೊರಕಿದ್ದ ಪ್ರೋತ್ಸಾಹವನ್ನು ಮುಂದುವರಿಸಿದರು. ಅವರಲ್ಲಿ ಗಮನಾರ್ಹರೆಂದರೆ ಕ್ರಿ. ಶ. 850 ರ ಅಮೋಘವರ್ಷ ನೃಪತುಂಗ, ಮತ್ತು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಇಂದ್ರರಾಜ. ಈ ಇಂದ್ರರಾಜನ ಸಲ್ಲೇಖನ ವ್ರತವನ್ನೂ ಸಮಾಧಿ ಮರಣವನ್ನೂ ಕ್ರಿ. ಶ. 982 ರ ಶ್ರವಣಬೆಳ್ಗೊಳ ಶಾಸನವು[9] ವರ್ಣಿಸಿದೆ. ಅವನನ್ನು 'ಬೀರರ ಬೀರ' ಎಂದು ವಿಶೇಷಿಸಿರುವುದು ಗಮನಾರ್ಹವಾಗಿದೆ. ಮುಂದೆ ಬಂದ ಕಲ್ಯಾಣ ಚಾಳುಕ್ಯರೂ, ಹೊಯ್ಸಳರೂ, ವಿಜಯನಗರದ ದೊರೆಗಳೂ ಇತರ ಪುಟ್ಟ ರಾಜಮನೆತನಗಳ ಅರಸರೂ ಈ ಧರ್ಮಕ್ಕೆ ಸಾಕಾದಷ್ಟು ಬೆಂಬಲವನ್ನೂ ಆಶ್ರಯವನ್ನೂ ನೀಡಿದರು. ಈ ಉದಾಹರಣೆಗಳನ್ನು ಕೊಡುವ ಕಾರಣ ಸ್ಪಷ್ಟವಾಗಿದೆ–ಬಲಿಷ್ಠ ರಾಜರೂ ಚಕ್ರವರ್ತಿಗಳೂ ತಮ್ಮ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಮೆರೆಯಲಿಕ್ಕೆ ಜೈನಧರ್ಮವು ಯಾವುದೇ ಬಗೆಯ ತೊಡಕಾಗಿಯಾಗಲೀ, ಅಡ್ಡಿಯಾಗಿಯಾಗಲೀ ಪರಿಣಮಿಸಲಿಲ್ಲ.

ಜೈನಧರ್ಮವು ಕರ್ನಾಟಕದ ಕೆಲವು ಅತ್ಯಂತ ಶ್ರೇಷ್ಠ ಯೋಧರನ್ನು ಸೃಷ್ಟಿಸಿದೆ. ಚಾವುಂಡರಾಯ ಮತ್ತು ಶಂಕರ ಗಂಡರು ಗಂಗ ಮತ್ತು ರಾಷ್ಟ್ರಕೂಟರ ಬಳಿಯಿದ್ದ ಮಹಾಸೇನಾಧಿಪತಿಗಳು. ಚಾವುಂಡರಾಯ ಶ್ರವಣಬೆಳ್ಗೊಳದಲ್ಲಿ ಬಾಹುಬಲಿಯ ವಿಗ್ರಹವನ್ನು ಮಾಡಿಸಿದ್ದಲ್ಲದೆ ಕನ್ನಡದಲ್ಲಿ ಚಾವುಂಡರಾಯಪುರಾಣವೆನ್ನುವ ಕೃತಿಯನ್ನು ರಚಿಸಿದನೆನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಅವನು ಸೇನಾಪತಿಯಾಗಿ ಗಳಿಸಿದ ಅನೇಕ ಬಿರುದುಗಳನ್ನು ಅವನ ಕೃತಿ ನಿರೂಪಿಸುತ್ತದೆ. ಬಾಗೆಯೂರ್ ಎಂಬಲ್ಲಿ ತ್ರಿಭುವನ ಎಂಬ ಶೂರನನ್ನು ಕೊಂದದ್ದರಿಂದ ಅವನಿಗೆ 'ವೈರಿಕುಲ ಕಾಲದಂಡಂ' ಎಂಬ ಬಿರುದು ಪ್ರಾಪ್ತವಾಗಿದ್ದಿತು. ಅನೇಕ ಸಂಖ್ಯೆಯ ಸೈನಿಕರನ್ನು ಅವನು ಕೊಂದದ್ದರಿಂದ 'ಭಟಮಾರಿ' ಎಂಬ ಬಿರುದು ಅವನಿಗೆ ಪ್ರಾಪ್ತವಾಗಿದ್ದಿತು. (''ವೀರಭಟ ಕೋಟಿಯುಂ ಕೊಂದುಮರಿಂ ಭಟಮಾರಿ'') ಅವನ ಶ್ರವಣಬೆಳ್ಗೊಳ ಶಾಸನದಿಂದ ಅವನದು ಬ್ರಹ್ಮ-ಕ್ಷತ್ರಿಯ ಕುಲ ಎನ್ನುವ ಸಂಗತಿ ತಿಳಿದು

9 ಅದೇ, No. 163

ಬರುತ್ತದೆ. ಅವನ ಸಮಕಾಲೀನಳೂ ಅವನಷ್ಟೇ ಸುಪ್ರಸಿದ್ಧ ವ್ಯಕ್ತಿಯೂ ಆಗಿರುವ ಅತ್ತಿಮಬ್ಬೆ ಆ ಕಾಲದ ಒಬ್ಬ ಶ್ರೇಷ್ಠ ಸಾತ್ವಿಕ ಮಹಿಳೆ. ಅವಳು ಲಕ್ಕುಂಡಿಯಲ್ಲಿ ಜಿನನಿಗಾಗಿ ಒಂದು ಬಸದಿಯನ್ನು ಕಟ್ಟಿಸಿದ್ದಲ್ಲದೆ ರನ್ನ ಕವಿಗೆ ಆಶ್ರಯವನ್ನೂ ನೀಡಿದ್ದಳು. ಅವಳೇ ರನ್ನನಿಂದ ಅಜಿತಪುರಾಣವನ್ನು ಬರೆಯಿಸಿದ್ದು. ಅವಳ ಇಡೀ ಮನೆತನ ಜೈನಧರ್ಮದ ಏಳ್ಗೆಗಾಗಿ ತನ್ನನ್ನು ಸಮರ್ಪಿಸಿಕೊಂಡಿದ್ದಿತು. ಅವಳ ತಂದೆ ಮಲ್ಲಪನು ಪೊನ್ನನಿಂದ ಶಾಂತಿಪುರಾಣವನ್ನು ಬರೆಯಿಸಲು ಮುಖ್ಯ ಕಾರಣಕರ್ತ. ಅವಳದು ಶೂರರ ಮನೆತನವೂ ಹೌದು. ಮಲ್ಲಪ ತಾನೇ ಸ್ವತಃ ಶಸ್ತ್ರ ಶಾಸ್ತ್ರಗಳೆರಡರಲ್ಲೂ ನಿಪುಣನಾಗಿದ್ದನು. ("......ಮಲ್ಲಪನಲ್ಲದೆ ಪೆರನಾವನೊ ಶಸ್ತ್ರಶಾಸ್ತ್ರ ವಿದ್ಯಾಕುಶಲಂ").[10] ಅವನ ತಮ್ಮ, ಅತ್ತಿಮಬ್ಬೆಯ ಚಿಕ್ಕಪ್ಪ, ಪೊನ್ನಮಯ್ಯ ಮಹಾಶೂರ. ಅವನು ತನ್ನ ಯಜಮಾನ ತೈಲಪನ ಅನೇಕ ಯುದ್ಧಗಳಲ್ಲಿ ಪಾತ್ರವಹಿಸಿ, "ತೈಲಪನೃಪಂ ಬಾಳ್ಗೆ" ಎಂದು ಕೂಗಿ ಶತ್ರು ಸೇನೆಯೊಳಕ್ಕೆ ನುಗ್ಗಿ, ಹೋರಾಡಿ, ಅನೇಕರನ್ನು ಕೊಂದು ತಾನೂ ಮಡಿಯುತ್ತಾನೆ. ಅವಳ ಗಂಡ ನಾಗಿದೇವನೂ ಶೂರನಾಗಿದ್ದು 'ಒರಟರ ಮಲ್ಲ' ನೆಂದು ಪ್ರಖ್ಯಾತನಾಗಿದ್ದ. ಈ ಶೂರ ಪರಂಪರೆ ಮುಂದುವರಿಯಿತು: ಅವಳ ಮಗ ಪಡೆವಳ ತೈಲ ಒಂದು ಸೈನ್ಯದ ತುಕಡಿಗೆ ಮುಖ್ಯಸ್ಥನಾಗಿದ್ದ. ಹೊಯ್ಸಳರ ಕಾಲದ ಗಂಗರಾಜ (12ನೇ ಶತಮಾನ) ಮತ್ತೊಬ್ಬ ಸುಪ್ರಸಿದ್ಧ ದಂಡಾಧಿಪನಾಗಿದ್ದ. ಅವನು ತನ್ನ ಕಾಲದ ಜೈನ ಸಮಾಜದ ಶ್ರೇಷ್ಠ ನಾಯಕನಾಗಿದ್ದು, ಹತ್ತನೆಯ ಶತಮಾನದ ಚಾವುಂಡರಾಯನಿಗೆ ಸಮಾನನೆಂದು ಜೈನರು ಭಾವಿಸಿದ್ದರು. ಅವನ ಬಿರುದುಗಳಲ್ಲಿ 'ಕಲಿಗಳಾಭರಣ' ಎಂಬುದೂ ಒಂದು[11].

ಸಲ್ಲೇಖನ ವ್ರತವನ್ನು ಧರಿಸಿ ಮಡಿದ ಕೆಲವು ಸೇನಾಧಿಪತಿಗಳ ಹೆಸರುಗಳು ಶಾಸನಗಳಲ್ಲಿ ದೊರಕುತ್ತವೆ. ಉದಾಹರಣೆಗೆ, ಬೂಚಣ,[12] ಬಲದೇವ,[13] ಸಿಂಗಣ.[14] ಸೌಂದತ್ತಿ ರಟ್ಟರ ಬಳಿಯಿದ್ದ ಮುನಿಚಂದ್ರ ಈ ದೃಷ್ಟಿಯಿಂದ ಗಮನಾರ್ಹವ್ಯಕ್ತಿ. ರಟ್ಟರು ಜಿನನ ನಿಷ್ಠಾವಂತ ಅನುಯಾಯಿಗಳು. ಅವರ 'ರಾಜಗುರು'ವಾಗಿದ್ದ ಮುನಿಚಂದ್ರನು ಅವರ ಮಂತ್ರಿಯೂ ಆಗಿದ್ದನು. ತನ್ನ ವಿವೇಕದ ಬಲದಿಂದಲೂ ಯುದ್ಧ ಪರಿಣತಿಯಿಂದಲೂ ರಟ್ಟರಾಜ್ಯದ ಗಡಿಗಳನ್ನು ವಿಸ್ತರಿಸಲು ಸಮರ್ಥನಾದನು.[15] ಅವನು ದೊರೆ ಲಕ್ಷ್ಮೀದೇವನಿಗೆ ಶಸ್ತ್ರ ಶಾಸ್ತ್ರಗಳೆರಡನ್ನೂ ಕಲಿಸಿಕೊಟ್ಟ

---

10 ಅಜಿತನಾಥಪುರಾಣ ತಿಲಕಂ, 1.31

11 Ep. Carn. II (Mysore, 1973), No. 82, 1118 A.D.

12 ಅದೇ. No. 55, 1113 A.D.

13 ಅದೇ. No. 174, 1139 A.D.

14 Ep. Carn. VIII. Sb. 149.

15 KI. IV. No. 73, 1228 A.D.

ಗುರುವಾಗಿದ್ದನು. ("ಶಸ್ತ್ರಶಾಸ್ತ್ರಸ್ಥಿರಪರಿಣತಿಯೊಳ್ ಲಕ್ಷ್ಮೀದೇವಂಗೆ ದೀಕ್ಷಾ ಗುರುವಾದಂ").

ಪಂಪ, ಜನ್ನರಂತಹ ಜೈನಕವಿಗಳು ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸುತ್ತಿದ್ದುದು ಮಾತ್ರವಲ್ಲ; ಅವರು ಯುದ್ಧಗಳಲ್ಲಿ ಸ್ವತಃ ಹೋರಾಡುತ್ತಿದ್ದರೆಂಬುದಕ್ಕೂ ಆಧಾರಗಳಿವೆ.

ಮೇಲೆ ಹೇಳಿದ ವ್ಯಕ್ತಿಗಳೆಲ್ಲ - ದೊರೆಗಳು, ಅಧಿಕಾರಿಗಳು ಮತ್ತು ಕವಿಗಳು ಎಲ್ಲರೂ ವಿದ್ಯಾವಂತರಾಗಿದ್ದು, ತಮ್ಮ ಸೈನಿಕ ಜೀವನಕ್ಕೆ ಧರ್ಮದ ಒಪ್ಪಿಗೆಯಿದೆಯೆಂಬುದನ್ನು ಬಹುಶಃ ಬಲ್ಲವರಾಗಿದ್ದರು. ಧರ್ಮವೆಂಬುದು ವೈಯಕ್ತಿಕವಾದ ವಸ್ತು. ಅದರ ಜೊತೆಗೆ, ಒಬ್ಬ ವ್ಯಕ್ತಿಯ ಶ್ರದ್ಧೆ ನಂಬಿಕೆಗಳು ಅವನ ಜೀವನ ದೃಷ್ಟಿಯ ಮೇಲೆ, ಅವನ ಇಷ್ಟ ಅನಿಷ್ಟಗಳ ಮೇಲೆ, ಒಳಿತು ಕೆಡುಕುಗಳ ಪ್ರಜ್ಞೆಯ ಮೇಲೆ ಪರಿಣಾಮವನ್ನುಂಟು ಮಾಡಲೂ ಸಾಧ್ಯ. ಒಬ್ಬ ಜೈನ ಸೈನಿಕನಿಗೆ ತನ್ನ ವೃತ್ತಿ ತನ್ನ ಧರ್ಮಕ್ಕೆ ವಿರೋಧವಾಗುವುದಿಲ್ಲವೆಂದು ತಿಳಿದಿದ್ದರೂ, ಯುದ್ಧರಂಗದಲ್ಲಿ ತಾನು ಅನೇಕರನ್ನು ಕೊಂದೆ ಅಥವಾ ಗಾಯಗೊಳಿಸಿದೆನೆಂಬ ಮಾನಸಿಕ ವೇದನೆಯಿಂದ ಆತ ಎಂದೂ ಮುಕ್ತನಾಗಲಾರ. (ಹಿಂದಾಗಲೇ ನೋಡಿದಂತೆ, ಇತರರಿಗೆ ನೋವುಂಟು ಮಾಡುವ ವ್ಯಕ್ತಿಗಿಂತ ತಾನೇ ನೋವನ್ನು ಅನುಭವಿಸುವ ವ್ಯಕ್ತಿಯನ್ನು ಜೈನ ಧರ್ಮವು ಉಜ್ವಲ ವರ್ಣಗಳಿಂದ ಚಿತ್ರಿಸುತ್ತದೆ.) ಬಹುಶಃ ಮೇಲಿನ ಸಂಗತಿ ಏಕೆ ಕೆಲವು ಸೇನಾನಾಯಕರು ಸಲ್ಲೇಖನವನ್ನು ತೆಗೆದುಕೊಂಡು ಪ್ರಾಣಬಿಟ್ಟರು ಎಂಬುದನ್ನು ವಿವರಿಸುತ್ತದೆ.ಒಂದು ಬಗೆಯ ಪ್ರಾಯಶ್ಚಿತ್ತರೂಪವಾಗಿ ಅವರು ಆ ಕಾರ್ಯಕ್ಕೆ ಕೈಹಾಕಿರಬಹುದು. ತಮ್ಮ ಯೌವನದಲ್ಲಿ ಸೈನಿಕರಾಗಿಯೋ ಸೇನಾಪತಿಗಳಾಗಿಯೋ ತಾವು ಮಾಡಿದ ಕಾರ್ಯ ಅವರ ಮನಸ್ಸನ್ನು ಕೊರೆಯುತ್ತಿದ್ದಿರಬಹುದು. ಎಷ್ಟೋ ಸಾರಿ, ನಾವು ಬೌದ್ಧಿಕವಾಗಿ ಒಪ್ಪಿಕೊಂಡದ್ದನ್ನು ನಮ್ಮ ಭಾವಾವೇಶಗಳು ಹಿಂದಕ್ಕೆ ಸರಿಸಿ ತಾವೇ ಪ್ರಧಾನವಾಗಿ ನಿಂತುಬಿಡಬಹುದು.

ಒಂದು ಧರ್ಮದ ಸಾಮಾನ್ಯ ಮನುಷ್ಯನಿಗೆ ಅದರ ಬಗ್ಗೆ ಸ್ಥೂಲವಾದ ಒಂದು ಕಲ್ಪನೆಯಿರುತ್ತದೆ. ಅವನಿಗೆ ತನ್ನ ಧರ್ಮವೆಂದರೆ ಕೆಲವು ವಿಧಿ ನಿಷೇಧಗಳ, ನಂಬಿಕೆಗಳ, ಆಚರಣೆಗಳ ಒಂದು ಮೊತ್ತವಾಗಿರುತ್ತದೆ. ಅವನು ಹುಟ್ಟಿರುವ ಪರಿಸರ, ರೂಢಿಸಿಕೊಳ್ಳುವ ಸಂಸ್ಕೃತಿಗಳು ಅವನ ಸರಿ ತಪ್ಪುಗಳ ಕಲ್ಪನೆಯನ್ನು ರೂಪಿಸುತ್ತದೆ. ಜೈನ ಸಂಸ್ಕೃತಿಯಲ್ಲಿ ಅಹಿಂಸಾತತ್ವವು ಅತ್ಯಂತ ಮೂಲಭೂತ-ವಾದುದಾಗಿದ್ದರೆ, ಆಗ ಅದು ಜೈನ ಧರ್ಮೀಯನ ನೈತಿಕವ್ಯವಸ್ಥೆಯ ಬಹುಮುಖ್ಯ ಭಾಗವಾಗಿ ಪರಿಣಮಿಸುವುದು ಅನಿವಾರ್ಯವಾಗುತ್ತದೆ.

ಕರ್ನಾಟಕದ ವೀರಗಲ್ಲುಗಳನ್ನು ಗಮನಿಸಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ—ಜೈನವೆಂದು ಕರೆಯಬಹುದಾದ ವೀರಗಲ್ಲುಗಳ ಸಂಖ್ಯೆ ಉಳಿದವಕ್ಕಿಂತ ಬಹಳ

ಕಡಿಮೆಯೆಂದೇ ಹೇಳಬೇಕು. ವಾಸ್ತವವಾಗಿ ಹೋರಾಡಿದ ಅಥವಾ ಮಡಿದ ಶೂರರ ಸ್ಮಾರಕಗಳೇ ವೀರಗಲ್ಲುಗಳು. ಶಾಸನಗಳಲ್ಲಿ ಅನೇಕ ಜೈನ ದೊರೆಗಳ ಮತ್ತು ದಂಡನಾಯಕರ ಹೆಸರುಗಳು ಕಾಣಿಸಿಕೊಳ್ಳುತ್ತವೆ. ಆದರೆ ಸಾಮಾನ್ಯ ವರ್ಗದ ಜೈನ ವೀರರ ಹೆಸರುಗಳು ಉಳಿದವಕ್ಕಿಂತ ಬಹಳ ಕಡಿಮೆ. ಆದ್ದರಿಂದ ಯುದ್ಧವು ನಿಷಿದ್ಧವಾದುದೆಂಬ ನಂಬಿಕೆ ಸಾಮಾನ್ಯ ಜೈನ ಶ್ರಾವಕರಲ್ಲಿ ಪ್ರಚಲಿತವಾಗಿದ್ದುದು ಇದಕ್ಕೆ ಕಾರಣವಿರಬಹುದೆ? ಅಥವಾ, ಸಾಮಾನ್ಯ ಜೈನರು ಯುದ್ಧಗಳಲ್ಲಿ ಅಥವಾ ಯುದ್ಧಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಬಗ್ಗೆ ನಿರುತ್ಸಾಹಿಗಳಾಗಿದ್ದುದು ಇದಕ್ಕೆ ಕಾರಣವಿರಬಹುದೇ?

ಹಿಂದಿನ ಕಾಲದಲ್ಲಿ, ಒಬ್ಬ ವೀರ ಹೋರಾಡುತ್ತಾ ಮಡಿದರೆ ಅವನು ಸ್ವರ್ಗಕ್ಕೆ ಹೋಗಿ ಅಲ್ಲಿ ದೇವಕನ್ಯೆಯರ ಮಧ್ಯೆ ವಿಹರಿಸುತ್ತಾನೆಂಬುದು ಬಹು ಜನಪ್ರಿಯವಾದ ನಂಬಿಕೆಯಾಗಿದ್ದಿತು. ಇದನ್ನು ವೀರಗಲ್ಲುಗಳ ಮೇಲೆ ಶಿಲ್ಪರೂಪವಾಗಿ ಚಿತ್ರಿಸಿರುವುದನ್ನೂ ನಾವು ಕಾಣಬಹುದು. ಇದು ಪ್ರಾಚೀನ ವೀರಗಲ್ಲುಗಳ ವಿಷಯವಾಯ್ತು. ಅದಕ್ಕಿಂತ ಈಚಿನ ವೀರಗಲ್ಲುಗಳ ಮೇಲೆ ವೀರನು ಭಗವಂತನ ಸಾನ್ನಿಧ್ಯದಲ್ಲಿಯೇ ಇರುವಂತೆ ಶಿಲ್ಪದಲ್ಲಿ ಕೆತ್ತಿರುತ್ತದೆ. ಯೋಗಿ ಮತ್ತು ವೀರರಿಬ್ಬರೂ ತಮ್ಮ ಯೋಗ ಮತ್ತು ವೀರಮರಣಗಳಿಂದ ಮೋಕ್ಷವನ್ನು ಸಂಪಾದಿಸುತ್ತಾರೆ ಎನ್ನುವ ಭಾವನೆಯು ಅನೇಕ ಶಾಸನಗಳಲ್ಲಿ ವ್ಯಕ್ತವಾಗಿದೆ. ("ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ। ಪರಿವ್ರಾಟ್ ಯೋಗಯುಕ್ತಶ್ಚ ರಣೇ ಚಾಭಿಮುಖೇ ಹತಃ.") ಯುದ್ಧವನ್ನು ಒಂದು ವೃತ್ತಿಯಾಗಿ ಕೆಲವು ನಿರ್ಬಂಧಗಳೊಡನೆ ಒಪ್ಪಿಕೊಳ್ಳುವ ಜೈನ ಧರ್ಮಕ್ಕೆ ಮೇಲಿನ ಭಾವನೆ ಒಪ್ಪಿಗೆಯಾಗುವುದು ಕಷ್ಟವೇ. ಜೊತೆಗೆ ಮನುಷ್ಯನನ್ನು ಉದ್ಧರಿಸುವ ಅಥವಾ ಅವನ ಬಗ್ಗೆ ಕರುಣೆಯನ್ನು ತೋರಿ ಮುಕ್ತಿಯನ್ನು ಅನುಗ್ರಹಿಸುವ ದೈವವನ್ನು ಜೈನಧರ್ಮವು ಒಪ್ಪುವುದಿಲ್ಲ. ಮನುಷ್ಯನೇ ತನ್ನ 'ಕರ್ಮಚ್ಛೇದ'ವನ್ನು ಮಾಡಿಕೊಂಡು ತನ್ನ ಮೋಕ್ಷವನ್ನು ತಾನೇ ಸಂಪಾದಿಸಿಕೊಳ್ಳಬೇಕು. ಹನ್ನೆರಡನೆಯ ಶತಮಾನದ ಜೈನ ವಿಡಂಬನಕಾರನಾದ ಬ್ರಹ್ಮಶಿವ, ತನ್ನ ಸಮಯ ಪರೀಕ್ಷೆ ಗ್ರಂಥದಲ್ಲಿ (9.34) ಮೇಲೆ ಹೇಳಿದ ನಂಬಿಕೆಗಳನ್ನು ಹಾಸ್ಯಮಾಡುತ್ತಾ, ಸತ್ತ ವೀರರನ್ನು ದೇವತಾಸ್ತ್ರೀಯರು ಸ್ವರ್ಗಕ್ಕೆ ಒಯ್ಯುತ್ತಾರೆಂಬುದನ್ನು ಮೂರ್ಖರು ಮಾತ್ರ ನಂಬುತ್ತಾರೆ ಎಂದು ಹೇಳುತ್ತಾನೆ. ಆತ್ಮಕ್ಕೆ ಆಕಾರವಿಲ್ಲ; ಹೀಗಿರುವಾಗ ಆತ್ಮವನ್ನು ದೇವತಾಸ್ತ್ರೀಯರು ಕೊಂಡೊಯ್ಯುವುದು ಹೇಗೆ? ಇದು ಅವನ ಸವಾಲು. ಹದಿನಾರನೇ ಶತಮಾನದ ಕವಿ ದೇವಪ್ಪನೂ ಇದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾನೆ. ಅವನೇನೋ ಸತ್ತವೀರರು ಸ್ವರ್ಗಕ್ಕೆ ಹೋಗುವುದನ್ನು, ಅಲ್ಲಿ ದೇವತಾಸ್ತ್ರೀಯರ ಮಧ್ಯೆ ಸುಖಿಸುವುದನ್ನೂ ವರ್ಣಿಸುತ್ತಾನೆ, ನಿಜ. (ರಾಮವಿಜಯ ಕಾವ್ಯ, 18. 85-90). ಆದರೆ ಅದನ್ನು **ಕಾವ್ಯಪದ್ಧತಿಗಾಗಿ ಮಾತ್ರ** ಹಾಗೆ ವರ್ಣಿಸಿರುವುದಾಗಿ ಹೇಳಿಕೊಂಡುಬಿಡುತ್ತಾನೆ. ಆ ನಂಬಿಕೆಯು ಜೈನರಿಗೆ ಒಪ್ಪಿಗೆ

ಯಾದುದಲ್ಲವೆಂದು ಸ್ಪಷ್ಟಪಡಿಸುತ್ತಾನೆ.[16] ಸತ್ತ ವೀರರು ಸ್ವರ್ಗಕ್ಕೆ ಹೋಗುತ್ತಾರೆಂಬ ಕತೆಯು ಜೈನರನ್ನು ಬಿಟ್ಟು ಉಳಿದಂತೆ ಎಲ್ಲರಲ್ಲೂ ಪ್ರಚಲಿತವಿದ್ದಿತೆಂಬುದು ಮೇಲಿನ ಹೇಳಿಕೆಗಳಿಂದ ಸಮರ್ಥಿತವಾಗುತ್ತದೆ.

ಆದರೆ, ಸತ್ತವೀರರು ಸ್ವರ್ಗಕ್ಕೆ ಹೋದಂತೆಯೋ ಜಿನನ ಸಾನ್ನಿಧ್ಯದಲ್ಲಿ ಇರುವಂತೆಯೋ ಚಿತ್ರಿಸಿರುವ ಕೆಲವು ಜೈನ ವೀರಗಲ್ಲುಗಳೇನೋ ಇವೆ. ಅವುಗಳ ಸಂಖ್ಯೆ ಎಷ್ಟು ಕಡಿಮೆಯೆಂದರೆ ಅವುಗಳನ್ನು ಆಕಸ್ಮಿಕಗಳೆಂದೋ ಅಪವಾದಗಳೆಂದೋ ಭಾವಿಸಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಕಾಯ್ಕಿಣಿಯ ಜೈನ ಬಸತಿಯ ಹತ್ತಿರ ಕೆಲವು ವೀರಗಲ್ಲುಗಳಿವೆ. ಅವುಗಳಲ್ಲಿ ಕೆಲವದರ ಮೇಲೆ, ಮೇಲ್ತುದಿಯ ಚಿತ್ರಪಟ್ಟಿಕೆಯಲ್ಲಿ ವೀರನು ಜಿನನ ಹತ್ತಿರ ಕುಳಿತಿರುವಂತೆ ಚಿತ್ರಿತನಾಗಿದ್ದಾನೆ. ಕೆಳಗಿನ ಎರಡು ಚಿತ್ರಪಟ್ಟಿಕೆಗಳಲ್ಲಿ ಯುದ್ಧದ ದೃಶ್ಯಗಳಿವೆ ; ಮೂರನೆಯ ಪಟ್ಟಿಕೆಯಲ್ಲಿ ದೇವತಾಸಿ ್ತ್ರೀಯರು ಸ್ವರ್ಗಕ್ಕೆ ಕೊಂಡೊಯ್ಯುವ ಚಿತ್ರಗಳಿವೆ ; ನಾಲ್ಕನೆಯದರಲ್ಲಿ ದೇವತಾಸ್ತ್ರೀಯರ ನೃತ್ಯಚಿತ್ರಗಳಿವೆ ; ಕೊನೆಯಲ್ಲಿ ವೀರ, ಜಿನ, ಜಿನಮುನಿಯ ಚಿತ್ರಗಳಿವೆ. (ಇಂತಹುದೇ ಶಿಲ್ಪವಿರುವ ವೀರಗಲ್ಲೊಂದು ಭಟ್ಕಳದಲ್ಲಿದೆ). ಕಾಯ್ಕಿಣಿಯ ವೀರಗಲ್ಲುಗಳ ಮೇಲಿನ ಶಾಸನಗಳೆಲ್ಲವೂ ಹದಿನೈದು ಹದಿನಾರನೇ ಶತಮಾನಕ್ಕೆ ಸೇರುತ್ತವೆ. ಈ ಶಾಸನಗಳಲ್ಲಿ ಒಂದು[17] 'ಜಿನಶಾಸನ'ವನ್ನು ಸ್ತೋತ್ರಮಾಡುವ ಸುಪ್ರಸಿದ್ಧ ಪ್ರಾರ್ಥನಾ ಶ್ಲೋಕದಿಂದ ಆರಂಭವಾಗಿ, ಮಾಬುನಾಯಕ ಎಂಬಾತ ಯುದ್ಧರಂಗದಲ್ಲಿ ಹೋರಾಡಿ ಅನೇಕರನ್ನು ಕೊಂದದ್ದನ್ನು ವರ್ಣಿಸುತ್ತದೆ. ಇನ್ನೊಂದು ಶಾಸನವು[18] 'ವೀತರಾಗಾಯ ನಮಃ' ಎಂಬ ಉಕ್ತಿಯಿಂದ ಆರಂಭವಾಗುತ್ತದೆ. ತಮ್ಮಣ್ಣನಾಯಕ ಎಂಬುವನ ವೀರಮರಣವನ್ನು ಹೇಳುವುದು ಆ ಶಾಸನದ ಉದ್ದೇಶ. ವೀರಗಲ್ಲನ್ನು ನಿಲ್ಲಿಸಿದುದರಿಂದ ವೀರನು ಸ್ವರ್ಗವನ್ನು ಪಡೆಯುವುದಕ್ಕೆ ಅನುಕೂಲವಾಯಿತು ಎಂದೂ ಆ ಶಾಸನವು ನಿರೂಪಿಸುವುದನ್ನು ಗಮನಿಸಬೇಕು. ಇಂತಹುದೇ ವೀರಗಲ್ಲೊಂದು ಅದೇ ಜಿಲ್ಲೆಯ ಹಾಡುವಳ್ಳಿಯಲ್ಲಿದೆ.[19] ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿಯೂ ಒಂದೆರಡು ಜೈನ ವೀರಗಲ್ಲುಗಳಿವೆ.[20] ಇವುಗಳೆಲ್ಲಲ್ಲ ಅತ್ಯಂತ ಸ್ವಾರಸ್ಯವಾದುದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಉದ್ರಿ ಗ್ರಾಮಕ್ಕೆ ಸೇರಿದ್ದು.[21] ಕೊಂಕಣಿಗರ ವಿರುದ್ಧ ಹೋರಾಡಿ ಅನೇಕರನ್ನು ಕೊಂದು ತಾನೂ ಸತ್ತ ಬೈಚಪ್ಪ ಎಂಬ ವೀರನ ಮರಣವನ್ನು ಅದು ವರ್ಣಿಸುತ್ತದೆ.

---

16 ''ತರುಣಿ ಲಾಲಿಸು ಕವಿತಾಮಾರ್ಗಕೆ ನಾನೊರೆವೆನಲ್ಲದೆ ದುರ್ಭಾವದಲಿ ಮರಣವ ಪಡೆದವರಿಗೆ ಸ್ವರ್ಗವುಂಟೆಂಬ ಪರಿಯ ಜೈನರು ಮೆಚ್ಚುವರೇ'' (ರಾಮವಿಜಯ ಕಾವ್ಯ, 18.92)

17 Karnatak Inscriptions, I. P. 92, 1415 A.D.

18 ಅದೇ, ಪು. 104, ಕ್ರಿ.ಶ. 1423

19 ಅದೇ, ಪು 106, ಕ್ರಿ.ಶ. 1423.

20 Ep. Carn. II (Mysore 1973), Nos. 171 and 172

21 Ep. Carn. VIII. Sb. 152, 1380 A.D.

ಈ ಶಾಸನದ ಹೆಚ್ಚು ಕಡಿಮೆ ಮೊದಲಲ್ಲೇ ಈ ಮಾತುಗಳು ಬರುತ್ತವೆ. "...... ಐದಿದ ಜಿನಪಾದಪದ್ಮಮಂ ಬೈಚಪ್ಪಂ." ಅವನು ಹೋರಾಡುತ್ತಿರುವಾಗಲೇ ಇದ್ದಕ್ಕಿದ್ದಂತೆ ಯುದ್ಧಭೂಮಿಯಲ್ಲೇ ಸಲ್ಲೇಖನವನ್ನು ತೆಗೆದುಕೊಂಡು ಮಡಿದಂತೆ ಕಾಣುತ್ತದೆ. ಅವನು ಸತ್ತು ಸ್ವರ್ಗಕ್ಕೆ ಹೋದಂತೆ ಅಲ್ಲಿ ವರ್ಣಿಸಲಾಗಿದೆ. ("ಸಮಾಧಿ ವಿಧಾನವೊಂದೆ ಚಿತ್ತದೊಳು ಮಾರವಿರೋಧಿ...ಊರ್ಜಿತ ನಾಕಲೋಕಮಂ ಸಾರಿದಂ''). ಅವನು ಸಲ್ಲೇಖನದ ಮೂಲಕ ಸತ್ತದ್ದರಿಂದ ಅವನು 'ಜಿನಪಾದ ಪದ್ಮ'ವನ್ನು ಸೇರಿದ ; ಯುದ್ಧ ಮಾಡುತ್ತ ರಣಾಂಗಣದಲ್ಲಿ ಮಡಿದದ್ದರಿಂದ ಸ್ವರ್ಗಕ್ಕೆ ಹೋದ. ಈ ಶಾಸನವನ್ನು ರಚಿಸಿದ ವ್ಯಕ್ತಿಗೆ ಸ್ವರ್ಗಕ್ಕೂ ಜಿನಲೋಕಕ್ಕೂ ಇರುವ ಸ್ಪಷ್ಟ ವ್ಯತ್ಯಾಸ ಗೊತ್ತಿತ್ತೇ ಎಂಬುದರ ಬಗ್ಗೆ ನನಗೆ ಸಂದೇಹವಿದೆ. ಕಾಯ್ಕಿಣಿಯ ವೀರಗಲ್ಲುಗಳ ಮೇಲಿನ ತುದಿಯ ಚಿತ್ರಪಟ್ಟಿಕೆಯಲ್ಲಿ ಜಿನನ ಚಿತ್ರವಿದೆ — ಇದು ಸ್ಪಷ್ಟವಾಗಿ ಹಿಂದೂ ವೀರಗಲ್ಲುಗಳ ಅನುಕರಣೆಯ ಫಲ. ಶಿವ ಅಥವಾ ವಿಷ್ಣುವಿನ ಜಾಗದಲ್ಲಿ ಜಿನನನ್ನು ಇಲ್ಲಿ ತರಲಾಗಿದೆ. ಆದರೆ ಅಲ್ಲೆಲ್ಲಿಯೂ ಸತ್ತವೀರನು ತೀರ್ಥಂಕರ ಲೋಕಕ್ಕೆ ಹೋದನೆಂದು ಬಾಯಿಬಿಟ್ಟು ಹೇಳಿಲ್ಲ. ಉದ್ರಿಯ ಶಾಸನದಲ್ಲಿ ಮಾತ್ರ ವೀರನು ಜಿನಲೋಕಕ್ಕೆ ಹೋದನೆಂದು ಸ್ಪಷ್ಟವಾಗಿ ಹೇಳಿದೆ. ಆದರೂ ನಾವು ಮೇಲೆ ನೋಡಿದಂತೆ ಅಲ್ಲಿಯೂ ಗೊಂದಲವಿದೆ.

ಈ ಪ್ರಬಂಧದ ಉತ್ತರಾರ್ಧದಲ್ಲಿ ನಾನು ಪ್ರತಿಪಾದಿಸಿರುವ ಸಂಗತಿಯು ಜೈನ ಧರ್ಮವು ಕರ್ನಾಟಕದ ವೀರ ಪರಂಪರೆಗೆ ತನ್ನದೇ ಕೊಡುಗೆಗಳನ್ನಿತ್ತಿದೆ ಎಂಬ ಪೂರ್ವಾರ್ಧದ ನನ್ನ ಪ್ರತಿಪಾದನೆಗೆ ವಿರೋಧವಾಗಿರುವಂತೆ ಕಾಣುತ್ತದೆ. ಆದರೆ ಈ ಮೇಲ್ನೋಟದ ವಿರೋಧವನ್ನು ವಿವರಿಸಲು ಆಗಲೇ ಪ್ರಯತ್ನಿಸಿದ್ದೇನೆ. ಜೈನ ಧರ್ಮವು, ಒಂದು ಧರ್ಮವಾಗಿ, ಎಂದೂ ಮಿಲಿಟೆಂಟಾಗಿರಲಿಲ್ಲ. ಎಂದರೆ ಹೋರಾಟ ಸ್ವಭಾವದ್ದಾಗಿರಲಿಲ್ಲ. ಇದು ಅದರ ಸ್ವರೂಪದಲ್ಲೇ ಹುದುಗಿದೆ. ಡಿ. ಎಸ್. ಶರ್ಮ ಅವರು ಹೇಳುವಂತೆ "...ಇತರರು ಜೈನರನ್ನು ಹತ್ತಿಕ್ಕಿದ್ದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದಾದರೂ ಇದಕ್ಕೆ ಜೈನರು ಪ್ರತೀಕಾರವನ್ನು ಒಮ್ಮೆಯೂ ಕೈಗೊಂಡದ್ದಕ್ಕೆ ಉದಾಹರಣೆಗಳು ದೊರಕದಿರುವುದು ಗಮನಾರ್ಹ ಸಂಗತಿ".[22] ಯಾರು ಏನೇ ಹೇಳಲಿ, ಈ ಹೋರಾಟದ ಸ್ವಭಾವದ ಅಭಾವವೂ ಜೈನಧರ್ಮದ ಅವನತಿಯ ಕಾರಣಗಳಲ್ಲೊಂದು ಎಂಬುದರಲ್ಲಿ ಅನುಮಾನವಿರುವಂತೆ ಕಾಣದು. ತನಗಿಂತ ಮಿಲಿಟೆಂಟಾಗಿರುವ ಧರ್ಮಗಳ ವಿರುದ್ಧ ಅದು ನಿಲ್ಲಲಾರದೆ ಹೋಯಿತು ಎಂದು ಹೇಳಬೇಕಾಗುತ್ತದೆ. ಅದೊಂದು ಬೇರೆಯ ಕಥೆ—ವ್ಯಥೆಯ ಕಥೆ. ಅದನ್ನು ನಾನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶವಿಲ್ಲ.[23]

---

22 *Jainism and Karnataka Culture*, p. 150

23 ಈ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಶ್ರೀ ಎ. ಸುಬ್ಬಯ್ಯಶಾಸ್ತ್ರಿಗಳು ಕೆಲವು ಸೂಚನೆಗಳನ್ನು ನನಗೆ ಕೊಟ್ಟು ಉಪಕರಿಸಿರುವುದನ್ನು ಇಲ್ಲಿ ಸಂತೋಷದಿಂದ ಸ್ಮರಿಸಿಕೊಳ್ಳುತ್ತೇನೆ.

ಗ್ರಂಥ ಋಣ

(ಪ್ರಬಂಧದಲ್ಲಿ ಹೇಳದೆ ಬಿಟ್ಟಿರತಕ್ಕವು)

1 ಅಣ್ಣಾರಾವ್, ಮಿರ್ಜಿ : ಜೈನಧರ್ಮ
2 ಚಿದಾನಂದಮೂರ್ತಿ, ಎಂ. : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
3 (Mrs.) Stevenson : *Heart of Jainism*
4 Acharya Tulasi : *My Religion, its Centre and Circumference*

ಉದ್ಯೋಗಿಗಳ ಆಯ್ಕೆ – ಸಂದರ್ಶನ ವಿಧಾನ

ಎಂ. ಯೋಗ

ಪರಿಚಯ

ಕೈಗಾರಿಕೆ, ವ್ಯಾಪಾರ, ಸರಕಾರ, ವ್ಯವಸಾಯ, ಸಾಮಾಜಿಕ ಸೇವೆ, ಮುಂತಾದ ಕಾರ್ಯಕ್ಷೇತ್ರಗಳಲ್ಲಿ ಕೋಟ್ಯಂತರ ಉದ್ಯೋಗಿಗಳು ಕೆಲಸ ಮಾಡುತ್ತಾರೆ. ನಿವೃತ್ತಿ, ನಿಧನ, ಉದ್ಯೋಗ ಬದಲಾವಣೆ, ಪದೋನ್ನತಿ, ರಾಜಿನಾಮೆ ಮತ್ತು ಅಪಘಾತಗಳ ಪರಿಣಾಮವಾಗಿ, ಖಾಲಿ ಬೀಳುವ ಸ್ಥಾನಗಳಿಗೆ ಅರ್ಹರಾದ ಜನರನ್ನು ನೇಮಕ ಮಾಡಬೇಕು. ಹೊಸ ಸಂಸ್ಥೆಗಳು ಸ್ಥಾಪನೆಯಾದಂತೆ, ಹೆಚ್ಚು ಉದ್ಯೋಗಿಗಳು ಬೇಕಾಗುತ್ತಾರೆ. ಈ ಸಂದರ್ಭದಲ್ಲಿ ಬೇಕಾದ ಸಿಬ್ಬಂದಿಯ ಆಯ್ಕೆಯು ಒಂದು ಮಹತ್ವದ ಕೆಲಸ. ಒಂದು ಸಂಸ್ಥೆಯ ಕಾರ್ಯ ಸಾಮರ್ಥ್ಯವು ಅದರ ಸಿಬ್ಬಂದಿಯ ವ್ಯವಹಾರ ಜ್ಞಾನ, ದಕ್ಷತೆ ಮತ್ತು ಕಾರ್ಯೋತ್ಸಾಹಗಳನ್ನು ಅವಲಂಬಿಸಿದೆ. ಸಿಬ್ಬಂದಿಯ ವೈಯಕ್ತಿಕ ನ್ಯೂನತೆಗಳ ಕಾರಣದಿಂದ ಚಟುವಟಿಕೆಗಳು ಜಡವಾಗಿ, ಸಂಸ್ಥೆಗಳು ನಿರ್ಬಲವಾಗುವುವು. ಆದ್ದರಿಂದ ಸಿಬ್ಬಂದಿಯ ನೇಮಕದ ಕೆಲಸವನ್ನು ಜಾಗರೂಕತೆಯಿಂದ ಮಾಡಬೇಕು. ಸಾಧಾರಣವಾಗಿ, ಪ್ರತಿ ಉದ್ಯೋಗಕ್ಕೂ ಅನೇಕ ಅರ್ಜಿದಾರರು ಇರುತ್ತಾರೆ. ಉಮೇದುವಾರರ ಬಗೆಬಗೆಯ ಹಿನ್ನೆಲೆ ಮತ್ತು ಯೋಗ್ಯತೆಯನ್ನು ಪರೀಕ್ಷಿಸಿ ತಕ್ಕ ಅರ್ಹತೆಯುಳ್ಳವನನ್ನು ಆರಿಸಲು ಅನೇಕ ಕಾರ್ಯವಿಧಾನಗಳಿವೆ.

ಸಿಬ್ಬಂದಿಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಪ್ರತಿ ಉದ್ಯೋಗದ ನಿರ್ವಹಣೆಗೆ ಆವಶ್ಯಕವಾದ ವ್ಯವಹಾರಜ್ಞಾನ, ಕೌಶಲ್ಯ, ಅನುಭವ ಮುಂತಾದ ಯೋಗ್ಯತಾಗುಣಗಳ ಪಟ್ಟಿಯನ್ನು ತಯಾರಿಸುವುದು ಅತ್ಯಾವಶ್ಯಕ. ತೃಪ್ತಿಕರವಾದ ನಿರ್ವಹಣೆಗೆ, ಅತ್ಯಾವಶ್ಯಕವಾದ ಗುಣಗಳಾವುವು ಎಂಬ ಸ್ಪಷ್ಟಗ್ರಹಿಕೆಯಿಲ್ಲದೆ ಅರ್ಜಿದಾರರ ಯೋಗ್ಯತಾನಿರ್ಧಾರ ಮಾಡುವುದು ಅಸಾಧ್ಯ. ಅರ್ಹತೆಯ ಪರೀಕ್ಷೆಗೆ ಆವಶ್ಯಕವಾದ ಮಾಹಿತಿಯನ್ನು ಸಂಗ್ರಹ ಮಾಡಲು, ಅರ್ಜಿಪತ್ರ, ಪರೀಕ್ಷಣಗಳು, ಸಂದರ್ಶನ, ಪ್ರಶಂಸಾಪತ್ರ ಪರಿಶೀಲನೆ, ವೈದ್ಯಕೀಯ ವರದಿ, ತಾತ್ಕಾಲಿಕ ನಿರ್ವಹಣೆ ಮುಂತಾದ ಕ್ರಮಗಳು ರೂಢಿಯಲ್ಲಿವೆ. ಇವುಗಳಲ್ಲಿ ಸಂದರ್ಶನ ವಿಧಾನವು ಸಾಮಾನ್ಯವಾಗಿ ಬಳಕೆಯಲ್ಲಿದೆ.

ಯಾವ ಸಂಸ್ಥೆಯಾಗಲಿ ಸಾಮಾನ್ಯವಾಗಿ ಅರ್ಜಿದಾರರನ್ನು ಸಂದರ್ಶಿಸದೆ, ಅವರ ನೇಮಕ ಮಾಡುವುದಿಲ್ಲ. ಈ ಸಂಪ್ರದಾಯದ ಅನುಕೂಲ ಪ್ರತಿಕೂಲಗಳನ್ನು

ವಿಮರ್ಶಿಸಿ ಕಾರ್ಯವಿಧಾನವನ್ನು ಸುಧಾರಿಸಬೇಕು. ಏಕೆಂದರೆ ಸಾಧಾರಣವಾಗಿ ಆಚರಣೆಯಲ್ಲಿರುವ ಸಂದರ್ಶನ ವಿಧಾನ ಅವ್ಯವಸ್ಥಿತವಾದದ್ದು. ಅನಿರ್ದಿಷ್ಟ ಉದ್ದೇಶ, ಉಪಯೋಗವಿಲ್ಲದ ಪ್ರಶ್ನೆಗಳು, ಅತಿಶಯೋಕ್ತಿಪೂರ್ಣ ವ್ಯಾಖ್ಯಾನ ಮತ್ತು ಆಧಾರರಹಿತ ನಿರ್ಣಯುಗಳು ಇತ್ಯಾದಿಗಳೇ ಇಂತಹ ಸಂದರ್ಶನದ ಲಕ್ಷಣ ಗಳು. ಸಂದರ್ಶನ ವಿಧಾನದಲ್ಲಿ ಶಿಕ್ಷಣ ಮತ್ತು ಕೌಶಲ್ಯ ಹೊಂದದ ಅಧಿಕಾರಿಗಳನ್ನು ಸಂದರ್ಶಕರನ್ನಾಗಿ ನೇಮಕ ಮಾಡುವುದು ಸರಿಯಲ್ಲ. ವಾಡಿಕೆಯಲ್ಲಿರುವ ಕ್ರಮದ ನ್ಯೂನತೆಗಳನ್ನು ನೋಡಿ, ಸಂದರ್ಶನ ವಿಧಾನ ಕೆಲಸಕ್ಕೆಬಾರದ ಸಾಧನವೆಂದು ತೀರ್ಮಾನಿಸುವುದು ನ್ಯಾಯುವಲ್ಲ. ತಕ್ಕ ಶಿಕ್ಷಣ ಮತ್ತು ಅನುಭವವಿಲ್ಲದ ಅಧಿಕಾರಿ ಗಳು, ಗುರಿ ಮತ್ತು ಕಾರ್ಯಕ್ರಮವನ್ನು ಖಚಿತವಾಗಿ ನಿರ್ಣಯಿಸದೆ, ಸಂದರ್ಶನ ನಡೆಸುವ ಸಂದರ್ಭದಲ್ಲಿ ಈ ಸಾಧನ ನಿಷ್ಪ್ರಯೋಜಕವಾಗುತ್ತದೆ.

ಅನಿಶ್ಚಿತ, ಅಸ್ತವ್ಯಸ್ತ ಆಚರಣೆಗಿಂತ, ಯೋಚಿಸಿ ತಯಾರಿಸಿದ ಕಾರ್ಯ ಕ್ರಮಾನುಸರಣೆ ಮೇಲು. ನಾನಾಮುಖ ಸಿದ್ಧತೆಗಳನ್ನು ಮಾಡಿ, ಪ್ರವೀಣರಾದ ಸಂದರ್ಶಕರನ್ನು ನೇಮಕ ಮಾಡಿದರೆ ಮಾತ್ರ ವ್ಯವಸ್ಥಿತ ಸಂದರ್ಶನ ಸಾಧ್ಯ. ಒಬ್ಬ ವ್ಯಕ್ತಿಯಿಂದ, ಆತನ ಚಟುವಟಿಕೆ, ನಿರ್ವಹಣೆಗಳ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಲು ಸಂದರ್ಶನ ನಡೆಸುತ್ತಾರೆ. ಸಂದರ್ಶನಕ್ಕೆ ಮುಂಚೆಯೇ ಯಾವ ಬಗೆಯ ಮಾಹಿತಿ ಸಂಗ್ರಹಣೆ ಆವಶ್ಯಕವೆಂದು ನಿರ್ಧರಿಸಲು, ಉದ್ಯೋಗದ ಮುಖ್ಯಾಂಶಗಳ ಗ್ರಹಿಕೆ ಅತ್ಯಗತ್ಯ. ಸ್ಪಷ್ಟ ಮತ್ತು ಸಾಧ್ಯವಾದ ಗುರಿಗಳನ್ನು ನಿರ್ಧರಿಸಿ, ಅಗತ್ಯವಾದ ಮಾಹಿತಿ ಸಂಗ್ರಹಿಸಲು ಸೂಕ್ತವಾದ ಮಾರ್ಗಗಳನ್ನು ಅಳವಡಿಸಿ, ಅರ್ಥ ವಿವರಣೆ ಕಾರ್ಯವಿಧಾನವನ್ನು ಗ್ರಹಿಸಿದ ನಂತರ ಸಂದರ್ಶನ ಪ್ರಾರಂಭ ಮಾಡಬೇಕು. ಈ ಬಗೆಯ ಪೂರ್ವಸಿದ್ಧತೆಯಿಂದ, ಸಂದರ್ಶನ ವ್ಯಾಪ್ತಿ ಏನು, ಯಾವ ಕ್ಷೇತ್ರಗಳಲ್ಲಿ ಪರಿಶೀಲನೆ ನಡೆಸಬೇಕು, ಎಷ್ಟು ಕಾಲಾವಧಿ ಅಗತ್ಯ ಮುಂತಾದ ವಿಷಯಗಳ ಅರಿವಾ ಗುತ್ತದೆ. ಮುಖ್ಯವಾಗಿ ಅರ್ಜಿದಾರರು ಒದಗಿಸುವ ಮಾಹಿತಿಯ ಗುಣ ಮತ್ತು ಪ್ರಮಾಣಗಳು ಅವರ ವಿಶ್ವಾಸ, ಪ್ರಶ್ನೆಗಳ ಶೈಲಿ ಮತ್ತು ಕ್ರಮಗಳನ್ನು ಅವಲಂಬಿ ಸಿವೆ. ಈ ಅಂಶಗಳು ಸಂದರ್ಶನ ಕೌಶಲ್ಯಕ್ಕೆ ಸಂಬಂಧಪಟ್ಟಿವೆ. ವ್ಯವಸ್ಥಿತ ಕಾರ್ಯವಿಧಾನ ಮತ್ತು ಪ್ರವೀಣರಾದ ಸಂದರ್ಶಕರ ನೆರವು ಸಂದರ್ಶನದ ಉಪ ಯುಕ್ತತೆಯನ್ನು ಹೆಚ್ಚಿಸುವುವು.

ಸ್ಥಳ ವ್ಯವಸ್ಥೆ

ಸಂದರ್ಶನದ ಏರ್ಪಾಟಿಗೆ ಜವಾಬ್ದಾರರಾದ ಜನರು, ಸ್ಥಳ ವ್ಯವಸ್ಥೆಗೆ ಸಾಧಾ ರಣವಾಗಿ ಹೆಚ್ಚು ಗಮನಕೊಡುವುದಿಲ್ಲ. ಇದು ಬಹು ಸಣ್ಣ ವಿಷಯವೆಂದು ತಪ್ಪು ಅಭಿಪ್ರಾಯ ಹೊಂದಿರುತ್ತಾರೆ. ಸಣ್ಣ ಪುಟ್ಟ ವಿವರಗಳಿಗೆ ಗಮನ ಕೊಡುವುದು, ಕಾರ್ಯದಕ್ಷತೆಯ ಗುಣಗಳಲ್ಲೊಂದು. ಒಪ್ಪುವ ವಾತಾವರಣ ಕಾರ್ಯ ನಿರ್ವಹಣೆಗೆ

ನೆರವು ನೀಡುತ್ತವೆ. ಆದ್ದರಿಂದ ಸಂದರ್ಶನ ಸ್ಥಳವನ್ನು ಸಜ್ಜುಗೊಳಿಸುವುದು ಒಳ್ಳೆಯದು.

ಸಂದರ್ಶನದ ಕೊಠಡಿಯು ಗಾಳಿ ಬೆಳಕಿದ್ದು, ಚೊಕ್ಕಟವಾಗಿರಬೇಕು. ಅವಶ್ಯವಿದ್ದಷ್ಟು ಮಾತ್ರ ಮೇಜು, ಕುರ್ಚಿಗಳಿರಬೇಕು. ಪೀಠರಚನೆ ಅಗತ್ಯ ರೀತಿಯಲ್ಲಿದ್ದರೆ, ಸಂದರ್ಶಕರು, ಅರ್ಜಿದಾರರು ಕೊಠಡಿಯನ್ನು ಪ್ರವೇಶಿಸಿದ ಕೂಡಲೇ ತಾವು ಕೂಡ್ರಬೇಕಾದ ಜಾಗ ಗೊತ್ತಾಗಬೇಕು. ಮೇಜಿನ ಮೇಲೆ ಸಂದರ್ಶಕರ ಹೆಸರಿನ ಹಲಗೆಗಳನ್ನು ಇಡುವುದರಿಂದ, ಸಂದರ್ಶಕರು-ಅರ್ಜಿದಾರರ ಪರಸ್ಪರ ಪರಿಚಯ ಮಾಡಿಕೊಡುವ ಶ್ರಮ ಕಡಿಮೆಯಾಗುತ್ತದೆ. ಸಂದರ್ಶನಕ್ಕೆ ಆವಶ್ಯಕವಾದ ಕಾಗದ ಪತ್ರಗಳು, ಬರೆಯುವ ಸಲಕರಣೆ, ಬೇಕಾದ ಉಪಕರಣ, ಮಾಪಕ ಮುಂತಾದವುಗಳು ನಿರ್ದಿಷ್ಟ ಸ್ಥಾನಗಳಲ್ಲಿರಬೇಕು. ಸಂಭಾಷಣೆ ನಡುವೆ ಬೇಕಾದ ಪತ್ರವೊ ಅಥವಾ ಪದಾರ್ಥವೊ ಗೊತ್ತಾದ ಕಡೆ ಇರದೆ, ಸಂದರ್ಶಕರು ಹುಡುಕತೊಡಗಿದರೆ ಆಗಿನ ಕಾರ್ಯಪ್ರಗತಿಗೆ ಅಡಚಣೆಯುಂಟಾಗುತ್ತದೆ.

ಮಾತುಕತೆಗಳು ಸುಗಮವಾಗಿ ನಡೆಯಲು ಶಾಂತವಾತಾವರಣ ಮತ್ತು ಏಕಾಂತ ಆವಶ್ಯಕ. ಸಂದರ್ಶನ ನಡೆಯುತ್ತಿರುವಾಗ, ಇತರ ಸಿಬ್ಬಂದಿಯವರ ಓಡಾಟ, ಅವರೊಡನೆ ಮಾತುಕತೆ, ದೂರವಾಣಿ ಯಂತ್ರದ ಕರೆ ಮುಂತಾದುವು ಕಾರ್ಯ ವಿಧಾನದ ಏಕಾಗ್ರತೆಯನ್ನು ಭಂಗಪಡಿಸುತ್ತವೆ. ಈ ಅಡ್ಡಿ ಆತಂಕಗಳು ಸಂಭವಿಸದ ಹಾಗೆ ಏರ್ಪಾಟು ಮಾಡಲು ಸಾಧ್ಯ. ಗಾಜಿನ ಅಥವಾ ಮರದ ಅಡ್ಡಗೋಡೆ ಇರುವ ಸ್ಥಳದಲ್ಲಿ ಏಕಾಂತ ಅಸಾಧ್ಯ. ಆದ್ದರಿಂದ ಒಂದು ಪ್ರತ್ಯೇಕ ಕೊಠಡಿಯನ್ನು ಸಂದರ್ಶನಕ್ಕಾಗಿ ಕಾದಿಡಬೇಕು. ಇಂತಹ ಶಾಂತ ಮತ್ತು ಏಕಾಂತ ವಾತಾವರಣದಲ್ಲಿ ಅರ್ಜಿದಾರರು ಮನಬಿಚ್ಚಿ ಮಾತನಾಡಲು ಸಾಧ್ಯ. ಸಂದರ್ಶಕರು ಕೇಳುವ ಪ್ರಶ್ನೆಗಳಿಗೆ ಅವರು ಶಂಕೆ ಇಲ್ಲದೆ ಉತ್ತರ ಕೊಡಲು ಅನುಕೂಲ. ಆವಶ್ಯಕತೆ ಇದ್ದಾಗ, ಸಾಧ್ಯವಾದರೆ, ಅರ್ಜಿದಾರರು ಒಂದು ಮಾರ್ಗದಿಂದ ಪ್ರವೇಶಿಸಿ ಮತ್ತೊಂದು ಮಾರ್ಗದಿಂದ ನಿಷ್ಕ್ರಮಿಸಿದರೆ ಒಳ್ಳೆಯದು. ಒಂದೇ ಸಂಸ್ಥೆಯ ಮೇಲಧಿಕಾರಿ ಮತ್ತು ಅಧೀನ ಅಧಿಕಾರಿಗಳಿಬ್ಬರೂ ಖಾಲಿ ಇರುವ ಉದ್ಯೋಗಕ್ಕೆ ಅರ್ಜಿ ಹಾಕಿ, ಸಂದರ್ಶನಕ್ಕೆ ಬಂದಾಗ ಪರಸ್ಪರ ಭೆಟ್ಟಿಯಾಗಲು ಇಷ್ಟಪಡುವುದಿಲ್ಲ. ತನ್ನ ಸಂಸ್ಥೆಯ ಸಮ್ಮತಿ ಪಡೆಯದೆ ಬರುವ ಅರ್ಜಿದಾರ, ತನ್ನ ಗುರುತನ್ನು ರಹಸ್ಯವಾಗಿಡಬೇಕೆಂದು ಅಪೇಕ್ಷಿಸಬಹುದು. ಇಂತಹ ಸಂದರ್ಭಗಳಲ್ಲಿ ಆಗಮನ-ನಿಷ್ಕ್ರಮಣ ಮಾರ್ಗಗಳು ಬೇರೆ ಬೇರೆಯಾಗಿರುವುದು ಒಳ್ಳೆಯದು. ಆದುದರಿಂದಲೇ ಅನೇಕ ಪ್ರಗತಿಶೀಲ ಸಂಸ್ಥೆಗಳು ಉತ್ತಮರೀತಿಯ ಸ್ಥಳ ವ್ಯವಸ್ಥೆಯನ್ನು ಮಾಡತೊಡಗಿವೆ.

ಸಂದರ್ಶನ ವೇಳಾಪಟ್ಟಿ

ಎಲ್ಲಾ ಅರ್ಜಿದಾರರನ್ನು ಏಕಕಾಲಕ್ಕೆ ಬರಹೇಳಿ, ಸಂದರ್ಶನವನ್ನು ನಿಶ್ಚಿತ ಕಾಲಕ್ಕೆ ಪ್ರಾರಂಭಿಸದೆ, ಸಂದರ್ಶನ ಕಾಲಾವಧಿಗಳನ್ನು ಸಮಾನವಾಗಿರಿಸದೆ ಹೋದರೆ ಕಾರ್ಯಕ್ರಮ ಹತೋಟಿಮೀರಿ, ಅರ್ಜಿದಾರರು ಬಹಳಕಾಲ ಕಾಯಬೇಕಾಗುವುದು. ಹೀಗೆ ಕಾದುಕಾದು ಆಯಾಸಗೊಂಡ ಜನರು ಸಂದರ್ಶನದಲ್ಲಿ ಚುರುಕಾಗಿ, ಉತ್ಸಾಹ ದಿಂದ ಭಾಗವಹಿಸುವುದಿಲ್ಲ. ಸಂದರ್ಶಕರ ಭಾವಗತಿ ಉತ್ತೇಜಕವಾಗಿರುವುದಿಲ್ಲ. ಬೇಸರ, ಅವಸರ, ಉತ್ಸಾಹಭಂಗ ಮತ್ತು ಅವ್ಯವಸ್ಥೆ ತುಂಬಿದ ವಾತಾವರಣದಲ್ಲಿ ಫಲಕಾರಿಯಾದ ಸಂಭಾಷಣೆ ಮಾಡುವುದು ಕಷ್ಟ. ಇದರ ಪರಿಣಾಮವಾಗಿ, ಸಂದರ್ಶಕರ ನಿರ್ಣಯದಲ್ಲಿ ವಸ್ತುನಿಷ್ಠತೆಯಿರುವುದಿಲ್ಲ. ಜೊತೆಗೆ, ಅರ್ಜಿದಾರರ ಮನಸ್ಸಿನಲ್ಲಿ ಅತೃಪ್ತಿಯೂ ಸಂಸ್ಥೆಯ ಘನತೆಗೆ ಹಾನಿಯೂ ಉಂಟಾಗುವುವು. ಈ ಸಮಸ್ಯೆಗೆ ಪರಿಹಾರ, ನಿಷ್ಕೃಷ್ಟಪಡಿಸಿದ ಸಂದರ್ಶನ ವೇಳಾಪಟ್ಟಿ.

ಅರ್ಜಿದಾರರನ್ನು ಬೇರೆ ಬೇರೆ ಕಾಲಕ್ಕೆ ಬರಹೇಳಿ, ಅವರ ಸಂದರ್ಶನದ ಪ್ರಾರಂಭ ಮತ್ತು ಮುಕ್ತಾಯ ಕಾಲಗಳನ್ನು ಮುಂದಾಗಿಯೇ ತಿಳಿಸಬೇಕು. ಈ ವೇಳಾಪಟ್ಟಿಯ ವಿವರಗಳನ್ನು ಎಲ್ಲಾ ಸಂದರ್ಶಕರಿಗೂ ಕಳುಹಿಸಬೇಕು. ಹಲವಾರು ಅರ್ಜಿದಾರರನ್ನು, ಒಬ್ಬರಾದ ಮೇಲೊಬ್ಬರ ಪ್ರಕಾರ ಸಂದರ್ಶಿಸಬೇಕಾದ ಸಂದರ್ಭ ದಲ್ಲಿ, ಒಂದು ಸಂದರ್ಶನ ಅರ್ಧ ಮುಗಿದಿರುವ ಸಮಯಕ್ಕೆ, ಮತ್ತೊಬ್ಬ ಅರ್ಜಿದಾರ ಸಿದ್ಧನಾಗಿರುವಂತೆ ಏರ್ಪಾಟು ಮಾಡಬೇಕು. ಉದಾಹರಣೆಗೆ, ಒಬ್ಬ ಅರ್ಜಿದಾರನ ಕಾಲಾವಧಿ 10 ಘಂಟೆಯಿಂದ 10-30 ರವರೆಗಿದ್ದರೆ, ಎರಡನೆಯವರ ಕಾಲಾವಧಿ 10-15 ರಿಂದ 11 ರವರೆಗಿರಬೇಕು. ಈ ಕ್ರಮದ ಪ್ರಕಾರ ಯಾವ ಅರ್ಜಿದಾರನೇ ಆಗಲಿ ಕಾಲು ಘಂಟೆಗಿಂತ ಹೆಚ್ಚು ಕಾಯಬೇಕಾಗುವುದಿಲ್ಲ. ಪ್ರತಿ ಘಂಟೆಯ ಕಾಲಾವಧಿಯಲ್ಲಿ ಇಬ್ಬರು ಅರ್ಜಿದಾರರನ್ನು ಆಹ್ವಾನಿಸುವುದು ಮತ್ತೊಂದು ಬಗೆಯ ವ್ಯವಸ್ಥೆ. ಈ ಕ್ರಮದ ಅನುಕೂಲವೇನೆಂದರೆ, ಆಹ್ವಾನಿಸಿದ ಅರ್ಜಿದಾರರಲ್ಲಿ ಕೆಲವರು ಬರದಿದ್ದಲ್ಲಿ, ಸಂದರ್ಶಕರು ಕಾಯುವ ಸಂದರ್ಭ ಒದಗುವುದಿಲ್ಲ. ಯಾವ ಸಮಯದಲ್ಲಾಗಲಿ ಇಬ್ಬರಿಗಿಂತ ಹೆಚ್ಚು ಜನರು ಸಂದರ್ಶನಕ್ಕಾಗಿ ಕಾಯುತ್ತಿರುವುದಿಲ್ಲ.

ವೇಳಾಪಟ್ಟಿ ತಯಾರಿಕೆಯ ಅವಶ್ಯ ಅಂಶ ಸಂದರ್ಶನದ ಕಾಲಾವಧಿಗಳನ್ನು ಅಂದಾಜು ಮಾಡುವುದು. ಸಂದರ್ಶನದ ನಿರ್ದೇಶನ ಮತ್ತು ಹತೋಟಿ ಅನುಭವ ಹೆಚ್ಚಿದಂತೆ, ಕಾಲಾವಧಿ ಅಂದಾಜು ಮಾಡುವುದು ಸುಲಭವಾಗುತ್ತದೆ. ನಿರ್ದಿಷ್ಟ ಕಾಲಾವಕಾಶ ತಮಗೆ ಮೀಸಲಾಗಿರುವ ಅರಿವು ಅರ್ಜಿದಾರರ ಆತ್ಮಗೌರವವನ್ನು ಸಂರಕ್ಷಿಸುತ್ತದೆ. ಅವರು ಮನಸಾರ ಮಾತುಕತೆಗಳಲ್ಲಿ ಭಾಗವಹಿಸಲು ಅನುಕೂಲ. ಸಂದರ್ಶಕರು ಕಾಲಾವಧಿಗನುಸಾರವಾಗಿ ತಕ್ಕ ಸಿದ್ಧತೆ ಮಾಡಿಕೊಳ್ಳಲು ಸಾಧ್ಯ. ಇದರಿಂದ ಸಂದರ್ಶನ ಕಾರ್ಯ ಕ್ರಮಪ್ರಕಾರ ನಡೆಯುವುದು.

ಅರ್ಜಿದಾರರು ನಿಶ್ಚಿತ ಸಮಯಕ್ಕೆ ಮುಂಚೆ ಬಂದಾಗ, ನಡೆಯುತ್ತಿರುವ ಸಂದರ್ಶನ ಸ್ವಲ್ಪ ಕಾಲಾವಧಿ ಮೀರಿದಾಗ ಅಥವಾ ಬೇರೆ ಆಕಸ್ಮಿಕ ಕಾರಣಗಳಿಂದ ಅರ್ಜಿದಾರರು ಸ್ವಲ್ಪ ಕಾಲ ಕಾಯಲೇಬೇಕಾಗಬಹುದು. ಅಂತಹ ಸಂದರ್ಭಗಳಲ್ಲಿ, ಸತ್ಕಾರಸ್ಥಳದಲ್ಲಿ ಅರ್ಜಿದಾರರ ಮನೋರಂಜನೆಗೆ ಸೌಲಭ್ಯಗಳಿದ್ದರೆ ಉತ್ತಮ. ಚಿತ್ತಾಕರ್ಷಕ ಪ್ರಕಟಣೆಗಳು, ಸಂಸ್ಥೆಯ ಕಾರ್ಯನಿರೂಪಣೆ ಚಿತ್ರಗಳು, ತಯಾರಿಕೆಯ ವಸ್ತು ಪ್ರದರ್ಶನ ಮುಂತಾದವು ಕಾಯುತ್ತಿರುವವರ ಅರಿವು, ಆಸಕ್ತಿಗಳನ್ನು ಪ್ರೋತ್ಸಾಹಿಸುತ್ತವೆ. ಕಾಲ ಕಳೆಯುವುದು ಸುಲಭವಾಗುತ್ತದೆ. ಅಲ್ಲದೆ, ಸಂಸ್ಥೆಯ ಬಗ್ಗೆ ಸದ್‌ಭಾವನೆಯು ಅರ್ಜಿದಾರರಲ್ಲಿ ಉಂಟಾಗುತ್ತದೆ.

ಸ್ವಾಗತ

ಸಂಸ್ಥೆಯು ಉಮೇದುವಾರರ ಅರ್ಜಿಗಳನ್ನು ಸ್ವೀಕರಿಸಿದಾಗಿನಿಂದ, ಅರ್ಜಿದಾರರು ಸಂದರ್ಶನ ಕೊಠಡಿ ಪ್ರವೇಶಿಸುವವರೆಗೆ, ಸಂಭವಿಸುವ ಎಲ್ಲಾ ಸಂಪರ್ಕಗಳೂ ಸ್ವಾಗತದ ವ್ಯಾಪ್ತಿಗೆ ಒಳಪಟ್ಟಿವೆ. ಅರ್ಜಿದಾರರನ್ನು ಒಲಿಸಿಕೊಂಡು, ಸೌಹಾರ್ದ ಮತ್ತು ಸಹಕಾರ ಮನೋಭಾವವನ್ನು ಕಲ್ಪಿಸುವುದೇ, ಉತ್ತಮ ರೀತಿಯ ಸ್ವಾಗತದ ಮುಖ್ಯೋದ್ದೇಶ. ಅರ್ಜಿದಾರರ ವಿಶ್ವಾಸ ಮತ್ತು ಗೌರವಗಳನ್ನು ಗಳಿಸುವುದರಿಂದ, ಸಂದರ್ಶಕರ ಅನ್ವೇಷಣೆ ಕಾರ್ಯ ಸುಲಭವಾಗುತ್ತದೆ. ಇದರಿಂದ ಸಂಸ್ಥೆಯ ಕೀರ್ತಿಯೂ ಹೆಚ್ಚುತ್ತದೆ.

ಸಂದರ್ಶನಕ್ಕೆ ಆಹ್ವಾನಿಸಿ ಬರೆದ ಪತ್ರದಲ್ಲಿ ಸ್ಥಳ, ದಿನ, ಕಾಲ, ಪ್ರಯಾಣದ ಖರ್ಚು ಮುಂತಾದ ಮುಖ್ಯ ವಿಷಯಗಳನ್ನು ವಿವರಿಸಬೇಕು. ಪರಸ್ಥಳಗಳಿಂದ ಬರುವವರ ಅನುಕೂಲಕ್ಕಾಗಿ ವಾಹನ ಸೌಕರ್ಯ, ಸಮಾಚಾರ ಮತ್ತು ಮಾರ್ಗದರ್ಶಕ ನಕ್ಷೆಗಳನ್ನು ಒದಗಿಸುವುದೊಳ್ಳೆಯದು. ಸಂದರ್ಶನ ಕೊಠಡಿ, ಸಂಸ್ಥೆಯ ಆವರಣದ ಒಳಪ್ರದೇಶದಲ್ಲಿದ್ದು ಒಳಹೋಗುವ ಮಾರ್ಗದಲ್ಲಿ ಪಹರೆದಾರನಿದ್ದರೆ ಅರ್ಜಿದಾರರ ಪ್ರವೇಶಕ್ಕೆ ಅಡಚಣೆಯಾಗದಂತೆ ಏರ್ಪಾಟು ಮಾಡಬೇಕು. ಉದ್ಯೋಗಾಧಿಕಾರಿ, ಅರ್ಜಿದಾರರ ಹೆಸರು, ನಿಯಮಿತಕಾಲ ಮತ್ತು ಪ್ರವೇಶ ಕ್ರಮಗಳನ್ನು ಮುಂಗಡ ವಾಗಿಯೇ ಪಹರೆದಾರನಿಗೆ ತಿಳಿಸಿರಬೇಕು. ಏಕೆಂದರೆ ಪಹರೆದಾರ ಅಧಿಕಾರ ಪತ್ರ ಹೊಂದದ ಪರಕೀಯರನ್ನು ತಡೆಗಟ್ಟುತ್ತಾನೆ. ಒಟ್ಟಿನಲ್ಲಿ ಅರ್ಜಿದಾರರು ಸಂದರ್ಶನ ಸ್ಥಳವನ್ನು ಸುಗಮವಾಗಿ ತಲುಪಲು ತಕ್ಕ ಏರ್ಪಾಡಿರಬೇಕು. ಸಂದರ್ಶನ ಸ್ಥಳಕ್ಕೆ ಬಂದವರನ್ನು ಆದರದಿಂದ ಸ್ವಾಗತಿಸಿ, ಅವಶ್ಯಕವಾದ ಸಮಾಚಾರ ತಿಳಿಸಿ, ಕೂಡ್ರುವ ಕೊಠಡಿಗೆ ಕರೆದುಕೊಂಡು ಹೋಗುವುದು ಒಳ್ಳೆಯದು. ಕೆಲವು ಸಂಸ್ಥೆಗಳ ಪದ್ಧತಿಯ ಪ್ರಕಾರ ಅರ್ಜಿದಾರರು ಸಂಗಡ ತಂದಿರುವ ಪ್ರಶಸ್ತಿ ಪತ್ರಗಳು, ಗುಣವರ್ಣನೆ ಪತ್ರಗಳು. ಮುಂತಾದುವನ್ನು ಸ್ವಾಗತಾಧಿಕಾರಿ ಪರಿಶೀಲನೆಮಾಡುವನು. ಪ್ರಯಾಣದ ಖರ್ಚನ್ನು ಕೊಡುವ ಸಂಸ್ಥೆಗಳಲ್ಲಿ, ಅಗತ್ಯವಾದ ವ್ಯವಹಾರ ಕ್ರಮವನ್ನು ಈ

ಸಂದರ್ಭದಲ್ಲಿಯೇ ಮುಗಿಸುತ್ತಾರೆ. ಇದರಿಂದ ಅರ್ಜಿದಾರರು ಸಂದರ್ಶನ ಮುಗಿದೊಡನೆಯೇ ಪ್ರಯಾಣದ ಹಣ ಪಡೆಯಲು ಅನುಕೂಲವಾಗುತ್ತದೆ. ಅರ್ಜಿದಾರರಿಗೆ ಹೃತ್ಪೂರ್ವಕ ಸ್ವಾಗತ ನೀಡುವುದರಿಂದ ಸಂದರ್ಶನ ಕಾರ್ಯಕ್ರಮ ಸುಲಲಿತವಾಗಿ ಜರುಗುವುದಲ್ಲದೆ, ಕಾರ್ಯವಿಧಾನದಲ್ಲಿ ಭಾಗವಹಿಸಿದವರಿಗೆ ಕಾರ್ಯತೃಪ್ತಿ ದೊರಕುತ್ತದೆ.

ಮಾಹಿತಿ ಸಂಗ್ರಹಣೆ

ಅರ್ಜಿದಾರನಿಗೆ ಸಂಬಂಧಿಸಿದ ಮತ್ತು ಆತನ ಉದ್ಯೋಗಾರ್ಹತೆಯನ್ನು ನಿರ್ಧರಿಸಲು ಬೇಕಾದ ಮಾಹಿತಿಯನ್ನು ಪೂರ್ಣವಾಗಿ ಸಂಗ್ರಹಿಸಲು ಅನೇಕ ಮಾರ್ಗಗಳಿವೆ. ಮೊದಲನೆಯದಾಗಿ, ಅರ್ಜಿ ಪತ್ರದಿಂದ ಹೆಸರು, ವಿಳಾಸ, ಶಿಕ್ಷಣ, ಅನುಭವ, ವಿರಾಮ ಕಾಲದ ಚಟುವಟಿಕೆಗಳು ಮುಂತಾದ ನಾನಾ ಮುಖಗಳ ಬಗ್ಗೆ ಸಂಕ್ಷಿಪ್ತ ಸಮಾಚಾರ ದೊರಕುತ್ತದೆ. ಜಾಗರೂಕತೆಯಿಂದ ರಚಿಸಿದ, ಉತ್ತಮ ರೂಪದ ಅರ್ಜಿ ಪತ್ರವನ್ನು ಉಮೇದುವಾರರಿಗೆ ಒದಗಿಸುವುದರಿಂದ ಮಾಹಿತಿ ಸಂಗ್ರಹಣ ಕಾರ್ಯ ಸುಲಭವಾಗುತ್ತದೆ. ಅರ್ಜಿ ಪತ್ರದಲ್ಲಿರುವ ಅಂಶಗಳು ಸ್ಪಷ್ಟವಾಗಿದ್ದು, ಉಮೇದುವಾರರು ತಿಳಿದುಕೊಳ್ಳಲು ಸುಲಭವಾಗಿದ್ದರೆ, ಆವಶ್ಯಕವಾದ ಮಾಹಿತಿಯನ್ನು ಬರೆಯಲು ಅನುಕೂಲವಾಗುತ್ತದೆ. ಸತ್ಯ ಸಂಗತಿಯನ್ನು ಮಾತ್ರ ಬರೆಯಬೇಕೆಂಬ ನಿಯಮವಿರುವುದರಿಂದ, ಈ ನಿಯಮೋಲ್ಲಂಘನೆ ಮಾಡಿದವರು ಶಿಕ್ಷೆಗೆ ಗುರಿಯಾಗುವ ಸಂಭವವಿರುವುದರಿಂದ, ಅರ್ಜಿಪತ್ರದಲ್ಲಿರುವ ಮಾಹಿತಿಯು ಸಾಮಾನ್ಯವಾಗಿ ನಂಬಲರ್ಹವಾಗಿರುತ್ತದೆ. ಅರ್ಜಿಪತ್ರದ ಮೂಲಕ, ಮಿತ ಪ್ರಮಾಣದ, ತಕ್ಷಣ ಉಪಯೋಗಕ್ಕೆ ಆವಶ್ಯಕವಾದ ಮಾಹಿತಿಯನ್ನು ಮಾತ್ರ ಪಡೆಯಬೇಕು. ಈ ಸಮಾಚಾರವನ್ನು ಉದ್ಯೋಗ ವರ್ಣನೆ ಮತ್ತು ಉದ್ಯೋಗಾರ್ಹತೆ ಪಟ್ಟಿಗಳೊಡನೆ ಹೋಲಿಸಿ ನೋಡಿ ಅರ್ಹತೆ ಸೂಚಕ ಚಿಹ್ನೆಗಳಿರುವ ಅರ್ಜಿದಾರರನ್ನು ಸಂದರ್ಶನಕ್ಕೆ ಬರಹೇಳುವ ಕ್ರಮ ಆಚರಣೆಯಲ್ಲಿದೆ. ಇದು ಆಯ್ಕೆಯ ಮೊದಲನೆ ಹಂತವಾಗಿರುವುದರಿಂದ, ಅರ್ಜಿ ಕಳುಹಿಸಿದ ಜನರಿಂದ ಆಯ್ದ ಕೆಲವರನ್ನು ಮಾತ್ರ ಸಂದರ್ಶನಕ್ಕೆ ಕರೆಯಬೇಕು. ಸಾಮಾನ್ಯವಾಗಿ ಒಂದು ಉದ್ಯೋಗಕ್ಕೆ ಐದಾರು ಉಮೇದುವಾರರನ್ನು ಸಂದರ್ಶಿಸುವುದು ರೂಢಿ.

ಎರಡನೆಯದಾಗಿ, ಸಾಮರ್ಥ್ಯ ಪರೀಕ್ಷೆ, ಕುಶಲತೆ ಪರೀಕ್ಷೆ, ಉದ್ಯೋಗಜ್ಞಾನ ಪರೀಕ್ಷೆ ಮತ್ತು ಆಸಕ್ತಿ ಪರೀಕ್ಷೆಗಳ ಫಲಿತಾಂಶಗಳನ್ನು ಅನುಕಲನ ಮಾಡಿ, ಅರ್ಥ ವಿವರಣೆ ಮಾಡುವುದರ ಮೂಲಕ ಅರ್ಜಿದಾರನ ಗುಣವಿಶೇಷಗಳನ್ನು ಮತ್ತು ದೋಷಗಳನ್ನು ತಿಳಿದುಕೊಳ್ಳಬಹುದು. ಅನೇಕ ಪ್ರಗತಿಶೀಲ ಸಂಸ್ಥೆಗಳು ಈ ಬಗೆಯ ಪರೀಕ್ಷಣ ಕ್ರಮವನ್ನು ಹೆಚ್ಚು ಹೆಚ್ಚಾಗಿ ಆಚರಣೆಗೆ ತರುತ್ತಿದ್ದಾರೆ.

ಅರ್ಜಿದಾರರಿಗೆ ಮೊದಲು ಪರೀಕ್ಷೆಗಳನ್ನು ಕೊಟ್ಟು, ತೇರ್ಗಡೆಯಾದವರನ್ನು ಮಾತ್ರ ಸಂದರ್ಶನಕ್ಕೆ ಕರೆಯುವುದು ರೂಢಿಯಲ್ಲಿರುವ ಪದ್ಧತಿ. ಆದ್ದರಿಂದ ಪರೀಕ್ಷಣ ಕ್ರಮ ಆಯ್ಕೆಯ ಎರಡನೆ ಹಂತವೆಂದು ಗಣಿಸಬಹುದು. ಈ ಬಗೆಯ ಪರೀಕ್ಷೆಗಳ ಫಲಿತಾಂಶಗಳು, ವ್ಯಕ್ತಿಯ ಸೂಕ್ಷ್ಮ ಗುಣಗಳ ಅಳತೆಗಳನ್ನು ತಿಳಿಸುತ್ತವೆ. ಅಲ್ಪ ಕಾಲದ ಪರಿಚಯದಿಂದ ತಿಳಿಯಲಾಗದ ಗುಣವಿಶೇಷಗಳನ್ನು ಈ ಕ್ರಮದಿಂದ ಗ್ರಹಿಸಲು ಸಾಧ್ಯ. ಸಂದರ್ಶನ ಕಾಲದಲ್ಲಿ ಪರೀಕ್ಷೆಗಳ ಫಲಿತಾಂಶಗಳನ್ನು ಆಧಾರ ವಾಗಿಟ್ಟುಕೊಂಡು ಪ್ರಶ್ನೆಗಳನ್ನು ಕೇಳಬಹುದು. ಸಹಜ ಸಾಮರ್ಥ್ಯ ಮತ್ತು ಸಾಧನೆಗಳನ್ನು ತುಲನೆ ಮಾಡುವುದರಿಂದ ವ್ಯಕ್ತಿಯ ಕಾರ್ಯ ಸ್ವಭಾವವನ್ನು ತಿಳಿದುಕೊಳ್ಳಬಹುದು. ಈ ರೀತಿ ಅನೇಕ ಬಗೆಯ ಉಪಯುಕ್ತ ಮಾಹಿತಿಯನ್ನು ಪರೀಕ್ಷಣ ಕ್ರಮದಿಂದ ಸಂಗ್ರಹಿಸಬಹುದು.

ಮಾಹಿತಿ ಸಂಗ್ರಹಣೆಯ ಮೂರನೆ ಮಾರ್ಗ, ಅರ್ಜಿದಾರನು ಒದಗಿಸುವ ಪದವಿಪತ್ರಗಳು, ಪ್ರಶಂಸೆ ಪತ್ರಗಳು, ಸಾಧನೆ ಸೂಚಕ ಅಂಕಿ ಪತ್ರಗಳು (Marks Cards) ಮತ್ತು ಪರಿಚಯಸ್ಥರ ಅಭಿಪ್ರಾಯಗಳ ಪರಿಶೀಲನೆ, ವ್ಯಾಸಂಗ, ಕ್ರೀಡೆ, ಸಾಮಾಜಿಕ ಸೇವೆ, ಸಾಂಘಿಕ ಚಟುವಟಿಕಾರಂಗಗಳಲ್ಲಿ ಅರ್ಜಿದಾರನು ಸಾಧಿಸಿದ ಮಹತ್ಕಾರ್ಯಗಳನ್ನು ಸೂಚಿಸುವ ಪ್ರಮಾಣ ಪತ್ರಗಳು ಇ.,ವಿವಿಧ ಮುಖಗಳ ಬಗ್ಗೆ ಸಂಗತಿ ತಿಳಿಸುತ್ತವೆ. ಈ ಬಗೆಯ ಪ್ರಮಾಣ ಪತ್ರಗಳನ್ನು ಪಡೆದಿರುವವರ ಸಂಖ್ಯೆ ಬಹು ಕಡಿಮೆ. ಅನೇಕ ಮಂದಿ, ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೂ ಮಹತ್ಕಾರ್ಯ ಸಾಧನೆ ಮಟ್ಟವನ್ನು ಮುಟ್ಟಿರುವುದಿಲ್ಲ. ಆದ್ದರಿಂದ ಪ್ರಮಾಣ ಪತ್ರಗಳನ್ನು ಪಡೆದಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ, ಸಂದರ್ಶನ ಕಾಲದಲ್ಲಿ, ಸೂಕ್ತ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಪಡೆಯಬೇಕು. ಸಾಧಾರಣವಾಗಿ ಪ್ರಶಂಸೆ ಪತ್ರಗಳು ಅರ್ಜಿದಾರನ ಗುಣಾವಗುಣಗಳನ್ನು ವಿಮರ್ಶೆ ಮಾಡುವುದಿಲ್ಲ. ಅವುಗಳನ್ನು ಹೊಗಳಿಕೆ ಪತ್ರಗಳೆಂದು ಕರೆಯಬಹುದು. ಆದ್ದರಿಂದ ಈ ಪತ್ರಗಳನ್ನು ಪರಿಶೀಲಿಸುವುದರ ಬದಲು ಅನೇಕ ಸಂಸ್ಥೆಗಳು ಅರ್ಜಿದಾರನ ಪರಿಚಯವಿರುವ ಜನರಿಂದ ನೇರವಾಗಿ ಮಾಹಿತಿಯನ್ನು ಬೇಡುವುವು. ಅರ್ಜಿದಾರನ ಬಲಾಬಲಗಳ ಅಪ್ತ ಪರಿಚಯವಿರುವ ಮೇಲಧಿಕಾರಿಗಳು, ಬೋಧಕರು ಮುಂತಾದವರು ಒದಗಿಸುವ ಸಮಾಚಾರ ಹೆಚ್ಚು ಉಪಯೋಗಕರವಾಗಿರುತ್ತದೆ.

ವಿವಿಧ ಮೂಲಸ್ಥಾನಗಳಿಂದ ಸಂಗ್ರಹಿಸಿದ ಸಮಾಚಾರಗಳನ್ನು ಅನುಕಲನ ಮಾಡಿ, ಅಗತ್ಯವಿರುವ ಇನ್ನೂ ಹೆಚ್ಚಿನ ವಿಷಯಗಳನ್ನು ಜೊತೆಗೂಡಿಸುವ ಮುಖ್ಯ ಮಾರ್ಗ ಸಂದರ್ಶನ ವಿಧಾನ. ಅರ್ಜಿದಾರನು ಸಂದರ್ಶನದ ಕೊಠಡಿ ಪ್ರವೇಶ ಮಾಡುವ ಮುನ್ನ, ಸಂದರ್ಶಕರು ಆತನ ಕಾಗದ ಪತ್ರಗಳನ್ನು ಪರಿಶೀಲಿಸಿ, ಹಿನ್ನೆಲೆ ಚಿತ್ರವನ್ನು ಕಲ್ಪಿಸಿಕೊಳ್ಳಬೇಕು. ಜೊತೆಗೆ ಸಂದರ್ಶನ ಕಾಲದಲ್ಲಿ ಯಾವ ಯಾವ

ಪ್ರಶ್ನೆಗಳನ್ನು ಕೇಳಬೇಕೆಂದು ನಿರ್ದಿಷ್ಟ ಮಾಡಿಕೊಳ್ಳುವುದೊಳ್ಳೆಯದು. ಕೇಳಲಿರುವ ಎಲ್ಲ ಪ್ರಶ್ನೆಗಳನ್ನೂ ಬಾಯಿಪಾಠ ಮಾಡುವ ಅವಶ್ಯಕವಿಲ್ಲ. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಮುಖ್ಯ ಪ್ರಶ್ನೆಗಳನ್ನು ಮುಂಚಿತವಾಗಿ ರಚಿಸಿದರೆ ಸಂದರ್ಶನ ಸರಾಗವಾಗಿ ನಡೆಯುತ್ತದೆ. ಈ ಕ್ರಮ ಸಾಧಾರಣವಾಗಿ ಪಾಡಿಕೆಯಲ್ಲಿಲ್ಲ. ಸಂದರ್ಶನ ಸಿದ್ಧತೆಯ ಅಂಗವಾಗಿ ಮುಖ್ಯ ಪ್ರಶ್ನೆಗಳನ್ನು ಚತುರತೆಯಿಂದ ರಚಿಸಬೇಕು. ಏಕೆಂದರೆ ಫಲೋತ್ಪಾದಕ ಪ್ರಶ್ನೆಗಳೇ ಯಶಸ್ವಿಯಾದ ಸಂದರ್ಶನದ ಜೀವಾಳ.

ಪ್ರಶ್ನೆಗಳ ಸ್ವರೂಪ ಅರ್ಜಿದಾರನ ಉತ್ತರಗಳ ಶೈಲಿಯನ್ನು ನಿರ್ಧರಿಸುತ್ತದೆ. ಕೆಲವು ಬಗೆಯ ಪ್ರಶ್ನೆಗಳು ಸವಿಸ್ತಾರವಾದ ಉತ್ತರಗಳನ್ನು ಪ್ರಚೋದಿಸುತ್ತವೆ. ಉದಾಹರಣೆಗೆ–"ನಿಮ್ಮ ಮನೆಯಲ್ಲಿರುವ ಜನರು ಏನೇನು ಉದ್ಯೋಗ ಮಾಡುತ್ತಾರೆ ?" ಎಂಬ ಪ್ರಶ್ನೆಗೆ ಸವಿಸ್ತಾರವಾದ ಉತ್ತರ ದೊರೆಯುತ್ತದೆ. ಈ ಬಗೆಯ ಪ್ರಶ್ನೆಗಳನ್ನು ಕೇಳುವುದರಿಂದ ಅರ್ಜಿದಾರರು ಮನಸಾರ ಉತ್ತರ ಕೊಡಲು ಅನುಕೂಲವಾಗುತ್ತದೆ. ಆತ್ಮವಿಶ್ವಾಸವುಳ್ಳ, ವಾಚಾಳಿಗಳಾಗಿರುವ ಅರ್ಜಿದಾರರನ್ನು ವಿಚಾರಿಸುವ ಸಂದರ್ಭದಲ್ಲಿ ಈ ಬಗೆಯ ಪ್ರಶ್ನೆಗಳನ್ನು ಕೇಳುವುದೊಳ್ಳೆಯದು. ನಾಚಿಕೆ ಮತ್ತು ಅಂಜಿಕೆಯಿಂದ ಅರ್ಜಿದಾರ ಉತ್ತರಕೊಡಲು ಹಿಂಜರಿದರೆ, ಮಾದರಿ ಉತ್ತರವನ್ನು ಉದಾಹರಣೆಯಾಗಿ ಕೊಟ್ಟು ಮತ್ತೆ ಅದೇ ಪ್ರಶ್ನೆಯನ್ನು ಕೇಳುವುದು ಮತ್ತೊಂದು ರೀತಿ. "ನಿಮ್ಮ ವಿರಾಮಕಾಲದ ಚಟುವಟಿಕೆಗಳಾವುವು ?" ಎಂಬ ಪ್ರಶ್ನೆ ಕೇಳಿದಾಗ ಅರ್ಜಿದಾರ ಮೌನವಾಗಿದ್ದರೆ, ಮಾದರಿ ಉತ್ತರವಾಗಿ–"ಕೆಲವರು ಸಂಗೀತ ಕಲಿಯುತ್ತಾರೆ, ಕೆಲವರು ತೋಟದ ಕೆಲಸ ಮಾಡುತ್ತಾರೆ, ಮತ್ತೆ ಕೆಲವರು ಕಥೆ ಪುಸ್ತಕಗಳನ್ನು ಓದುತ್ತಾರೆ" ಎಂದು ಹೇಳಿ ಮತ್ತೆ ಮೊದಲಿನ ಪ್ರಶ್ನೆಯನ್ನು ಕೇಳಬಹುದು. ಅರ್ಜಿದಾರ ಮಾದರಿ ಉತ್ತರಗಳನ್ನು ಗ್ರಹಿಸಿ ತಾನು ಕೊಡಬೇಕಾದ ಉತ್ತರ ಹೇಳುತ್ತಾನೆ. ಕಾರಣಾಂತರಗಳಿಂದ ವ್ಯಕ್ತಿ ಉತ್ತರ ಕೊಡದಿದ್ದರೆ, ಸಹಾನುಭೂತಿಯುತ ಉತ್ತೇಜನವನ್ನು ಕೊಡಬೇಕು. ಕೆಲವು ಸಂದರ್ಶಕರು "ಎರಡು ಹಂತದ ಶೋಧಕ ಪ್ರಶ್ನೆ" ಗಳನ್ನು ಕೇಳುವರು. ಉದಾಹರಣೆಯಾಗಿ "ನಿಮ್ಮ ಮುಂಚಿನ ಉದ್ಯೋಗಗಳಲ್ಲಿ, ಯಾವುದು ಬಹುಪ್ರಿಯವಾಗಿತ್ತು ?" ಎಂಬುದು ಮೊದಲನೆ ಹಂತದ ಪ್ರಶ್ನೆ ; ಅದೇ ಪ್ರಶ್ನೆಯ ಎರಡನೆ ಹಂತ–"ಆ ಉದ್ಯೋಗ ಬಹು ಪ್ರಿಯವಾಗಿರುವುದಕ್ಕೆ ಕಾರಣಗಳೇನು ?" ಈ ಬಗೆಯ ಪ್ರಶ್ನೆಗಳಿಂದ ಅರ್ಜಿದಾರನ ಜ್ಞಾನದ ಸಹನತೆ ಮತ್ತು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ತಿಳಿಯಬಹುದು. ಮೇಲ್ವಿಚಾರಕ ಉದ್ಯೋಗಗಳಿಗೆ ಉಮೇದುವಾರರಾಗಿ ಬರುವ ವಿದ್ಯಾವಂತರಿಂದ, ಆತ್ಮವಿಮರ್ಶಕ ಪ್ರಶ್ನೆಗಳಿಗೆ ಉತ್ತರ ಪಡೆಯಬೇಕು. ಸಂದರ್ಭಕ್ಕನುಸಾರವಾಗಿ ತಕ್ಕ ಸ್ವರೂಪದ ಪ್ರಶ್ನೆ ಕೇಳಬೇಕು. ಪ್ರಶ್ನೆಗಳ ಸ್ವರೂಪ ಬದಲಾವಣೆಗೆ ಅವಶ್ಯಕವಾದ ಭಾಷಾಜ್ಞಾನ ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು.

ಸಾಂಪ್ರದಾಯಿಕ ಸಂದರ್ಶನದಲ್ಲಿ, ಕೇಳುವ ಪ್ರಶ್ನೆಗಳು ದೀರ್ಘವಾಗಿದ್ದು ಉತ್ತರಗಳು ಸಂಕ್ಷಿಪ್ತವಾಗಿರುತ್ತವೆ. ಇದರ ಪರಿಣಾಮವಾಗಿ ಸಂದರ್ಶಕರು ಹೆಚ್ಚು ಮಾತನಾಡಿ, ಹೆಚ್ಚು ಕಾಲವನ್ನುಪಯೋಗಿಸುತ್ತಾರೆ. ಅರ್ಜಿದಾರನ ಪಾತ್ರ ಅತಿ ಕಡಿಮೆಯಾಗುತ್ತದೆ. ಉತ್ತಮವಾದ ಸಂದರ್ಶನದಲ್ಲಿ ಉಮೇದುವಾರನಿಗೆ ಹೆಚ್ಚು ಕಾಲಾವಕಾಶ ಕೊಟ್ಟು ಹೆಚ್ಚು ಮಾತನಾಡಲು ಉತ್ತೇಜನ ಕೊಡಬೇಕು. ಪ್ರಶ್ನೆಗಳನ್ನು ಕೇಳುವುದರಲ್ಲಿ ನಿರ್ದಿಷ್ಟ ಕ್ರಮವಿರಬೇಕು. ಅರ್ಜಿದಾರನ ಹಿನ್ನೆಲೆಯ ಒಂದು ಮುಖದ ಬಗ್ಗೆ ಅಗತ್ಯವಾದ ಎಲ್ಲಾ ಪ್ರಶ್ನೆಗಳನ್ನೂ ಕೇಳಿ, ಆಮೇಲೆ ಮತ್ತೊಂದು ಮುಖಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನೂ ಕೇಳಬೇಕು. ಒಂದು ವಿಷಯದಿಂದ ಮತ್ತಿನ್ನೊಂದಾವುದಕ್ಕೂ ಅವ್ಯವಸ್ಥಿತವಾಗಿ ಹಾರುವುದರಿಂದ ಸಂದರ್ಶನದ ದಾರಿ ತಪ್ಪಿ ಅಪ್ರಯೋಜಕವಾಗುತ್ತದೆ. ಆದುದರಿಂದ ಪೂರ್ಣ ಮಾಹಿತಿಯ ಸಂಗ್ರಹಣೆಯು ಕ್ರಮಬದ್ಧವಾದ, ಉಚಿತ ಸ್ವರೂಪದ ಪ್ರಶ್ನೆಗಳನ್ನಾಶ್ರಯಿಸಿದೆ.

ಪರಿಶೀಲನಾ ಕ್ಷೇತ್ರಗಳು

ಸಂದರ್ಶನ ಪ್ರಾರಂಭಮಾಡುವ ಮುನ್ನವೇ, ಅರ್ಜಿದಾರನ ಹಿನ್ನೆಲೆಯ ಯಾವಯಾವ ಮುಖಗಳನ್ನು ಪರಿಶೀಲಿಸಬೇಕೆಂದು ನಿರ್ಣಯಮಾಡುವುದು ಕ್ರಮವಾದ ಪದ್ಧತಿ. ಸರ್ವಸಾಮಾನ್ಯವಾಗಿ ಹಿನ್ನೆಲೆಯನ್ನು ಶಿಕ್ಷಣ, ಅನುಭವ ಮತ್ತು ಕುಟುಂಬ ಎಂಬ ಮೂರು ಕ್ಷೇತ್ರಗಳಾಗಿ ವಿಂಗಡಿಸುವರು. ಪ್ರತಿಯೊಂದು ಕ್ಷೇತ್ರದಲ್ಲೂ ಸಂದರ್ಶಕರು ಸಂಗ್ರಹಿಸಬೇಕಾದ ಮುಖ್ಯಾಂಶಗಳಾವುವೆಂದು ಗೊತ್ತುಮಾಡಿ ಸಂದರ್ಶನ ಸಮಿತಿಯು ಸಮ್ಮತಿಪಡೆಯಬೇಕು. ಮುಖ್ಯಾಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ವಿಧಾನಗಳು, ಸಂಗ್ರಹಿಸಿದ ಮಾಹಿತಿಯ ಅರ್ಥವಿವರಣೆಕ್ರಮ, ಅರ್ಜಿದಾರನ ಯೋಗ್ಯತೆ ನಿರ್ಧರಿಸಲು ಸಂದರ್ಶಕರು ಮಾಡಬೇಕಾದ ಸುಸಂಘಟನೆ ಮತ್ತು ಸಮಿತಿಯ ನಿರ್ಣಯಕ್ರಮಗಳನ್ನು ರಚಿಸಿ, ಆಚರಿಸಬೇಕು. ಪರಿಶೀಲನಾ ಕ್ರಮದ ವಿವರಗಳನ್ನು ರಚಿಸುವುದರ ಮುಖ್ಯ ಉದ್ದೇಶ, ಸಂದರ್ಶನವನ್ನು ಸಂಪೂರ್ಣವಾಗಿ ನಡೆಸುವುದು. ಸನ್ನಿವೇಶಕ್ಕೆ ಅನುಗುಣವಾಗಿ, ಆವಶ್ಯಕತೆ ಒದಗಿದಂತೆ ಕ್ರಮ ವಿವರಗಳನ್ನು ಮಾರ್ಪಡಿಸಬೇಕಾಗುತ್ತದೆ. ಅರ್ಜಿದಾರನ ಶಿಕ್ಷಣ, ಅನುಭವ ಮತ್ತು ಕುಟುಂಬದ ಪರಿಶೀಲನೆಯಿಂದ ಆತನ ಗುಣವಿಶೇಷಗಳು, ದೋಷಗಳು ಮತ್ತು ವ್ಯಕ್ತಿತ್ವವನ್ನು ಗ್ರಹಿಸಬಹುದು.

ಶಿಕ್ಷಣದ ಪರಿಶೋಧನೆ

ಅನುಭವವಿಲ್ಲದ ತರುಣ ಅರ್ಜಿದಾರರ ಶಿಕ್ಷಣದ ಹಿನ್ನೆಲೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು, ಅದನ್ನು ಸವಿಸ್ತಾರವಾಗಿ ಪರಿಶೀಲಿಸಬೇಕು. ವಯಸ್ಸಾದ

ಅರ್ಜಿದಾರರು ಬಂದಾಗ ಈ ಕ್ಷೇತ್ರ ಪರಿಶೀಲನೆ ಸಂಕ್ಷೇಪವಾಗಿದ್ದರೆ ಸಾಕು. ಈ ಭಿನ್ನವಾದ ರೀತಿಗೆ ಕಾರಣ, ತರುಣರು ವಿದ್ಯಾಭ್ಯಾಸವನ್ನು ಇತ್ತೀಚೆಗೆ ಮುಗಿಸಿರುವುದರಿಂದ ಅವರಿಗೆ ಆ ಕ್ಷೇತ್ರಪರಿಚಯ ಹೆಚ್ಚಾಗಿರುತ್ತದೆ. ಸಂದರ್ಶನಕ್ಕೆ ಮುಂಚಿತವಾಗಿಯೇ ಅರ್ಜಿಪತ್ರ ಪದವಿಪತ್ರಸಾಧನೆ ಸೂಚಕ ಅಂಕಿಪತ್ರ ಮತ್ತು ಶಿಕ್ಷಕರಿಂದ ಪಡೆದ ಪ್ರಶಂಸೆಪತ್ರಗಳನ್ನು ನೋಡಿ, ಅರ್ಜಿದಾರನ ಶಿಕ್ಷಣದ ಹಿನ್ನೆಲೆಯ ಮುಖ್ಯಾಂಶಗಳನ್ನು ತಿಳಿದುಕೊಳ್ಳಬೇಕು. ಈ ರೀತಿ ಸಂಗ್ರಹಿಸಿರುವ ಅಂಶಗಳ ಬಗ್ಗೆ ಮತ್ತೆ ಪ್ರಶ್ನೆಮಾಡುವುದು ವಾಡಿಕೆ. ಇದರಿಂದ ಕಾಲವ್ಯರ್ಥವಾಗುತ್ತದೆ. ಅರ್ಜಿದಾರರ ಕಾಗದ ಪತ್ರಗಳ ಪರಿಶೀಲನೆಯಿಂದ ಪಡೆಯಲಾಗದ ಅಂಶಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಬೇಕು.

ಆಸಕ್ತಿ ಸಾಮರ್ಥ್ಯದ ಒಂದು ಚಿಹ್ನೆ. ಆಸಕ್ತಿ ಇರುವ ಚಟುವಟಿಕೆಗಳಿಗೆ ಹೆಚ್ಚು ಗಮನಕೊಟ್ಟು, ಹೆಚ್ಚು ಪ್ರಯತ್ನಪಡುವುದು ಸ್ವಾಭಾವಿಕ. ಇದರ ಫಲವಾಗಿ ಅರ್ಜಿದಾರ ತನಗೆ ಪ್ರಿಯವಾದ ಕ್ಷೇತ್ರದಲ್ಲಿ ಪ್ರಾವೀಣ್ಯವನ್ನು ಗಳಿಸುತ್ತಾನೆ. ಆದ್ದರಿಂದ ಸಾಧನೆಯು ಆಸಕ್ತಿಗನುಗುಣವಾಗಿರಲು ಸಾಧ್ಯ. ಹೆಚ್ಚು ಆಸಕ್ತಿಯಿಲ್ಲದಿರುವ ಕ್ಷೇತ್ರದಲ್ಲಿ ಮಹತ್ತರ ಸಾಧನೆಯಿದ್ದರೆ, ಇದು ವ್ಯಕ್ತಿಯ ದೃಢಸಂಕಲ್ಪವನ್ನು ತೋರಿಸುತ್ತದೆ. ಹೆಚ್ಚು ಆಸಕ್ತಿಇದ್ದು ತಕ್ಕ ಸಾಧನೆ ಇಲ್ಲದಿರುವ ಸಂದರ್ಭದ ಕಾರಣ ವ್ಯಕ್ತಿಯ ನ್ಯೂನತೆ ಅಥವ ಯಾವದಾದರೊಂದು ಬಗೆಯ ಅಡಚಣೆ, ಅನಾರೋಗ್ಯ, ಹಣದ ಅಭಾವ, ಬೇರೆ ಜವಾಬ್ದಾರಿಯ ಹೊರೆ, ವ್ಯಕ್ತಿಯ ಅಸಾಮರ್ಥ್ಯ, ಜಡಸ್ವಭಾವ, ಮಹತ್ವಾಕಾಂಕ್ಷೆಯಿಲ್ಲದಿರುವಿಕೆ ಮುಂತಾದ ಕಾರಣಗಳಿಂದ ಸಾಧನೆ ಕೆಳಮಟ್ಟದ್ದಾಗಿರುತ್ತದೆ.

ಈ ದೃಷ್ಟಿಯಿಂದ ಅರ್ಜಿದಾರನು ವಿದ್ಯಾರ್ಥಿಯಾಗಿದ್ದಾಗ, ಅವನಿಗೆ ಪ್ರಿಯವಾಗಿದ್ದ ವಿಷಯಗಳಾವುವು, ಅಪ್ರಿಯವಾಗಿದ್ದ ಚಟುವಟಿಕೆಗಳಾವುವು ಎಂಬ ಮಾಹಿತಿಯನ್ನು ತಿಳಿಯುವುದು ಆವಶ್ಯಕ. ಕೆಲವರು ಭಾಷೆಗಳನ್ನು ಕಲಿಯುವುದರಲ್ಲಿ, ಅವನ್ನು ಉಪಯೋಗಿಸುವುದರಲ್ಲಿ ಆಸಕ್ತಿ ವ್ಯಕ್ತಪಡಿಸುತ್ತಾರೆ. ಜೊತೆಗೆ ಭಾಷಾಕ್ಷೇತ್ರದಲ್ಲಿ ಮೇಲ್ಮಟ್ಟದ ಸಾಧನೆಯೂ ಇದ್ದರೆ ಉತ್ತಮ. ಈ ಬಗೆಯ ಸಹಜ ಸಾಮರ್ಥ್ಯ, ಕೆಲವು ಉದ್ಯೋಗಗಳಿಗೆ ಆವಶ್ಯಕವಾದ ಅರ್ಹತೆಗಳಲ್ಲೊಂದು. ಇದೇ ಪ್ರಕಾರ ಕೆಲವರು ವಿಜ್ಞಾನ ವ್ಯಾಸಂಗದಲ್ಲಿ ಅತ್ಯಾಸಕ್ತಿ ತೋರುವರು. ಇವರ ಜೊತೆಗೆ ಗಣಿತಶಾಸ್ತ್ರದಲ್ಲಿ ಆಸಕ್ತಿ ಮತ್ತು ಸಾಮರ್ಥ್ಯಗಳಿದ್ದರೆ ಮಾತ್ರ, ಅವರನ್ನು ಕೆಲವು ಮೇಲ್ಮಟ್ಟದ ಉದ್ಯೋಗಗಳಿಗೆ ಪರಿಗಣಿಸಬಹುದು. ವ್ಯಾಸಂಗ ಕಾಲದಲ್ಲಿ ಅರ್ಜಿದಾರನಿಗಿದ್ದ ಅಧಿಕ ಆಸಕ್ತಿ ತತ್ವಾತ್ಮಕ ವಿಷಯಗಳಲ್ಲೇ ಅಥವಾ ಕಾರ್ಯಾತ್ಮಕ ವಿಷಯಗಳಲ್ಲೇ ಎಂದು ತಿಳಿದರೆ ಒಳ್ಳೆಯದು. ತತ್ವಾತ್ಮಕ ವಿಷಯಗಳಲ್ಲಿ ಹೆಚ್ಚು ಒಲವಿರುವ ಜನರಿಗೆ, ಸಂಶೋಧನೆ ಮತ್ತು ಅಭಿವರ್ಧನೆ ಕಾರ್ಯಗಳು ಹೆಚ್ಚು ತೃಪ್ತಿ

ಕರವಾಗಿರುವುವು. ಕಾರ್ಯಾತ್ಮಕ ವಿಷಯಗಳಲ್ಲಿ ಆಸಕ್ತಿ ಇರುವ ಜನರು ತಯಾರಿಕೆ ಯಂತ್ರ ದುರಸ್ತಿ ಮುಂತಾದ ಕೌಶಲ್ಯವನ್ನೊಳಗೊಂಡ ಉದ್ಯೋಗಗಳಿಂದ ಹೆಚ್ಚು ತೃಪ್ತಿ ಪಡೆಯುತ್ತಾರೆ. ಆದರೂ ಆಸಕ್ತಿ ನಿರಾಸಕ್ತಿಗಳನ್ನು ಮಾತ್ರ ತಿಳಿಯುವುದ ರಿಂದ, ವ್ಯಕ್ತಿಯ ಗುಣವಿಶೇಷಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯ ವಾಗುವುದಿಲ್ಲ. ಯಾಕೆಂದರೆ, ಇವುಗಳಿಗಿರುವ ಕಾರಣಗಳನ್ನೂ ವಿಚಾರಿಸಬೇಕಾಗು ತ್ತದೆ. ಅರ್ಜಿದಾರನು ಕೊಡುವ ಕಾರಣ ವಿವರಣೆಯಲ್ಲಿರುವ ಸತ್ವ ಮತ್ತು ರೀತಿ ಗಳು ಅವನ ಅರ್ಥಗ್ರಹಣ ಶಕ್ತಿಯನ್ನೂ ಸೂಚಿಸುತ್ತವೆ.

ಕೆಲವರು ಪ್ರತಿ ವರ್ಷವೂ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಶಿಕ್ಷಣವನ್ನು ಸಮ ರ್ಪಕವಾಗಿ ಮುಗಿಸಿರುತ್ತಾರೆ. ಪ್ರತಿ ತರಗತಿಯಲ್ಲೂ ಅತ್ಯುತ್ತಮ ದರ್ಜೆಯನ್ನು ಸತತವಾಗಿ ಗಳಿಸಿರುವವರು ಅಪರೂಪ. ಅತಿ ವಿರಳವಾಗಿ ಒಬ್ಬಿಬ್ಬರು ವ್ಯಾಸಂಗ ಮತ್ತು ಕ್ರೀಡಾರಂಗಗಳೆರಡರಲ್ಲೂ ಮೇಲ್ಮಟ್ಟವನ್ನು ಸಾಧಿಸಿರುತ್ತಾರೆ. ಎಲ್ಲಾ ಅರ್ಜಿದಾರರ ಶಿಕ್ಷಣದ ಹಿನ್ನೆಲೆ ಇಷ್ಟು ಸಮರ್ಪಕವಾಗಿರುವುದಿಲ್ಲ. ಪರೀಕ್ಷೆಗಳಲ್ಲಿ ಕೆಲವು ಸಾರಿ ಪರಾಜಯ ಹೊಂದಿರುವ, ಕೆಲವು ಕಾಲ ಶಿಕ್ಷಣ ಬಿಟ್ಟಿದ್ದು ಪುನಃ ಆರಂಭಿ ಸಿದ, ಒಂದು ಶಿಕ್ಷಣ ಕ್ಷೇತ್ರದಿಂದ ಮತ್ತೊಂದಕ್ಕೆ ಅಸಮಂಜಸ ಬದಲಾವಣೆ ಮಾಡಿ ರುವ ಮತ್ತು ಶಿಕ್ಷಣ ಅಪೂರ್ಣವಾಗಿರುವ ಅರ್ಜಿದಾರರೂ ಇರುತ್ತಾರೆ. ಈ ಬಗೆಯ ಕೊರತೆಗಳನ್ನು ಅರ್ಜಿಪತ್ರದಲ್ಲಿ ವಿಶದವಾಗಿ ಬರೆದಿರುವುದಿಲ್ಲ, ಶಿಕ್ಷಣದ ಮುನ್ನಡೆ ಸಮರ್ಪಕವಾಗಿರಲಿ ಅಥವಾ ಅಸಮರ್ಪಕವಾಗಿರಲಿ, ವ್ಯಕ್ತಿಗತ ಗುಣವಿಶೇಷಗಳನ್ನು ತಿಳಿದುಕೊಳ್ಳಲು ಅಗತ್ಯವಾದ ಮಾಹಿತಿಯನ್ನು ಸಂದರ್ಶಕರು ಸಂಗ್ರಹಿಸಬೇಕು.

ಸಂಗೀತಾಭ್ಯಾಸ, ಅಭಿನಯ, ವ್ಯಾಯಾಮ, ಕ್ರೀಡೆಗಳು, ಛಾಯಾ ಚಿತ್ರ ಗ್ರಹಣ, ತೋಟಗಾರಿಕೆ, ಅಂಚೆಚೀಟು ಸಂಗ್ರಹಣ, ಚಿತ್ರಕಲೆ, ಸಾಹಿತ್ಯ ವಾಚನ ಮುಂತಾದ ವಿರಾಮಕಾಲದ ಚಟುವಟಿಕೆಗಳಲ್ಲಿ ಭಾಗವಹಿಸುವವರು ಕಡಿಮೆ. ಈ ಚಟುವಟಿಕೆಗಳಲ್ಲಿ ಪ್ರಮುಖಪಾತ್ರ ವಹಿಸಿ ನಿಪುಣತೆಯನ್ನು ಪ್ರದರ್ಶಿಸುವ ಜನ ಇನ್ನೂ ಕಡಿಮೆ. ಇದಕ್ಕೆ ಮುಖ್ಯಕಾರಣ ಶಿಕ್ಷಣ ಸಂಸ್ಥೆಗಳಲ್ಲಿರುವ ಹಣದ ಅಭಾವ. ಆದ್ದರಿಂದ ಬಹುಮಂದಿ ಅರ್ಜಿದಾರರು ಈ ಚಟುವಟಿಕೆಗಳಲ್ಲಿ ಭಾಗವಹಿಸಿರುವುದಿಲ್ಲ. ತರುಣರಾಗಿದ್ದಾಗ ಆಸಕ್ತರಾಗಿದ್ದ ಜನರೂ, ಶಿಕ್ಷಣ ವಾತಾವರಣದಿಂದ ಹೊರಬಿದ್ದ ಮೇಲೆ, ಈ ಚಟುವಟಿಕೆಗಳಿಂದ ದೂರಹೋಗುತ್ತಾರೆ. ಈ ಸನ್ನಿವೇಶದಲ್ಲಿ ವಿರಾಮ ಕಾಲದ ಚಟುವಟಿಕೆಗಳ ಪರಿಶೀಲನೆ ಬಹು ಕಡಿಮೆ ಅರ್ಜಿದಾರರಿಗೆ ಅನ್ವಯಿಸುತ್ತದೆ.

ಅರ್ಜಿದಾರನ ವಿರಾಮಕಾಲದ ಚಟುವಟಿಕೆಗಳನ್ನೂ ಪರಿಶೀಲಿಸುವುದರಿಂದ ಅವನ ಹೆಚ್ಚಿನ ಗುಣಾವಗುಣಗಳನ್ನು ಗ್ರಹಿಸಲು ಅನುಕೂಲವಾಗುತ್ತದೆ. ಲಜ್ಜೆ, ಸಂಕೋಚ, ನಿರಾಸಕ್ತಿ ಸಹಪಾಠಿಗಳು ಕೀಳುದರ್ಜೆಯವರೆಂಬ ಅಭಿಪ್ರಾಯ ಮುಂತಾದ ವ್ಯಕ್ತಿಗತ ಕಾರಣಗಳಿಂದ ಸಾಂಘಿಕ ಚಟುವಟಿಕೆಗಳಲ್ಲಿ ಭಾಗವಹಿಸದಿರ

ಬಹುದು. ಸಹವಾಸ, ಮನೋರಂಜನೆ ಮತ್ತು ಸಂಪ್ರದಾಯಗಳ ನಿಮಿತ್ತ ಸ್ವಲ್ಪ ಮಟ್ಟಿಗೆ ಸಹಭಾಗಿಯಾಗಿರಬಹುದು. ಅಲ್ಪಸಂಖ್ಯಾತರು ನಾನಾವಿಧ ಚಟುವಟಿಕೆಗಳಲ್ಲಿ ಮಹತ್ಕಾರ್ಯ ಸಾಧಿಸಿರುತ್ತಾರೆ. ವಿರಾಮ ಕಾಲದ ಚಟುವಟಿಕೆಗಳಲ್ಲಿ ಮತ್ತು ವ್ಯಾಸಂಗದಲ್ಲಿ ಅರ್ಜಿದಾರನು ವಹಿಸಿದ ಪಾತ್ರಗಳನ್ನು ಪರಸ್ಪರ ಹೋಲಿಸಿ, ಆತನ ಆಸಕ್ತಿಯ ಪ್ರಮಾಣವನ್ನು ಪರಿಶೀಲಿಸಬಹುದು. ಸಾಂಘಿಕ ಚಟುವಟಿಕೆಗಳಲ್ಲಿ ಭಾಗವಹಿಸುವವರು ಮಾನವ ಸಂಬಂಧದ ಕೌಶಲ್ಯ ಮತ್ತು ನಾಯಕತ್ವದ ಗುಣಗಳನ್ನು ಹೊಂದಿರುವರು. ಜೊತೆಗೆ ಸಮಚಿತ್ತತೆ ಮತ್ತು ಪರಿಪಕ್ವತೆಗಳನ್ನು ಗಳಿಸಿರಬಹುದು.

ಅರ್ಜಿದಾರನ ಹಿನ್ನೆಲೆಗೆ ಸಂಬಂಧಿಸಿದ ಈ ಎಲ್ಲಾ ಅಂಶಗಳ ಪರಿಶೀಲನೆಯಿಂದ ವ್ಯಕ್ತಿಯ ಸಾಮರ್ಥ್ಯಗಳ ಅರಿವಾಗುವುದಲ್ಲದೆ, ವ್ಯಕ್ತಿತ್ವದ ಗುಣವಿಶೇಷಗಳನ್ನೂ ತಿಳಿದುಕೊಳ್ಳಬಹುದು. ಖಾಲಿ ಇರುವ ಉದ್ಯೋಗಕ್ಕೆ ತಕ್ಕ ವಿದ್ಯಾಭ್ಯಾಸದ ಹಿನ್ನೆಲೆಯನ್ನು ಅರ್ಜಿದಾರನು ಹೊಂದಿರುವನೇ ಎಂದು ನಿರ್ಧರಿಸಬಹುದು.

ಅನುಭವದ ಪರಿಶೀಲನೆ

ಅನೇಕ ಉದ್ಯೋಗಗಳಿಗೆ ಅನುಭವಸ್ಥ ಜನರನ್ನು ಆರಿಸಿಕೊಳ್ಳುವುದು ವಾಡಿಕೆ. ಅಂತಹ ಸಂದರ್ಭಗಳಲ್ಲಿ ಅನುಭವಕ್ಕೆ ಪ್ರಾಮುಖ್ಯತೆ ಕೊಡುವುದು ಸಾಮಾನ್ಯ ಪದ್ಧತಿ. ಆದರೆ, ಅನುಭವ ಹೆಚ್ಚಾಗಿದ್ದಷ್ಟೂ ಯೋಗ್ಯತೆ ಉತ್ತಮ ದರ್ಜೆಯದೆಂದು ಅರ್ಥಮಾಡುವುದು ಮೂಢನಂಬಿಕೆ. ಯಾವದಾದರೊಂದು ಉದ್ಯೋಗದಲ್ಲಿ ಹತ್ತಾರು ವರ್ಷಗಳು ಕೆಲಸ ಮಾಡಿರುವ ಅರ್ಜಿದಾರನ ಹಿನ್ನೆಲೆಯನ್ನು ಪರಿಶೀಲಿಸಿದರೆ, ಮೊದಲನೆ ಒಂದೆರಡು ವರ್ಷಗಳು ಮಾತ್ರ ಅನುಭವ ಕಾಲವೆಂದು ಪರಿಗಣಿಸಬಹುದು ; ಉಳಿದ ಕಾಲವನ್ನು ಸ್ಥಿರಸ್ಥಿತಿಯೆಂದು ಕರೆಯಬಹುದು. ವ್ಯವಹಾರ ಜ್ಞಾನ ವಿಕಾಸ, ಸಾಮರ್ಥ್ಯ ಬೆಳವಣಿಗೆ, ನಿಪುಣತೆಯ ಅಭಿವೃದ್ಧಿ ಮುಂತಾದ ಪ್ರಗತಿ ಲಕ್ಷಣಗಳಿರುವ ಕಾಲವನ್ನು ಮಾತ್ರ ಅನುಭವವೆಂದು ಪರ್ಯಾಲೋಚಿಸಬೇಕು. ಅರ್ಜಿದಾರನಿಗಿರುವ ಅನುಭವ ಖಾಲಿ ಇರುವ ಉದ್ಯೋಗಕ್ಕೆ ಸಮಂಜಸವಾದುದೇ ಎಂದು ನಿರ್ಧರಿಸುವುದು ಆವಶ್ಯಕ. ಜೊತೆಗೆ, ಅನುಭವಕಾಲದಲ್ಲಿ ಕಾಣಬರುವ ವ್ಯಕ್ತಿಯ ಗುಣವಿಶೇಷಗಳನ್ನೂ, ಬಲಾಬಲಗಳನ್ನೂ ತಿಳಿದುಕೊಳ್ಳಬೇಕು.

ಅರ್ಜಿದಾರನು ಹಿಂದೆ ತೊಡಗಿದ್ದ ಉದ್ಯೋಗಗಳಲ್ಲಿ ಯಾವ ಯಾವ ಕೆಲಸಗಳನ್ನು, ಜವಾಬ್ದಾರಿಗಳನ್ನು ನಿರ್ವಹಿಸಿದ್ದನೆಂದು ಸವಿಸ್ತಾರವಾಗಿ ಪರಿಶೀಲಿಸಬೇಕು. ಇದರಿಂದ ಅವನ ಹಿನ್ನೆಲೆಯ ಒಳನೋಟ ದೊರಕುತ್ತದೆ. ಒಬ್ಬನಿಗೆ ನಾಲ್ಕಾರು ಉದ್ಯೋಗಗಳ ಅನುಭವವಿರುವ ಸಂದರ್ಭದಲ್ಲಿ, ಆತನ ಜ್ಞಾನವೈಶಾಲ್ಯ ಮತ್ತು

ಪರಿಪಕ್ವತೆ ಗಮನಾರ್ಹವಾದವು. ಪ್ರತಿ ಉದ್ಯೋಗದಲ್ಲೂ ಅಲ್ಪಕಾಲ ಮಾತ್ರ ತೊಡಗಿದ್ದು, ಹಲವಾರು ಉದ್ಯೋಗ ಬದಲಾವಣೆ ಮಾಡಿರುವ ಅರ್ಜಿದಾರನ ಹಿನ್ನೆಲೆಯನ್ನು ಜಾಗರೂಕತೆಯಿಂದ ಪರೀಕ್ಷಿಸಬೇಕು. ಪದೇ ಪದೇ ಸಂಭವಿಸಿದ ಉದ್ಯೋಗಬದಲಾವಣೆಗಳಿಗೆ ಅರ್ಜಿದಾರನ ನಾನಾ ವಿಧ ನ್ಯೂನತೆಗಳು ಕಾರಣವಾಗಿರ ಬಹುದು. ಕೆಲವುವೇಳೆ ಉದ್ಯೋಗಗಳ ತಾತ್ಕಾಲಿಕತೆ, ಶಿಥಿಲ ವಾತಾವರಣ ಮುಂತಾದ ಕಾರಣಗಳಿಂದ ಜನರು ಉದ್ಯೋಗ ಬದಲಾವಣೆ ಮಾಡಬೇಕಾಗ ಬಹುದು. ಒಂದೇ ಬಗೆಯ, ಒಂದೇ ಮಟ್ಟದ ಉದ್ಯೋಗದಲ್ಲಿ ಬಹು ಕಾಲವಿದ್ದು, ಪ್ರಗತಿ ಲಕ್ಷಣಗಳಿಲ್ಲದ ಅರ್ಜಿದಾರನನ್ನು ಕಾರ್ಯನಿರ್ವಾಹಕ ಉದ್ಯೋಗಗಳಿಗೆ ಆರಿಸುವುದಿಲ್ಲ. ಕಾರಣವೇನೆಂದರೆ, ಸ್ಥಿರಸ್ಥಿತಿ ವಾತಾವರಣ ಮತ್ತು ನಿತ್ಯಾನು ಕ್ರಮಾಚರಣೆಗಳಿಗೆ ಒಗ್ಗಿಹೋಗಿರುವವರ ಸತ್ವ, ಮಹತ್ವಾಕಾಂಕ್ಷೆ ಮತ್ತು ಸಾಮರ್ಥ್ಯಗಳು ಕ್ಷಯಿಸಿರುತ್ತವೆ. ಸರ್ಕಾರಿ ಚಾಕರಿ, ಕೈಗಾರಿಕೆ ಕೆಲಸ, ಸಂಶೋಧನಾ ಕಾರ್ಯ ಮುಂತಾದ ವೈಶಿಷ್ಟ್ಯಪೂರ್ಣ ವಾತಾವರಣಗಳಲ್ಲಿ ಹತ್ತಾರುವರ್ಷ ಕೆಲಸ ಮಾಡಿರುವ ಉದ್ಯೋಗಿಗಳ ಆಸಕ್ತಿ, ಆಕಾಂಕ್ಷೆ, ಸಂಸ್ಥಿತಿ ಮತ್ತು ಕಾರ್ಯಪದ್ಧತಿ ಗಳು ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಾಟಾಗಿರುವುವು. ಅರ್ಜಿದಾರನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿರುವ ಕಾರ್ಯ ವಾತಾವರಣಗಳನ್ನು ತಿಳಿಯುವುದರಿಂದ ಉದ್ಯೋಗಾರ್ಹತೆಯ ನಿರ್ಧಾರ ಸುಲಭವಾಗುತ್ತದೆ.

ಹಿಂದಿನ ಉದ್ಯೋಗಗಳ ಯಾವ ಅಂಶಗಳು ಅರ್ಜಿದಾರನಿಗೆ ತೃಪ್ತಿಕರ ವಾಗಿದ್ದುವೆಂದು ವಿಚಾರಿಸುವುದರಿಂದ ವ್ಯಕ್ತಿತ್ವ ಪರಿಚಯ ಸಾಧ್ಯ. ಕೆಲವರಿಗೆ ಜನಸಂಪರ್ಕ, ನಿಯಮಿತಕಾಲ, ಕಾರ್ಯ ನಿರ್ವಾಹ ಸ್ವಾತಂತ್ರ್ಯ ಮುಂತಾದ ಉದ್ಯೋಗಾಂಶಗಳಿಂದ ತೃಪ್ತಿ ದೊರೆಯುತ್ತದೆ. ಇದರಿಂದ ಅರ್ಜಿದಾರನ ಪ್ರೇರಕಗಳೇನೆಂದು ತಿಳಿಯಬಹುದು. ತನ್ನ ಪ್ರೇರಕಗಳಿಗೆ ಸದವಕಾಶ ಕಲ್ಪಿಸಿ ಕೊಡುವ ಉದ್ಯೋಗವನ್ನು ಅರ್ಜಿದಾರನು ಉತ್ಸಾಹದಿಂದ ಸ್ವೀಕರಿಸಿ, ನಿರ್ವಹಿಸು ತ್ತಾನೆ. ಆದ್ದರಿಂದ ಅರ್ಜಿದಾರನಿಗೆ ಪ್ರಿಯಕರವಾದ ಅಂಶಗಳನ್ನು ತಿಳಿಯುವು ದೊಳ್ಳೆಯದು. ಅವನ ಮಹತ್ಕಾರ್ಯಗಳು ಮತ್ತು ಅವುಗಳ ಪ್ರಮಾಣಗಳನ್ನು ಪರಿಶೀಲಿಸುವುದರಿಂದ ವ್ಯಕ್ತಿಯ ಸಾಮರ್ಥ್ಯಗಳನ್ನು ನಿರ್ಧರಿಸಬಹುದು.

ತಾನಾಗಿಯೇ ತನ್ನ ಪೂರ್ವಾನುಭವದ ಕುಂದು ಕೊರತೆಗಳನ್ನು, ಮುಚ್ಚು ಮರೆಯಿಲ್ಲದೆ, ನಿಷ್ಪಕ್ಷಪಾತವಾಗಿ ಚರ್ಚಿಸುವುದು ಅರ್ಜಿದಾರನ ಶುದ್ಧಭಾವ ಮತ್ತು ಆತ್ಮವಿಶ್ವಾಸವನ್ನು ಸೂಚಿಸುತ್ತದೆ. ಆದರೆ ಅಂತಹ ಸಂದರ್ಭಗಳು ಅಪರೂಪ. ಆದ್ದರಿಂದ ಸಂದರ್ಶಕರು ಅರ್ಜಿದಾರನಿಗೆ ಅಪ್ರಿಯವಾಗಿದ್ದ ಉದ್ಯೋಗಾಂಶಗಳನ್ನು ವಿಚಾರಿಸಿ ನಿರ್ಣಯಿಸಬೇಕು. ಇದರಿಂದ ಅವನ ಅಶಕ್ತಿ, ನಿರಾಸಕ್ತಿಗಳ ಅರಿವಾಗು ತ್ತದೆ. ಈ ಬಗೆಯ ಶೋಧನೆಯ ಉದ್ದೇಶ ವ್ಯಕ್ತಿಯ ಖಂಡನೆಯಲ್ಲ; ಇವುಗಳಿಂದ

ಉದ್ಯೋಗ ನಿರ್ವಹಣೆಗೆ ಆತಂಕ ಬರುವುದೇ ಅಥವಾ ಅನುಕೂಲವಾಗುವುದೇ ಎಂದು ನಿರ್ಧರಿಸಬೇಕು. ಅನೇಕ ಅಪ್ರಿಯವಾದ ಅಂಶಗಳನ್ನೊಳಗೊಂಡಿರುವ ಉದ್ಯೋಗ ನಿರ್ವಹಣೆ ಕಷ್ಟತರವಾಗುತ್ತದೆ. ನಿರುದ್ಯೋಗಿಯಾಗಿರುವ ಬದಲು ಅರ್ಜಿದಾರ ಯಾವ ಉದ್ಯೋಗವನ್ನಾದರೂ ಸ್ವೀಕರಿಸಲು ತಯಾರಾಗಿರಬಹುದು. ಆದರೆ ಸಂಸ್ಥೆಯ ದೃಷ್ಟಿಯಿಂದ, ಸಮರ್ಪಕವಾದ ಅನುಭವವಿಲ್ಲದಿರುವವರನ್ನು ನೇಮಕ ಮಾಡಿಕೊಳ್ಳುವುದು ಸರಿಯಲ್ಲ. ಕೆಲವು ವೇಳೆ ವ್ಯಕ್ತಿಯ ಬಲಾಬಲಗಳಿಗೆ ಸರಿಹೊಂದುವಂತೆ ಉದ್ಯೋಗದ ಕಾರ್ಯಕ್ರಮವನ್ನು ಅಳವಡಿಸಲು ಸಾಧ್ಯವಾಗುತ್ತದೆ.

ಸಾಧಾರಣವಾಗಿ ಜನರು ಹೆಚ್ಚು ಸಂಪಾದಿಸಬೇಕೆಂಬ ಆಸೆಯಿಂದ ಉದ್ಯೋಗ ಬದಲಾವಣೆ ಮಾಡುವುದುಂಟು. ಪ್ರತಿ ಹೊಸ ಉದ್ಯೋಗದಲ್ಲೂ ಹೆಚ್ಚು ಸಂಬಳ ಗಳಿಸಿರುವ ಜನರು, ಕ್ರಮೇಣ ಹೆಚ್ಚುತ್ತಿರುವ ಜವಾಬ್ದಾರಿಗಳನ್ನು ವಹಿಸಿರುತ್ತಾರೆ. ಅವರಿಗೆ ಧನಾರ್ಜನೆಯ ನಿಮಿತ್ತ ಶ್ರಮವಹಿಸಿ ಕೆಲಸಮಾಡುವ ರೂಢಿಯಿರುತ್ತದೆ. ಬಹುಕಡಿಮೆ ಜನರಿಗೆ ಸಂಪಾದನೆಗಿಂತ ಮುಖ್ಯವಾಗಿರುವುದು ಮಹತ್ಕಾರ್ಯ ಸಾಧನೆ. ಈ ಬಗೆಯ ಜನರ ಸಂಪಾದನೆ ಬಹು ಹೆಚ್ಚಾಗದಿದ್ದರೂ, ಅವರ ಕಾರ್ಯ ಕ್ಷೇತ್ರ, ಸಾಧನೆ ಮಟ್ಟ ದಿನಕಳೆದಂತೆ ಹೆಚ್ಚುತ್ತಾ ಹೋಗುತ್ತವೆ. ಇಂತಹ ಅಭಿವೃದ್ಧಿ ಸ್ಥಿತಿಯಲ್ಲಿರುವ ಜನರು ಅತ್ಯುತ್ತಮ ಉದ್ಯೋಗಗಳಿಗೆ ಅರ್ಹತೆ ಪಡೆದಿರುತ್ತಾರೆ. ಕೆಲವರು ಸ್ವಲ್ಪ ಹೆಚ್ಚುಕಡಿಮೆ ಒಂದೇ ಮಟ್ಟದ ಸಂಬಳಕ್ಕೆ ಉದ್ಯೋಗ ಬದಲಾವಣೆಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಅರ್ಜಿದಾರನ ಅನುಕಲನಶಕ್ತಿಯಲ್ಲಿ ದೋಷವಿರಬಹುದು. ಧನಾರ್ಜನೆ ಅಧಿಕವಾಗಿ, ಜವಾಬ್ದಾರಿ ಮಟ್ಟ ಏರಿ, ವ್ಯಕ್ತಿಯ ಕಾರ್ಯನಿರ್ವಹಣೆ ಬಹುಮಾನ ಮತ್ತು ಪ್ರಶಂಸೆಗಳನ್ನು ಗಳಿಸಿದ್ದರೆ, ಅಂತಹ ಅನುಭವ ಉತ್ತಮ ದರ್ಜೆಯದಾಗಿರುತ್ತದೆ. ಹಿಂದಿನ ಉದ್ಯೋಗಗಳ ನಾನಾ ಮುಖಗಳಿಗೆ ಸಂಬಂಧಿಸಿದ ವಿವಿಳಿತಗಳನ್ನು ವಿಶದವಾಗಿ ಪರಿಶೀಲಿಸಿ ವ್ಯಕ್ತಿಯ ಗುಣ ವಿಶೇಷಗಳನ್ನು ನಿರ್ಧರಿಸಬೇಕು.

ವಿವಿಧ ಔದ್ಯೋಗಿಕ ವಾತಾವರಣಗಳಲ್ಲಿ, ನಾಯಕತ್ವದ ಸ್ಥಾನದಲ್ಲಿದ್ದು, ಅನೇಕ ಉದ್ಯೋಗಿಗಳ ಮೇಲ್ವಿಚಾರಣೆ ನಿರ್ವಹಿಸಿರುವ ಅನುಭವ ವಿಶಿಷ್ಟವೂ, ಅಮೂಲ್ಯವೂ ಆದದ್ದು. ಈ ಬಗೆಯ ಅರ್ಜಿದಾರರು ಮೇಲ್ಮಟ್ಟದ ಉದ್ಯೋಗಗಳಿಗೆ ಅರ್ಹರಾಗಿರುವರು. ಮೇಲ್ವಿಚಾರಣೆಗೆ ಸಂಬಂಧಿಸಿದ ಕಠಿಣ ಸಮಸ್ಯೆಗಳಾವುವು, ಅವುಗಳನ್ನು ಹೇಗೆ ಪರಿಹರಿಸಿದರು ಎಂದು ವಿಚಾರಿಸಿ ಅನುಭವದ ಆಳವನ್ನು ಅಳೆಯಬೇಕು. ಆವಶ್ಯಕವಾದ ಅನುಭವ, ತಕ್ಕಷ್ಟು ಪ್ರಮಾಣದಲ್ಲಿದ್ದರೆ, ಭವಿಷ್ಯತ್ಕಾಲದ ಕಾರ್ಯಸಾಮರ್ಥ್ಯವು ಉತ್ತಮ ರೀತಿಯಲ್ಲಿರುವುದೆಂದು ನಂಬಬಹುದು. ಅರ್ಜಿದಾರನು ಮೇಲಧಿಕಾರಿಯ ಅಧೀನದಲ್ಲಿ ಕೆಲಸಮಾಡಿದ್ದರೆ, ಯಾವ

ಬಗೆಯು ಮೇಲ್ವಿಚಾರಣೆಗೊಳಪಟ್ಟಿದ್ದನೆಂದು ವಿಚಾರಿಸುವುದು ರೂಢಿ. ಈ ವಿಷಯ ತಿಳಿಯುವುದರಿಂದ ಅರ್ಜಿದಾರ ಸ್ವತಂತ್ರವಾಗಿ ಕೆಲಸಮಾಡಬಲ್ಲನೇ ಅಥವಾ ಪರಾವಲಂಬನೆ ರೂಢಿಯಿದೆಯೇ ಎಂದು ನಿರ್ಧರಿಸಬಹುದು. ಪೂರ್ವಾನುಭವದ ಪ್ರಭಾವಗಳಾವುವೆಂದು ತಿಳಿದರೆ ವ್ಯಕ್ತಿಯ ಗುಣ, ರೀತಿಗಳನ್ನು ಗ್ರಹಿಸಬಹುದು. ಜೊತೆಗೆ, ಆತನ ಉದ್ಯೋಗಾರ್ಹತೆಯನ್ನೂ ನಿರ್ಣಯಿಸಬಹುದು.

ಸಂಸ್ಥೆಯಲ್ಲಿ ಅನೇಕ ಉದ್ಯೋಗಗಳು ಖಾಲಿ ಇದ್ದಲ್ಲಿ, ಅರ್ಜಿದಾರನಿಗೆ ಇಷ್ಟವಾದ ಉದ್ಯೋಗ ಯಾವುದೆಂದು ವಿಚಾರಿಸಬೇಕು. ವಯಸ್ಸಾದ ಅಥವಾ ವಿಶಿಷ್ಟವಾದ ಅನುಭವವಿರುವ ಅರ್ಜಿದಾರರು ನಿಶ್ಚಿತ ಉದ್ಯೋಗಗಳಿಗೆ ಉಮೇದುವಾರರಾಗಿ ಬರುವರು. ಚಿಕ್ಕ ವಯಸ್ಸಿನ, ಅನುಭವವಿಲ್ಲದ ಜನರು ತಮಗೆ ಬೇಕಾದ ಉದ್ಯೋಗದ ಬಗ್ಗೆ ಖಚಿತ ನಿರ್ಣಯ ಮಾಡಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅರ್ಜಿದಾರರು ಸಂದರ್ಶಕರ ಸಲಹೆ ಕೇಳುವುದೂ ಉಂಟು. ಉದ್ಯೋಗ ವರ್ಣನೆಗಳನ್ನು ಅರ್ಜಿದಾರರಿಗೆ ಒದಗಿಸಿರುವುದರಿಂದ, ಅವರ ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಕೊಡುವುದರ ಮೂಲಕ ಸಹಾಯ ನೀಡಬಹುದು. ಸಂಸ್ಥೆ ಉದ್ಯೋಗಿಗಳನ್ನು ಆಯುವಂತೆ, ಅರ್ಜಿದಾರರು ಉದ್ಯೋಗದ ಆಯ್ಕೆ ಮಾಡುವರು. ಈ ಪರಸ್ಪರ ನಿರ್ಣಯಕ್ಕೆ ಆವಶ್ಯಕವಾದ ಸಮಾಚಾರ ವಿನಿಮಯ ಸಂದರ್ಶನದ ಅಂತ್ಯದಲ್ಲಿ ನಡೆಯುವುದು ರೂಢಿ.

ಕುಟುಂಬದ ಹಿನ್ನೆಲೆಯ ಪರಿಶೀಲನೆ

ಅರ್ಜಿದಾರನು ಬಾಲ್ಯಾವಸ್ಥೆಯಲ್ಲಿದ್ದಾಗ ಇದ್ದ ಕುಟುಂಬದ ವಾತಾವರಣವು ಆತನ ಶೀಲ, ಪ್ರೇರಕ ಆಸಕ್ತಿ ಮತ್ತು ವ್ಯಕ್ತಿತ್ವಗಳನ್ನು ರೂಪಿಸುತ್ತದೆ. ಆದ್ದರಿಂದ ಈ ವಾತಾವರಣದ ಮುಖ್ಯಾಂಶಗಳನ್ನು ತಿಳಿದಷ್ಟೂ, ಅರ್ಜಿದಾರನ ಬಲಾಬಲಗಳನ್ನು ತಿಳಿಯುವುದು ಸುಲಭ. ಮನೆತನದ ಆರ್ಥಿಕ ಪರಿಸ್ಥಿತಿ, ತಂದೆತಾಯಿಗಳ ಉದ್ಯೋಗ, ಅವರ ಹಾರೈಕೆಗಳು ಏಕೋದರರ ಉದ್ಯೋಗಗಳ ಮಟ್ಟ ಮುಂತಾದ ಅಂಶಗಳ ವಿವರಗಳನ್ನು ಸಂಗ್ರಹಿಸುವುದು ಆವಶ್ಯಕ. ಈ ಅಂಶಗಳ ಬಗ್ಗೆ ಅರ್ಜಿದಾರನ ಪ್ರತಿಕ್ರಿಯೆಗಳನ್ನೂ ವಿಚಾರಿಸಬೇಕು. ಚಿಕ್ಕ ವಯಸ್ಸಿನ ಅರ್ಜಿದಾರರನ್ನು ಸಂದರ್ಶಿಸುವಾಗ, ಮನೆತನದ ವಿಷಯವನ್ನು ವಿಶದವಾಗಿ ಪರಿಶೀಲಿಸುವುದು ಒಳ್ಳೆಯದು. ವಯಸ್ಸಾದ ಅರ್ಜಿದಾರರನ್ನು ಸಂಕ್ಷೇಪವಾಗಿ ಪ್ರಶ್ನಿಸಿದರೆ ಸಾಕು. ಏಕೆಂದರೆ ವಯಸ್ಸಾದಂತೆ ಬಾಲ್ಯದ ನೆನಪು ಮತ್ತು ಪ್ರಭಾವ ಕುಂದಿರುತ್ತದೆ. ಅವರ ಸ್ವಂತ ಕುಟುಂಬದ ವಿಷಯವನ್ನು ವಿವರವಾಗಿ ವಿಚಾರಿಸಬಹುದು.

ತಂದೆ ಹೆಚ್ಚು ವಿದ್ಯಾವಂತನಾಗಿಲ್ಲದೆ, ಕೆಳಮಟ್ಟದ ಉದ್ಯೋಗದಲ್ಲಿದ್ದರೆ, ಹಣ ಮತ್ತು ಸೌಕರ್ಯಗಳ ಅಭಾವವಿರುತ್ತದೆ. ಮಕ್ಕಳ ಜ್ಞಾನ ವಿಕಾಸಕ್ಕೆ ತಕ್ಕ

ಉತ್ತೇಜಕ ವಾತಾವರಣವಿರುವುದಿಲ್ಲ. ಈ ಬಗೆಯ ಅನಾನುಕೂಲ ಸಂದರ್ಭದಲ್ಲಿ ದ್ದರೂ ವ್ಯಕ್ತಿಯು ತಂದೆಗಿಂತ ಹೆಚ್ಚಿನ ಶಿಕ್ಷಣಪಡೆದು, ಪ್ರಶಂಸೆಗಳಿಸಿ, ಉತ್ತಮ ಉದ್ಯೋಗಕ್ಕೆ ಉಮೇದುವಾರನಾಗಿ ಬಂದರೆ, ಅದು ಅರ್ಜಿದಾರನ ಆಸಕ್ತಿ, ಸತ್ವ ಮತ್ತು ಸಾಮರ್ಥ್ಯಗಳನ್ನು ಸೂಚಿಸುತ್ತದೆ. ಮಿತವಾದ ಸೌಲಭ್ಯಗಳನ್ನು ಸದುಪ ಯೋಗಪಡಿಸಿಕೊಂಡು ಅತ್ಯುತ್ತಮ ಫಲ ಪಡೆದ ಅರ್ಜಿದಾರನಿಗೆ ದುಡಿಯುವ ರೂಢಿ ಇರುತ್ತದೆ. ಕೈಗೊಂಡ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸಲು ಬೇಕಾದ ಆಸಕ್ತಿ, ಚತುರತೆ, ಛಲ ಮುಂತಾದ ಗುಣಗಳನ್ನು, ಬಡತನದಿಂದ ಬಂದಿದ್ದರೂ, ಕೆಲವು ಅರ್ಜಿದಾರರಲ್ಲಿ ಕಾಣಬಹುದು. ಆದರೆ ಬಡತನದ ವಾತಾವರಣದಿಂದ ಬಂದವರೆಲ್ಲ ಇಂತಹ ಸುಗುಣಗಳನ್ನು ಹೊಂದಿರುವುದಿಲ್ಲ. ಕೆಲವರು ದುರಭಿಮಾನ, ಸಂಕುಚಿತ ದೃಷ್ಟಿ, ಆತ್ಮಪ್ರಶಂಸೆ ಮುಂತಾದ ದುರ್ಗುಣಗಳನ್ನು ಪ್ರದರ್ಶಿಸುವರು. ಆದುದರಿಂದ ಅರ್ಜಿದಾರನ ನಡೆನುಡಿ ಮತ್ತು ಜೀವನ ಘಟನೆಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಅತನ ಗುಣಾವಗುಣಗಳನ್ನು ಕಂಡುಹಿಡಿಯಬೇಕು.

ಬಡ ಕುಟುಂಬಗಳಲ್ಲಿ ಮಕ್ಕಳು ತಂದೆಯ ಉದ್ಯೋಗಕ್ಕೆ ನೆರವು ನೀಡುವುದು ಸಾಮಾನ್ಯ. ಆದ್ದರಿಂದ ಮಕ್ಕಳಿಗೆ ಮನೆಗೆಲಸ, ತೋಟದ ಕೆಲಸ, ಮಾರಾಟ ಮತ್ತಿತರ ಕಸುಬುಗಳ ಪರಿಚಯವಿರುತ್ತದೆ. ಕೆಲವರಿಗೆ ಚಿಕ್ಕವಯಸ್ಸಿನಲ್ಲೇ ಕಾರ್ಯಪ್ರಪಂಚದ ಪರಿಚಯವಲ್ಲದೆ, ದುಡಿದು ಹಣ ಸಂಪಾದಿಸಿರುವ ಅನುಭವವೂ ಇರುತ್ತದೆ. ಮನೆಯ ಹಿರಿಯ ಮಗನಿಗೆ ಸಂಸಾರ ನಿರ್ವಹಣೆಯ ಅನುಭವ ಸ್ವಲ್ಪ ಮಟ್ಟಿಗೆ ಇರಬಹುದು. ಈ ಬಗೆಯ ಕಾರ್ಯಶೀಲ ಅನುಭವ ವ್ಯಕ್ತಿಯ ನಾಯಕತ್ವದ ಮತ್ತು ಸ್ವಾವಲಂಬನೆಯ ಗುಣಗಳನ್ನು ವೃದ್ಧಿಗೊಳಿಸುತ್ತದೆ. ಬಡತನದ ವಾತಾ ವರಣದಲ್ಲಿ ಅನೇಕ ಅನಾನುಕೂಲಗಳೂ ಇರುತ್ತವೆ. ಮನೆಯ ತಾಪತ್ರಯ, ಅತೃಪ್ತಿ ಕರ ಶಿಕ್ಷಣ ವಾತಾವರಣಗಳ ಒತ್ತಡಕ್ಕೊಳಗಾಗಿ ವ್ಯಕ್ತಿಯು ತನ್ನ ಸಹಜ ಸಾಮ ರ್ಥ್ಯಕ್ಕೆ ತಕ್ಕಮಟ್ಟದ ಶಿಕ್ಷಣಪಡೆಯಲಾಗದೆ ಆಶಾಭಂಗವಾಗಿದ್ದರೆ, ಅನೇಕ ಸಮಸ್ಯೆ ಗಳು ಮೇಲೇಳುವುವು. ಉದ್ಯೋಗ ವಾತಾವರಣಕ್ಕೆ ಹೊಂದಿಕೊಂಡು, ತೃಪ್ತಿಕರ ವಾದ ಕೆಲಸಮಾಡಲು ಅರ್ಜಿದಾರನು ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ.

ಹೆಚ್ಚಿನ ಆರ್ಥಿಕ ಅನುಕೂಲವುಳ್ಳ ಮನೆತನಗಳಲ್ಲಿ ಬೆಳೆದ ಮಕ್ಕಳಿಗೆ ನಾನಾ ಬಗೆಯ ಸಲಕರಣೆ, ಸೌಕರ್ಯಗಳು ಇರುತ್ತವೆ. ತಂದೆತಾಯಿಗಳು ವಿದ್ಯಾವಂತ ರಾಗಿದ್ದರೆ ಮಕ್ಕಳ ಶಿಕ್ಷಣಕ್ಕೆ ತಕ್ಕ ಸಹಾಯ ಮತ್ತು ಉತ್ತೇಜನ ಕೊಡುವರು. ಅನುಕೂಲಗಳನ್ನು ಪೂರ್ಣವಾಗಿ ಉಪಯೋಗಿಸಿ ಉತ್ತಮ ರೀತಿಯ ಶಿಕ್ಷಣಸಾಧನೆ, ಯೋಗ್ಯತೆಗಳನ್ನು ಗಳಿಸುವುದು ವ್ಯಕ್ತಿ ಸಾಮರ್ಥ್ಯದ ಚಿಹ್ನೆ. ಅತಿ ಸುಲಭವಾಗಿ ತಾನಾಗಿಯೇ ಒದಗುವ ಸೌಕರ್ಯಗಳು ವ್ಯಕ್ತಿಯ ಪ್ರಯತ್ನ, ಶಕ್ತಿಗಳನ್ನು ಹೊರ ಗೆಳೆಯದೆ, ಜಡತೆ ತಲೆದೋರಲು ಕಾರಣವಾಗಬಹುದು. ಈ ಬಗೆಯ ಅನಾನುಕೂಲ

ಗಳು ಅನುಕೂಲಸ್ಥರ ಕುಟುಂಬಗಳಲ್ಲಿ ಉದ್ಭವಿಸುವುವು. ವಾತಾವರಣ ಯಾವುದೇ ಆಗಿರಲಿ, ಅದರಿಂದ ಹೊರಬೀಳುವ ಪ್ರಭಾವಗಳು, ಫಲಿತಾಂಶಗಳು ಒಳ್ಳೆಯವೇ ಅಥವಾ ಅಲ್ಲವೇ ಎಂಬುದು ವ್ಯಕ್ತಿಯ ಶೀಲವನ್ನಾಶ್ರಯಿಸಿದೆ.

ತಂದೆ ಉದ್ಯೋಗದಲ್ಲಿ ಕೀರ್ತಿಗಳಿಸಿದ್ದರೆ ಅದರಿಂದ ಮಕ್ಕಳ ಮೇಲಾಗಿರುವ ಪ್ರಭಾವವನ್ನು ತಿಳಿಯುವುದು ಆಗತ್ಯ. ಕೆಲವರು ತಂದೆಯ ಸಾಮರ್ಥ್ಯ, ನಿಷ್ಠೆಗಳನ್ನು ಕಲಿತಿರುವರು, ಮತ್ತೆ ಕೆಲವರು ತಂದೆಯ ಕೀರ್ತಿಯ ಆಸರೆಯಲ್ಲಿ ಬೆಳೆದು ತಮ್ಮ ಸ್ವಂತ ಯೋಗ್ಯತೆ, ಸ್ವಾವಲಂಬನೆಗಳನ್ನು ಬೆಳೆಸಿಕೊಂಡಿರುವುದಿಲ್ಲ. ಅನಾಥರಾಗಿ ಬೆಳೆದವರು, ಅವಿಭಕ್ತ ಕುಟುಂಬದಲ್ಲಿ ಇದ್ದವರು – ಇಂತಹ ವ್ಯಕ್ತಿಗಳು ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರುತ್ತಾರೆ. ಬಾಲ್ಯದ ವಾತಾವರಣದ ವಿವರಗಳನ್ನು ತಿಳಿದರೆ ಸಂದರ್ಶಕರ ನಿರ್ಣಯಕಾರ್ಯ ಆಧಾರಭೂತವಾಗಿರುತ್ತದೆ. ಉದ್ಯೋಗ ಪ್ರಪಂಚದ ಕಡೆಗೆ, ಅರ್ಜಿದಾರನಿಗಿರುವ ಸಂಸ್ಥಿತಿಯನ್ನು ಇನ್ನೂ ಅನೇಕ ಪ್ರಭಾವಗಳು ರೂಪಿಸುತ್ತವೆ. ಅರ್ಜಿದಾರನ ಏಕೋದರರು ಪಡೆದಿರುವ ಶಿಕ್ಷಣಮಟ್ಟ, ಮಾಡುತ್ತಿರುವ ಉದ್ಯೋಗಗಳು ಕೆಲವು ಸಂದರ್ಭಗಳಲ್ಲಿ ಪ್ರಬಲ ಪ್ರಭಾವವನ್ನು ಬೀರುವುವು. ಮೇಲ್ಮಟ್ಟದ ಮನೆತನದಿಂದ ಬಂದ ಸಹೋದರ ಸಹೋದರಿಯರು ಉತ್ತಮ ಜೀವನ ಮಾರ್ಗಗಳನ್ನನುಸರಿಸುತ್ತಿರುವ ಹಿನ್ನೆಲೆಯಲ್ಲಿ, ಕೆಳಮಟ್ಟದ ಉದ್ಯೋಗಕ್ಕೆ ಬರುವ ಅರ್ಜಿದಾರನನ್ನು ಸ್ಥಿರಮನಸ್ಸಿನಿಂದ ಆಯಲು ಸಾಧ್ಯವಾಗುವುದಿಲ್ಲ. ಸಂದರ್ಶನ ನಡೆಸುವ ಸಂಸ್ಥೆಯ ಅಧಿಕಾರಿಗಳು ಇಂತಹ ಅರ್ಜಿದಾರರನ್ನು ನೇಮಕಮಾಡಲು ಹಿಂಜರಿಯುವರು. ಅವರನ್ನು ನೇಮಕಮಾಡಿದರೂ ಅದು ಅವರ ಸಾಮರ್ಥ್ಯದ ಆಧಾರದ ಮೇಲಲ್ಲ; ಉಪಕಾರ ಮತ್ತು ಸಹಾನುಭೂತಿ ಕಾರಣಗಳಿಂದ.

ಅರ್ಜಿದಾರನ ಸ್ವಂತ ಕುಟುಂಬದ ಹಿನ್ನೆಲೆ, ಮನೆತನದ ಹಿನ್ನೆಲೆಯಷ್ಟೇ ಮುಖ್ಯ. ನಮ್ಮ ಸನ್ನಿವೇಶದಲ್ಲಿ, ಅನೇಕ ಅರ್ಜಿದಾರರು ಚಿಕ್ಕವಯಸ್ಸಿನಲ್ಲೇ ಮದುವೆಯಾಗಿರುವರು. ಕೆಲವರಿಗೆ ಮಕ್ಕಳೂ ಇರಬಹುದು. ಇಷ್ಟು ಸಂಸಾರದ ಹೊರೆಯಿರುವ ಅರ್ಜಿದಾರನು ಸಂಸ್ಥೆಯ ಮತ್ತು ಉದ್ಯೋಗದ ವಾತಾವರಣಕ್ಕೆ ಹೊಂದಿಕೊಳ್ಳಲು ಸಾಧ್ಯವೇ ಎಂದು ತಿಳಿಯಬೇಕು. ವಾಸಕ್ಕೆ ಮನೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಪಾಠಶಾಲೆ ಮುಂತಾದ ಅನುಕೂಲಗಳನ್ನೊದಗಿಸಿದರೆ ಉದ್ಯೋಗಿ ತನ್ನ ಕೆಲಸದ ಮೇಲೆ ಗಮನವಿಟ್ಟು ಆಸಕ್ತಿಯಿಂದ ನಿರ್ವಹಿಸುವನು. ಅಂದರೆ ಅರ್ಜಿದಾರನ ಜೊತೆಗೆ ಆತನ ಕುಟುಂಬವನ್ನು ಪರಿಗಣಿಸಬೇಕು. ಅನೇಕ ಸಂಸ್ಥೆಗಳು ಉದ್ಯೋಗಾರ್ಥಿಗಳನ್ನು ಆಯ್ದು, ಅವರಿಗೆ ಶಿಕ್ಷಣಕೊಟ್ಟು, ಕೆಲಸ ಕಲಿತಮೇಲೆ ಉದ್ಯೋಗ ಕೊಡುವುದು ರೂಢಿ. ಉದ್ಯೋಗಾರ್ಥಿಗಳಿಗೆ ಕೊಡುವ ವೇತನ ಸ್ವಂತಜೀವನ ನಡೆಸಲು ಸಾಕಾಗುವುದಿಲ್ಲ. ಆದ್ದರಿಂದ ಕೆಲವು ಸಂಸ್ಥೆಗಳು

ಹೆತ್ತವರೊಡನೆ ಅಥವಾ ಬಂಧುಗಳೊಡನೆ ವಾಸಮಾಡಲು ಅನುಕೂಲ ಪಡೆದಿರುವ ಅರ್ಜಿದಾರರನ್ನು ಆಯ್ದುಕೊಳ್ಳುವರು. ಈ ಅಂಶಕ್ಕೆ ಪ್ರಾಧಾನ್ಯತೆ ಕೊಡುವುದು, ತಕ್ಕ ಯೋಗ್ಯತೆಯಿರುವ ಅರ್ಜಿದಾರರಿಗೆ ಮಾತ್ರ ಅನ್ವಯವಾಗುತ್ತದೆ.

ಕೆಲವು ಸಂಸ್ಥೆಗಳು ತಮ್ಮ ನೌಕರರ ಮಕ್ಕಳನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುವುದು ವಾಡಿಕೆ. ನಿರ್ದಿಷ್ಟಕಾಲ ತೃಪ್ತಿಕರವಾದ ಸೇವೆ ಸಲ್ಲಿಸಿರುವ ನೌಕರರಿಗೆ ಈ ವಿಶೇಷ ಸೌಕರ್ಯವನ್ನು ಒದಗಿಸುವುದು ಪದ್ಧತಿ. ಇದೇ ರೀತಿ ಇನ್ನೂ ಅನೇಕ ಸಂದರ್ಭಗಳಲ್ಲಿ ಮನೆತನದ ಮತ್ತು ಸ್ವಂತ ಕುಟುಂಬದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಸಂದರ್ಶಕರು ಆಯ್ಕೆ ಮಾಡುವರು. ಸಂಸ್ಥೆ ಮತ್ತು ವ್ಯಕ್ತಿಯ ದೃಷ್ಟಿಯಿಂದ ಕುಟುಂಬದ ಹಿನ್ನೆಲೆಯ ಪರಿಶೀಲನೆ ಮುಖ್ಯವಾದದ್ದು.

ಉದ್ಯೋಗಾರ್ಹತೆಯ ನಿರ್ಧಾರ

ಅರ್ಜಿದಾರನ ಹಿನ್ನೆಲೆಯ ವಿವಿಧ ಮುಖಗಳ ಪರಿಶೀಲನೆಯಿಂದ ವ್ಯಕ್ತವಾಗುವ ಗುಣ ಮತ್ತು ದೋಷಗಳನ್ನು ಉದ್ಯೋಗ ನಿರ್ವಾಹದ ದೃಷ್ಟಿಯಿಂದ ತುಲನೆಮಾಡಿ, ಅಂಗೀಕಾರದ ಅಥವಾ ನಿರಾಕರಿಸುವ ನಿರ್ಣಯಮಾಡುವುದು ಸಂದರ್ಶನದ ಸಾರಾಂಶ. ವ್ಯಕ್ತಿಯ ಉದ್ಯೋಗಾರ್ಹತೆಯ ಬಗ್ಗೆ ನಿರ್ಣಯದಲ್ಲಿ ಸಂದರ್ಶನ ಸಮಿತಿಯ ಸದಸ್ಯರೆಲ್ಲ ಭಾಗವಹಿಸುವರು. ಸಮಿತಿಯಲ್ಲಿರುವ ಪ್ರತಿ ಸಂದರ್ಶಕನೂ ತನ್ನ ಶಕ್ತ್ಯಾನುಸಾರ ಉದ್ಯೋಗಾರ್ಹತೆ ನಿರ್ಧಾರದಲ್ಲಿ ಭಾಗಿಯಾದರೆ, ನಿಷ್ಪಕ್ಷಪಾತವಾದ, ಭರವಸೆ ಯೋಗ್ಯವಾದ ನಿರ್ಣಯಗಳನ್ನು ನಿರೀಕ್ಷಿಸಬಹುದು. ಅನೇಕ ಸಂದರ್ಭಗಳಲ್ಲಿ ಒಬ್ಬ ಸಂದರ್ಶಕನೇ ನೇಮಕದ ನಿರ್ಣಯ ಮಾಡುವನು. ಈ ಪದ್ಧತಿ ಕೆಳಮಟ್ಟದ ಉದ್ಯೋಗಿಗಳ ಆಯ್ಕೆಯಲ್ಲಿ ಆಚರಣೆಯಲ್ಲಿದೆ. ಬಹುಮಟ್ಟಿಗೆ, ಮೇಲ್ಮಟ್ಟದ ಉದ್ಯೋಗಿಗಳ ಆಯ್ಕೆಯನ್ನು ಸಂದರ್ಶನ ಸಮಿತಿ ಮಾಡುತ್ತದೆ. ಕೆಲವು ಸಂಸ್ಥೆಗಳಲ್ಲಿ ಸಮಿತಿಯ ಸದಸ್ಯರೆಲ್ಲ ಒಂದೆಡೆ ಸೇರಿ, ಅರ್ಜಿದಾರರನ್ನು ಒಬ್ಬೊಬ್ಬರಾಗಿ ಸಂದರ್ಶಿಸುವರು. ಮತ್ತೆ ಕೆಲವು ಸಂಸ್ಥೆಗಳಲ್ಲಿ ಸಮಿತಿಯ ಪ್ರತಿ ಸದಸ್ಯರೂ ಒಬ್ಬ ಅರ್ಜಿದಾರನನ್ನು ಪ್ರತ್ಯೇಕವಾಗಿ ಸಂದರ್ಶಿಸಿ, ಅಂತ್ಯದ ನಿರ್ಣಯವನ್ನು ಎಲ್ಲರೂ ಸೇರಿ ಮಾಡುವರು. ವಿವಿಧ ವಿಧಾನಗಳ ಮೂಲಕ ಅರ್ಹತೆಯ ನಿರ್ಣಯ ಮಾಡಬಹುದು. ಆದರೆ ಆಯ್ಕೆನಿರ್ಣಯದ ಆಧಾರಭೂತ ಅಂಶಗಳು ವಿಧಾನಕ್ಕನುಸಾರವಾಗಿ ಬದಲಾಯಿಸುವುದಿಲ್ಲ. ವ್ಯಕ್ತಿಗಳ ಗುಣಗಳನ್ನು ಗ್ರಹಿಸಿ, ಉದ್ಯೋಗಾರ್ಹತೆ ಪಟ್ಟಿಯೊಡನೆ ಹೋಲಿಸಿ, ತಕ್ಕ ಯೋಗ್ಯತೆಯಿರುವವನನ್ನು ಆಯ್ದುಕೊಳ್ಳುವುದು ಆಯ್ಕೆನಿರ್ಣಯದ ಸಾರಾಂಶ.

ಕುಮಾರವ್ಯಾಸ ಹಾಗೂ ಕುಮಾರವಾಲ್ಮೀಕಿ ಕವಿಗಳ ಕಾಲ ಮತ್ತು ಮತಗಳ ವಿಚಾರ

ಸೀತಾರಾಮ ಜಾಗೀರ್‌ದಾರ್

ಕುಮಾರವ್ಯಾಸನ 'ಕರ್ಣಾಟಕ ಭಾರತ ಕಥಾಮಂಜರಿ' ಮತ್ತು ಕುಮಾರ ವಾಲ್ಮೀಕಿಯ 'ಕರ್ಣಾಟಕದ ವಿಸ್ತಾರ ರಾಮಾಯಣ' ಇವು 'ಗದುಗಿನ ಭಾರತ' ಹಾಗೂ 'ತೊರವೆ ರಾಮಾಯಣ' ಎಂದು ವಿಶ್ರುತ. ಈ ಗ್ರಂಥಗಳ ಕರ್ತೃಗಳ ಕಾಲ, ಮತ—ಇವುಗಳ ಬಗೆಗೆ ಹಲವಾರು ವಿದ್ವಾಂಸರು ಬರೆದಿದ್ದಾರೆ. ಅವೆಲ್ಲ ಬರಿ ಊಹೆಗಳಾಗಿವೆ. ನಿಶ್ಚಿತ ಆಧಾರಗಳಿಂದ ಒಂದು ನಿರ್ಣಯಕ್ಕೆ ಬಂದಿಲ್ಲ. ಖಚಿತ ನಿರ್ಧಾರಕ್ಕೆ ಬರುವುದೇ ಈ ಲೇಖನದ ಗುರಿ. ಅದು ಸಾಧ್ಯವೇ ? ಇನಿತು ನೋಡೋಣ.

ಈ ದಿಶೆಯಲ್ಲಿ ವಿದ್ವಾಂಸರ ಬರಹಗಳ ಪರಿಶೀಲನೆ ಇನಿತು ಅಗತ್ಯ. ಕುಮಾರ ವಾಲ್ಮೀಕಿಯ ಕಾಲ ನಿರ್ಣಯ ಕುಮಾರ ವ್ಯಾಸನ ಕಾಲವನ್ನೇ ಅವಲಂಬಿಸಿದೆ! 'ಕುಮಾರ ವಾಲ್ಮೀಕಿಯ ಕಾಲವನ್ನು ನಿರ್ಣಯಿಸಲು ಸ್ವತಂತ್ರ ಆಧಾರಗಳು ದೊರೆತಿದ್ದರೆ (ಕುಮಾರ ವ್ಯಾಸನ) ಮೇಲಿನ ಎಲ್ಲೆಯನ್ನು ಗೊತ್ತುಪಡಿಸಲು ನೆರವಾಗುತ್ತಿತ್ತು. ಆದರೆ ಅವನ ಕಾಲವೇ ಕುಮಾರವ್ಯಾಸನ ಕಾಲ ನಿರ್ಣಯವನ್ನು ಈವರೆಗೆ ನೆಮ್ಮಿಕೊಂಡಿದೆ. ತನಗಿಂತ ಮುಂಚಿನ ಯಾವ ಕನ್ನಡ ಕವಿಗಳನ್ನೂ ಕುಮಾರವ್ಯಾಸನು ನೆನೆದಿಲ್ಲ. ಆದರೆ ಸೇವುಣ (ಸಾಹಣ) ಹೊಯ್ಸಳ (ಸಮುದ್ರ ಹೋಸಲ)—ಈ ರಾಜವಂಶಗಳ ಉಲ್ಲೇಖದಿಂದ ಅವನು 11–12ನೆಯ ಶತಕದ ತರುವಾಯದವನೆಂಬುದು ತಿಳಿಯುತ್ತದೆ. ಹೀಗೆ ಸುಮಾರು 13ನೆಯ ಶತಕವು ಕೆಳಗಿನ ಗಡುವಾದರೆ 15 ನೆಯ ಶತಕವು ಮೇಲಿನ ಗಡುವೆಂದು ಗ್ರಹಿಸಬಹುದು... ಇತ್ಯಾದಿ ಬರೆದು ದಿ. ಗೋವಿಂದಪೈಗಳು ಸೂಚಿಸಿದ ಕುಮಾರ ವ್ಯಾಸನ ಕಾಲ 13ನೇ ಶತ-ಮಾನದ ಪೂರ್ವಾರ್ಧ ನಮಗೆ ನಿರ್ವಿವಾದವೆಂದು ತೋರುವುದಿಲ್ಲ'[1] ಎಂದು ಎಂದಿದ್ದಾರಲ್ಲದೆ ಅವನ ಕಾಲವನ್ನು ಭಾಸ್ಕರನ ಜೀವಂಧರ ಚರಿತ್ರೆಯ ಆಧಾರದ ಮೇಲೆ ಸು. ಕ್ರಿ. ಶ. 1400 ಎಂದೂ ಸೂಚಿಸಿದ್ದಾರೆ – ಡಾ. ರಂ. ಶ್ರೀ. ಮುಗಳಿ.[2] ಇದೇ ಅಭಿಪ್ರಾಯವನ್ನು ಅವರು ಕ್ರಿ. ಶ. 1973 ರಲ್ಲಿ ಪ್ರಕಟಿಸಿದ ಕೃತಿ

---

1 ಡಾ. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಪುಟ 234 (1ನೆಯ ಮುದ್ರಣ)

2 ಅದೇ, ಪು. 226, 237

"ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು" ಎಂಬುದರಲ್ಲೂ ಉಳ್ಳವರಾಗಿದ್ದಾರೆ.[3] ದಿ. ಗೋವಿಂದ ಪೈ ಅವರ ವಿಮರ್ಶೆ—ಆಗ್ಗೆ ಉಪಲಬ್ಧವಿದ್ದ ಪ್ರತಿಗಳ ಮೇಲೆ ನಿಂತುದು. ಅವುಗಳಲ್ಲಿನ ದೋಷ ಆ ವಿಮರ್ಶೆಯ ನಿರ್ಣಯದ ಅಂಗವಾಗಿ ಬಂದಿರುವುದು ಸಹಜವೇ. ಆಗ ಸಂಶೋಧಿತ ಪ್ರತಿಗಳು ದೊರೆಯುತ್ತಿದ್ದಿಲ್ಲ. ಆದರೆ ಇತ್ತೀಚೆಗೆ ಸುಮಾರು ಎರಡು ದಶಕಗಳಿಂದ ವಿದ್ವಾಂಸರನೇಕರ ಶ್ರಮದಿಂದ ಅನೇಕ ಗ್ರಂಥಗಳು ಪರಿಷ್ಕರಣಗೊಂಡು ಸಂಶೋಧಿತ ಪ್ರತಿಗಳು ಉಪಲಬ್ಧವಿವೆ. ಆದರೆ ವಿಷಾದದ ಸಂಗತಿ–ಈ ಪ್ರತಿಗಳನ್ನು ನಮ್ಮ ವಿದ್ವಾಂಸರು ನೋಡದೆಯೇ ವಿಮರ್ಶೆಗಳನ್ನು ಬರೆದಿದ್ದಾರೆ. ನನ್ನ ಈ ಮಾತಿಗೆ ಸಾಕ್ಷಿ, ಡಾ॥ ರಂ. ಶ್ರೀ. ಮುಗಳಿ ಅವರ 'ಪ್ರಾಚೀನ ಕನ್ನಡ ಸಾಹಿತ್ಯರೂಪಗಳು' ಮತ್ತು ಐ. ಬಿ. ಎಚ್. ಪ್ರಕಾಶನದಿಂದ ಹೊರಬಿದ್ದ 'ಕುಮಾರವ್ಯಾಸ' ಎಂಬ ಗ್ರಂಥಗಳು.[4] ಮುಂದೆ ಬರುವ ವಿವರಣೆಯಲ್ಲಿ ಈ ಮಾತಿಗೆ ಋಜು ದೊರೆಯುತ್ತದೆ.

ಕುಮಾರವ್ಯಾಸ ಕವಿಯ ಬಗೆಗೆ–ಕಾಲದ ಬಗೆಗೆ–ಅನೇಕರು ಬರೆದಿದ್ದಾರೆ. ಆದರೆ ಬರೆಯುವಾಗ ಕವಿಯ ಕೃತಿಯನ್ನು ಇದ್ದುದನ್ನು ಇದ್ದಹಾಗೆ ನೋಡದೆ, ಇಡಿಯಾಗಿ ನೋಡದೆ, ಯಾವುದೋ ವಾಯಿಗೆ ಸಿಲುಕಿ ಹಲವು ಬಗೆಯಲ್ಲಿ ನಿರೂಪಿಸಿದುದು ಅವರ ಲೇಖನಗಳಿಂದ ಸುವ್ಯಕ್ತವಿದೆ. ಅಂತಲೇನೆ ಅವರಿಗೆ ಗ್ರಂಥದಲ್ಲಿ ಹುದುಗಿದ ಸತ್ಯ ಗೋಚರವಾಗಿಲ್ಲ. ಕೆಲವರಿಗಂತೂ ಗ್ರಂಥದಲ್ಲಿ ಇರುವ ಐತಿಹಾಸಿಕ ಅಂಶಗಳು ಗೌಣ, ನಿರ್ಣಾಯಕ-ಪ್ರಮಾಣಗಳಲ್ಲ. ಅವು ದೂರಾನ್ವಯ.[5] ಯಾವುದೇ ಕವಿಯ ಇತಿಹಾಸವನ್ನು ಬರೆಯುವುದರಲ್ಲಿ ಆತನ ಗ್ರಂಥದಲ್ಲಿನ ಐತಿಹಾಸಿಕಾಂಶಗಳನ್ನು ಬಳಸದಿದ್ದರೆ ನಮ್ಮ ದೃಷ್ಟಿಯಿಂದ ಆ ಕಾರ್ಯ ಮದುಮಗನನ್ನು ಬಿಟ್ಟು ಮದುವೆಗೆ ಹೋದಂತೆ. ಹಾಗೆ ಮಾಡುವುದು ಕೇವಲ ತೌಡು ಕುಟ್ಟಿದಂತೆ. ಅಂತೆಯೆ ಇಂತಹ ಕಾರ್ಯ ರಸಗ್ರಾಹಿಗಳಾದ ಶ್ರೀಯುತ ವಿ. ಸೀತಾರಾಮಯ್ಯನವರಿಗೆ ಬೇಸರವೂ ತಂದಿದೆ—(ಅದು ಸಹಜ!) ಅವರ ಕೆಳಗಿನ ಬರಹವೇ ನಮ್ಮ ನುಡಿಗೆ ಸಾಕ್ಷಿ :

ಗದುಗಿನ ಭಾರತವನ್ನು ಬರೆದ ನಾರಣಪ್ಪನನ್ನು ಕುರಿತ ಈ ಗ್ರಂಥದಲ್ಲಿ, ಮಾಲೆಯಲ್ಲಿನ ಉಳಿದ ಕವಿಗಳನ್ನು ಕುರಿತಂತೆಯೇ ಮೂವರು ವಿದ್ವಾಂಸರು ಲೇಖನ ಬರೆದಿದ್ದಾರೆ. ಶ್ರೀ ಅನಂತ ರಂಗಾಚಾರ್ಯರು ನಾರಣಪ್ಪನ ಹಸ್ತಪ್ರತಿಗಳಿಗಾಗಿ ಕನ್ನಡ ನಾಡಿನಲ್ಲೆಲ್ಲಾ ಸುತ್ತಾಡಿ ಮೈಸೂರು

---

3 ಅವರೇ, ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಪು. 197, 214

4 ಈ ಎರಡೂ ಗ್ರಂಥಗಳು 1973ರಲ್ಲಿ ಅಚ್ಚಾಗಿವೆ. ಇದು ಲಕ್ಷ್ಯದಲ್ಲಿ ಇಡಬೇಕಾದ ಸಂಗತಿ

5 (*a*) ಎನ್. ಅನಂತರಂಗಾಚಾರ್, ಐ. ಬಿ. ಹೆಚ್. ಪ್ರಕಾಶನದ ಗ್ರಂಥ–'ಕುಮಾರವ್ಯಾಸ ಪುಟ 10

(*b*) ಆರ್. ಎಸ್. ಪಂಚಮುಖಿ–'ಅಭಿನಂದನೆ' ಯಲ್ಲಿನ ಲೇಖನ - ಪುಟ 343

ಪ್ರಾಚ್ಯ ಸಂಶೋಧನಾ ಇಲಾಖೆಯ ಮೂಲಕ ಅವನ ಕೃತಿಯ ಕೆಲವು ಭಾಗಗಳನ್ನು ಸಂಪಾದಿಸಿ ಕೊಟ್ಟರು. ಅವರು ಅವನ ಕಾಲ ಮತ ಮುಂತಾದುವನ್ನು ಕುರಿತು ಬರೆದಿದ್ದಾರೆ. 12-13 ನೇ ಶತಮಾನದಷ್ಟು ಹಿಂದಕ್ಕೆ ಅವನ ಕಾಲವನ್ನು ತೆಗೆದುಕೊಂಡು ಹೋಗುವುದು ಸೂಕ್ತವಾಗದು. 16ರವರೆಗೂ ಎಳೆಯುವುದು ಸಲ್ಲದು. ಸುಮಾರು ಈ ಪ್ರಮಾಣಗಳಿಂದ ಆತನನ್ನು 15ನೇ ಶತಮಾನದ ಮಧ್ಯಭಾಗದಲ್ಲಿ ಇದ್ದವನೆಂದು ಬರೆದವನೆಂದು ಸದ್ಯಕ್ಕೆ ಒಪ್ಪಬಹುದಾದ ಸಂಗತಿಯಾದೀತು ಎನ್ನುತ್ತಾರೆ. ಕವಿಚರಿತ್ರೆ—ಎಂದರೆ ಈ ಕಾಲ ದೇಶ ಮತಗಳ ಚರಿತ್ರೆ — ಎಂಬ ಕಸರೆಯೇ ಪ್ರಧಾನ ವ್ಯವಸಾಯವಾಗಿ ಸಮಸ್ತ ವಿದ್ಯಾ ಪರಿಣತಿಗೂ ಪ್ರಕಾಶಿಕೆಯಾಗಿ ಪ್ರಮಾಣವಾಗಿ ಬೆಳೆಯಿತು. ಎಲ್ಲ ವಿವಾದಗಳಲ್ಲಿಯೂ ಕಡಗೆ 'ಇದಮಿತ್ಥಂ' ಎಂದು ಹೇಳಲು ಶಕ್ಯವಾಗುವುದಿಲ್ಲ ಎಂಬುದನ್ನು ಕೇಳಿ ಕೇಳಿ, ಓದಿ ಓದಿ, ಬೇಸರ ಬರುವಂತಾಗಿದೆ. ವಸ್ತುಸ್ಥಿತಿ ಹಾಗಿರುವಾಗ ಅವರು ತಾನೆ ಏನು ಮಾಡಿಯಾರು ? ಈತನು ಬ್ರಾಹ್ಮಣನೆಂದು, ಅಲ್ಲವೆಂದು, ಚಾಮರಸನ ಬಂಧು ಎಂದು ಅಲ್ಲ ಎಂದು, ಮಾತು ಒಂದು ಬಗೆಯಾದರೆ ಬ್ರಾಹ್ಮಣರಲ್ಲಿ ಸ್ಮಾರ್ತ, ಮಾಧ್ವ, ಭಾಗವತ ಸಂಪ್ರದಾಯದವನು, ಶ್ರೀವೈಷ್ಣವ-ಅವರಲ್ಲಿ ಈ ಬಗೆಯ ಶ್ರೀವೈಷ್ಣವ—ಅದ್ವೈತ ಎಂದು ಬೇಕಾದಷ್ಟು ವಾದವಿವಾದ ನಡೆದಿದೆ. ಸಾಹಿತ್ಯ ಮೌಲ್ಯಾಂಕನಕ್ಕೆ ವಿಶೇಷವಾಗಿ ಸಂಬಂಧಿಸಿದ ಈ ಮಾಲೆಯಲ್ಲಿ ಆ ಬಗೆಗೆ ನಾವು ಹೆಚ್ಚಾಗಿ ಗಮನ ಕೊಡುತ್ತಿಲ್ಲ. ನಮಗೆ ಕವಿ ಪ್ರತಿಭೆ, ಕೃತಿರಚನೆ ಇವುಗಳ ಸ್ವರೂಪ, ಗುಣಮಟ್ಟ—ಇವನ್ನು ಕುರಿತು ಮಾತ್ರ ಗಮನ.[6]

ಸತ್ಯದ ಚಿಂತನ ಬಿಟ್ಟು ಸುಳ್ಳಿನ ಕಂತೆ ಹೊಸೆದು–ದುಡ್ಡು ಮಾಡುವುದು–ಇಂದಿನ ಹಿರಿಯ ಬರೆಹಗಾರರ ಉದ್ದೇಶವೇ ಆದಾಗ ಇದು ಸಹಜ, ಸ್ವಾಭಾವಿಕ. ಇನ್ನು ಕುಮಾರವ್ಯಾಸನ ಸಮಗ್ರ ಪರಿಚಯ ಐ. ಬಿ. ಎಚ್. ಪ್ರಕಾಶನದಿಂದ ಆಗಬಹುದು ಎಂದುಕೊಂಡಿದ್ದೆ. ಆದರೆ ಅದು ಆಗಲಿಲ್ಲ. ಕುಮಾರವ್ಯಾಸನನ್ನು ಕುರಿತು ಒಂದು ಶಾಸ್ತ್ರೀಯ ಅಧ್ಯಯನದ ಸಮಗ್ರ ಪರಿಚಯದ ಫಲ ದೊರೆತಿಲ್ಲ. ಸಮಗ್ರ

---

6 'ಕುಮಾರವ್ಯಾಸ' (ಐ.ಬಿ.ಎಚ್. ಪ್ರಕಾಶನ) ಪು. 147-8. ಪೂಜ್ಯ ವಿ.ಸೀ. ಅವರ ಈ ಅಭಿಪ್ರಾಯಗಳಿಗೆ ನನ್ನ ನಮ್ರಶೀಲ ಮೂರು ಆಕ್ಷೇಪಣೆಗಳಿವೆ :

(1) ಶ್ರೀಯುತರ ಗಮನ ಕೇವಲ 'ಸಾಹಿತ್ಯ ಮೌಲ್ಯಾಂಕ' ಅಷ್ಟೇ ಆಗಿದ್ದರೆ ಈ 'ಕಾಲ, ಮತ, ವ್ಯಕ್ತಿತ್ವ' ಎಂಬ 'ಕಸರೆ'ಯನ್ನು ಏಕೆ ಬರೆಯಿಸಿ ಪ್ರಕಟಿಸಿದರು ? ಶ್ರೀಯುತರು ಸಂಪಾದಕರಲ್ಲವೆ ? ಅದನ್ನು ಬಿಡಬಹುದಾಗಿತ್ತು.

(2) 'ಕವಿಪ್ರತಿಭೆ' 'ಕೃತಿರಚನೆ' ಇವು ಕವಿಯ ಶೈಲಿಯ ಅಂಗಗಳಷ್ಟೆ ? ಅವರೇ ಹೇಳುವಂತೆ 'ಶೈಲಿಯೇ ಶೀಲ' ಆದರೆ (ಪು. 150)–ಅವು ಯಾವೊಬ್ಬ ಕವಿಯ ಜೀವನದಿಂದ ಭಿನ್ನವೇ ? ಕವಿಯ ಜೀವನವೇ ಅವನ 'ಶೈಲಿ' ಆದರೆ, ಆತನ ಚರಿತ್ರೆ ಅದೆಂತು ಕಸರೆ ? ವಿಮರ್ಶಕರು–ಬರೆಹಗಾರರು-ತೌಡುಕಟ್ಟಬಾರದಷ್ಟೆ ?

(3) ನಿಜವಾಗಿಯೂ ಶ್ರೀ ಎನ್. ಅನಂತರಂಗಾಚಾರ್ಯರು ಕನ್ನಡನಾಡಿನಲ್ಲೆಲ್ಲಾ ಸುತ್ತಾಡಿ ಪ್ರತಿಗಳನ್ನು ತಂದು 'ದ್ರೋಣಪರ್ವ' 'ಕರ್ಣಪರ್ವ' ಮತ್ತು 'ಶಲ್ಯಗದಾಪರ್ವ' ಸಂಪಾದಿಸಿದರೆ ? ಇವುಗಳನ್ನು ತೆರೆದು ನೋಡಿದರೆ—ಮುನ್ನುಡಿ ಪುಟಗಳು, ಶ್ರೀ ವಿ. ಸೀ. ಅವರ ಮಾತು ಅಸತ್ಯ ಎಂದು ಸಾರುತ್ತವೆಯಲ್ಲ ? ಅವರ ಪ್ರಕಾರ ಕನ್ನಡ ನಾಡೆಂದರೆ ಕೇವಲ ಹಳೆಯ ಮೈಸೂರು ಸಂಸ್ಥಾನವೇ ? – ಮೂರು ನಾಲ್ಕು ವಿಶ್ವವಿದ್ಯಾನಿಲಯಗಳು. ಕನ್ನಡ ಸಾಹಿತ್ಯ ಪರಿಷತ್ತು – ಇಲ್ಲೆಲ್ಲ ದೊರೆಯುವ ಪ್ರತಿಗಳನ್ನು ಸಂಗ್ರಹಿಸಿ ಸಂಪಾದಿಸುವ ಕಾರ್ಯ ಇನ್ನೂ ಆಗಿಲ್ಲ ; ಆಗಬೇಕಾಗಿದೆ. ಆಗಬೇಕು.

ಕೃತಿಯನ್ನು ಸರ್ವಾಂಗೀಣ ದೃಷ್ಟಿಯಿಂದ ನೋಡಿ–ನಿರ್ಮಾಣಗೊಂಡ (*India As known to Panini* ಅಥವಾ *Yasastilakha and Indian Culture* – ರೀತಿಯ)[7] ಕೃತಿ ಬರಬೇಕಾಗಿದೆ.[8]

ಕುಮಾರವ್ಯಾಸನ 'ಭಾರತ ಕಥಾಮಂಜರಿ'–ನಾಡಿನಲ್ಲಿ ಅತಿ ಪ್ರಸಿದ್ಧ ಹಾಗೂ ಅತ್ಯುತ್ತಮ ಕೃತಿಗಳಲ್ಲಿ ಒಂದು. ಅಂತೆಯೆ ಅದಕ್ಕೆ ಅದು ಹುಟ್ಟಿದಂದಿನಿಂದ ಅನೇಕ ಹಸ್ತಪ್ರತಿಗಳು ಹುಟ್ಟಿವೆ. ಈ ಹಸ್ತಪ್ರತಿಗಳನ್ನು ಪರಿಶೀಲಿಸಿದರೆ ನಮಗೆ ಕಂಡುಬರುವ ಸಂಗತಿಯೆಂದರೆ ಕೆಲವರು ಗ್ರಂಥವನ್ನು ಸಂಗ್ರಹಿಸಿದ್ದಾರೆ; ಮತ್ತೆ ಕೆಲವರು ಗ್ರಂಥವನ್ನು ವಿಸ್ತರಿಸಿದ್ದಾರೆ.[9] ಇವೆರಡೂ ಕಾರ್ಯಗಳು, ಕವಿಗೆ ಅಪಚಾರಗಳೆ! ಆದರೂ ಅವರು ಮಾಡಿದುದು ಅಪಚಾರವೆಂದು ಹೇಳುವಂತಿಲ್ಲ. ಏಕೆಂದರೆ ಪ್ರತಿಯೊಬ್ಬನಿಗೂ ಅವನಿಚ್ಛೆಯಂತೆ ಇರಲು ಹಕ್ಕಿಲ್ಲವೆ? ನಮಗೆ ಕವಿ ಕೃತಿ ಪೂರ್ಣಬೇಕೆಂಬ ಆಶೆಗೆ ನಾವು ಈಗ ಆ ಉಪಲಬ್ಧವಿರುವ ಪ್ರತಿಗಳಿಂದ ಸೃಷ್ಟಿಸಿಕೊಳ್ಳಬೇಕು. ರಾಮಾಯಣದ ಭಾರದಲ್ಲಿ ಫಣಿರಾಯನು ತಿಣಿಕಿದನೊ ಇಲ್ಲವೊ ಇಂದು ಆ ಗ್ರಂಥವನ್ನು ಸಂಪಾದಿಸಬೇಕೆನ್ನುವ ಸಂಪಾದಕ ಮಾತ್ರ ತಿಣುಕು ವುದು ಶತಕ್ಕೆ ಶತ ಸತ್ಯ! ಕುಮಾರವ್ಯಾಸನ ವಿದ್ಯಾರ್ಥಿಗೆ ಇರುವಷ್ಟು 'ಪಾಠ' ನಿರ್ಣಯ ಕಷ್ಟ ಕನ್ನಡದ ಇನ್ನೊಬ್ಬ ಮಹಾಕವಿಯ ವಿದ್ಯಾರ್ಥಿಗೆ ಇಲ್ಲ. ಪಂಪ, ಕುಮಾರವ್ಯಾಸರ ವಿದ್ಯಾರ್ಥಿಯಾದ ನನ್ನ ಸ್ವಂತ ಅನುಭವದಿಂದ ಬಂದ ಮಾತಿದು. ಕುಮಾರವ್ಯಾಸನನ್ನು ಅಭ್ಯಾಸಮಾಡುವ ಸಂದರ್ಭದಲ್ಲಿ ನಾನು ಮೂರು ನಿಯಮ ಗಳನ್ನು ಹಾಕಿಕೊಂಡಿದ್ದೇನೆ–ಕವಿಪದ್ಯ ಅಹುದೇ ಅಲ್ಲವೇ? ಎಂಬ ವಿಷಯದಲ್ಲಿ, ಕೆಲವರಿಗೆ ರಸಾಸ್ವಾದಕರಿಗೆ ಇದು ಅನಾವಶ್ಯಕವಿರಬಹುದು! ರಸಸೃಷ್ಟಿ ಯಾರದಾದರೇನು? ನಮಗೆ ಸವಿಯುವುದು ಮುಖ್ಯ ಅಷ್ಟೆ! ಯಾವನು ಬರೆದರೇನು? ಯಾವಾಗ ಬರೆದರೇನು? ಅದು ರಸಸ್ಯಂದಿ ಆಗಿದ್ದರೆ ಸಾಕು. ಕವಿ ಕೃತಿಯಲ್ಲಿನ ಆತನ ರಸಸೃಷ್ಟಿ ಆತನ ವಿಭಾವ–ಅನುಭಾವ–ಸಂಚಾರಿ (ವ್ಯಭಿಚಾರಿ) ಭಾವಗಳ ಸಂಗಮವಲ್ಲದೆ–ಬೇರೆ ಆಗಿರುತ್ತದೆಯೆ? ಇದಕ್ಕೆ ರಸವಿಮರ್ಶಕರು

---

7 (a) Dr. V. S. Agarwala (b) Prof. K. K. Handiqui

8 ಈ ಸಂದರ್ಭದಲ್ಲಿ ಐ. ಬಿ. ಎಚ್. ಪ್ರಕಾಶನದವರಿಗೆ ಒಂದು ಸೂಚನೆ: ಅವರು ಇನ್ನು ಮುಂದೆ ಈ ಬಗೆಯ ಕೃತಿ ಪ್ರಕಟಿಸುವ ಸಂದರ್ಭದಲ್ಲಿ ಮೂವರು ವ್ಯಕ್ತಿಗಳಿಗೆ ಹಣಕೊಟ್ಟು ಬರೆಯಿಸುವುದಕ್ಕಿಂತ ತಮಗೆ ಸಮರ್ಥರು ಎಂದು ತೋರಿದ ಒಬ್ಬ ವ್ಯಕ್ತಿಗೆ ಆ ಹಣಕೊಟ್ಟು ಒಂದು ಸುಂದರ ಕೃತಿಯನ್ನು ಹೊರತರಬಹುದು; ಚರ್ವಿತಚರ್ವಣವನ್ನು ನಿಲ್ಲಿಸಬಹುದು.

9 ನೋಡಿ: ಕೆ. ಆರ್. ಶೇಷಗಿರಿ ಅವರು ಸಂಪಾದಿಸಿ ಪ್ರಕಟಿಸಿರುವ 'ಆದಿಪರ್ವ' ಪೀಠಿಕೆ. ಪು. XLvii_viii. ಅವರು ಬಳಸಿಕೊಂಡಿರುವ ಹದಿನೇಳು ಪ್ರತಿಗಳಲ್ಲಿ ಕ ಚ ಡ ಬ ಮ ವ –ಇವುಗಳಲ್ಲಿ ಒಂದರಲ್ಲೂ ಸಾವಿರಕ್ಕಿಂತ ಒಂದು ಪದ್ಯವಾದರೂ ಹೆಚ್ಚಿಲ್ಲ. ಖಗಜಟಣತದನ ಪರ—ಇವುಗಳಲ್ಲಿ 1095 ರಿಂದ (ಣ) 3116 (ದ) ರವರೆಗೆ ಪದ್ಯಗಳಿವೆ. ಇದು ಕೇವಲ ಒಂದು ಪರ್ವದ ವಿವರ.

ಕೊಡಬೇಕಾದ ಉತ್ತರ ಏನು? ನಮಗೆ ಕವಿ, ಕೃತಿ–ಇವೆರಡೂ ರಸವೆಂಬ ನಾಣ್ಯದ ಎರಡು ಮುಖಗಳು. ಅಂತೆಯೆ ನನ್ನ ಅಭ್ಯಾಸದಲ್ಲಿ ಹಾಕಿಕೊಂಡ ಮೂರು ನಿಯಮಗಳೆಂದರೆ:[10]

1. ವಿಸ್ತೃತ ಹಾಗೂ ಸಂಕಲಿತ ಪ್ರತಿಗಳಲ್ಲಿ ಒಂದು ಪದ್ಯ ದೊರೆಯುತ್ತಿದ್ದರೆ ಅದು ಖಂಡಿತವಾಗಿಯೂ 'ಕವಿಯ ಪದ್ಯ';

2. ಕೇವಲ ಕೆಲ ವಿಸ್ತೃತ–ಹಲವು ಪ್ರತಿಗಳಲ್ಲಿ ಮಾತ್ರ ದೊರೆಯುವ ಪದ್ಯ ಪ್ರಾಯಃ ಕವಿ-ಕೃತ; ಮತ್ತು

3. ಯಾವುದೇ ಒಂದು ಪ್ರತಿಯಲ್ಲಿ ಮಾತ್ರ ದೊರೆಯುತ್ತಿದ್ದರೆ ಆ ಪದ್ಯ ಖಂಡಿತವಾಗಿಯೂ ಪ್ರಕ್ಷಿಪ್ತ.

—ಕೇವಲ ಸಂಗ್ರಹ ಪದ್ಧತಿಯ ಪ್ರತಿಗಳನ್ನು ಒಪ್ಪಿಕೊಂಡರೂ ಕವಿಗೆ ಅನ್ಯಾಯವಾಗುತ್ತದೆ; ವಿಸ್ತೃತ ಪದ್ಧತಿಯ ಪ್ರತಿಗಳನ್ನೇ ಒಪ್ಪಿಕೊಂಡರೂ ಅಪಚಾರವಾಗುತ್ತದೆ. ಉದಾಹರಣೆಗೆ ಹಳೆಯದಾದ ಸಂಗ್ರಹ ಪದ್ಧತಿಯ 'ಕ' ಪ್ರತಿಯನ್ನೇ ಸರಿಯಾದ ಪ್ರತಿ ಎಂದಿಟ್ಟುಕೊಂಡರೆ ಅದರಲ್ಲಿ

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ ।
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥[11]

ಎಂಬ ಪದ್ಯವೇ ಇಲ್ಲ![12] ಕ್ರಿ. ಶ. 1554 ರ ಅತ್ಯಂತ ಪ್ರಾಚೀನ (?) (ಕನ್ನಡ ಅಧ್ಯಯನ ಸಂಸ್ಥೆ-ಮೈಸೂರು) 'ಕ' ಪ್ರತಿಯಲ್ಲಿ ಇಲ್ಲವೆಂದ ಮಾತ್ರಕ್ಕೆ ಇದು ಪ್ರಕ್ಷಿಪ್ತವಾಗಬೇಕಿಲ್ಲ. ಖ ಟ ಜ ಣ ದ ಪ ವ–ಇಷ್ಟು ಪ್ರತಿಗಳಲ್ಲಿದೆ.[13] ಅಷ್ಟೇ

10 ಈ ನಿಯಮವಿಟ್ಟುಕೊಂಡರೂ ಅವೇ ಪದ್ಯಗಳಲ್ಲಿನ ಭಿನ್ನಪಾಠಗಳು ಓದುಗನಿಗೆ ತಲೆಬೇನೆ ತರುವಷ್ಟು ವಿಪರೀತವಾಗಿವೆ. ಗೊಂದಲಕ್ಕೆ ಈಡು ಮಾಡುತ್ತವೆ.

11 ಮಹಾಭಾರತ (ಸಂ. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್—ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಪ್ರಕಟಣೆ—ಮೈ.ಸ.ಸ.ಅ. ಇ.ಪ್ರ.) ಪೀಠಿಕಾಸಂಧಿ, ಪದ್ಯ 19

12 'ಆದಿಪರ್ವ' (ಸಂ. ಕೆ. ಆರ್. ಶೇಷಗಿರಿ—ಕನ್ನಡ ಅಧ್ಯಯನ ಸಂಸ್ಥೆ. ಮೈ.ವಿ.ವಿ. ನೋಡಿ : ಪೀಠಿಕಾಸಂಧಿ.)

13 ಶ್ರೀ ಕೆ. ಆರ್. ಶೇಷಗಿರಿಯವರ 'ಆದಿಪರ್ವ'ದ ಹಸ್ತಪ್ರತಿಯ ಕರಡಿನಿಂದ ಈ ವಿಷಯವನ್ನು ಸಂಗ್ರಹಿಸಿರುವೆ.

ಅಲ್ಲ, ಶಿವಾಜಿಯ ಸಮಕಾಲೀನನಾದ ಮಹಾರಾಷ್ಟ್ರದ ಮುಕ್ತೇಶ್ವರ ಕವಿ ಇದನ್ನು ಮರಾಠಿಗೆ ಅನುವದಿಸಿಕೊಂಡಿದ್ದಾನೆ :

ಮುಕ್ತೇಶ್ವರ ಕವೀಭಾರತ ।
ಟೀಕಾ ಪ್ರಾಂಜಳ ವ್ಯಕ್ತ ॥
ಜೇವೀ ವೇದಾಚಾ ಮಥಿತಾರ್ಥ ।
ಶ್ರುತಿಪುರಾಣೇ ಬೋಲತೀ ॥ 1 ॥

ಜೋರಾಜಾಯತೇ ವೀರರಸೂ ।
ವಿಪ್ರವರ್ಯಾ ತೇ ವೇದಸಾರಾಂಶೂ ॥
ತತ್ವಾರ್ಥ ಬೋಧ ಪರಮಹಂಸು ।
ಯೋಗೇಶ್ವರೂ ಭಾವಿತಿ ॥ 2 ॥

ಬುದ್ಧಿಯುಕ್ತೀಚಾ ಸಾಗರೂ ।
ಐಸೆಮಾನಿತೀ ಮಂತ್ರಿಚತುರೂ ॥
ವಿಲಾಸಿಯಾತೇ ಶೃಂಗಾರೂ ।
ಸುರತಾನಂದ ವರ್ಧಕಾರೂ ॥ 3 ॥

ವಿದ್ಯಾಪ್ರವೀಣ ಶಾಸ್ತ್ರಪಂಡಿತ ।
ಕೌತುಕೇ ಮಾನಿತೀ ಕರ್ಣಾಮೃತ ॥
ದೋಕ್ಷಾದೋಷೀಯಾಂಚೇ ಆರ್ತ ।
ಪುರವೀ ಗಂಗೇ ಸಾರಿಖೇ ॥ 4 ॥

ಪರ್ವತಾ ಮಾಜೀ ಕನಕಮೇರೂ ।
ತಡಾಗಾ ಮಾಜೀ ಕ್ಷೀರಸಾಗರೂ ॥
ಮಹಾರಾಷ್ಟ್ರಾಸೀ ಕಾವ್ಯಗುರೂ ।
ಹಾ ಗೌರವೂಯೇ ಗ್ರಂಥೀ ॥ 5 ॥ [14]

—ಸಭಾಪರ್ವ, 14–18

—ಈ ಪದ್ಯಗಳನ್ನು ನೋಡಿದಾಗ ಕನ್ನಡದ ಪದ್ಯ ಮರಾಠಿಗೆ ಹೋಗಿದೆ ಯೆಂದು ನಮಗೆ ತೋರುತ್ತದೆ. ಮರಾಠಿಯಿಂದಲೇ ಕನ್ನಡಕ್ಕೆ ಅನುವದಿಸಿಕೊಂಡಿದ್ದರೆ ಅದರಲ್ಲಿನ ಮಿಕ್ಕ ವಿಷಯಗಳೂ ಕನ್ನಡಕ್ಕೆ ಬರುತ್ತಿದ್ದವು. ಮುಕ್ತೇಶ್ವರನ ಪ್ರತಿಭೆ ಕುಮಾರವ್ಯಾಸನಿಗೆ ಸಮನಾದುದಲ್ಲ. ಕಾರಣ ಕನ್ನಡದಿಂದಲೇ ಮರಾಠಿಗೆ ಹೋಗಿದೆ ಯೆಂದರೆ ತಪ್ಪಾಗದು. ಇನ್ನು 'ಕ' ಪ್ರತಿಯಲ್ಲಿನ ಹತ್ತು ಪದ್ಯಗಳು[15] ಮಾತ್ರ ಕವಿಯವು, ಮಿಕ್ಕವು ಅಲ್ಲವೆಂದು ಹೇಳಲು ಬರುವುದಿಲ್ಲ. ಹೀಗೆಂದಾಕ್ಷಣ ಶ್ರೀ ಶೇಷಗಿರಿ ಅವರು ತೋರಿಸಿರುವ 17 ಪ್ರತಿಗಳಲ್ಲಿನ ಪೀಠಿಕಾ ಸಂಧಿಯ ಒಟ್ಟು 97

14 ಡಾ. ಸದಾನಂದ ನಾಯಕ. 'ವೈದಿಕ ಪುರಾಣಗಳು', ಪು. 51-52

15 ಕೆ. ಆರ್. ಶೇಷಗಿರಿ. 'ಆದಿಪರ್ವ', ಪೀಠಿಕಾಸಂಧಿ. ಪು. (3-5).

ಪದ್ಯಗಳೂ[16] ಕುಮಾರವ್ಯಾಸ ಕೃತ ಎಂದು ನಮ್ಮ ಭಾವನೆಯಲ್ಲ. ಪೀಠಿಕಾಸಂಧಿಯಲ್ಲಿ ಕೇವಲ ಎರಡೇ ಪದ್ಯಗಳನ್ನುಳ್ಳ 'ಡ' ಪ್ರತಿ 'ಕ' ಪ್ರತಿಗಿಂತಲೂ ಹೆಚ್ಚು ವಿಶ್ವಸನಾರ್ಹವೆಂದು ವಾದಿಸಿ 'ಕ' ಪ್ರತಿಯಲ್ಲಿನ ಉಳಿದ ಎಂಟು ಪದ್ಯಗಳು ಪ್ರಕ್ಷಿಪ್ತ ಎಂದೂ ವಾದಿಸಬಹುದು. ಅರ್ಥಾತ್ ನಮ್ಮ ಪ್ರಕಾರ 'ಡ' ಪ್ರತಿಕಾರನು ಹೇಗೆ ಸಂಗ್ರಹಕಾರನೋ ಅದೇ ಪ್ರಕಾರ 'ಕ' ಪ್ರತಿಕಾರನೂ ಸಂಗ್ರಹಕಾರ. ಇನ್ನು ಕನ್ನಡ ನಾಡಿನಲ್ಲಿ ಗದಗು, ರಾಯಚೂರು, ಬಿಜಾಪುರ, ಧಾರವಾಡ, ಗುಲ್ಬರ್ಗ-ಮೊದಲಾದ ಸ್ಥಳಗಳಲ್ಲಿ ಸಂಚರಿಸಿದರೆ 'ಕ' ಪ್ರತಿಗಿಂತಲೂ ಪುರಾತನ ಪ್ರತಿಗಳು ದೊರೆಯುವ ಸಂಭವವಿದೆ. ಕಪಟರಾಳ ಕೃಷ್ಣರಾಯರ ಬಳಿ ಕುಮಾರವ್ಯಾಸ ಭಾರತದ 13ನೆಯ ಶತಮಾನದ 'ವಿರಾಟಪರ್ವ' ಪ್ರತಿ ಇದ್ದುದಾಗಿ ಬರೆದಿದ್ದಾರೆ.[17] ಗುಲ್ಬರ್ಗ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ 'ವಿರಾಟಪರ್ವ' ಬೇರೆಯಾಗಿದೆಯೆಂಬುದಕ್ಕೆ ಕಾರಣವೆಂದರೆ ಜನತೆಯಲ್ಲಿ ಅದಕ್ಕೆ ಒಂದು ವಿಶೇಷ ಆದರವಿದೆ. ಇದಕ್ಕೆ ಕಾರಣ, ಕೆಲವರು ಆ ಪರ್ವವನ್ನು ಓದಿದರೆ 'ಮಳೆ ಬರುತ್ತದೆಂಬ ಒಂದು ಮೂಢಭಕ್ತಿಭಾವನೆಯನ್ನು ತಳೆದಿದ್ದಾರೆ! ಇರಲಿ. ಅತಏವ 'ಕ' ಪ್ರತಿಯೇ ಈಗ ಕೆಲವರು ತಿಳಿದಿರುವಂತೆ ಅತ್ಯಂತ ಪ್ರಾಚೀನ ಹಸ್ತಪ್ರತಿಯಾಗದು. ಅರ್ಥಾತ್ ಅದರಲ್ಲಿರುವುದು ಮಾತ್ರ ಕವಿಯ ಕೃತಿ, ಮಿಕ್ಕುದು ಅಲ್ಲವೆಂಬ ಭಾವನೆ ಸಲ್ಲದೆಂದು ನಮ್ಮ ಅಭಿಪ್ರಾಯ.

ಕುಮಾರವ್ಯಾಸ ಕವಿಯ ಕಾಲ ನಿರ್ಧಾರಕ್ಕೆ ನಮಗೆ ಆತನ ಗ್ರಂಥವೇ ಮೊದಲ ಸಾಧನ. ಅಂತೆಯೆ ಆ ಗ್ರಂಥವಲ್ಲಿನ ಐತಿಹಾಸಿಕಾಂಶಗಳನ್ನು ಆಧರಿಸಿ ಕವಿಯ ಕಾಲವನ್ನು ನಿರ್ಧರಿಸಲು ಪ್ರಯತ್ನಿಸಿದ ದಿ. ಗೋವಿಂದ ಪೈ ಅವರ ಮಾರ್ಗ ಸರಿಯಾದುದೇ. ಆದರೆ ಪೈಅವರು ಕ್ರಮಬದ್ಧವಾಗಿ ವಸ್ತುವನ್ನು ಗುರುತಿಸಲು ಪ್ರಯತ್ನ ಪಡದೆ ಗ್ರಂಥದ ಮಧ್ಯದ ವಿಷಯಗಳನ್ನು ಹಿಡಿದು ಹೊರಟುದು ಅವರನ್ನು ದಾರಿ ತಪ್ಪಿಸಿತು. ಭಾರತೀಯ ಗ್ರಂಥಕಾರರು ಸಾಮಾನ್ಯವಾಗಿ ತಮ್ಮ ಗ್ರಂಥದ ಆದ್ಯಂತಗಳಲ್ಲಿ ಚಾರಿತ್ರಕ ವಿವರಗಳನ್ನು ಕೊಡುವುದು ಸಂಪ್ರದಾಯ.[18] ಹಾಗೆ ಕುಮಾರವ್ಯಾಸನು ಕೊಟ್ಟಿರುವನೇ ಎಂದು ಪರೀಕ್ಷಿಸಲು ಶ್ರೀ ಪೈ ಪ್ರಯತ್ನಿಸಲಿಲ್ಲ.[19]

---

16 ಅದೇ ಗ್ರಂಥ, ಪೀಠಿಕೆ, ಪು. L–Li

17 ದಿ. 10-8-1974ರ ಕಪಟರಾಳಕೃಷ್ಣರಾಯರ ಪತ್ರ.

18 ಡಾ. ಜೆ. ಎಫ್. ಫ್ಲೀಟ್‌ರ 'ಎಪಿಗ್ರಫಿ'ಯ ಅನುವಾದ 'ಶಾಸನಶಾಸ್ತ್ರ ಪರಿಚಯ' (ಅನು: ಸಿ. ಪಿ ಕೆ.) ಪು. 41–44

19 ಇದೇ ತಪ್ಪನ್ನು ಶ್ರೀಯುತರು ಕ. ಜೈಮಿನಿ ಭಾರತದ ಕರ್ತೃ ಲಕ್ಷ್ಮೀಶನ ಸಂಬಂಧದಲ್ಲೂ ಮಾಡಿದ್ದಾರೆ. ಲಕ್ಷ್ಮೀಶನ ಕಾಲವನ್ನು ಕಲ್ಬುರ್ಗಿ ಜಿಲ್ಲೆಯ ಸಾಹಿತ್ಯಸಮ್ಮೇಳನದ ಸ್ಮರಣ ಸಂಚಿಕೆ 'ಶರಣ ಸರೋಜ' ದಲ್ಲಿ ನಿರ್ಧರಿಸಿ ಕೊಟ್ಟಿದ್ದೇನೆ.

ಇನ್ನು

"ಹೀಗೆ ಈತನು [ಕುಮಾರವ್ಯಾಸನು] ಸೇಉಣ ರಾಜ್ಯದಲ್ಲಿ ಇದ್ದನಾದರೂ ಹೊಯ್ಸಳ ರನ್ನು ಮರೆಯದೆ ತನ್ನ ಕಾವ್ಯದಲ್ಲಿ ಅಭಿಮಾನದಿಂದ ಗೌರವಾಸ್ಪದವಾದ ಸಂದರ್ಭಗಳಲ್ಲಿ ಹೆಸರಿಸಿ ರುವದರಿಂದ, ಈತನಿಗೆ ಈತನ ಕಾಲದ ಈತನ ನಾಡಿನವರಿಗೆ ಹೊಯ್ಸಳರಲ್ಲಿ ಇನ್ನೂ ಶಾನೆ ಅಭಿ ಮಾನವಿದ್ದಿರಬೇಕು, ಇನ್ನೂ ಶಾನೆ ಗೌರವವಿದ್ದಿರಬೇಕು. ಆದುದರಿಂದ ಈತನಿದ್ದ ನಾಡು ಹೊಯ್ಸಳರ ಕೈತೊಲಗಿ ಇನ್ನೂ ಹೆಚ್ಚು ವರ್ಷಗಳಾಗಿರಲಾರವು. ಹೆಚ್ಚೆಂದರೆ 10–20 ವರ್ಷ ಗಳಾಗಿರಬಹುದಷ್ಟೇ. ಅಂದರೆ ಈತನು ಕ್ರಿ. ಶ. 1230–35 ರೊಳಗೆ ಇದ್ದಿರಬೇಕು"...... "ಹೊಯ್ಸಳರನ್ನು ಸಮುದ್ರ ಹೋಸಲದವರು ಎಂದಿರುವಂತೆ ಸೇಉಣರನ್ನು ಅವರ ರಾಜಧಾನಿ ಯಿಂದ ದೇವಗಿರಿಯವರು ಎನ್ನಬಹುದಿತ್ತಷ್ಟೇ. ಆದರೆ ಹಾಗನ್ನದೆ ಅವರಿಗೆ ಹೊಯ್ಸಳ ರಾಜ್ಯ ದಲ್ಲಿ ವಾಡಿಕೆಯಾಗಿರುವ ಹೆಸರಿನಿಂದ ಸೇಉಣ (ಸಾಪಣ–ಉದ್ಯೋಗ, XI. 22) ರೆಂದೇ ಈತನು ಹೇಳಿರುವುದರಿಂದ ಈತನ ಕಾಲದಲ್ಲಿ ಈತನಿದ್ದ ದೇಶದಲ್ಲಿ ಜನರ ದೈನಿಕ ಮಾತುಕಥೆಯಲ್ಲಿ ಹೊಯ್ಸಳರ ಸಂಸ್ಕೃತಿ ಇನ್ನೂ ಪೂರ್ಣವಾಗಿ ಕಾಲುತೆಗೆದಿಲ್ಲ ಸೇಉಣರ ಸಂಸ್ಕೃತಿ ಇನ್ನೂ ದೃಢವಾಗಿ ತಲೆದೋರಿಲ್ಲ. ಎಂದಾಗುವುದರಿಂದಲೂ ಈತನ ಕಾಲದಲ್ಲಿ ಗದುಗು ಸೇವುಣರ ಕೈಸೇರಿ ಹೆಚ್ಚಾದರೆ 10–12 ವರ್ಷಗಳಾಗಿರಬೇಕಷ್ಟೇ, ಅಂದರೆ ಈತನು ಕ್ರಿ. ಶ. 1230-35ರೊಳಗೆ ಇದ್ದಿರಬೇಕು. —ಇವೆಲ್ಲ ಕಾರಣಗಳಿಂದ ಕುಮಾರವ್ಯಾಸನು ಕ್ರಿ.ಶ. 13ನೆಯ ಶತಕದ ಪೂರ್ವಾರ್ಧದಲ್ಲಿ ಇದ್ದಿರ ಬೇಕೆಂದು ನಿಷ್ಪನ್ನವಾಗುತ್ತದೆ...... ಇತ್ಯಾದಿ.[20]

ಇಲ್ಲಿನ ಶ್ರೀ ಪೈಯವರ ಕೆಲವು ತಿಳಿವಳಿಕೆಗಳು ಸಂಪೂರ್ಣ ತಪ್ಪು, ಉದಾಹರಣೆಗೆ:

1 ಹೊಯ್ಸಳರು ಗದುಗಿನ ಭೂಭಾಗವನ್ನು ಆಳಿದುದು ಸುಮಾರು ಕೇವಲ ೨೧ ವರ್ಷಗಳು (ಕ್ರಿ.ಶ. 1192 ರಿಂದ 1213 at the most) ಮಾತ್ರ. ತತ್ಪೂರ್ವದಲ್ಲಿ ಆಗಲಿ, ತದನಂತರದಲ್ಲಾಗಲಿ ಆ ನಾಡಿನಲ್ಲಿ ಹೊಯ್ಸಳರ ಸಂಸ್ಕೃತಿ ನೆಲೆಯೂರಿ ನಿಂತಿದ್ದಿಲ್ಲ. ಕಾರಣ ಅವರ ಸಂಸ್ಕೃತಿ ಪ್ರಭಾವ ಕವಿಯ ಮೇಲೆ ಆಗಿತ್ತು ಎನ್ನುವುದು ಸರಿಯಲ್ಲ.

2 ಮೂಲತಃ ಕನ್ನಡಿಗರಾದ ಸೇಉಣರನ್ನು ಮರಾಠರೆಂದು ಭಾವಿಸಿದುದು ಸರಿಯಲ್ಲ.[21]

3 'ಸೇವಣ' ಎಂಬ ಸ್ಪಷ್ಟರೂಪವೇ ಗ್ರಂಥವಲ್ಲಿ ದೊರೆಯುತ್ತಿರುವಾಗ 'ಸಾಹಣ' ಎಂಬ ಅಪಶಬ್ದವನ್ನು ಹಿಡಿದು ಸಾಧಿಸ ಹೊರಟುದು, ಅವರನ್ನು ಕವಿ 'ಯಾದವ' ಎಂಬ ಹೆಸರಿನಿಂದ ಕವಿ ಗುರುತಿಸಲ್ಲ ಎಂದು ಮುಂತಾಗಿ ಹೇಳಿದುದು. ಇತ್ಯಾದಿ. ಅವರ ತಪ್ಪುಗಳನ್ನೇ ಹೆಕ್ಕಿ ತೆಗೆಯುವುದು ನಮ್ಮ ಉದ್ದೇಶವಾದುದಲ್ಲ ವಾದುದರಿಂದ ಇಷ್ಟು ಸಾಕು. ಇನ್ನು ಆರ್. ನರಸಿಂಹಾಚಾರ್, ದ. ರಾ. ಬೇಂದ್ರೆ,

---

20 ದಿ. ಗೋವಿಂದ ಪೈ : 'ಕುಮಾರವ್ಯಾಸನ ಕಾಲ ವಿಚಾರ', 'ಕುಮಾರವ್ಯಾಸ ಪ್ರಶಸ್ತಿ', ಪು. 20–21

21 (a) ಡಾ. ಎ. ವ್ಹಿ. ನರಸಿಂಹಮೂರ್ತಿ 'ಕರ್ನಾಟಕದ ಸೇವುಣರು'

(b) ಸೇಉಣರ ಉಗಮ, ಮಾನವಿಕ ಕರ್ನಾಟಕ, ಸಂಪುಟ 3, ಸಂಚಿಕೆ 1, ಪು. 15-22

ರಂ. ಶ್ರೀ. ಮುಗಳಿ, ರಾ. ಸ್ವಾ. ಪಂಚಮುಖಿ ಮತ್ತು ಇತರ ಹೆಜ್ಜೆಗಳನ್ನೇ ತುಳಿದ ಇತರರು ಹಿಡಿದ ಮಾರ್ಗಮಾತ್ರ ಶುದ್ಧ ತಪ್ಪೆಂದು ಹೇಳಲೇಬೇಕು.[22] ಇವರೆಲ್ಲರವೂ ಪೂರ್ವಗ್ರಹಪೀಡಿತ ಹೇಳಿಕೆಗಳು. ಹಲವಾರು ಹಸ್ತಪತ್ರಿಕೆಗಳನ್ನು—ಕವಿಯ ಕೃತಿಯನ್ನು ಆಮೂಲಾಗ್ರವಾಗಿ ನೋಡದೇ ಇತ್ತ ನಿರ್ಣಯಗಳು. ಸ್ವಕಪೋಲ ಕಲ್ಪನೆಗಳಿಗೆ ಪ್ರಾಶಸ್ತ್ಯಕೊಟ್ಟು, ವಸ್ತುನಿಷ್ಠ ವಿಮರ್ಶೆ ಮಾಡದೆಯಿದ್ದ ಪ್ರಯತ್ನಗಳು. ಈ ಆರೋಪಗಳಿಗೆ ಮುಂದೆ ಬರಲಿರುವ ನಮ್ಮ ವಿವರಣೆಯಲ್ಲಿ ಸಾಕ್ಷಿ ದೊರೆಯುತ್ತವೆ.

ಕುಮಾರವ್ಯಾಸ ಕವಿಯ ಕಾಲವನ್ನು ನಿರ್ಧರಿಸುವಲ್ಲಿ ನಮಗೆ ಮೊದಲ ಸಾಧನ, ಆತನ ಕೃತಿ ; ಅನಂತರ ಬಾಹ್ಯ ಪ್ರಮಾಣಗಳು.

I

ಕುಮಾರವ್ಯಾಸನು ಗ್ರಂಥದ ಮುಕ್ತಾಯದಲ್ಲಿ ಸಾಮಾನ್ಯವಾಗಿ ಕೊಡುವ ಕಾಲದ ವಿಷಯವನ್ನು ಬರೆದಿಲ್ಲ. ಹಾಗೆ ಆತ ತಿಳಿಸಿದ್ದರೆ ಇಷ್ಟು ಗೊಂದಲ ಆಗುತ್ತಿದ್ದಿಲ್ಲ ಎಂಬುದೇನೊ ನಿಜ. ಆದರೆ ಗ್ರಂಥದಲ್ಲಿ ಕವಿಯ ಕಾಲವನ್ನು ಖಚಿತವಾಗಿ ನಿರ್ಧರಿಸಲು ಆಧಾರಗಳಿಲ್ಲವೆಂಬುದು ಮಾತ್ರ ಸರಿಯಲ್ಲ. ಗ್ರಂಥ ಎಂದಾಗ ಕುಮಾರವ್ಯಾಸನು ಬರೆದುದು ಒಂದೋ ಎರಡೋ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಏಕೆಂದರೆ 'ಭಾರತ' ಹಾಗೂ 'ಐರಾವತ' ಎಂಬ ಎರಡು ಗ್ರಂಥಗಳನ್ನು ಕುಮಾರವ್ಯಾಸನು ಬರೆದನೆಂದು ಕೆಲವರ ವಾದ. 'ಐರಾವತ' ಇದನ್ನು ನಿತಕ್ಷಕ್ಕೆ ಜರೆದರೆ 'ಭಾರತ'ದಿಂದ ಅದು ಭಿನ್ನವಾದ ಗ್ರಂಥವೇ ಅಲ್ಲವೆಂಬುದು ನಮ್ಮ ನಿರ್ಧಾರ. ಇದಕ್ಕೆ ಕಾರಣ–ಈಗ ಅಚ್ಚಾಗಿರುವ 'ಐರಾವತ'ದ ಪ್ರತಿ[23]. 'ಐರಾವತ' ಗ್ರಂಥ ಹಾಗೂ ಅದರಲ್ಲಿ ಪೂಜ್ಯ ಪಂಚಮುಖಿಯವರು ಕೊಟ್ಟ ಪರಿಶಿಷ್ಟ - ಇವುಗಳು ಗಮನಾರ್ಹವಾದ ವಿಷಯಗಳು. 'ಐರಾವತ' ಪ್ರತ್ಯೇಕ ಗ್ರಂಥವಲ್ಲದೆನ್ನುವದಕ್ಕೆ ಮೂರು ಕಾರಣಗಳಿವೆ :

(1) ಇಂತಹ ಒಂದು ಕೃತಿ ಬರೆದುದಾಗಿ ಕವಿಯು ಎಲ್ಲೂ ಹೇಳಿಲ್ಲ.

(2) ಈ ಕೃತಿ ಸ್ವತಂತ್ರ ಎನ್ನುವದಕ್ಕೆ ಇದರಲ್ಲಿ ಕುಮಾರವ್ಯಾಸನ ಸಂಪ್ರದಾಯ ಇಲ್ಲ :

---

22 ಇವರ ಮಾರ್ಗವನ್ನೇ ತುಳಿದ ಎನ್. ಅನಂತರಂಗಾಚಾರ್ (ಐ. ಬಿ. ಎಚ್.–ಕುಮಾರವ್ಯಾಸ ಪು. 3-12) ಅವರದೂ ತಪ್ಪುಎಂದು ಬೇರೆ ಹೇಳಬೇಕಾಗಿಲ್ಲ. ಇವರೆಲ್ಲರೂ ಹಿರಿಯರೂ ಪೂಜನೀಯರೂ ಎಂಬುದರ ಅರಿವು ನನಗಿದೆ. ಆದರೆ ಸಂಶೋಧನೆಯಲ್ಲಿ ವ್ಯಕ್ತಿಪೂಜೆ—ಅಂಧಶ್ರದ್ಧೆ–ಸಲ್ಲದು, ಎಂಬುದೂ ಸರಿಯಲ್ಲವೆ ?

23 ಐರಾವತ - (ಸಂ. ಆರ್. ಎಸ್. ಪಂಚಮುಖಿ) - ಇದನ್ನು *ಶಾ.ಶ. 1752 (1830 A.D.) ಹಾಗೂ *ಶಾ.ಶ. 1767 (1845 A.D.) ಬರೆಯಲಾದ ಎರಡು ಹಸ್ತ ಪ್ರತಿಗಳ ಆಧಾರದಿಂದ ಅಚ್ಚಿಟ್ಟಿದ್ದಾರೆ.

(a) ಪೀಠಿಕಾ ಸಂಧಿ - ಇಲ್ಲವೆ ಪದ್ಯಗಳು - ಇಲ್ಲದುದು,

(b) ನಮಃಕ್ರಿಯೆಯ ಪ್ರಾರಂಭದ 'ಶ್ರೀ'ಕಾರಯುಕ್ತ ಪದ್ಯ ಹಾಗೂ ಮುಕ್ತಾಯದ 'ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ...'ಐರಾವತದೊಳ' ಎಂಬ ಗದ್ಯ ಇತ್ಯಾದಿಗಳು ಭಾರತದಂತೆ ಇಲ್ಲ.

(c) ಕುಮಾರವ್ಯಾಸ ಭಾರತದ ಒಂದು ಸಂಧಿಯ ಹಾಗೆ ಅದು ಇದೆ. ಈಗ ದೊರಕಿರುವ ಭಾರತದ ಅನೇಕ ಹಸ್ತ ಪ್ರತಿಗಳಲ್ಲಿ 'ಐರಾವತ' ಎಂಬ ಸಂಧಿ ಇದ್ದೇ ಇದೆ. ಆ 'ಐರಾವತ' ಸಂಧಿಯೇ ಇನಿತು ವಿಸ್ತೃತಗೊಂಡು ಯಾರ ಕೈವಾಡದಿಂದಲೊ ಮೂಲ ಗ್ರಂಥದಿಂದ ಸಿಡಿದು ನಿಂತಿದೆ ಎಂದು ಅದು ಸಾರುತ್ತದೆ. ಎರಡಕ್ಕೂ ಹೋಲಿಸಿದರೆ ಎರಡರಲ್ಲಿ ಅನೇಕ ಪದ್ಯಗಳು ಸಮಾನವೇ ಆಗಿವೆ![24]

(3) 'ಐರಾವತ' ಬೇರೆ ಕೃತಿ ಎಂಬ ವಾದ ಇತ್ತೀಚಿನದು. ಹಸ್ತಪ್ರತಿಗಳು ಇದನ್ನೇ ಸಾರುತ್ತವೆ. ಅವುಗಳ ತೇದಿಯನ್ನು ನೋಡಿ ಮತ್ತು ಅಲ್ಲಿನ ಜಾಬಾಳ ಶೈಲಿಯನ್ನು ಗಮನಿಸಿ.

ಕುಮಾರವ್ಯಾಸನು ತನ್ನ ಗ್ರಂಥಗಳ ಬಗೆಗೆ ಹೇಳಲೇಬೇಕೆಂಬ ಛಲವಾದಿಗಳು ನಾವಲ್ಲ. ಕುಮಾರವ್ಯಾಸನು ಹಲವು ಕೃತಿಗಳನ್ನು ಬರೆದಿರಬಹುದು. ಹಲವು ಭಾಷೆಗಳಲ್ಲೂ ಬರೆದಿರಬಹುದು. ಅದು ಸಂಶೋಧನೆಯಲ್ಲಿ ಹೊರಬರಬೇಕಾದ ಸಂಗತಿ.[25] ಅದರೆ ಮೇಲಿನ ನಮ್ಮ ಆಕ್ಷೇಪಗಳು 'ಐರಾವತ' ಕುಮಾರವ್ಯಾಸ ಭಾರತದಲ್ಲಿನ ಆದಿಪರ್ವದ ಅಂಗ ಎಂದು ನಿರ್ಧರಿಸುತ್ತವೆ–ಅಷ್ಟೇ. ಅಂತೆಯೆ ಕವಿಯ ಕಾಲ ಮತ ಮುಂತಾದುವುಗಳ ನಿರ್ಧಾರಕಾಂಶಗಳಿಗೆ ಸದ್ಯ ಭಾರತವೇ ಊರು ಗೋಲು–ಆಧಾರ ಸ್ತಂಭ–ಸಂಶೋಧಕನಿಗೆ !

ಕುಮಾರವ್ಯಾಸ, ತನ್ನ ಕಾಲದ ಬಗೆಗೆ ಪೀಠಿಕಾ ಭಾಗದಲ್ಲಿ ಸ್ಪಷ್ಟವಾದ ನಿರ್ದೇಶವಿತ್ತಿದ್ದಾನೆ. ಆ ವಸ್ತು ಭೀಷ್ಮಪರ್ವದಿಂದ ನಮಗೆ ಖಚಿತವಾಗುತ್ತದೆ. ಅಂತೆಯೇ ಭೀಷ್ಮಪರ್ವದ ವಿಷಯವನ್ನು ಮೊದಲು ವಿಶ್ಲೇಷಿಸುವುದು ಲೇಸು : ಕವಿ ಯುದ್ಧದ ವಿಷಯಗಳನ್ನು ವಿವರಿಸುವಾಗ ಸಮಕಾಲೀನ ವಿಷಯಗಳನ್ನೇಬರೆದಿದ್ದಾನೆ. ಕೆಲವು ಮೂಲ ಮಹಾಭಾರತದಲ್ಲಿ ಇಲ್ಲದುದೇ ನಾವು ಹೀಗೆ ಹೇಳುವದಕ್ಕೆ ಕಾರಣ. ಅಂತಹ ಪದ್ಯಗಳಲ್ಲಿ ಕೆಳಗಿನದೊಂದು :

---

24 ಅದೇ ಗ್ರಂಥ. ಪರಿಶಿಷ್ಟದಲ್ಲಿ 1-7 ಪುಟಗಳ ಹೋಲಿಕೆಯ ಪಟ್ಟಿಯನ್ನು ನೋಡಿ. ನೂರಾರು ಪದ್ಯಗಳು ಒಂದೇ ಆಗಿರುವಾಗ – ಕುಮಾರವ್ಯಾಸನ ಸಂಪ್ರದಾಯ ಇಲ್ಲದಿರುವಾಗ - ಅದೆಂತು ಹೊಸ ಕೃತಿ ?

25 ಇದರ ಕಿಂಚಿತ್ ವಿವರ ಮುಂದೆ ಬರಲಿದೆ

ಉಱುಬಿ ಹೊಯಿದರು ಕೈದಣಿಯೆ ಹೊ
ಕ್ಕೆಱಗಿದರು ನಿಪ್ಪಸರದಲಿ ಮು
ಕ್ಕು ಱುಕಿದರು ತಲೆಮಿದುಳ ಜೊಂಡಿನ ಜುಱುತ ಜೋಡುಗಳ ।
ತಱಿದು ಬಿಸುಟರು ಖಗನಿಕರಕಾ
ರ್ದಿಱಿದು ಕಾಲನ ಬನಕೆ ರಕುತದ
ಕೆಱೆಯ ತೂಬೆತ್ತಿದ್ದರು ಸೇವಣ ರಾಯ ರಾವುತರು ॥26

ಈ 'ಭೀಷ್ಮಪರ್ವ ದಿ॥ ಬಿ. ಎಂ. ಶ್ರೀ., ದಿ॥ ಟಿ. ಎಸ್. ವೆಂಕಣ್ಣಯ್ಯ, ಡಿ. ಶ್ರೀನಿವಾಸಾಚಾರ್, ದಿ॥ ತೀ. ನಂ. ಶ್ರೀ. ಹಾಗೂ ದಿ॥ ಡಿ. ಎಲ್. ನರಸಿಂಹಾಚಾರ್ ಇವರಿಂದ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ. ಇದನ್ನು ಎಂಟು ಪ್ರತಿಗಳಿಂದ ಪರಿಷ್ಕರಿಸಿ ಅವರು ಪ್ರಕಟಿಸಿದ್ದಾರೆ. ಈ ಎಂಟು ಪ್ರತಿಗಳಲ್ಲಿ ಆರು ಪ್ರತಿಗಳಲ್ಲಿ 'ಸೇವಣ' 'ಟ' ಪ್ರತಿಯಲ್ಲಿ 'ಸಿಂಹಳ' ಹಾಗೂ 'ದ' ಪ್ರತಿಯಲ್ಲಿ 'ಹಮ್ಮೀರ' ಎಂಬ ಪಾಠಗಳಿವೆ, 'ದ' ಪ್ರತಿ ಅತ್ಯಂತ ಪ್ರಾಚೀನವೂ ಅಲ್ಲ. ಮೇಲಾಗಿ 'ಹಮ್ಮೀರ' ಇದು ಇದೇ ಪರ್ವದ, ಇದೇ ಸಂಧಿಯ, ಇದೇ ಸಂದರ್ಭದ ಪದ್ಯವೊಂದರಲ್ಲಿ ಈ ಮೊದಲೊಮ್ಮೆ ಬಂದಿದೆ.[27] ಕಾರಣ ಇದು ಕೇವಲ ಅಪ ಪಾಠ. ಇನ್ನು ಆರು ಪ್ರತಿಗಳಲ್ಲಿನ (ಪ್ರಾಚೀನ 'ಕ' ಪ್ರತಿ ಮೊದಲು ಮಾಡಿಕೊಂಡು) 'ಸೇವಣ ಸರಿಯಾದ ಪಾಠ ಎಂದು ಹೇಳಿದರೆ ತಪ್ಪಾಗದು. ಕವಿಯ ರೂಪಕ–ಆರ್ದಿಱಿದು ಕಾಲನ ಬನಕೆ ರಕುತದ ಕೆಱೆಯ ತೂಬೆತ್ತಿದರು ಸೇವಣರಾಯ ರಾವುತರು - ಇದು ಬಹು ಮನೋಜ್ಞವಾಗಿದೆ. ಆ ಸೇಉಣ ಸೈನ್ಯವನ್ನು ನೋಡಿದ ವ್ಯಕ್ತಿ ಮಾತ್ರ ಅದನ್ನು ಹೀಗೆ ವರ್ಣಿಸಲು ಸಾಧ್ಯ. ಸೇಉಣರ ನಾಡಿನ ಗದುಗಿನಲ್ಲಿದ್ದ ಕುಮಾರವ್ಯಾಸ ಅವರ ಸೈನ್ಯವನ್ನು ನೋಡಿದ್ದನೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಗದುಗಿನ ಪ್ರಾಂತ, ಸೇಉಣರ–ಹೊಯ್ಸಳರ ಕದನ ಭೂಮಿಯ ರಂಗಸ್ಥಳವೇ ಆಗಿದ್ದುದರಿಂದ ಆತನು ಅದನ್ನು ನೋಡಿದುದು ಸ್ವಾಭಾವಿಕ. ಸೇಉಣರ ಎರಡನೆಯ ಸಿಂಘಣ ಹಾಗೂ ಆತನ ಪುತ್ರ ಜೈತುಗಿ[28]–ಆಜೈತುಗಿಯ ಪುತ್ರ ಕೃಷ್ಣ – ಇವರ ಕಾಲದಲ್ಲಿ ದಕ್ಷಿಣದಲ್ಲಿ ತನ್ನ

26 (a) ಭೀಷ್ಮಪರ್ವ (O.R.I. Edition) ಸಂಧಿ-4, ಪದ್ಯ 67, ಪು. 67-68 (2ನೆಯ ಮುದ್ರಣ)

(b) ಮೈ. ಸಂ. ಸಂಸ್ಕೃತಿ ಪ್ರಚಾರಶಾಖೆಯ ಪ್ರಕಟಣೆ – ಪು. 368-ಭೀಷ್ಮಪರ್ವ ಸಂಧಿ-4; ಪದ್ಯ-67, ಇಲ್ಲಿ ಶಕಟ ರೇಫ ಇಲ್ಲ.

27 ಭೀಷ್ಮಪರ್ವ, ಸಂಧಿ-4, ಪದ್ಯ-62, ಪು. 66-ವೈರಿಬಲವನು ಘಾಸಿಮಾಡಿದರೊಗ್ಗಿನಲಿ ಹಮ್ಮೀರ ರಾವುತರು.

28 ಜೈತುಗಿ ರಾಜನಾಗಿ ಆಳದಿದ್ದರೂ ಯುವರಾಜನಾಗಿ, ತಂದೆಗೆ ಸಮರ್ಥ ಪುತ್ರನಾಗಿ ರಾಜ್ಯದ ದಕ್ಷಿಣ ಭೂಭಾಗದಲ್ಲಿ ರಾಜನಾಗಿ ಆಡಳಿತ ನಡೆಸಿದ. ಆತನ ಬಗೆಗೆ ಇತಿಹಾಸಕಾರರು ವಿಶೇಷ ಬರೆದಿಲ್ಲವೆಂಬುದರ ಅರಿವು ನನಗಿದೆ. ಆತ ಸಿಂದವಾಡಿಗೆ ರಾಜನಾಗಿದ್ದನೆನ್ನುವದಕ್ಕೆ ಸಾಕ್ಷಿ : S. I. I. Vol. IX, Part I, No. 367, 1229 A.D.

ಹಿರಿಮೆಗರಿಮೆಗಳ ತುದಿಯನ್ನು ಮುಟ್ಟಿತ್ತು. ಅವರ ಸೈನ್ಯದ ಆ ವಿಪುಲ ಸಂಗ್ರಾಮಗಳನ್ನು ಕವಿ ಚೆನ್ನಾಗಿ ಬಲ್ಲವನಾಗಿದ್ದ. ಅವರ ಸೇನಾಧಿಪತಿಗಳಲ್ಲಿ ಒಬ್ಬನಾದ ಬೀಚಣ 'ಯಮಸೆಂದೇ' ಪ್ರಖ್ಯಾತನಾಗಿದ್ದ : He [Bichana] was a Vaisya by caste and has been described as a Yama in destruction and a Chanakya or Vishnugopa in political intelligence.[29] ಆ ಯಮನನ್ನೆ ಇಲ್ಲಿ ರೂಪಿಸಲಾಗಿದೆಯೋ ಏನೋ ಇದು ವಿಚಾರಣೀಯ. ಬೀಚಣನು ಬನವಾಸಿ ನಾಡಿಗೆ ಅಧಿಪತಿಯಾಗಿದ್ದ. ಕಾವೇರಿಯ ತಟದ ಮೇಲೆ (ಅತ ಸೇಉಣರ ಪರವಾಗಿ ಹೋರಾಡಿ) ಜಯಸ್ತಂಭವನ್ನು ನೆಡಿಸಿದನಂತೆ! ಆ ರಣ ಕೋಲಾಹಲದಲ್ಲಿ ರಕ್ತದ ಕಾಲುವೆ ಹರಿದಿದ್ದರೆ ಆಶ್ಚರ್ಯವೇನಲ್ಲ. ಅದು, ಕವಿಯ ರೂಪಕದಲ್ಲಿ ಅಭಿವ್ಯಕ್ತಗೊಂಡಿದೆ ಎಂದು ನಮಗೆ ತೋರುತ್ತದೆ. ಇನ್ನು 'ಟ' ಪ್ರತಿಯ ಪಾಠ 'ಸಿಂಹಳ' ಎಂಬುದು ಕೂಡ ಬಹಳ ಗಮನಾರ್ಹವಾದ ವಿಷಯವಾಗಿದೆ. ಸಿಂಹಳ ಎಂಬ ಪಾಠವನ್ನು ಸ್ವೀಕರಿಸಿದರೆ ಅದು ಸಿಂಘಣನನ್ನು (ಕ್ರಿ. ಶ. 1200–1247) ಸೂಚಿಸಿ ಕವಿಯ ಕಾಲವನ್ನು ಇನ್ನಷ್ಟು ನಿಖರವಾಗಿಸುತ್ತದೆ. ದೇವಗಿರಿಯ ಯಾದವ ಸಿಂಘಣನನ್ನು 'ಸಿಂಘಣ'[30] 'ಸಿಂಹಣ'[31] ಮತ್ತು 'ಸಿಂಹಳ'[32] ಎಂದು ಕರೆಯುತ್ತಿದ್ದುದು ರೂಢಿಯ. 'ಸಿಂಹಳ' ಎಂದರೆ 'ಸಿಂಹಳ'ದೇಶ ಎಂಬ ಅರ್ಥವನ್ನು ಸ್ವೀಕರಿಸಿ ನಮ್ಮ ವಿವರಣೆಯನ್ನು ಅಲ್ಲಗಳೆಯಬಹುದು. ಆದರೆ ಆರು ಪ್ರತಿಗಳಲ್ಲಿನ 'ಸೇವಣ' ಎಂಬ ಪಾಠವನ್ನು ತಿರಸ್ಕರಿಸುವುದು ಸಂಶೋಧನೆಯಲ್ಲಿ ಸರಿಯಾದ ಮಾರ್ಗವಲ್ಲ. 1554 ರ ಪ್ರಾಚೀನ ಪ್ರತಿಯಲ್ಲೂ 'ಸೇವಣ' ಎಂಬುದೇ ಇದ್ದುದು

---

29 Dr. A. S. Altekar : 'The Yadavas of Seuna Desa' -*Early History of The Deccan* (Ed. Yazdani), p. 541 ಅವರಿಗೆ ಆಧಾರ JBBRAS Vol. XV – ಇದರಲ್ಲಿ ಅಚ್ಚಾದ ಹರ್ತಲೆಯ ಶಾಸನ.

30 ಡಾ॥ ಎ. ವಿ. ನರಸಿಂಹಮೂರ್ತಿ : ಕರ್ಣಾಟಕದ ಸೇವುಣರು, ಅಧ್ಯಾಯ – 2

31 Dr. A. S. Altekar : *Early History of The Deccan* (Ed. Yazdani) –Simhana, p. 541.

32 "ಯಾದವ ನಾರಾಯಣ ಪ್ರತಾಪ ಸಿಂಹಳದೇವ...ಇತ್ಯಾದಿ"–SII, Vol. IX, Part I, No. 366, p. 383
ಸಿಂಹಣ > ಸಿಂಹಳ – ಇಲ್ಲಿನ 'ಣ > ಳ' ಆದುದು ವರ್ಣವ್ಯತ್ಯಯದಿಂದ ಣ > ಳ – ಆಗುವುದು ನನಗೆ ಮೊದಲು ತಿಳಿದುದು ಪೂಜ್ಯ ತೀ. ನಂ. ಶ್ರೀ. ಅವರು ಶಬ್ದಮಣಿದರ್ಪಣಕ್ಕೆ ಬರೆಸಿದ ಟಿಪ್ಪಣಿಗಳಿಂದ. ಡಿ. ಆರ್. ಜಿ. ಪಟವಾರಿ ಅವರ ಟಿಪ್ಪಣಿಗಳು ನನಗೆ ಗುರುಗಳಾದ ಪ್ರೊ. ಪಾಂಡುರಂಗಾಚಾರ್ಯ ವೈದ್ಯರಿಂದ ದೊರೆತಿತ್ತು. – ಅದು ಅವರಲ್ಲಿಯೇ ಇದೆ. ಈ ಟಿಪ್ಪಣಿ ಸೂತ್ರ 39ಕ್ಕೆ (ಡಿ. ಎಲ್. ಎನ್. ಪ್ರತಿ) ಸಂಬಂಧಿಸಿದೆ. ಮಣಲ್ > ಮಳಲ್ ಆಗುತ್ತದೆ. (ನೋಡಿ : ಅಭಿಧಾನ ರತ್ನಮಾಲೆ – ನಾಗವರ್ಮನ ಟೀಕೆ–ಪು. 110-48) ಮದುವಣಗಿತ್ತಿ > ಮದುವಳಗಿತ್ತಿ ಆಗುತ್ತದೆ (ಪಂಪಭಾರತ ನಿಘಂಟು) ಪಂಪಭಾರತ.

ತ್ಯಾಜ್ಯವಲ್ಲ. ಅತಏವ ಏಳು ಪ್ರತಿಗಳಿಂದ ಈ ಪದ್ಯ ಕವಿ ಕೃತವೆಂದೂ ಸೇವಣರಿಗೆ ಸಂಬಂಧಪಟ್ಟಿದೆಯೆಂದೂ ನಿರ್ಧಾರವಾಗುತ್ತದೆ. ನಮಗಂತು ಈ ವಿಷಯದಲ್ಲಿ ಸಂದೇಹವಿಲ್ಲ.

ಈಗ ಕವಿ ಕೃತಿಯ ಪೀಠಿಕಾ ಸಂಧಿಯ ಪದ್ಯವೊಂದನ್ನು ನಿಕಷಕ್ಕೆ ಬರೆದರೆ ಕವಿಯ ಕಾಲವೆಂಬ ಚಿನ್ನದ ಸ್ವರೂಪ ತಂತಾನೆ ಸ್ಪಷ್ಟವಾಗುತ್ತದೆ. ಆ ಪದ್ಯ ವೆಂದರೆ :

ವಂದಿತಾಮಳಚರಿತನಮರಾ
ನಂದ ಯದುಕುಲಚಕ್ರವರ್ತಿಯ
ಕಂದ ನತ ಸಂಸಾರಕಾನನ ಘನದವಾನಳನು ।
ನಂದ ನಂದನ ಸನ್ನಿಭನು ಸಾ
ನಂದದಿಂದಲೇ ನಮ್ಮುವನು ಕೃಪೆ
ಯಿಂದ ಸಲಹುಗೆ ದೇವ ಜಗದಾರಾಧ್ಯ (ವೇದವ್ಯಾಸ) ಗುರುರಾಯ ॥[33]

ಈ ಕವಿತೆ ಮೇಲುನೋಟಕ್ಕೆ ಪರಮಾತ್ಮ ಸ್ವರೂಪಿಯಾದ ಕೃಷ್ಣನಿಗೆ ಅನ್ವಯವಾಗು ವಂತೆ ತೋರಿದರೂ ಪದ್ಯದಲ್ಲಿನ ಪ್ರತಿಪದವನ್ನೂ ಪರೀಕ್ಷಿಸಿದರೆ ಅದು ಸರಿಯಲ್ಲ ವೆಂದು ಗೊತ್ತಾಗುತ್ತದೆ. ಇಡಿಯ ಕಾವ್ಯದ ತುಂಬ ಕವಿ ಭಗವಂತನ ಅವತಾರ ವಾದ ಕೃಷ್ಣನನ್ನು ಯದುಕುಲ ಚಕ್ರವರ್ತಿಯೆಂದು ವಿವರಿಸಿಲ್ಲ. ವಸ್ತುತಃ ವಸುದೇವನು ಯದುಕುಲ ಚಕ್ರವರ್ತಿ ಆಗಿದ್ದಿಲ್ಲ. ಅಂತೆಯೆ ಈ ಪದ್ಯವನ್ನು ಆ ವಸುದೇವ ದೇವಕಿಯರ ಕಂದ ಕೃಷ್ಣನಿಗೆ ಅನ್ವಯಿಸದೆ ದೇವಗಿರಿಯ ಯಾದವ ಚಕ್ರವರ್ತಿಗಳ ಅನ್ವಯಕ್ಕೆ ಅನ್ವಯಿಸುವುದು ಸರಿಯಾದ ಸಂಗತಿ. ಕವಿಯ ಆಶಯ ಅದೇ ಎಂದು ನಮಗೆ ತೋರುತ್ತದೆ. ಒಂದು ವೇಳೆ ಆ ಕೃಷ್ಣನಿಗೆ ಅನ್ವಯಿಸಿದರೆ ಈ ಪದಗಳನ್ನು ಕವಿ ವೃಥಾ ಬರೆದನೆಂದೂ ಆ ವೇದವ್ಯಾಸ ಮುನಿಯೂ ಕೃಷ್ಣನೂ ಒಂದೇ ಆಗಿರುವಾಗ ಇಬ್ಬರನ್ನೂ ಭಿನ್ನ ಭಿನ್ನ ಎಂದು ಭಾವಿಸುವುದು ಅಶಾಸ್ತ್ರೀಯವೂ ಅಭಾಸವೂ ಆಗಿ ತೋರುತ್ತದೆ. ಇನ್ನು 'ನಂದ ನಂದನ ಸನ್ನಿಭ' ಎಂಬಲ್ಲಿ ನಂದನ ಮಗ ಕೃಷ್ಣನಿಗೆ ಸಮ ಎಂಬಲ್ಲಿ ಈ ವ್ಯಕ್ತಿ ಆ ಕೃಷ್ಣನಿಂದ ಬೇರೆ ಆದವನೂ ಎಂಬುದೂ ಸ್ಪಷ್ಟವೇ ಇದೆ. ಆ ಕೃಷ್ಣನಿಗೆ ಸನುನಾದ ಇನ್ನೊಬ್ಬ ಕೃಷ್ಣನೆಂಬುದು ಕವಿಯ

---

33 ಕು. ಮಹಾಭಾರತ (ಮೈ. ಸಂ. ಸ. ಪ್ರ. ಶಾ. ಪ್ರಕಟಣೆ), ಪೀಠಿಕಾಸಂಧಿ, ಪದ್ಯ-12 ಈ ಪದ್ಯ ಕೆಲವು ಪತ್ರಿಗಳಲ್ಲಿ ಇಲ್ಲದುದರ–ಕೆಲವು ಪಾಠಾಂತರಗಳನ್ನು ಹೊಂದಿದುದರ ಅರಿವು ನನಗಿದೆ. ಖಗಜಟದಪಲ–ಪ್ರತಿಗಳಲ್ಲಿ 'ಕ'ದ ಹಾಗೆ ಪ್ರಾಚೀನವೇ ಆದ 'ಜ' ಪ್ರತಿಯ ಪಾಠವನ್ನು ನಾನು ಸ್ವೀಕರಿಸಿದ್ದೇನೆ. ಕೆಲವರು ಈ ಪದ್ಯವನ್ನು ಮಧ್ವಾಚಾರ್ಯರಿಗೆ ಅನ್ವಯಿಸಿ ದ್ದಾರೆ ಪಾಠಾಂತರಗಳಿಂದ. ಆದರೆ ಮಧ್ವಾಚಾರ್ಯರು 'ನಂದನಂದನ ಸನ್ನಿಭ' ಆಗಲು ಸಾಧ್ಯವಿಲ್ಲ. ಅಂತೆಯೇ ಅದು ಸರಿಯಾದ ಪಾಠವಲ್ಲ.

ಆಶಯ. ಅಂತೆಯೇ ಯಾದವ ಚಕ್ರವರ್ತಿಯಾದ ಕೃಷ್ಣನಿಗೆ ಅನ್ವಯಿಸಿದರೆ ಎಲ್ಲ ದೃಷ್ಟಿಯಿಂದಲೂ ಅರ್ಥ ಸರಿಹೋಗುತ್ತದೆ. ಯಾವ ಅಭಾಸವೂ ಆಗುವುದಿಲ್ಲ. ವಿಜಯನಗರದ ಕೃಷ್ಣದೇವರಾಯನಿಗೆ ಏಕೆ ಅನ್ವಯಿಸಬಾರದು ಎಂಬವರಿಗೆ ನಮ್ಮ ಉತ್ತರವಿಷ್ಟು :

(1) ವಿಜಯನಗರದ ಕೃಷ್ಣದೇವರಾಯನು ಯಾದವ ಚಕ್ರವರ್ತಿ ಆಗಿದ್ದಿಲ್ಲ. ಹಾಗೆ ಹೇಳುವುದಕ್ಕೆ ಆಧಾರಗಳಿಲ್ಲ.

(2) ಕಾವ್ಯದಲ್ಲಿ ಎಲ್ಲಿಯೂ ವಿಜಯನಗರದ ಪ್ರಸ್ತಾಪವೇ ಇಲ್ಲ. ಭೌಗೋಲಿಕ ವಿವರಗಳು ಚರಿತ್ರೆಯ ಕಣ್ಣಷ್ಟೇ ? ಆದುದರಿಂದ ಹಾಗೆ ಅರ್ಥೈಸುವುದು ಸರಿಯಾದ–ಶಾಸ್ತ್ರೀಯ ಬಗೆಯ ಪದ್ಧತಿಯಲ್ಲ. ನಮಗೆ ತಿಳಿದಂತೆ ಕವಿ ಇಲ್ಲಿ ದೇವಗಿರಿಯ ಯಾದವ ಚಕ್ರವರ್ತಿ ಕೃಷ್ಣನನ್ನೆ ಕುರಿತು ಬರೆದಿದ್ದಾನೆ. ಆತ ಆ ಯಾದವ ಚಕ್ರವರ್ತಿ[34] ಸಿಂಘಣನ ತರುವಾಯ ತನ್ನ ತಂದೆ ಮರಣಹೊಂದಿರಲು ಅಜ್ಜನ ಸ್ಥಾನದಲ್ಲಿ ಪಟ್ಟಕ್ಕೆ ಬರುತ್ತಾನೆ. ಏಕೆಂದರೆ ತಂದೆ ಇಮ್ಮಡಿಜೈತುಗಿ ಯುವರಾಜನಾದವನು[35] ತಂದೆಯು ಬದುಕಿರುವಾಗಲೇ ಪರಂಧಾಮನನ್ನು ಐದಿದ್ದ. ಈ ಕೃಷ್ಣನ ತಂದೆ ಜೈತುಗಿ ಸಿಂದವಾಡಿಗೆ ರಾಜನಾಗಿದ್ದನೆಂದೂ ಆ ಶಾಸನಾಧಾರದಿಂದ ಹೇಳಬಹುದಾಗಿದೆ. ಅಗ ಆತ ವಾಸಿಸುತ್ತಿದ್ದ ರಾಜಧಾನಿ ಅಥವಾ ಊರು ಸಿಂದವಾಡಿಯ ರಾಜಧಾನಿಯೇ ಆಗಿತ್ತು. ಅದು ಯರಂಬರ್ಗೆ ಎಂದು ಸ್ವೀಕರಿಸಿದರೆ[36] ಆ ಸಿಂದವಾಡಿಯಲ್ಲೇ ಇದ್ದ 'ಗದಗು' ಅಲ್ಲಿದ್ದ ಕವಿ, ಸೇಯುಣರನ್ನು ಚೆನ್ನಾಗಿ ತಿಳಿದಿದ್ದರು ಎಂದರೆ ತಪ್ಪಾಗದು. ಗದುಗಿಗೂ ಯರಂಬರ್ಗೆಗೂ ವಿಹಗಪಥದಂತರ ಕೇವಲ 16 ಮೈಲು. ಸೇಉಣರ ಕಾಲಕ್ಕೆ 'ಗದುಗು' ಒಂದು ದೊಡ್ಡ ಅಗ್ರಹಾರವಾಗಿತ್ತು. ಗದುಗಿನ ಮಹಾಜನ ಯರಂಬರ್ಗೆ ಹಾಗೂ ಇಡಿಯ ಸೇವಉಣರ ರಾಜ್ಯಕ್ಕೆ ರಾಜದಾನಿಯಾದ ದೇವಗಿರಿಯೊಂದಿಗೆ ಸಂಪರ್ಕ ಹೊಂದಿದ್ದರೆ ಆಶ್ಚರ್ಯ ಪಡೆಯಬೇಕಾಗಿಲ್ಲ. ಕುಮಾರವ್ಯಾಸನಂತು ದೇವಗಿರಿಯನ್ನು ಬಲ್ಲವನಾಗಿದ್ದ. ಭೀಷ್ಮ ಪರ್ವದ ಇನ್ನೊಂದು ಪದ್ಯ ಈ ದಿಶೆಯಲ್ಲಿ ವಿಶೇಷ ಬೆಳಕನ್ನು ಬೀರುತ್ತದೆ. ಅದೆಂದರೆ :

---

34 SII Vol. XX. Nos. 189 and 206 ಮುಂತಾದ ಶಾಸನಗಳನ್ನು ನೋಡುವುದು.

35 ಅದೇ ಸಂಪುಟ IX ಭಾಗ-1, ನಂ. 367–1229 A.D.

36 ಯರಂಬರ್ಗೆ (ಯಲಬುರ್ಗಿ) ಸಿಂದರಿಗೆ ರಾಜಧಾನಿಯಾದುದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಸಿಂದರು ಸೇವುಣರ ಸಾಮಂತರಾಗಿದ್ದರು. ಸಿಂದ ವಂಶದ ಮುರಾರಿ ಕೇಶವ ಸೇಉಣರ ಜೈತುಗಿಯ ಮಂತ್ರಿಯೂ ಆಗಿದ್ದ : ಶ್ರೀಮದ್ಯಾದವವಾರ್ಧಿವರ್ದ್ಧನ ವಿಧುಃ ಜೈತುಗಿ ಕ್ಷ್ಮಾಪತಿಃ ತಸ್ಯಾಮಾತ್ಯವರೋ ಮುರಾರಿರಮುನಾದೇಶಾಧಿಪಃ ಕೇಶವಃ ।
—ಮೇಲಿನ ಶಾಸನ, ಅ. ಟ. 35

ದೇವ ನಿಮ್ಮಯ ಖ್ಯಾತಿಪರಿಯಂ
ತಾವು ಲಕ್ಷ್ಯವೆ ಜೀಯ ನೊರಜಿನ
ದೇವಗಿರಿಯಂತರವೆ ಸಂಭಾವನೆಯೆ ನನ್ನೊಡನೆ ॥
ದೇವಮುನಿಗಳ ನಗೆಯ ನೋಡದಿ
ದಾವುದುಚಿತವ ಮಾಡಿದಿರಿ ಮಹಿ
ಮಾವಲಂಬವ ಮಱೆದುದಕೆ ನಗೆ ಬಂದುದೆನಗೆಂದ ॥[37]

ಮೇಲು ನೋಟಕ್ಕೆ ಇದು ಭೀಷ್ಮರಿಗೆ ಸಂಬಂಧಪಟ್ಟಿದೆ. ಆದರೆ "ಕೇವಲ ಸರಳನೇರ ಪ್ರತ್ಯಕ್ಷ ರೂಪಕಗಳನ್ನೇ ಅಲ್ಲದೆ ಸಂಕೀರ್ಣವೂ ಕೊಂಚ ಗಹನವೂ ಆಲೋಚನಾ ಗ್ರಾಹ್ಯವೂ ಆದ ಮಿಶ್ರ ಬಗೆಯನ್ನೂ ಸೃಜಿಸಬಲ್ಲದು. ನಾರಣಪ್ಪನ ಧೀಶಕ್ತಿ''[38] ಎಂಬ ಪ್ರೊ. ಎಸ್. ವಿ. ರಂಗಣ್ಣನವರ ಮಾತನ್ನು ಗಮನಕ್ಕೆ ತಂದುಕೊಂಡರೆ ಕವಿಯ ಜೀವನದಲ್ಲಿನ ಒಂದು ಸಂಗತಿ ಇಲ್ಲಿ ಅಭಿವ್ಯಕ್ತಿಯನ್ನು ಪಡೆದಿದೆಯೆಂದು ನಮಗೆ ತೋರುತ್ತದೆ. ''ದೇವ ಗಿರಿಯಂತರವೆ? ಸಂಭಾವನೆಯೆ ನನ್ನೊಡನೆ?'' ಈ ಮಾತುಗಳು ಕವಿಗೆ ಅನ್ವಯುವಾಗುವಷ್ಟು ಸಮರ್ಪಕವಾಗಿ ಭೀಷ್ಮರಿಗೆ ಅನ್ವಯವಾಗು ವುದಿಲ್ಲ. ಇಲ್ಲಿನ ''ದೇವಗಿರಿ'' ಎಂದರೇನು? ಈ ಪದ್ಯಕ್ಕೆ ಪ್ರೊ. ಕೀರ್ತಿನಾಥ ಕುರ್ತುಕೋಟಿ ಅವರು ಕೇವಲ ಭೀಷ್ಮರಿಗೆ ಅನ್ವಯಿಸಿ ಅರ್ಥ ಬರೆದಿದ್ದಾರೆ; ಅದು ಮೇಲಿನ ಪದರು ಮಾತ್ರ. ಮತ್ತೆ ಶ್ರೀಯುತರು 'ದೇವಗಿರಿ' ಇದನ್ನು 'ದೇವರಿಗೆ' ಎಂದು ಪಾಠವನ್ನೂ ಮಾರ್ಪಡಿಸಿಕೊಂಡಿದ್ದಾರೆ. ಆದರೆ ಮಾರ್ಪಡಿಸಿ ಅರ್ಥ ಹೇಳುವುದು ನಮಗೆ ಸರಿತೋರದು. ಕವಿಯ ಪಾಠ ಹಲವು ಪ್ರತಿಗಳಿಂದ 'ದೇವಗಿರಿ' ಎಂಬುದೇ ಇರುಪದರಿಂದ ಇಲ್ಲಿ ಹುದುಗಿದ ಅರ್ಥ ಬೇರೆಯೆ ಎಂದು ನಮಗನಿಸು ತ್ತದೆ. ಮೇಲು ನೋಟಕ್ಕೆ–ಭೀಷ್ಮರಿಗೆ ಅನ್ವಯಿಸಿ ಹೇಳುವಲ್ಲಿ ಕುರ್ತುಕೋಟಿ ಯವರ ಅರ್ಥ ಸಂಪೂರ್ಣ ಸರಿಯಾಗಿದೆ.[39] ಆದರೆ ಕವಿತೆಯ ಭಾವ ಅಷ್ಟರಲ್ಲಿಯೆ ಮುಗಿಯುವುದಿಲ್ಲ. ಅದು ಏನೋ ಬೇರೆ ವಿಷಯುವನ್ನು ವ್ಯಂಜಿಸುತ್ತದೆ. ಅದನ್ನು ಹೀಗೆ ಗ್ರಹಿಸಬಹುದೆಂದು ಹೇಳಬಹುದು :

(1) ಕುಮಾರವ್ಯಾಸ ಯೋಗೀಂದ್ರನಿಗೂ ಯಾದವ ಚಕ್ರವರ್ತಿ ಕೃಷ್ಣನಿಗೂ ಯಾವುದೋ ಬಗೆಯ ಸಂಪರ್ಕವಿದ್ದಿತು. ಆತ ಕವಿಯನ್ನು ದೇವಗಿರಿಗೆ ಆಹ್ವಾನಿ ಸಿರಬಹುದು. ಸಂಭಾವನೆಯ ಆಶೆಯನ್ನು ತೋರಿಸಿರಬಹುದು. ಅಲ್ಲಿಗೆ ಹೋಗಲು ಪ್ರಾಯಃ ನಿರಾಕರಿಸಿದಾಗ ಚಕ್ರವರ್ತಿ ಕೊಂಚ ಸಿಟ್ಟಾಗಿರಬಹುದು. ಇದೆಲ್ಲವನ್ನೂ ನೋಡಿದ ಆ ಯೋಗೀಂದ್ರ ಆ ರಾಜನ ವರ್ತನೆಯ ಬಗೆಗೆ ಇನಿತು ನಗದೆ ಏನು

---

37 ಭೀಷ್ಮಪರ್ವ (O R I Edition) ಸಂಧಿ 6, ಪದ್ಯ-38

38 'ಕುಮಾರವ್ಯಾಸ' (ಐ. ಬಿ. ಎಚ್. ಪ್ರ.) ಪು. 125

39 ಅದೇ ಗ್ರಂಥ, ಪು. 98

ಮಾಡಿಯಾನು? ತಾನೆ ಇನಿತು ಸಹನೆ ತೆಗೆದುಕೊಂಡು ನಯವಾದ ರೀತಿಯಲ್ಲಿ ಘರ್ಷಣೆಯ ಘಟನೆಯನ್ನು ತಪ್ಪಿಸಿರಬಹುದು. ಅದೆಲ್ಲ ಇಲ್ಲಿ ಸಂಕೀರ್ಣ ರೂಪ ಕಳೆದು ನಿಂತಿದೆಯೆಂದು ನಮಗೆ ಭಾಸವಾಗುತ್ತದೆ.

(2) ದೇವರು [ರಾಜನು] ಮನಸ್ಸು ಮಾಡಿದರೆ ದೇವಗಿರಿ ಅದೆಷ್ಟು ಅಂತರದ್ದು? ನೊರಜು ಹಾರಿ ಮುಟ್ಟುವ ಅಂತರದ್ದು![40] ರಾಜನು ಸಿಟ್ಟಿಗೇರಿದರೆ ಪ್ರಜೆಗಳು ಅದು ಹೇಗೆ ಸುಖದಿಂದ ಬದುಕುವರು? ರಾಜನ ಸಂಭಾವನೆಯನು ಸ್ವೀಕರಿಸಿ ದೇವಗಿರಿಗೆ ಹೋಗಿ ನೆಲಸಿದರೆ ಉಳಿದ ಮುನಿವೃಂದ ಆತನನ್ನು ನೋಡಿ ನಗದೆ? ರಾಜನ ಸಂಭಾವನೆಯ ಪ್ರಸಂಗ ಕಿಂಚಿತ್ ಔಚಿತ್ಯ ಮೀರಿದಂತೆ ಕವಿಗೆ ಭಾಸವಾಗಿದೆ—ಇದೆಲ್ಲ ವಿಚಾರಣೀಯ ಸಂಗತಿ.

ಈ ಒಂದು ಚೌಕಟ್ಟಿನಲ್ಲಿ, ಪೀಠಿಕಾ ಸಂಧಿಯ ಮೇಲೆ ಪ್ರಸ್ತಾಪಿಸಿದ "ವಂದಿತಾಮಳಚರಿತ...............ಗುರುರಾಯ" ಎಂಬ ಪದ್ಯದ ಚಿತ್ರವನ್ನು ಬಿಡಿಸಬೇಕು. ಆಗ ಕವಿಯ ಕಾಲಚಿತ್ರದ ಸ್ವರೂಪ ಸರಿಯಾಗಿ ಮೂಡಿ ನಿಲ್ಲುತ್ತದೆ: ವಂದಿತನೂ ಅಮಲಚರಿತ್ರನೂ ಅಮರರಿಗೆ ಆನಂದವನ್ನು ಕೊಡುವವನೂ (ಮರಣ ಹೊಂದಿದ) ಆ ಯದುಕುಲ ಚಕ್ರವರ್ತಿ (ಜೈತುಗಿ), ಆತನ ಕಂದ (ಪುತ್ರ) ಯಾರು ಬಡವರ ಬೇಡಿಕೆಗಳನ್ನು ಪೂರೈಸಿ ಆ ಬಡತನವನ್ನು ದವಾಗ್ನಿಯ ಹಾಗೆ ದಹಿಸಬಲ್ಲನೊ ಮತ್ತು ಆ ನಂದನಂದನ ಸನ್ನಿಭನೋ (ಕೃಷ್ಣನಿಗೆ ಸಮನಾದ ಕೃಷ್ಣ) ಆತ ಸಾನಂದದಿಂದ ನಮ್ಮನ್ನು ಸಲಹಲಿ (ರಾಜನಾಗಿದ್ದ ಆತ ರಕ್ಷಿಸಲಿ) ಎಂದು ಗುರುದೇವನಲ್ಲಿ ಕವಿಯು ಪ್ರಾರ್ಥಿಸಿದ್ದಾನೆ. ರಾಜನಿಗೂ ಸ್ವತಃಕ್ಕೂ ಸ್ವಸ್ತಿಯನ್ನು ಕೋರಿದ್ದಾನೆ. ಈ ಪದ್ಯ, ಈ ಗ್ರಂಥ, ಕ್ರಿ. ಶ. 1229ರ ಅನಂತರವಲ್ಲೆ ರಚಿತವಾಯಿತೆಂದು ಸೂಚಿಸುತ್ತದೆ. ಏಕೆಂದರೆ ಆ ವರ್ಷದಲ್ಲಿ ಕೃಷ್ಣನ ತಂದೆ ಜೈತುಗಿ ಬದುಕಿದ್ದ.[41] ಕೃಷ್ಣನು ರಾಜ್ಯವಾಳಿದುದು ಕ್ರಿ.ಶ. 1247 ರಿಂದ ಕ್ರಿ.ಶ. 1261ರ ವರೆಗೆ ಎಂಬುದು ಸ್ಪಷ್ಟವೇ ಇರುವದರಿಂದ ತನ್ಮಧ್ಯದ ಕಾಲದಲ್ಲಿ ಗ್ರಂಥವನ್ನು ರಚಿಸಲಾಯಿತು. ಅರ್ಥಾತ್ ಕವಿ, ಈ ಕಾಲದಲ್ಲಿ ಬದುಕಿದ್ದನೆಂದು ನಿರ್ಣಯಿಸಬಹುದು. ಇನ್ನು ಗದುಗಿನ ವಾತಾವರಣವೂ ನಮ್ಮ ಈ ನಿರ್ಣಯಕ್ಕೆ ತುಂಬ ಬೆಂಬಲವನ್ನು ನೀಡುತ್ತದೆ.

ಗದುಗು ಆಗಲೇ ಸೂಚಿಸಿದಂತೆ ಒಂದು ಪುರಾತನ ಅಗ್ರಹಾರ. ಅಲ್ಲಿ ಕ್ರಿ.ಶ. 1037ಕ್ಕೂ ಮುಂಚೆಯೇ ವೀರನಾರಾಯಣ ಹಾಗೂ ತ್ರಿಕೋಟೇಶ್ವರ ದೇವಸ್ಥಾನ

---

40 'ನೊರಜಿನ ದೇವಗಿರಿ' ಎಂದರೆ 'ಹೀನ ದೇವಗಿರಿ' ಎಂದೂ ಅರ್ಥಮಾಡಬಹುದು. ಆದರೆ ತನ್ನ ಪ್ರೀತಿಯ ಯದುಕುಲ ಚಕ್ರವರ್ತಿಯ ಕಂದ ನಂದನಂದನ ಸನ್ನಿಭ ಕೃಷ್ಣನ ರಾಜಧಾನಿಯನ್ನು ಕವಿ ಹಾಗೆ ಕಂಡಿರಲಾರ.

41 SII Vol. IX, Pt. I, No. 367, 1229 A.D.

ಗಳು ನಿರ್ಮಾಣಗೊಂಡಿದ್ದವು.[42] ವೀರನಾರಾಯಣ ದೇವಸ್ಥಾನ 'ಬಾರಹನಾರಾಯಣ' ಎಂದು ಕೆಲಕಾಲ ಪ್ರಚಲಿತವಿದ್ದು ಪ್ರಾಯಃ 'ವೀರನಾರಾಯಣ' ಎಂಬ ಬಿರುದಿನ[43] 5ನೆಯ ಭಿಲ್ಲಮನ ಕಾಲಕ್ಕೆ ಪೂಜಿತನಾಗಿ ಆ ಹೆಸರಿನಿಂದ ಮುಂದೆ ಪ್ರಸಿದ್ಧಿಯನ್ನು ಹೊಂದಿರಬೇಕು. ಸಿಂಘಣನಕಾಲಕ್ಕಂತೂ 'ವೀರನಾರಾಯಣ' ಎಂಬ ಹೆಸರೇ ಪ್ರಚಲಿತವಿತ್ತು. ಕೆಲವರು ಭಾವಿಸಿರುವಂತೆ ಅದು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಳ್ಳಲಿಲ್ಲ.[44] ಮತ್ತೆ ಅಂತೆಯೆ 'ವೀರನಾರಾಯಣ' ಎಂಬ ಸಂಪ್ರದಾಯ ಹಾಗೂ ಶ್ರೀವೈಷ್ಣವ ಪದ್ಧತಿ ಅಲ್ಲಿಗೆ ಬಂದಿತು. ಎನ್ನುವಲ್ಲಿ ಕಿಂಚಿತ್ತೂ ಆಧಾರವಿಲ್ಲ. ಹೊಯ್ಸಳ ಸಂಸ್ಕೃತಿಯಿಂದಲೇ ವೀರನಾರಾಯಣನಲ್ಲ. ಕ್ರಿ. ಶ. 1007 ರ ಲಕ್ಕುಂಡಿಯ ಶಾಸನವೊಂದು ಶ್ರೀವೈಷ್ಣವರಲ್ಲದ ವೈಷ್ಣವ ಸಂಪ್ರದಾಯವೊಂದು ಆ ಭೂಭಾಗದಲ್ಲಿದ್ದಿತೆಂದು ತಿಳಿಸುತ್ತದೆ.[45] ಅವರನ್ನು 'ವೈಷ್ಣವ ಗೀತಿ ಮನೋಹರರು' ಎಂದೂ ಅದು ವರ್ಣಿಸಿದೆ. ಮತ್ತೆ ಸಿಂಘಣನ ಕಾಲದ ಗದುಗಿನ ಶಿಲಾಲೇಖವೊಂದರಲ್ಲಿನ ಗದುಗಿನ 'ಮಹಾಜನ'ದ ವರ್ಣನೆಯನ್ನು ಸ್ವಲ್ಪ ನೋಡಬೇಕು. ಅದು ಇಂತಿದೆ :

Lines

4 ಅಸ್ತಿ ದಕ್ಷಿಣಾ ಪಥೇ ಬೆಳ್ವಲ ತ್ರಿಶತ ಮಧ್ಯೇ ಕ್ರತುಕೋ[46] ನಾಮ ಮಹಾಗ್ರಹಾರಃ

5 ಶ್ರಿಯಃ [ಕಿ] ಳ ಸುರಭೂಪಾಳ ಚೂಡಾಮಣಿನಾ ಪಾಂಡುಕುಳತಿಳಕೇನ ಮಹಾ

6 ರಾಜ ಜನಮೇಜಯೇನ ಸರ್ಪ್ಪಯಾಗೇ ತಪೋ ವಿದ್ಯಾವೃತ್ತ ಸಂಪಂನೇಭ್ಯಃ ನಾನಾಗೋತ್ರೇ–

7 [ಭ್ಯಾಃ] ದ್ವಾಸಪ್ತ್ಯೈ ಬ್ರಾಹ್ಮಣೇಭ್ಯೋದತಃ । ತತ್ರ ಚ ನಿವಸಂತಿ ಸನ್ತತಾನುಷ್ಠೀಯಮಾನ............ಸ

8 ಮಸ್ತ ವೇದ ವೇದಾಂಗ ಮೀಮಾಂಸಾ ಸ್ಮೃತಿ ಪುರಾಣೇತಿಹಾಸ ಪಾರಂಗತಾಃ । ಸರ್ವ್ವ ಶಾಸ್ತ್ರ ಬ್ಯಾಖ್ಯಾತಾರಃ

---

42 B.K.I. Vol. I, Pt. I, No. 72 & Ep. Ind. Vol. XIX, p. 217

43 S.I.I. Vol. XX No. 173 and 174, pp. 214-217, ಆ ಸಂಪುಟದ ಪೀಠಿಕೆಯಲ್ಲಿನ 'ಯಾದವರು' ಎಂಬ ಭಾಗವನ್ನೂ ನೋಡಿ.

44 ಎಂ. ಎ. ದೊರೆಸ್ವಾಮಿ ಅಯ್ಯಂಗಾರ್. ಕುಮಾರವ್ಯಾಸ ಪ್ರಶಸ್ತಿಯಲ್ಲಿನ ಲೇಖನ ಪು. 25-70

45 B.K.I., Vol. I, Pt. I., No. 52, 1007 AD.

46 ಕ್ರತು=ಯಜ್ಞ. ಯಜ್ಞ ಮಾಡಿದ ಸ್ಥಳ–ಎಂದೂ ಜನರಲ್ಲಿ ವದಂತಿ ಇಂದಿಗೂ ಗದುಗಿನಲ್ಲಿದೆ. ಈ ವಿಷಯವನ್ನು ತಿಳಿಸಿದವರು ಡಾ॥ ಬಿ, ಬಿ. ರಾಜಪುರೋಹಿತ.

9 ಯಜನ ಯಾಜನಾಧ್ಯಯನಾಧ್ಯಾಪನದಾನ ಪ್ರತಿಗ್ರಹ ಷಟ್ಕರ್ಮ ನಿರತಾಃ।
ಮಹಾರಾಜ ಜನಮೇಜಯ ಸರ್ಪ

10 **ಯಾಗರ್ತ್ವಿಜಃ।** ಸಕಳ ಕಳಾ ಕುಶಲಾಃ ಶರಗಣಾಗತ ವಜ್ರಪಂಜರಾಯ ಮಾಣಾಃ।
ಆಸ್ರಿತಜನ ಕಲ್ಪವೃಕ್ಷಾಃ।

11 ಶ್ರೀ ತ್ರಿಕೋಟೇಶ್ವರ ದೇವ ಶ್ರೀಪಾದ ಪದ್ಮಾರಾಧಕಾಃ। **ಶ್ರೀ ವೀರನಾರಾಯಣ**
ದೇವ ಶ್ರೀಪಾದ ಪ್ರಸಾದಾಸಾದಿತ ಸಮ

12 ಸ್ತ [ಮಹಿ] ಮಾನೋ ದ್ವಿಜನ್ಮಾನಃ। –ಇತ್ಯಾದಿ.[47]

ಈ ಮಹಾಜನ ರಾಜಮಹಾರಾಜರುಗಳಾದ ಯಾದವ ಚಕ್ರವರ್ತಿ ಸಿಂಘಣ–ಜೈತುಗಿ ಕೃಷ್ಣ–ಮೊದಲಾದವರೊಂದಿಗೆ ಅದೂ ಅವರು ಹತ್ತಿರದಲ್ಲೇ ಯಲಬುರ್ಗಿಯಲ್ಲಿದ್ದಾಗ, ಗದುಗಿಗೆ ಬಂದಾಗ ಇನಿತು ಸಂಪರ್ಕ ಹೊಂದಿತ್ತೆಂದರೆ ತಪ್ಪಾಗದು. ಆ ರಾಜರುಗಳು ಗದುಗಿನಲ್ಲಿ ಬಂದು ಇದ್ದು ದಾನದತ್ತಿಗಳನ್ನು ಬಿಟ್ಟುದಕ್ಕೂ ಆಧಾರಗಳಿವೆ.[48] ಸಿಂಘಣನು ವೀರನಾರಾಯಣನ ದರ್ಶನವನ್ನು ಪಡೆದಿದ್ದನೆಂದರೆ ಯಾರೂ ವಿಸ್ಮಯ ವ್ಯಕ್ತಪಡಿಸಬೇಕಿಲ್ಲ. ಯರಂಬರಗೆಯಲ್ಲಿದ್ದ ಜೈತುಗಿ ಹಾಗೂ ಆತನ ಪುತ್ರ (ಯದುಕುಲ ಚಕ್ರವರ್ತಿಯ ಕಂದ) ಕೃಷ್ಣ ಅಲ್ಲಿಗೆ ದೇವತಾ ದರ್ಶನಕ್ಕೆ ಬಂದಿರಬಹುದು. ಅಂತಹ ಒಂದು ಸಂದರ್ಭದಲ್ಲಿ ಕುಮಾರವ್ಯಾಸ ಯೋಗೀಂದ್ರನಿಗೂ ಸಂಪರ್ಕ ಬಂದಿರಬಹುದು. ಗದುಗು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿನ ಉಪಲಬ್ಧ ಶಾಸನಗಳಿಂದ ಆ ಭಾಗದಲ್ಲಿ ಚಂದ್ರಭೂಷಣಯೋಗೀಂದ್ರ ಮೊದಲಾದ ಯೋಗೀಂದ್ರರ ಸಂಪ್ರದಾಯದವರು ಅಲ್ಲಿ ನೆಲಸಿ ನಿಂತಿದ್ದರೆನ್ನುವದಕ್ಕೆ ಆಧಾರಗಳಿವೆ. ಅದೇ ಸ್ಥಳದಲ್ಲಿ ದೊರೆತ ವಿಜಯನಗರ ರಾಜರ ಶಾಸನಗಳಿಂದ ಅಲ್ಲಿ ಇಂತಹ ವಾತಾವರಣ ಇದ್ದಿತೆಂದು ಹೇಳಲು ಇದುವರೆಗೆ ಒಂದು ಆಧಾರವೂ ಗದುಗಿನಲ್ಲಿ ದೊರಕಿಲ್ಲ. ಕೃಷ್ಣದೇವರಾಯನಿಗೂ ಗದುಗಿಗೂ ವಿಶೇಷ ಸಂಪರ್ಕ— ಯಾದವ ಸಿಂಘಣ ಮೊದಲಾದವರಿಗಿದ್ದಂತೆ ಇದ್ದುದಕ್ಕೆ ಆಧಾರಗಳು ದೊರಕಿಲ್ಲ.[49] ಅಂತೆಯೇ ಯಾದವರ ಕಾಲದ ಪರಿಸರದಲ್ಲಿ ಕುಮಾರವ್ಯಾಸನಿಂದ ಗದುಗಿನಲ್ಲಿ ಆ 'ಕರ್ಣಾಟಕ ಭಾರತ ಕಥಾ ಮಂಜರಿ' ರಚಿಸಲಾಯಿತೆಂದು ಹೇಳಿದರೆ ನಮಗಂತೂ ತಪ್ಪೆಂದು ತೋರದು. ಕಾರಣ ಯಾದವ ಚಕ್ರವರ್ತಿ ಕೃಷ್ಣನ ಕಾಲಕ್ಕೆ ಆ ಗ್ರಂಥ ರಚಿತವಾಯಿತು. ಕುಮಾರವ್ಯಾಸ ಯೋಗೀಂದ್ರ, ಎರಡನೆಯ ಜೈತುಗಿ ಹಾಗೂ ಆತನ ಪುತ್ರ ಕೃಷ್ಣ– ಇವರ ಸಮಕಾಲೀನ.

47 SII Vol. XV, No. 159, p. 203

48 (a) Ep. Ind. Vol. III, p. 217
(b) Ind. Ant. Vol. II, p. 297 (ಸಿಂಘಣನ ಕ್ರಿ. ಶ. 1210 ರ ಶಾಸನ)

49 ವಿಜಯನಗರದರಸರ ಕಾಲದ ಶಾಸನಗಳೂ ದೊರೆತಿದ್ದು ಅವುಗಳಲ್ಲಿ ಗದುಗಿನಲ್ಲಿ ಇಂತಹ ವಾತಾವರಣ ಇದ್ದಿತೆಂದು ವ್ಯಕ್ತವಾಗುವುದಿಲ್ಲ. ನೋಡಿ : SII XV

2

ಕುಮಾರವ್ಯಾಸನ ಕಾಲನಿರ್ಣಯವನ್ನು ಮಾಡುವಲ್ಲಿ ಬಾಹ್ಯ ಪ್ರಮಾಣಗಳೂ ತಮ್ಮ ಕೈವಾಡವನ್ನು ಮೆರೆದಿವೆ. ಅವುಗಳಲ್ಲಿ ಮುಖ್ಯವಾದ ಮೂರನ್ನು ಇಲ್ಲಿ ವಿಮರ್ಶಿಸುವೆ. ಅವೆಂದರೆ :

1. ಕೋಳಿವಾಡದ ಕಾಗದ ಪತ್ರಗಳು ;
2. ಭಾಸ್ಕರನ 'ಜೀವಂಧರ ಚರಿತ್ರೆ' ; ಮತ್ತು
3. ಕುಮಾರವಾಲ್ಮೀಕಿಯ 'ಕರ್ಣಾಟಕ ರಾಮಾಯಣ' (ತೊರವೆ ರಾಮಾಯಣ).

1. ಕೋಳಿವಾಡದ ಕಾಗದ ಪತ್ರಗಳು

ಈ 20 ನೆಯ ಶತಮಾನದಲ್ಲಿ ಹೊರಬಂದ ಕೋಳಿವಾಡದ ಕಾಗದ ಪತ್ರಗಳನ್ನು ಕುರಿತು ಹಲವರು ಈಗಾಗಲೇ ಬರೆದಿದ್ದಾರೆ. ಶ್ರೀ ಆರ್. ಎಸ್. ಪಂಚಮುಖಿ[50] ಹಾಗೂ ಶ್ರೀ ದ. ರಾ. ಬೇಂದ್ರೆ[51] ಇವರು ಕೊಟ್ಟ ವಿವರಗಳನ್ನು ನೋಡಿದರೆ ಅವುಗಳ ಪ್ರಕಾರ ಹುಣಸಿಗೆ ದೇವಲಾಪುರದ ಚಿನ್ನದ ಕೈ ಮಾಧವರಸನು ಶಾ. ಶ. 1068 (1146 A.D.) ಪ್ರಭವ ಸಂವತ್ಸರದಲ್ಲಿ ಕೋಳಿಂಗನಪುರ (ಕೋಳಿವಾಡ) ವನ್ನು ಕ್ರಯಕ್ಕೆ ಪಡೆದ. ಶಾ. ಶ. 1069 ನೆಯ ವಿಭವ ಸಂವತ್ಸರದ ಚೈತ್ರ ಶುದ್ಧ 1 ಅಶ್ವಿನಿ ನಕ್ಷತ್ರ ಮಂಗಳವಾರ ಅಮೃತ ಸಿದ್ಧಿಯೋಗದಲ್ಲಿ ಕೋಳಿವಾಡಕ್ಕೆ ಬಂದನು. ಆತ ವಿಜಯನಗರದ ರಾಜಾ ನರಸಿಂಗರಾಯನ ಮುಖ್ಯ ದಂಡಾಳು ಹಾಗೂ ಅಂಗರಕ್ಷಕನಾಗಿದ್ದನು......ಇತ್ಯಾದಿ.[52] ಚಿನ್ನದ ಕೈ ಮಾಧವರಸನು ಕೋಳಿವಾಡಕ್ಕೆ ಬಂದ ತಿಥಿ ಕ್ರಿ.ಶ. 1148, ಮಾರ್ಚಿ 29 ಹಾಗೂ 30ರ (ಸೋಮವಾರ ಮತ್ತು ಮಂಗಳವಾರ ಬೆಳಿಗ್ಗೆ) ಮಧ್ಯದಲ್ಲಿನ ಸಮಯಕ್ಕೆ ಸರಿಹೋಗುತ್ತದೆ.[53] ಕ್ರಿ.ಶ. 1148 ರಲ್ಲಿ

---

50 ಆರ್. ಎಸ್. ಪಂಚಮುಖಿ : 'ಕುಮಾರವ್ಯಾಸ ಕವಿಯ ಚರಿತ್ರ ಮತ್ತು ಕಾವ್ಯ ವಿಚಾರ' 'ಅಭಿವಂದನೆ' – ಪು. 336–350.

51 ದ. ರಾ. ಬೇಂದ್ರೆ : 'ಕುಮಾರವ್ಯಾಸನ ಕಾಲ ನಿರ್ಣಯದ ಬಗ್ಗೆ ಒಂದೆರಡು ಹೊಸ ವಿಚಾರಗಳು' – 'ಬಸವನಾಳ ಸ್ಮಾರಕ ಸಂಪುಟ', ಪು. 543–553

52 ಅವೇ ಲೇಖನಗಳು. ಅಭಿವಂದನೆ, ಪು. 337 ಮತ್ತು ಬ. ಸ್ಮಾ. ಸಂ. ಪು. 553, ಅ.ಟಿ. 10 ಇಲ್ಲಿನ ಹುಣಸಿಗೆ ದೇವಲಾಪುರದ ಬಗೆಗೆ ಎರಡು ಮಾತುಗಳನ್ನು ಹೇಳಬಹುದು. ಈ ಊರು ನಮಗೆ ಬಿಜಾಪುರ ಜಿಲ್ಲೆಯ ತಾಳೀಕೋಟೆಯಿಂದ ಗುಲ್ಬರ್ಗ ಜಿಲ್ಲೆಯ ಸುರಪುರಕ್ಕೆ ಹೋಗುವ ಮಾರ್ಗದಲ್ಲಿರುವ ಹುಣಸಿಗೆಯ ಬಳಿಯ ಹಳ್ಳದ ದಂಡೆಯಲ್ಲಿ ಸುಮಾರು ಎರಡು ಮೈಲು ಅಂತರದಲ್ಲಿರುವ 'ಹುಣಸಿಗಿದ್ಯಾಪುರ' ಎಂದು ತೋರುತ್ತದೆ. ಈಗ ಇದು ಬೇಚಿರಾಗ್ ಪರಿಸ್ಥಿತಿಯಲ್ಲಿದೆಯೆಂದರೂ ಸರಿಹೋಗುತ್ತದೆ.

53 *Indian Ephemeris* – Swami Kannu Pillai.

ನಮಗೆ ತಿಳಿದಂತೆ ವಿಜಯನಗರದ ರಾಜ್ಯ ಇನ್ನೂ ಹುಟ್ಟಿಯೇ ಇರಲಿಲ್ಲ.[54] ಇವುಗಳಲ್ಲಿ ಇಷ್ಟು ಖಚಿತವಾಗಿ ಬರೆದ ತೇದಿಗಳನ್ನು ಅಲ್ಲಗಳೆದುದು ಸರಿಯಲ್ಲ. ಇವುಗಳಲ್ಲಿನ ಕಾಲಾನುಪೂರ್ವಿ ಹಾಗೂ ಚಾರಿತ್ರಿಕ ಸತ್ಯಸಂಗತಿಗಳು ಒಂದಕ್ಕೊಂದು ಸರಿಹೊಂದು ವುದಿಲ್ಲ. ಸಮಕಾಲೀನ ದಾಖಲೆಯಲ್ಲಿ ಇಂತಹ ಪರಿಸ್ಥಿತಿ ಎಂದೂ ಬರುವದಿಲ್ಲ. ಸುಮಾರು ಮುನ್ನೂರು ನಾನೂರು ವರ್ಷಗಳ ಅಂತರ ಅಲಕ್ಷಿಸುವಂತಹ ಸಂಗತಿಯಲ್ಲ (ಯಾವ ನರಸಿಂಹನನ್ನು ಇಟ್ಟುಕೊಂಡರೂ ಕಾಲ ಸರಿಹೋಗುವದಿಲ್ಲ). ಇವು ಸಮಕಾಲೀನ ದಾಖಲೆಗಳೇ ಅಲ್ಲ! ಗಂಗರ ಕಾಲದ ಕೂಟಶಾಸನಗಳಂತಹ[55] ಕೂಟ ದಾಖಲೆಗಳು. ಇವು ಜ್ಯೋತಿಷ್ಯವನ್ನು ಕಿಂಚಿತ್ ಬಲ್ಲ, ಚರಿತ್ರೆಯನ್ನು ಚೆನ್ನಾಗಿ ತಿಳಿಯದ ಕವಿ ಕುಮಾರವ್ಯಾಸ ವಿಜಯನಗರದ ಅರಸರ ಕಾಲದಲ್ಲಿದ್ದವನೆಂಬ ಕಿಂವದಂತಿಯನ್ನು ಗ್ರಹಿಸಿದ ತಂಡದಿಂದ ನಿರ್ಮಾಣಗೊಂಡ ಕೂಟದಾಖಲೆಗಳು. ಇವುಗಳನ್ನು ಆಧರಿಸಿ ಕೊಂಡು ನಿರ್ಣಯಿಸಿದ ನಿರ್ಣಯಗಳು ಘಣಿಯಾಡಿದ ಮುಸಬಿನ ಗುಂಡಗಳು–ಅಷ್ಟೇ.

ಪ್ರೊ॥ ದ. ರಾ. ಬೇಂದ್ರೆ ಅವರು ಆದಿಪರ್ವದ 3ನೆಯ 38ನೆಯ ಪದ್ಯ–

ನಿರತದಲು ತಾಪುಷ್ಯ ಮಾಸದ
ವರತ್ರಯೋದಶಿಯಲ್ಲಿ ಶುದ್ಧದ
ಪರಮಶುಭಕೃತುವಬ್ದದೊಳಗಂದರಸ ಹರಿಕಥೆಯ ।
ವರಮುನಿಯ ಕಯ್ಯಿಂದ ಕೇಳಲು
ಯರಸಗಱುಪಿಯು ತಮ್ಮ ಶಿಷ್ಯಗೆ
ನಿರುತದಲಿ ಹೇಟಿನುತಲಾಶ್ರಮಕ್ಕೈದಿದನು ಮುನಿಪ ॥[56]

ಎಂಬುದನ್ನು ಆಧರಿಸಿಕೊಂಡು ಈ ಶುಭಕೃತು ಸಂವತ್ಸರ ಕ್ರಿ.ಶ. 1482 ರಲ್ಲಿ ಬಂದ 'ಶುಭಕೃತು' ಎಂದು ನಿರ್ಣಯಿಸಿದ್ದಾರೆ.[57] ನಮಗಾದರೋ ಇದು ಹಲವು ಪ್ರಾಚೀನ ಹಸ್ತ ಪ್ರತಿಗಳಲ್ಲಿ ಇಲ್ಲವೇ ಇಲ್ಲವಾದುದರಿಂದ ಪ್ರಕ್ಷಿಪ್ತವೆಂದು ತೋರುತ್ತದೆ. ಪ್ರಕ್ಷೇಪ ಅಲ್ಲವೆಂದರೂ ನಮಗೇನೂ ಇದು ಬಾಧಕವಿಲ್ಲ. ಏಕೆಂದರೆ ನಾವು ಸಂಶೋಧಿ ಸಿರುವ ಕಾಲದಲ್ಲೂ ಎಂದರೆ ಕ್ರಿ.ಶ. 1230–1260 ರ ಮಧ್ಯೆ ಕೂಡ ಒಂದು ಶುಭ ಕೃತು ಸಂವತ್ಸರ ಬಂದಿತ್ತು. ಈ ಪದ್ಯದಲ್ಲಿನ ಮಿತಿಗಳು ಜನವರಿ 5, 1243 ಕ್ಕೆ ಸರಿ ಹೋಗುತ್ತವೆ.[58]

---

54 ವಿಜಯನಗರ ಸಾಮ್ರಾಜ್ಯ ಕ್ರಿ.ಶ. 1336 ರಲ್ಲಿ ಅಸ್ತಿತ್ವಕ್ಕೆ ಬಂದಿತು – *Karnataka Through the Ages*, p. 534.

55 ಕರ್ಣಾಟಕದ ಅರಸು ಮನೆತನಗಳು – ಗಂಗರು – ಅಧ್ಯಾಯವನ್ನು ನೋಡಿ.

56 ಆದಿಪರ್ವ (G.O.L. Series-Ed. V. Syamachar) ಪು. 24

57 ಬಸವನಾಳ ಸ್ಮಾರಕ ಸಂಪುಟ, ಪು. 55

58 *Ind. Ephemeris* : Svami Kannu Pillai

ವಿಜಯನಗರದ ಕೃಷ್ಣದೇವರಾಯನಿಗೆ ಸಂಬಂಧಿಸಿದೆ ಎಂದು ನಾ. ಶ್ರೀ. ರಾಜ ಪುರೋಹಿತರು ನಿರೂಪಿಸಿದ ಪದ್ಯ:

ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯ ನೊರೆವೆನು ಕೃಷ್ಣ ಮೆಚ್ಚಲಿಕೆ ।
ಹಲವು ಜನ್ಮದ ಪಾಪರಾಶಿಯ
ತೊಳೆವ ಜಲವಿದು ಶ್ರೀಮದಾಗಮ
ಕುಲಕೆ ನಾಯಕ ಭಾರತಾಕೃತಿ ಪಂಚಮ ಶ್ರುತಿಯ ॥

ಇದು ಹಾಗಲ್ಲ ಕೇವಲ ಪರಮಾತ್ಮನಿಗೆ ಅನ್ವಯವಾಗುತ್ತದೆಯೆಂದು ಡಾ। ರಂ. ಶ್ರೀ. ಮುಗಳಿ ಬರೆದಿದ್ದಾರೆ.[59] ಶ್ರೀಯುತರ ಅಭಿಪ್ರಾಯ ಸರಿಯಾದುದೆ. ನಮಗಾದರೊ ಈ ಪದ್ಯ ಸಂಪೂರ್ಣ ಪ್ರಕ್ಷಿಪ್ತ. ಏಕೆಂದರೆ ಸದ್ಯ ಕೆ. ಆರ್. ಶೇಷಗಿರಿಯವರು ಆದಿ ಪರ್ವಕ್ಕೆ ಸಂಪಾದಿಸುವ ಸಂದರ್ಭದಲ್ಲಿ ಮಾಡಿಟ್ಟ ಹಸ್ತಪ್ರತಿಯಿಂದ ಇದು 'ದ' ಎಂಬ ಅತ್ಯಂತ ಕೆಟ್ಟ ಪ್ರತಿಯಲ್ಲಿ ಮಾತ್ರ ಇದೆ (?) ಪ್ರಕ್ಷಿಪ್ತವಲ್ಲವೆಂದು ನಿರ್ಧಾರ ವಾದರೂ ಅಲ್ಲಿ ಶ್ಲೇಷೆ ಇದ್ದರೆ [?] ಅದು ಯಾದವ ಚಕ್ರವರ್ತಿ ಕೃಷ್ಣನಿಗೂ ಅನ್ವಯಿಸಿ ಅರ್ಥ ಹೇಳಬಹುದು. ಗ್ರಂಥದಲ್ಲಿ ವಿಜಯನಗರದ ಪ್ರಸಕ್ತಿಯೇ ಇಲ್ಲದಾಗ ಇಲ್ಲಿನ ಕೃಷ್ಣನನ್ನು ಆ ವಿಜಯನಗರದ ಕೃಷ್ಣದೇವರಾಯನೊಂದಿಗೆ ಏಕೆ ಸಮೀಕರಿಸ ಬೇಕು ?

ಕುಮಾರವ್ಯಾಸನನ್ನು ಮಧ್ವಮತದವನನ್ನಾಗಿ ಮಾಡುವ ಭರದಲ್ಲಿ ಕೊಟ ದಾಖಲೆಗಳಿಗೆ ಚಾರಿತ್ರಕ ವಿಮರ್ಶೆಯಲ್ಲಿ ಸಲ್ಲದ ಬೆಲೆ ಇತ್ತು ಪುರಂದರದಾಸರ ಕೀರ್ತನೆ ಯೊಂದಕ್ಕೆ ಅಪಾರ್ಥವನ್ನು ಮಾಡಿ ಕುಮಾರವ್ಯಾಸ ಕವಿಯು ಕ್ರಿ.ಶ. 1480-1520ರ ಮಧ್ಯದಲ್ಲಿ ಇದ್ದಿರಬಹುದು ಎಂದಿದ್ದಾರೆ ಶ್ರೀ ಆರ್.ಎಸ್. ಪಂಚಮುಖಿ.[60] "ಗ್ರಂಥ ದಲ್ಲಿನ ಐತಿಹಾಸಿಕ ಅಂಶಗಳನ್ನು "ಹೆಚ್ಚು ಚರ್ಚಿಸುವುದು ಅನಾವಶ್ಯಕ" ಎಂದಿದ್ದಾರೆ– ಶ್ರೀಯುತರು ! ಆ ಕೀರ್ತನೆಗಳಲ್ಲಿ ವಿಶೇಷತಃ 'ಪರಿಶರಣಾರೆನ್ನ ಮನೆಯ ಮೆಟ್ಟಲು' ಎಂಬುದರಲ್ಲಿ ಪುರಂದರದಾಸರು ಕವಿಯನ್ನು ಪ್ರತ್ಯಕ್ಷ ಕಂಡುದಕ್ಕೆ ಆಧಾರವಿಲ್ಲ. ಆ ಕವಿತೆಯಲ್ಲಿನ 'ಗದುಗಿನ ವೀರನಾರಾಯಣ' ದೇವತಾವಾಚಕವೇ ವಿನಾ ಅದು ಕವಿ ಯನ್ನು ಸೂಚಿಸುವದಿಲ್ಲ. ಇದೇ ಬಗೆಯ ಅಪಾರ್ಥವನ್ನು ಡಾ। ಸದಾನಂದ ನಾಯಕರು 'ಆರೋಗಣೆಯ ಮಾಡೇಳಯ್ಯ । ಗದುಗಿನ ವೀರನಾರಾಯಣ' ಎಂಬ ಪದ್ಯವನ್ನು ಕುರಿತು ಮಾಡಿದ್ದಾರೆ.[61] ಇಲ್ಲೆಲ್ಲ ನೈವೇದ್ಯಕ್ಕೆ ಸಂಬಂಧಪಟ್ಟ ವಿಷಯವೇ ವಿನಾ ಅದನ್ನು ಕವಿಗೆ ಅನ್ವಯಿಸಬಾರದು. ಇದು

---

59 ಕನ್ನಡ ಸಾಹಿತ್ಯ ಚರಿತ್ರೆ, ಪು. 247 (1ನೆಯ ಮುದ್ರಣ)

60 ಆರ್. ಎಸ್. ಪಂಚಮುಖಿ, 'ಅಭಿವಂದದೆ', ಪು, 343–44

61 ವೈದಿಕ ಪುರಾಣಗಳು, ಪು.47

ಆರೋಗಣೆಯ ಮಾಡೇಳಯ್ಯ-ಶ್ರೀಮನ್
ನಾರಾಯಣ ಭೋಗ ಸ್ವೀಕರಿಸಯ್ಯ ॥ ಅ.ಪ. ॥
... ...
ನೀ ನಿತ್ಯತೃಪ್ತನೆಹುದು ನಿನ್ನ ಉದರದೊಳು
ನಾನಾಜನರು ಬಂದು ಉಣ್ಣಬೇಕೋ ॥
ಶ್ರೀನಾಥ ಗದುಗಿನ ವೀರನಾರಾಯಣ
ಅನಾಥ ಬಂದು ಶ್ರೀ ಪುರಂದರ ವಿಠಲಾ ॥[62] ಎಂಬಂತಹದು.

ಇನ್ನೂ ಒಂದು ಸಂಗತಿಯನ್ನು ನಾವು ಕೀರ್ತನೆಗಳನ್ನು ವಿಮರ್ಶಿಸುವಾಗ ನೆನಪಿಡ ಬೇಕು. ಅದೇಂದರೆ ಅವುಗಳನ್ನು ಸಾಕಷ್ಟು ಪರೀಕ್ಷಿಸಿದ್ದಲ್ಲದೆ ಕಾವ್ಯಗಳ ಹಾಗೆ ಖಚಿತ ಆಧಾರಗಳಿಲ್ಲದೆ ನಂಬಕೂಡದು. ಅನೇಕ ಕೀರ್ತನೆಗಳನ್ನು ಯಾರು ಯಾರೋ ರಚಿಸಿ ದಾಸರ ತಲೆಗೆ ಕಟ್ಟಿರುವುದುಂಟು.

ಡಾ। ಸನಾನಂದ ನಾಯಕರು ಇನ್ನೂ ಒಂದು ಗೊಂದಲವನ್ನು ಸೃಜಿಸಿಟ್ಟಿದ್ದಾರೆ. ಅದೆಂದರೆ ಕುಮಾರವ್ಯಾಸರು ಮೂವರು ಎಂಬ ಸಂಗತಿ. ಅವರ ವಾದ ವಿಂತಿದೆ : ಕಾಲನಿರ್ಣಯದ ಈ ತೊಡಕಿನಿಂದ ಹೊರಬೀಳಬೇಕಾದರೆ, ಭಾರತದ ಕರ್ತೃಗಳಾದ ಕುಮಾರವ್ಯಾಸನೆಂಬ ಹೆಸರಿನ ಕವಿಗಳು ಮೂವರಿದ್ದರೆಂದು ತಿಳಿಯುದ ವಿನಾ ಗತ್ಯಂತರವಿಲ್ಲ. "ತಮ್ಮದು ಭಾರತ ಬರೆಯುವ ಕೈ" ಎಂದು ಅಭಿಮಾನದಿಂದ ಆಡಿಕೊಳ್ಳುವ ಕುಮಾರವ್ಯಾಸನ ವಂಶಜರು ಈಗಲೂ ಇರುವರೆಂದು ಬೆಳಕಿಗೆ ಬಂದಿದೆ. ಆದುದರಿಂದ ಆದಿ ಕುಮಾರವ್ಯಾಸ ಯೋಗೀಂದ್ರನ ಕಾಲ ಕ್ರಿ.ಶ. 1242; ಚಾಮರಸನ ಸಮಕಾಲೀನನಾದ ಕುಮಾರವ್ಯಾಸನ ಕಾಲ ಕ್ರಿ. ಶ. 1430 ; ಹಾಗೂ ಮೂರನೆಯ ಕುಮಾರವ್ಯಾಸನ ಕಾಲವು ಕ್ರಿ. ಶ. 1486–1515...ಇತಾದಿ."[63] ಈ ಬರೆಹ ಆಡುಗೂಲಜ್ಜಿಯ ಕಥೆಗೆ ಮಕ್ಕಳು ಹೂಂಗುಟ್ಟಿದಂತಿದೆ. ಶ್ರೀಯುತರ ಪ್ರಕಾರ ಮೂವರು ಕುಮಾರವ್ಯಾಸರು ಒಂದೇ ಭಾರತವನ್ನು ಬರೆದರು ! ಅವರು ಭಿನ್ನ ಭಿನ್ನ ಕಾಲದಲ್ಲಿದ್ದರು. ಶ್ರೀಯುತ ನಾಯಕರಿಗೆ ನಮ್ಮ ಮೂರು ಸವಿನಯದ ಪ್ರಶ್ನೆಗಳು :

1. ಮೂವರು ಕುಮಾರವ್ಯಾಸರೂ ಯೋಗೀಂದ್ರರಾಗಿದ್ದರೆಂಬುವಕ್ಕೆ ಆಧಾರವೇನು ?

2. ಈ ಮೂವರಲ್ಲಿ ಯಾರು ಯಾರು ಎಷ್ಟು ಎಷ್ಟು ಭಾಗಗಳನ್ನು ಬರೆದರು ?

---

62 ಪೂಜಾತತ್ವ–ಶ್ರೀ ಪುರಂದರದಾಸರ ಸಾಹಿತ್ಯ-1, ಪು. 124
(400 ನೆಯ ವರ್ಷದ ಉತ್ಸವ ಮಂಡಲದ ಪ್ರಕಟನೆ)

63 ವೈದಿಕ ಪುರಾಣಗಳು, ಪು. 50

3. ಕುಮಾರವ್ಯಾಸನ ಕೃತಿಯಲ್ಲಾಗಲೀ, ಚಾಮರಸನ ಕೃತಿಯಲ್ಲಾಗಲೀ ಅವರು ಸಮಕಾಲೀನರಾಗಿದ್ದರೆನ್ನುವದಕ್ಕೆ ಆಧಾರಗಳಿವೆಯೇ ?—ಶ್ರೀಯುತರ ಹೇಳಿಕೆ ಸರಿಯಾದರೆ 'ಕುಮಾರವ್ಯಾಸ ಭಾರತ' ಒಬ್ಬ ಕವಿಯ ಕೃತಿಯಲ್ಲ. ಇದನ್ನು ಆ ಗ್ರಂಥದ ಓದುಗರು—ವಿಮರ್ಶಕರು ಒಪ್ಪದ ಮಾತು. ಗ್ರಂಥದಲ್ಲಿನ ಪ್ರಕ್ಷೇಪಗಳು ಬೇರೆ, ಗ್ರಂಥವೇ ಮೂವರಿಂದ ರಚಿತವಾಯಿತೆಂಬ ಮಾತೇ ಬೇರೆ. ಇದನ್ನು ಕಲೆಸಿಕೊಂಡು ಯಾರೂ ಗೊಂದಲಕ್ಕೊಳಗಾಗಬಾರದು. ಕುಮಾರವ್ಯಾಸನ ಭಾರತವನ್ನು ವಿಮರ್ಶಿಸಿದ ವಿದ್ವಾಂಸರಾರೂ ಈ ಗ್ರಂಥ ಮೂರು ಶೈಲಿಗಳಿಂದ ಕೂಡಿದೆ ಎಂದು ಇದುವರೆಗೆ ಅಭಿಪ್ರಾಯ ಪಟ್ಟಿಲ್ಲ.[64]

ಶ್ರೀ ನಾಯಕರ ಅಭಿಪ್ರಾಯ ಕೇವಲ ಕಾಲ್ಪನಿಕ. ಪುರಂದರದಾಸರನ್ನು ಕುಮಾರವ್ಯಾಸನು ಕಂಡುದಕ್ಕೆ ಆತನ ಕೃತಿಯಲ್ಲಿ ಆಧಾರಗಳಿಲ್ಲ. ಪುರಂದರ ಸಮಕಾಲೀನ–ಚಾಮರಸನ ಸಮಕಾಲೀನ–ಇವು ದಂತಕತೆಗಳು, ಕಿಂವದಂತಿಗಳು. ಕಿಂವದಂತಿಗಳು ಚಾರಿತ್ರಿಕ ಸತ್ಯದ ಸಾಧನಗಳಾಗಲಾರವು. ಚಾರಿತ್ರಿಕ ಸತ್ಯಗಳಾದರೆ, ಅವು ಕಿಂವದಂತಿಗಳಲ್ಲ, ಅಂತೆಯೆ ಗದುಗಿನ ಭಾರತವನ್ನು ಚಿಸಿದ ವ್ಯಕ್ತಿ, ಒಬ್ಬನೇ ಕುಮಾರವ್ಯಾಸ ಯೋಗೀಂದ್ರ. ಆತ ಕ್ರಿ. ಶ. 1230–60ರ ಮಧ್ಯೆ ಆ ಗ್ರಂಥವನ್ನು ರಚಿಸಿದ.

2 **ಭಾಸ್ಕರನ 'ಜೀವಂಧರ ಚರಿತೆ'** :—ಭಾಸ್ಕರ ಕವಿ, ಕುಮಾರವ್ಯಾಸನನ್ನು ಅನುಕರಿಸಿದ್ದಾನೆನ್ನುವದಕ್ಕೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅವನ ಕಾಲದ ಬಗೆಗೆ ಡಾ. ರಂ. ಶ್ರೀ. ಮುಗುಳಿ ಹಾಗೂ 'ಸುಜನಾ' ಇವರು ಕ್ರಿ. ಶ. 1485 ಎಂದು ವಾದಿಸಿದರೆ, ಎಚ್. ದೇವಿರಪ್ಪನವರು ಕ್ರಿ. ಶ. 1604 ಎಂದು ವಾದಿಸಿ ಕುಮಾರವ್ಯಾಸನ ಕಾಲವನ್ನು ಸು. ಕ್ರಿ. ಶ. 1500 ಎಂದು ಅಭಿಪ್ರಾಯ ಪಟ್ಟಿದ್ದಾರೆ.[65] ಶ್ರೀ ದೇವಿರಪ್ಪನವರದು ಕುಮಾರವ್ಯಾಸ ಭಾರತವನ್ನು ಸಂಪೂರ್ಣನೋಡದ ಅದರಲ್ಲಿನ ಐತಿಹಾಸಿಕಾಂಶಗಳನ್ನು ಪರಿಶೀಲಿಸದ ಅಭಿಪ್ರಾಯ. ಅಂತೆಯೆ ಇದಕ್ಕೆ ಬೆಲೆ ಕೊಡುವುದು ಅನುಚಿತ. ಭಾಸ್ಕರನ ಕಾಲವನ್ನು ಹೊಸ ಆಧಾರ ದೊರೆಯುವವರೆಗೆ 'ಇದಮಿತ್ಥಂ' ಎಂದು ಹೇಳಲು ಬರುವುದಿಲ್ಲ. ನಾವು ತೋರಿಸಿಕೊಟ್ಟ ಕಾರಣಗಳಿಂದ ಕುಮಾರವ್ಯಾಸನ ಕಾಲ ಭಾಸ್ಕರನ 'ಜೀವಂಧರ ಚರಿತೆ'ಯನ್ನು ನೆಮ್ಮಿ ನಿಲ್ಲಬೇಕಾಗಿಲ್ಲ.

---

64 a. ಪ್ರೊ. ಎಸ್. ವಿ. ರಂಗಣ್ಣ, 'ಕುಮಾರವ್ಯಾಸನ ಶೈಲಿ'–ಕುಮಾರವ್ಯಾಸ ಪ್ರಶಸ್ತಿ
b. ಅವರದೇ 'ಕುಮಾರವ್ಯಾಸ' (ಐ. ಬಿ. ಎಚ್. ಪ್ರಕಾಶನ)
c. ಪ್ರೊ. ವಿ. ಸೀತಾರಾಮಯ್ಯ—ಅದೇ ಗ್ರಂಥ
d. ಡಾ. ರಂ. ಶ್ರೀ. ಮುಗಳಿ, ಕ.ಸಾ.ಚ. ; ಕನ್ನಡ ಸಾಹಿತ್ಯದ ಇತಿಹಾಸ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು
e ತೋರಣ ನಾಂದಿ, ಕು. ಭಾರತ. ಮೈಸೂರು ಸಂಸ್ಥಾನದ ಸಂಸ್ಕೃತಿ ಪ್ರಚಾರ ಶಾಖೆಯ ಮುದ್ರಣ.—ಈ ದಿಶೆಯಲ್ಲಿ ಇನ್ನೂ ಅನೇಕರನ್ನು ಹೆಸರಿಸಬಹುದು.

65 ಎಚ್. ದೇವಿರಪ್ಪ. ಪ್ರ. ಕ. ಸಂ. 42, ಸಂ. 1, ಪು. 67–76

3 ಕುಮಾರ ವಾಲ್ಮೀಕಿಯ 'ಕರ್ನಾಟಕರಾಮಾಯಣ' : — 'ಕರ್ನಾಟಕ ರಾಮಾಯಣ' ಕನ್ನಡ ಸಾಹಿತ್ಯದಲ್ಲಿ ಭಾರತದಷ್ಟು ಶ್ರೇಷ್ಠ ಕೃತಿಯಲ್ಲದಿದ್ದರೂ ಆ ಕುಮಾರವ್ಯಾಸನ ಪ್ರತಿಭಾ ಛಾಯೆಯಲ್ಲಿ ವಿಕಸಿಸಿನಿಂತ ಒಂದು ಒಳ್ಳೆಯ ಕೃತಿ. ಕುಮಾರವಾಲ್ಮೀಕಿಯ ಕಾಲ ನಿರ್ಣಯ ಕುಮಾರವ್ಯಾಸನ ಕಾಲವನ್ನು ನಿರ್ಧರಿಸು ವಲ್ಲಿ ಸಹಾಯವಾಗುವದರಿಂದ ಅದನ್ನು ಪರಿಶೀಲಿಸಬೇಕು. ಕುಮಾರವಾಲ್ಮೀಕಿಯ ಕಾಲವನ್ನು ನಿರ್ಧರಿಸುವುದೂ ಈ ಲೇಖನದ ಉದ್ದೇಶಗಳಲ್ಲೊಂದಾದುದರಿಂದ ಅದನ್ನಿನಿತು ಈಗ ಪ್ರಯತ್ನಿಸುವೆ.

ಕುಮಾರ ವಾಲ್ಮಿಕಿಯ ಕಾಲವನ್ನು ಸು. 15ನೆಯ ಶತಮಾನದ ಈಚೆ ಎಂದು ಎಲ್ಲರೂ ಇದುವರೆಗೆ ವಿವರಿಸುತ್ತ ಬಂದಿದ್ದಾರೆ. ಅನನ ಕಾಲವನ್ನು ದಿ। ಆರ್. ನರಸಿಂಹಾಚಾರ್ಯರು ಸು. ಕ್ರಿ. ಶ. 1500 ಎಂದು ಹೇಳಿ ಮಿತ್ರರೊಬ್ಬರ ಪತ್ರದ ಆಧಾರದ ಮೇಲೆ ಅದನ್ನು 1557–79ಕ್ಕೆ ಎಳೆದಿದ್ದಾರೆ.[66] ಡಾ॥ ರಂ. ಶ್ರೀ. ಮುಗಳಿ, ಇವರಿಬ್ಬರ (ಕುಮಾರವ್ಯಾಸ ಹಾಗೂ ಕುಮಾರ ವಾಲ್ಮೀಕಿ) ನಡುವಣಕಾಲ ವೆಂದರೆ, ಕ್ರಿ. ಶ. 1400–1600 (ಆಗ) ಆವನು ಜೀವಿಸಿರಬೇಕೆಂದು ತೋರು ತ್ತದೆ ಎಂದು ಹೇಳಿದ್ದಾರೆ.[67] ಸು. ಕ್ರಿ. ಶ. 1500 ಎಂದಿಟ್ಟುಕೊಂಡಿದ್ದಾರೆ. 'ತೊರವೆ ರಾಮಾಯಣ' ಗ್ರಂಥದ 2ನೆಯ ಸಂಪುಟವ ಪೀಠಿಕೆಯಲ್ಲಿ ಬೊಂಬಯ್ ಗೆಜೆಟ್ಟೀರ್ ಗ್ರಂಥದ ಆಧಾರ ಎಂದರೆ ತೊರವೆ ಗ್ರಾಮದ ನಿರ್ಮಾಣ 1ನೆಯ ಆದಿಲ್ ಷಹನಿಂದ ಹಾಗೂ ಅಲ್ಲಿನ ನರಸಿಂಹ ದೇವರ ಗುಡಿ ಇಟ್ಟಿಗೆಗಳಿಂದ ಕಟ್ಟಿರುವದರಿಂದ ಆ ರಾಜನ ಕಾಲದಿಂದ ಈಚೆಗೆ ಕವಿ ಇದ್ದಿರಬೇಕು. ಅವನ ಕಾಲವನ್ನು ಸು. 1580 ಎಂದು ಹೇಳಬಹುದು ಎಂದಿದ್ದಾರೆ ಶ್ರೀ ಬಿ. ಎಸ್. ಸಣ್ಣಯ್ಯನವರು.[68] 'ಕುಮಾರ ವ್ಯಾಸನ ಕಾಲ ನಿರ್ಣಯದ ಬಗ್ಗೆ ಒಂದೆರಡು ಹೊಸ ವಿಚಾರಗಳು' ಎಂಬ ಲೇಖನ ದಲ್ಲಿ ಪ್ರೊ। ದ. ರಾ. ಬೇಂದ್ರೆ 'ಕುಮಾರವಾಲ್ಮೀಕಿ 1490-1500 ಸುಮಾರಿಗೆ ಇದ್ದಿರಬಹುದು ಎಂದು ತಿಳಿಯಬಹುದಾಗಿದೆ' ಎಂದಿದ್ದಾರೆ.[69] ಒಟ್ಟಾರೆ ಕುಮಾರ ವಾಲ್ಮೀಕಿಯ ಕಾಲದ ಬಗೆಗೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ.

'ತೊರವೆ ರಾಮಾಯಣ' ಎರಡು ಸಂಪುಟಗಳಲ್ಲಿ ಮೈಸೂರು ವಿಶ್ವವಿದ್ಯಾ ನಿಲಯದಿಂದ ಪ್ರಕಟವಾಗಿದೆ. ಇದನ್ನು ಎಂಟು ಪ್ರತಿಗಳಿಂದ ಪರಿಶೋಧಿಸಿದ್ದಾರೆ. ಈ ಪರಿಷ್ಕೃತ ಪ್ರತಿಯಿಂದ ಕುಮಾರವಾಲ್ಮೀಕಿಯ ಕಾಲ ನಿರ್ಧಾರಮಾಡುವುದು ಬಹು

---

66 ಕ. ಕ. ಚ. ಭಾ. 2, ಪು. 141 ; ಭಾಗ–3, ಪು. 38

67 (a) ಕ. ಸಾ. ಚ. ಪು. 264 ಹಾಗೂ 228

(b) ಪ್ರಾಚೀನ ಕನ್ನಡ ಸಾಹಿತ್ಯದ ರೂಪಗಳು, ಪು. 197 (1973)

68 'ತೊರವೆರಾಮಾಯಣ' ಸಂಪುಟ-2, ಪೀಠಿಕೆ, ಪು. 13-15

69 ಬಸವನಾಳ ಸ್ಮಾರಕ ಸಂಪುಟದಲ್ಲಿನ ಶ್ರೀಯುತರ ಲೇಖನ, ಪು. 551

ಸುಲಭದ ವಿಷಯವಾಗಿದೆ. ಈಗಾಗಲೇ ಎಲ್ಲರೂ ಗುರುತಿಸಿರುವಂತೆ ಆತ ಕಾವ್ಯದ ಕೊನೆಯ ಭಾಗದಲ್ಲಿ ಕುಮಾರವ್ಯಾಸನನ್ನು ಮುಕ್ತಕಂಠದಿಂದ ಹೊಗಳಿದ್ದಾನೆ:

> ಸರಸವರ್ಣಕ ಕವಿಗಳೊಳು ಭಾ
> ಸುರ ಕುಮಾರವ್ಯಾಸನೊಬ್ಬನು
> ಪರಿಕಿಸುವಡಾನೊಬ್ಬ ಮಗುಳೆಣಿಸುವರೆ ವರ್ಣಕಕೆ ।
> ವರಕುಮಾರವ್ಯಾಸನೊಬ್ಬನು
> ಯೆರಡನೆಯಲಾನೊಬ್ಬ ಮಿಕ್ಕಿನ
> ಜರಡು ಕವಿಗಳ ಲೆಕ್ಕಿಸುವನೆ ಕುಮಾರವಾಲ್ಮೀಕಿ ॥[70]

ಆದುದರಿಂದ ಕುಮಾರ ವಾಲ್ಮೀಕಿಯ ಕಾಲಕ್ಕೆ ಕುಮಾರವ್ಯಾಸನ ಕಾಲ ಕೆಳಗಿನ ಗಡುವಾದರೆ ಮೇಲಿನ ಗಡುವನ್ನು ಆತನ ಗ್ರಂಥವೇ ನಿರ್ಣಯಿಸಿಕೊಡುತ್ತದೆ. ಅದೆಂದರೆ ಆತನು ಮಾಡಿದ ಗುರುಸ್ತುತಿ ಹಾಗು ಆತನ ಕಾವ್ಯದಲ್ಲಿ ವ್ಯಕ್ತವಾದ ಆತನ ಸಮಕಾಲೀನ ಐತಿಹಾಸಿಕ–ಭೌಗೋಲಿಕ ಪ್ರಜ್ಞೆ. ಕೆಳಗಿನ ಪದ್ಯದಲ್ಲಿ ಕವಿ ತನ್ನ ಗುರುವನ್ನು ಹೀಗೆ ಸ್ತುತಿಸಿದ್ದಾನೆ:

> ಸುರನರೋರಗವಂದ್ಯ ನಿಗಮೋ
> ತ್ಕರಕಲಾಪಾನಿಂದ್ಯ ವಿಶ್ವಂ
> ಭರಪದಾಂಬುಜಭೃಂಗ ಭೂನುತ ಮುನಿಜನೋತ್ತುಂಗ ।
> ಶರಣಜನ ಸುರಪಾಲನಾಯತ
> ಪರಿಧಿ ನಿರುಪಮ ತತ್ವವಿದ್ಯಾ
> ಶರಧಿ ಸಲಹುಗೆ ನಮ್ಮ ಮಧ್ವಾಚಾರ್ಯ ಗುರುರಾಯ ॥[71]

ಈ ಸಂಪಾದಕರು ಬಳಸಿದ ಎಂಟು ಪ್ರತಿಗಳಲ್ಲೂ 'ಮಧ್ವಾಚಾರ್ಯ' ಎಂಬುದಕ್ಕೆ ಪಾಠಾಂತರಗಳೇ ಇಲ್ಲ. ಆದುದರಿಂದ ಕವಿ ಪಾಠ 'ಮಧ್ವಾಚಾರ್ಯ' ಎಂಬುದು ಸುನಿಶ್ಚಿತ ಸಂಗತಿ. ಕವಿ 'ಮಧ್ವಮತ' ಪಂಥವನ್ನು ಸ್ವೀಕರಿಸಿದ್ದವನೆನ್ನುವುದಕ್ಕೆ ಈ ಗುರು ಸ್ತುತಿಯ ಜೊತೆಗೆ ಮೊದಲನೆಯ ಸಂಧಿಯ (ಬಾಲಕಾಂಡ) 4ನೆಯ ಪದ್ಯದಲ್ಲಿ ಪ್ರಾಣದೇವರಸ್ತುತಿ "ರಾಘವ ಪದಸರೋಜಭ್ರಮರ ಭುವನ ಪ್ರಾಣಜಂ ವಂದೇ" ಎಂದೂ ಇದೆಯಲ್ಲದೆ ಕಾವ್ಯದ ತುಂಬ 'ಹನೂಮಂತನ' ಪ್ರಶಂಸೆಯೂ ಇದೆ. ಕೊನೆಯ ಸಂಧಿಯ (ಸಂಧಿ 553) ಪದ್ಯಗಳು 44-46-48-54-55 ಇವು ಹನುಮಂತನ ವರ್ಣನೆಗಳೇ ಆಗಿವೆ. ಅದೇ ಸಂಧಿಯ ಪದ್ಯ 54– ಇದು ಮಧ್ವಾಚಾರ್ಯರು ಹನೂಮಂತನಿಗೆ ಹೇಳಿದ ಬ್ರಹ್ಮ ಪದವಿಯ ಪ್ರಸಕ್ತಿಯನ್ನೂ ಹೊಂದಿದೆ:

---

70 'ತೊರವೆ ರಾಮಾಯಣ' ಸಂಪುಟ–2 (ಸಂ. ಬಿ. ಎಸ್. ಸಣ್ಣಯ್ಯ) ಯುದ್ಧಕಾಂಡ, ಸಂಧಿ 55-67, ಪು. 697

71 ಅದೇ ಗ್ರಂಥ, ಸಂಪುಟ–1 (ಸಂ. ಎನ್. ಬಸವಾರಾಧ್ಯ) ಬಾಲಕಾಂಡ, ಸಂಧಿ–1-7, ಪು. 3

ದೇವ ಬಳಿಕತಿ ಹರುಷ ಮುಖದಲಿ
ಪಾವಮಾನಿಯ ಕರೆದು ನಿನ್ನಯ
ಸೇವೆಗೇತಱಲುತ್ತರಾಯಿಗಳಾವು ಹೇಳೆನುತ ।
ಆ ವಿರಿಂಚಿಯ ವೈಭವವು ಕ
ಲ್ಪಾವಸಾನಕೆ ಸಲಲಿ ಭುವನಜ
ನಾವಳಿಗಳುಱೆ ವಂದಿಸಲಿ ಗುರುವಾಗು ಜಗಕೆಂದ ॥72

ಈ ವಿಷಯವನ್ನು ವಾಯುಸ್ತುತಿ ಹಾಗೂ ಪುರಂದರದಾಸರ ಅನೇಕ ಕೀರ್ತನೆಗಳು ಅನುಮೋದಿಸುತ್ತವೆ :

1 ವಿಷ್ಣೋರತ್ಯುತ್ತಮತ್ವಾದಖಿಲ ಗುಣಗಣೈಸ್ತ್ರ ಭಕ್ತಿಂ ಗರಿಷ್ಠಾಂ ।
ಸಂಶ್ಲಿಷ್ಟೇ ಶ್ರೀಧರಾಭ್ಯಾಮಮುಮಥ ಪರಿವಾರಾತ್ಮನಾ ಸೇವಕೇಷು ॥
ಯಃ ಸಂಧತ್ತೇ ವಿರಿಂಚಿ ಶ್ವಸನ ವಿಹಗಪಾನಂಚ ರುದ್ರೇಂದ್ರ ಪೂರ್ವೇ ।
ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮವತಿ ಸದಾ ವಾಯುರಸ್ಮದ್ಗುರುಸ್ತಂ ॥73

2 ಎಂದೆಂದೂ ತನ್ನಮನವಗಲದೆ ಇರು ಎಂದು ।
ಅಂದೇ ಇತ್ತನು ಬೊಮ್ಮಪದವಿ ಹನುಮಂತಗೆ ।
ತಂದೆ ಶ್ರೀರಾಮಚಂದ್ರ ಪುರಂದರವಿಠಲ ।
ಅಂದೆ ಇತ್ತನು ಬೊಮ್ಮಪದವಿ ಹನುಮಂತಗೆ ॥74

ಪೇಟೆಯ 'ತೊರವೆ ರಾಮಾಯಣ'ದ ಪ್ರತಿ 'ಭಾರದ್ವಾಜ' ಎಂಬ ಪಾಠಭೇದವನ್ನು ಹೊಂದಿದೆ. ಆದು ಅತಿ ಅರ್ವಾಚೀನ ಪ್ರತಿಯೊಂದರಿಂದ ಅಚ್ಚಿಡಲಾದುದರಿಂದ ನಂಬಿಗೆಗೆ ಅನರ್ಹ. ಕವಿಯು ತನ್ನ ಗುರುಗಳು 'ಮಧ್ವಾಚಾರ್ಯರು' ಎಂದು ಹೇಳಿರುವದರಿಂದ–ಅನಂತರದ ಗುರುಗಳೊಬ್ಬರ ಸ್ತುತಿಯೂ ಇಲ್ಲದುದರಿಂದ ಆತ ಅವರ ಸಮಕಾಲೀನ, ಮಧ್ವಮತದವರ ಸಂಪ್ರದಾಯವಲ್ಲಿ ಶ್ರೀಮನ್ಮಧ್ವಾಚಾರ್ಯರ ತರುವಾಯ ಅಷ್ಟೇ ಭಕ್ತಿಯಿಂದ ಶ್ರೀ ಜಯತೀರ್ಥರನ್ನು ಶ್ರೀ ರಾಘವೇಂದ್ರ ಸ್ವಾಮಿಗಳನ್ನೂ ಸ್ತುತಿಸುವುದು ರೂಢಿ :

1 ವ್ಯಾಸೇನವ್ಯುಪ್ತ ಬೀಜಃ । ಶ್ರುತಿಭುವಿ ಭಗವತ್ಪಾದ ಲಬ್ಧಾಂಕುರ ಶ್ರೀಃ ।
ಪ್ರತ್ನೈರೀಷತ್ಪ್ರಭಿನ್ನೋಽ । ಜನಿ ಜಯಮುನಿನಾ ಸಮ್ಯಗುದ್ಭಿನ್ನ ಶಾಖಃ ॥

72 ಅದೇ ಗ್ರಂಥ, ಸಂಧಿ–55. ಪದ್ಯ-54, ಪು. 694

73 ವಾಯುಸ್ತುತಿ, ಶ್ಲೋಕ-15

74 ಶ್ರೀ ಪುರಂದರದಾಸರ ಸಾಹಿತ್ಯ 1. ಪೂಜಾತತ್ವ, ಪದ್ಯ-22, ಪು. 25
ಪೂಜಾತತ್ವಕ್ಕೆ ಅದರ ಸಂಪಾದಕರುಗಳು ಬರೆದ ಟಿಪ್ಪಣಿಗಳನ್ನೂ ಈ ಸಂದರ್ಭದಲ್ಲಿ ಅವಲೋಕಿಸುವುದು ಏಹಿತ. ನಮ್ಮಮೇಲಿನ ಹೇಳಿಕೆಗೆ ಅಲ್ಲಿ ಸಾಕಷ್ಟು ಆಧಾರಗಳು ದೊರೆಯುತ್ತವೆ. ಪೂಜಾತತ್ವ, ಪು. 216

ಮೌನಿಶ ವ್ಯಾಸರಾಜಾ । ದುದಿತ ಕಿಸಲಯಃ ಪುಷ್ಪಿತೋಽಯಂ ಜಯಿಂದ್ರಾತ್ ।
ಅದ್ಯ ಶ್ರೀ ರಾಘವೇಂದ್ರಾ । ದ್ವಿಲಸತಿ ಫಲಿತೋ ಮಧ್ವ ಸಿದ್ಧಾಂತಶಾಖೀ ॥[75]

2 ಶ್ರೀಮದಾನಂದತೀರ್ಥಾರ್ಯ ಶಾಸ್ತ್ರ ದುಗ್ಧಾಬ್ಧಿ ಮಂಥನಾತ್ ।
ಪ್ರಾಪ್ತಾ 'ನ್ಯಾಯಸುಧಾ'ಯೇನ ಚಂ ಜಯೀಂದ್ರಮಹಂ ಭಜೇ ॥

3 ಯಸ್ಯ ವಾಕ್ಯಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।
ಸೇವೇ ತಂ 'ಜಯಯೋಗೀಂದ್ರಂ' ಕಾಮಬಾಣಚ್ಛಿದಂ ಸದಾ ॥

4 ಜಯರಾಯರ ನೋಡಿರೋ । ಸಜ್ಜನರೆಲ್ಲ ಜಯರಾಯರ ಪಾಡಿರೊ ॥[76]

—ಇತ್ಯಾದಿಗಳನ್ನು ಇಲ್ಲಿ ಸ್ಮರಿಸಕೊಳ್ಳಬಹುದು. ಕವಿಯು ಜಯತೀರ್ಥರನ್ನು ಸ್ಮರಿಸಿಲ್ಲವಾದುದರಿಂದ ಅವರಿಗಿಂತ ಪೂರ್ವದಲ್ಲಿ ಇದ್ದನು, ಜಯತೀರ್ಥರು ಹುಟ್ಟುವದಕ್ಕಿಂತ ಮುಂಚೆಯೆ ಇದ್ದ ಕವಿ ಅವರನ್ನು ಸ್ಮರಿಸಲು ಹೇಗೆ ಸಾಧ್ಯ ? ಈ ಜಯತೀರ್ಥರು ವಿದ್ಯಾರಣ್ಯರ ಸಮಕಾಲೀನರಾದುದರಿಂದ ಕುಮಾರ ವಾಲ್ಮೀಕಿಯು ತತ್ಪೂರ್ವದಲ್ಲಿಯೆ ಇದ್ದನು. ಆದುದರಿಂದ "ಅಂತೂ ಕುಮಾರವ್ಯಾಸ, ಕುಮಾರ ವಾಲ್ಮೀಕಿ ಇಬ್ಬರೂ ವಿದ್ಯಾರಣ್ಯರ ಪರಂಪರೆಯುವರು, ಒಬ್ಬನು ಯೋಗೀ ಸಂಪ್ರದಾಯವನ್ನು ಹೇಳಿದ್ದರೆ ಇನ್ನೊಬ್ಬನು ಪೀಠ ಪರಂಪರೆಯನ್ನು ಹೇಳಿದ್ದಾನೆ ಎನ್ನಬಹುದು" ಎಂಬ ದ. ರಾ. ಬೇಂದ್ರೆಯವರ ಹೇಳಿಕೆ[77] ನಿರಾಧಾರವಾದುದು ; ಶುದ್ಧ ಸಂಶೋಧನೆಯಿಂದ ಅತೀತವಾದುದು. ಶ್ರೀಯುತರು ಆ ಪೇಟೆಯ ಪ್ರತಿಯಲ್ಲಿ ಸಹ ಇರುವ 'ಹನುಮನ ಸ್ತುತಿ' ಇತ್ಯಾದಿಗಳನ್ನು ಗಮನಿಸಿಲ್ಲ. ಕುಮಾರವ್ಯಾಸನು 'ಜಯ ಯೋಗೀಂದ್ರ'ರ ಹಾಗೆ ತತ್ಪೂರ್ವದಲ್ಲಿ ಇದ್ದ ಒಬ್ಬ ವೈಷ್ಣವ ಯೋಗೀಂದ್ರ. ಆತ ಕೃಷ್ಣ ಪಾರಮ್ಯವನ್ನು ಸೂಚಿಸಿದ–ನೆಮ್ಮಿದ ಕವೀಂದ್ರ. ಅದೇ ಪ್ರಕಾರ ಮಧ್ವಾಚಾರ್ಯರ ನೇರ ಸಂಪರ್ಕದಲ್ಲಿ ಬಂದ ವ್ಯಕ್ತಿ ಕವಿ ಕುಮಾರವಾಲ್ಮೀಕಿ. ಮಧ್ವಾಚಾರ್ಯರು ಶ್ರೀಕೂರ್ಮದ ಶಾಸನದ ಆಧಾರದ ಪ್ರಕಾರ ಕ್ರಿ.ಶ. 1280ಕ್ಕೂ ಮುಂಚೆಯೆ ಇದ್ದರು.[78] ಆದುದರಿಂದ ಈ ಇಬ್ಬರು

---

75 Prof. R. D, Ranade : *Pathway to God in Kannada Literature*, pp. 182-83

76 ಇದು ವಿಜಯದಾಸರ ಕೀರ್ತನೆ, ಪುರಂದರದಾಸರೂ ಟೀಕಾರಾಯರನ್ನು (ಜಯತೀರ್ಥರನ್ನು) ಸ್ಮರಿಸಿದ್ದಾರೆ.

77 ಬಸವನಾಳ ಸ್ಮಾರಕ-ಸಂಪುಟ, ಪು. 551 (ದ. ರಾ. ಬೇಂದ್ರೆಯವರ ಲೇಖನ—ಕುಮಾರ ವ್ಯಾಸನ ಕಾಲ ನಿರ್ಣಯದ ಬಗ್ಗೆ)

78 (a) Ep. Ind. Vol. VI, p. 263
(b) ಆರ್. ಎಸ್. ಪಂಚಮುಖಿ, ಹರಿದಾಸ ಸಾಹಿತ್ಯ, ಪು. 27-3-75

ಕವಿಗಳು ಕ್ರಿ.ಶ. 1280ಕ್ಕೂ ಮುಂಚೆ ಇದ್ದರು. ಮಧ್ವಾಚಾರ್ಯರು 1199-1276[79] ರವರೆಗೆ ಇದ್ದುದರಿಂದ ಕುಮಾರವಾಲ್ಮೀಕಿ ಕುಮಾರವ್ಯಾಸನ ತರುವಾಯ ಮತ್ತು 1276ಕ್ಕೂ ಮುಂಚೆ ಇದ್ದ.

ಕುಮಾರವಾಲ್ಮೀಕಿ ತನ್ನ ಗ್ರಂಥದಲ್ಲಿ ವಿಜಯನಗರದ ಅಥವಾ ಅವರ ಸಮಕಾಲೀನರಾದ ಬಿಜಾಪುರದ ಆದಿಲ್‌ಷಾಹಿ ಮನೆತನದ ವಿಷಯಗಳನ್ನು ಒಂದೆಡೆಯಲ್ಲೂ ಹೇಳಿಲ್ಲ. ಆದಿಲ್‌ಷಹ ಕೆರೆಯನ್ನು ಕಟ್ಟಿಸಿದನೇ ಹೊರತು ಆ ತೊರವೆಯನ್ನು ಕಟ್ಟಿಸಿದುದಕ್ಕೆ ಆಧಾರಗಳಿಲ್ಲ. ಈ ಆದಿಲಷಾಹಿ ಹಾಗೂ ಇತರ ಮುಹಮ್ಮದೀಯರು ಅಂದಿನ ರಾಜರ ನೀತಿಯ ಪ್ರಕಾರ ಬಿಜಾಪುರ ಹಾಗೂ ಅದರ ಸುತ್ತ-ಮುತ್ತಣ ಸ್ಥಳಗಳಲ್ಲಿನ ದೇವಾಲಯಗಳನ್ನು ಹಾಳಗಿಸಿ-ಕೆಡವಿ-ಅಲ್ಲಿನ ಕಲ್ಲು ಕಂಬಗಳನ್ನು ಮುಹಮ್ಮದೀಯರ ಕಟ್ಟಡಗಳಿಗೆ ಬಳಸಿದುದು ಇಂದೂ ಕಣ್ಣಾರ ಕಾಣಬಹುದು. ತೊರವೆಯ ದೇವಾಲಯಗಳು ಹೀಗೆ ಹಾಳಾದಾಗ ಅನಂತರದಲ್ಲಿ ಮತ್ತೆ ದೇವಾಲಯಗಳು ನಿರ್ಮಾಣವಾದುದು ಅಸಹಜವೂ ಅಲ್ಲ, ಅಸ್ವಾಭಾವಿಕವೂ ಅಲ್ಲ. ಆದರೆ ಹೊಸ ಕಟ್ಟಡಗಳ ಹಿನ್ನೆಲೆಯನ್ನು ಅರಿಯದೆ ಇತಿಹಾಸ ಬರೆಯುವುದು ನಮಗೆ ಸಮಂಜಸ ತೋರದು. ಕಾರಣ ತೊರವಿಯಲ್ಲಿ ಈಗ ಇರುವ ಹೊಸದಾದ ದೇವಾಲಯದ ಕೇವಲ ಕಟ್ಟಡದ ಆಧಾರ ಮೇಲೆ ಕವಿಯ ಕಾಲವನ್ನು ನಿರ್ಣಯಿಸುವುದು ಸರಿಯಲ್ಲ. ಅಲ್ಲಿ ಏನಾದರೂ ಶಾಸನಗಳಿದ್ದು ಕವಿಯ ಕಾಲವನ್ನು ಅವು ತಿಳಿಸುತ್ತಿದ್ದರೆ ಸಹಸಾ ಸ್ವೀಕರಿಸಬೇಕು. ಅಂತಹ ಶಾಸನವೊಂದು ಆ ದೇವಾಲಯದಲ್ಲಿ ಇಲ್ಲ. ಕಾರಣ ಆ ದೇವಾಲಯದ ಕಟ್ಟಡದ ತರುವಾಯವೇ ಕವಿ ಇದ್ದನೆಂಬ ನಿರ್ಣಯ ತ್ಯಾಜ್ಯ.

'ತೊರೆವೆ ರಾಮಾಯಣ' ಗ್ರಂಥದಲ್ಲಿನ ಐತಿಹಾಸಿಕ ಭೌಗೋಲಿಕಾಂಶಗಳು ಏನನ್ನು ಹೇಳುತ್ತವೆ-ಸ್ವಲ್ಪ ನೋಡೋಣ. ಈ ಕನ್ನಡ ಕವಿ ಎರಡು ಸಲ ತಾನಿದ್ದ ದೇಶವನ್ನು ಗ್ರಂಥವಲ್ಲಿ ಹೇಳಿದ್ದಾನೆ. ಅದೆಂದರೆ ಸೇವಣ ದೇಶ. ಬಿಜಾಪುರ ಜಿಲ್ಲೆಯ ಭೀಮಾತೀರ-ಮುದ್ದೆಬಿಹಾಳ ತಾಲೂಕಾ[80]–ಇವು ಸು. ಕ್ರಿ. ಶ. 8ನೆಯ ಶತಮಾನದಿಂದಲೂ ಸೇಉಣ ದೇಶ ಎಂದು ಪ್ರಸಿದ್ಧ; ಇದಕ್ಕೆ ಸಾಕ್ಷಿ 8ನೆಯ

---

79 (a) R. G. Bhandarkar, Vaishnavism, Saivism and Minor Religions
ಗ್ರಂಥದಲ್ಲಿ ಕ್ರಿ.ಶ. 1199-1276 ಮಧ್ವಾಚಾರ್ಯರ ಕಾಲ ಎಂದಿದ್ದಾರೆ.
(b) ಪೇಜಾವರ ಮಠದ ಕೈಫಿಯತ್ತಿನಲ್ಲಿ 1199-1278 ಎಂದಿದೆ ಎಂದಿದ್ದಾರೆ, ಸುರತ್ಕಲ್ಲಿನ ಕೆ. ವೆಂಕಟರಾಮಾಚಾರ್ಯರು : ಸಾಹಿತ್ಯದ ಹಿನ್ನೆಲೆ, ಪು. 51

80 BKI. Vol. I. No. 66

ಶತಮಾನದ ಉತ್ತರಾರ್ಧದಲ್ಲಿದ್ದ ಪ್ರಾಕೃತ ಭಾಷೆಯಲ್ಲಿ ಕೃತಿ ರಚಿಸಿದ ಕನ್ನಡಿಗನೇ ಆದ ಕವಿರಾಜ ಸ್ವಯಂಭುವಿನ 'ಪಉಮಚರಿಉ' ಕಾವ್ಯದ 69ನೆಯ ಸಂಧಿಯ 6ನೆಯ ಕಡವಕದ ಈ ಪದ್ಯ ಭಾಗ :

ಪುಣು ಸರಿ ಭೀಮರಹಿ ಜಲೋಹಫಾರ
ಜಾ ಸೇಉಣ ದೇಸ ಹೊ ಅಮಿಯಧಾರ [81]
[ಪುನ ನದಿ ಭೀಮಾ ಜಲೋಘ ನಿರ್ಝರ
ತಾ ಸೇಉಣ ದೇಸದಲಮೃತ ಧಾರೆ]

ಈ ಸೇಉಣ ದೇಶವನ್ನೇ ಕವಿ ತೊರವೆ ರಾಮಾಯಣದಲ್ಲಿ ಹೀಗೆ ಉಲ್ಲೇಖಿಸಿದ್ದಾನೆ:

ಮಣಿಯದವನೀಪಾಲಕರ ಪ
ಟ್ಟಣವ ಸೂರೆಯ ಕೊಳುತ ಕಲಿಸೇ
ವಣ ಸುಶರ್ಮಾದಿಗಳ ಹಿಡಿದಾಕರಿಸಿ ಬೆಸಗೊಳುತ ।
ಪ್ರಣುತರನು ತಲೆಗಾಯ್ದು ಬಿಡುತಿ
ಟ್ಟಣಿಸಿ ಕಾವೇರಿಯ ತಟಾಕದ
ಕಣಿಯುವಿಡಿ ದೈತಂದು ಹೊಕ್ಕರು ಪಾಂಡ್ಯ ಮಂಡಲವ ॥[82]

[ವಾನರ ಸೈನ್ಯ ಮಣಿಯದವರನ್ನು ಮಣಿಸಿ, ಕಲಿ ಸೇವಣ ಹಾಗು ತ್ರಿಗರ್ತ ದೇಶಗಳ ರಾಜರನ್ನು ಹಿಡಿದು ಅವರಲ್ಲಿ ಮಣಿದವರನ್ನು ತಲೆಗಾಯ್ದು (ರಕ್ಷಿಸಿ) ಎದುರಿಸಿದವರನ್ನು ಶಿಕ್ಷಿಸಿ ಕಾವೇರಿ ತಟದ ಕಣಿವೆಯ ಮೂಲಕ ಸಿಂಹಳ ದೇಶಕ್ಕೆ ಹೋಯಿತು.]

ತೀರಿದವು ಗಿರಿ ಮರು ಯವನ ಗಾಂ
ಧಾರ ಗುಜ್ಜರ ಗೌಳ ಮಾಳವ
ಪಾರಸಿಕ ಪಾಂಚಾಲ ಸೇವಣ ಸಿಂಧು ಕಾಂಭೋಜ ।
ಕೀರಳಾಂಧ್ರ ಕರೂಪ ಕುರು ಹ
ಮ್ಮೀರ ವಂಗ ಕಳಿಂಗ ದೇಶದ
ಭೂರಿ ಭೂಧರ ನಿಕರ ನಳನ ಸಮುದ್ರ ಬಂಧದಲಿ ॥[83]

[ನಳನು ಸಮುದ್ರಕ್ಕೆ ಸೇತುವೆ ಕಟ್ಟುವಲ್ಲಿ ಹಲವು ದೇಶಗಳ ಗಿರಿಗಳು ಮುಗಿದು ಹೋದುವು !] ಇಷ್ಟು ದೇಶಗಳ ಹೆಸರನ್ನು ಹೇಳಿದ ಕವಿಗೆ ವಿಜಯನಗರದ ಹೆಸರು ಹೇಳಲು ಕಷ್ಟ ಆಗುತ್ತಿದ್ದಿಲ್ಲ. ವಿಜಯನಗರದ ಅರಸರು ಸೇಉಣರ ಹಾಗೆ ಈ ದೇಶಗಳ ಸಂಪರ್ಕವನ್ನು ಹೊಂದಿದ್ದಿಲ್ಲ. ಸಂಸ್ಕೃತ ಮೂಲದಲ್ಲಿ 'ಸೇವಣ' ದೇಶದ ಪ್ರಸಕ್ತಿ ಇಲ್ಲ. ಆದುದರಿಂದ ಕವಿ ತಾನು ಬಲ್ಲ ದೇಶವನ್ನೇ ಹೇಳಿದ್ದಾನೆ. ಸೇಉಣ

---

81 ಪಉಮಚರಿಉ (ಸಂ. ಎಚ್. ಸಿ. ಭಯಾನಿ) ಭಾಗ-3, ಸಂಧಿ-69, ಕಡವಕ-6 ಪು. 88

82 ತೊರವೆ ರಾಮಾಯಣ ಸಂಪುಟ 1, ಕಿಷ್ಕಿಂಧಾಕಾಂಡ, ಸಂಧಿ-10, ಪದ್ಯ-4, ಪು. 426

83 ಅದೇ ಗ್ರಂಥ, ಸಂಪುಟ–2, ಯುದ್ಧಕಾಂಡ, ಸಂಧಿ–5, ಪದ್ಯ-7, ಪು. 50

ದೇಶಕ್ಕೆ ಮಿಕ್ಕ ದೇಶಗಳಿಗೆ ಹೇಳದ ವಿಶೇಷಣವೊಂದನ್ನು ಹೇಳಿದ್ದಾನೆ. ಅದು ಕಲಿ ಸೇವಣದೇಶ! ಸೇಉಣ ರಾಮಚಂದ್ರನ ಕಾಲಕ್ಕೂ ಅನೇಕ ಯುದ್ಧಗಳು ಜರುಗಿದವು. ಸೇವುಣ ದೇಶದ ಅಸ್ತಿತ್ವ ವಿಜಯನಗರ ಹಾಗೂ ಬಹಮನಿ ರಾಜ್ಯಗಳು ತಲೆದೋರದಕ್ಕಿಂತ ಮುಂಚೆ. ಅಷ್ಟೇ ಅಲ್ಲ, ಈ ಕಾವ್ಯದಲ್ಲಿ ಸೇಉಣ ರಾಜ್ಯ ಹಾಳಾದುದಕ್ಕೆ ತುರುಕರ ಹಾವಳಿ ಉಂಟಾದುದಕ್ಕೆ, ಕಿಂಚಿತ್ತು ಎಡೆದೊರಕಿಲ್ಲ. ಕವಿ ರಾಮರಾಜ್ಯವನ್ನು ವರ್ಣಿಸುತ್ತ ತನ್ನ ಸಮಕಾಲೀನನಾದ ಯಾದವ ರಾಮಚಂದ್ರನ ರಾಜ್ಯವನ್ನೇ ದೃಷ್ಟಿಯಲ್ಲಿಟ್ಟುಕೊಂಡಹಾಗೆ ನಮಗೆ ತೋರುತ್ತದೆ. ಇದು ಸರಿಯಾದರೆ 'ತೊರವೆ ರಾಮಾಯಣ' ಕ್ರಿ.ಶ. 1271 ರಿಂದ 1278ರ ಮಧ್ಯೆ ರಚಿತವಾಯಿತೆಂದು ನಿಶ್ಚಯವಾಗುತ್ತದೆ. ಗ್ರಂಥಗಳಲ್ಲಿ ಖಚಿತ ತೇದಿಗಳು ಇಲ್ಲದಿರುವಾಗ ಸದ್ಯ ಇಂತಹ ವರುಷವೇ ರಚಿತವಾದವೆಂದು ಹೇಳಲು ಬರದು. ಆ ವಿಷಯಗಳು ಸಂಶೋಧನೆಯಲ್ಲಿ ಹೊರಬೀಳಬೇಕು.

3

ಕುಮಾರವ್ಯಾಸನ ಮತದ ಬಗೆಗೆ ಕೆಲವು ಮಾತುಗಳನ್ನು ಹೇಳಲೇಬೇಕು. ಇದನ್ನು ಬರೆಯಬೇಕಾದರೆ ಕವಿ ಇದ್ದ ನಾಡಿನ ಭಾಗದ-ಪರಿಸರದ-ಧಾರ್ಮಿಕ ಪಂಥಗಳ ಚಟುವಟಿಕೆಗಳನ್ನು ತಿಳಿದುಕೊಳ್ಳಬೇಕು. ಗದುಗಿನಲ್ಲಿ ವೈಷ್ಣವ ಧರ್ಮವೇನೋ ಇದ್ದಿತು. ಆದರೆ ಅದು ರಾಮಾನುಜಾಚಾರ್ಯರ 'ಶ್ರೀವೈಷ್ಣವ' ಪಂಥವಲ್ಲ. ಆ ಪಂಥ ಅಂದಿನಿಂದ ಇಂದಿನವರೆಗೆ ಆ ಭೂಭಾಗದಲ್ಲಿ ಧಾರ್ಮಿಕಚಟುವಟಿಕೆಯ ಹೆಜ್ಜೆಯನ್ನು ಇಟ್ಟಿಲ್ಲ. ಅದರ ಚಲನವಲನವೆಲ್ಲ ತುಂಗಭದ್ರೆಯಿಂದ ಈಚೆಗೆ. ಅದು ಇಲ್ಲಿ ಇದ್ದಿತ್ತೆನ್ನುವದಕ್ಕೆ ಇದುವರೆಗೆ ಒಂದು ಕುರುಹೂ ದೊರೆತಿಲ್ಲ. ಕಾರಣ ಕವಿಯ ಹಣೆಗೆ ಶ್ರೀವೈಷ್ಣವ ನಾಮದ ಪಟ್ಟಿಯನ್ನು ಬಳೆಯುವಂತಿಲ್ಲ. ಅಂತಹ ಪ್ರಯತ್ನಗಳು ನಡೆದಿವೆ.[84] ಅದು ನಿಸ್ಪೃಹನಡೆಯ ಸಂಶೋಧನೆಯಲ್ಲ. ಕವಿ ಯಾವ ಮತದವನಾದರೂ ಅಷ್ಟೆ. ಆದರೆ ಅವನು ಪರಿಸರವನ್ನು ಅರ್ಥ ಮಾಡಿಕೊಳ್ಳದೆ ತಿಳಿದುಕೊಳ್ಳದೆ ಆತನ ಕಾವ್ಯವನ್ನು ಅರ್ಥ ಮಾಡಿಕೊಂಡಿದ್ದೇನೆ ಎನ್ನುವುದು ಧಾರ್ಷ್ಟ್ಯದ ಮಾತಾಗುತ್ತದೆ. ಅಂತೆಯೆ ಕವಿಯ ಪರಿಸರ ಅರಿತುಕೊಳ್ಳುವುದು ಕಾವ್ಯದಾಸ್ವಾದನೆಗೆ ಅಗತ್ಯವಾದ ವಿಷಯ. ಕವಿಯ ದೃಷ್ಟಿಯಲ್ಲಿ ಶಿವ, ವಿಷ್ಣು ಅಭಿನ್ನರು. ಮಧ್ವಾಚಾರ್ಯರಿಗಿಂತ ಮುಂಚೆ ಉತ್ತರ ಕರ್ನಾಟಕದಲ್ಲಿ ಶಂಕರ ಬ್ರಹ್ಮ ಪಾರಮ್ಯದಿಂದ ಸಂಪೂರ್ಣ ಭಿನ್ನವಾದ ಭಾಗವತ ಸಂಪ್ರದಾಯವೊಂದಿದ್ದಿತು. ಅದರ ಮೂಲ ಮಾರ್ಗ ಭಕ್ತಿ. ಪಂಢರಪುರದ 'ಪಾಂಡುರಂಗ' ಅದರ ಕೇಂದ್ರ ಶಕ್ತಿ.

---

84 ಎಂ. ಪಿ. ದೊರೆಸ್ವಾಮಿ ಅಯ್ಯಂಗಾರ್. ಕುಮಾರವ್ಯಾಸ ಪ್ರಶಸ್ತಿ–'ಕುಮಾರ ವ್ಯಾಸನ ಮತ ಧರ್ಮ', ಪು. 78.

ಮಧ್ವಾಚಾರ್ಯರೂ ಆ ಪಾಂಡುರಂಗನ ದಾಸರಾಗಿದ್ದರು: ಪುರಂದರ ವಿಠಲನ ಪಾದಪೂಜೆಯ ಮಾಳ್ಪಗುರು ಮಧ್ವರಾಯ[85]–ಎಂದು ಅವರನ್ನು ಪುರಂದರದಾಸರು ಸ್ತುತಿಸಿದ್ದಾರೆ. ಮಧ್ವಪಂಥ ಅವರ ತರುವಾಯದ್ದು. ತತ್ಪೂರ್ವದಲ್ಲಿ ಅವರ ಗುರುಗಳು ಮೊದಲಾದವರು ವಿಷ್ಣೂಪಾಸಕರಾಗಿದ್ದರು. ಅಂದಿನ ಆ ಭಾಗವತ ಸಂಪ್ರದಾಯ ಈ ಪಾಂಡುರಂಗನ ಭಕ್ತಿಯೇ ಆಗಿತ್ತು. ಕುಮಾರವ್ಯಾಸನಿಗೆ ಪಶುಪತಿ ಶಿವನ ಮೇಲೆ ಸಾಕಷ್ಟು ಶ್ರದ್ಧೆ. ಆದರೆ ಆ ಶಿವ, ಕೃಷ್ಣನಿಂದ ಭಿನ್ನನಲ್ಲ! ಕಿರಾತಾರ್ಜುನೀಯ ಪ್ರಸಂಗ ಈ ಪದ್ಯವನ್ನು ನೋಡಿ:-

ಹರಿಸಹಾಯನು ನಮ್ಮ ಸತ್ವದ
ಪರಮ ರೂಪಾತನು ಕಣಾ ನೀ
ನರಿವಿರೆಂದು ಮಹೇಶಬೀಳ್ಕೊಟ್ಟನು ಧನಂಜಯನ ॥[86]

ಹೀಗೆ ವೀರವೈಷ್ಣವರು ಶಿವ ವಿಷ್ಣು–ಐಕ್ಯತೆಯನ್ನು ಹೇಳರು. ಆದುದರಿಂದ ಆ ಶ್ರೀವೈಷ್ಣವನಲ್ಲ. ಇದೇ ಕಾರಣದಿಂದ ಆತ ಮಧ್ವರಾಯರ ಅನಂತರದ ತಾರತಮ್ಯ ದಲ್ಲಿ ಒಪ್ಪಿಗೆ ಹೊಂದಿದ ವ್ಯಕ್ತಿ ಅಲ್ಲವಾದುದರಿಂದ ದ್ವೈತಿಯೂ ಅಲ್ಲ. ಕೃಷ್ಣನ ಪಾರಮ್ಯವಿರುವದರಿಂದ ಕವಿ ಸ್ಮಾರ್ತ ಅದ್ವೈತಿಯೂ ಅಲ್ಲ. ಅಷ್ಟೇ ಅಲ್ಲ. ಆ ಪಂಥವನ್ನು ಆತ ಇನಿತುಕಡೆಗಣ್ಣಿನಿಂದಲೇ ನೋಡಿದುದೂ ಉಂಟು : ಕೃಷ್ಣ

'ಕರಗಲಂತಃಕರಣ ಚಿಂತಾ
ತುರನು ಸಂಗ್ರಾಮದ ವಿರಕ್ತಿಯೊ
ಳಿರಲು ಕಂಡನು ಕಮಲನಾಭನು ನಗುತ ಮನದೊಳಗೆ ।
ತರಳನಿವನದ್ವೈತಕಲೆಯುಲಿ
ಪರಿಣತನುತಾನಲ್ಲ, ನೆವದಿಂ
ನರನ ಬೋಧಿಸಬೇಕೆನುತ ನುಡಿಸಿದನು ಫಲುಗುಣನ[87] ॥

ಮತ್ತೆ

ಪಸರಿಸಿತಲಾ ಸ್ಮಾರ್ತಮಾರ್ಗ
ಪ್ರಸರ ಕೊಂದಡೆ ಪಾಪ ಪಾವನ
ವೆಸಗೆ ಪುಣ್ಯವೆನಿಪ್ಪ ವಿವರಕ್ಕೇನು ನೆಲೆಯೆಂದ ॥
ಸುಕೃತ ದುಷ್ಕೃತವೆಂಬವೇ ಬಾ
ಧಕವು ಜೀವರ್ಗಿಗೀಯಹಂಕೃತಿ
ವಿಕಳತೆಗೆ ತಾಬೀಜ ಜನ್ಮದ ಚುಟ್ಟುಮುರಿಗಳಿಗೆ ।

---

85 Prof R. D. Ranade, *Pathway to God in Kannada Literature*, p. 127

86 ಕು. ಮಹಾಭಾರತ (ಮೈ. ಸಂ. ಸಂ. ಪ್ರ. ಶಾಖೆಯ ಮುದ್ರಣ), ಅರಣ್ಯಪರ್ವ, ಸಂಧಿ.6 ಪದ್ಯ–108

87 ಭೀಷ್ಮಪರ್ವ (ORI Edition) ಸಂಧಿ-3, ಪದ್ಯ–32

ಸಕಲ ಕರ್ತೃತ್ವಾದಿ ಭೋಕ್ತೃ
ತ್ವಕವಿದಾತ್ಮಂಗಿಲ್ಲ ಪಿತ್ರಾ
ಧಿಕನು ತಿರುಗುತ ಲೋಕ ತಿರುಗುವದೆಂಬ ತೇರಿನಂತೆ ॥88

—ಕಾರಣ ಕುಮಾರವ್ಯಾಸ ಶಿವನೇ ಪರಮಗಂತವ್ಯ ಎಂದು ನಂಬಿದ ಸ್ಮಾರ್ತ ಅಥವಾ ವೀರಶೈವನಲ್ಲ. ಹಾಗಾದರೆ ಕುಮಾರವ್ಯಾಸನದು ಯಾವದು ಮಾರ್ಗ ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಇದಕ್ಕೆ ಆತ ಗ್ರಂಥದಲ್ಲಿ ಹಲವೆಡೆ ಉತ್ತರ ಕೊಟ್ಟಿದ್ದಾನೆ—ನೋಡುವ ನಿಸ್ಪೃಹ ಕಣ್ಣು ಬೇಕು—ಅಷ್ಟೇ. ಕುಮಾರವ್ಯಾಸನು ಒಬ್ಬ ದೊಡ್ಡ ಅನುಭಾವಿ, ಭಕ್ತ ; ಮುಕ್ತಿಪಥದಲ್ಲಿ ಆತ ಕೃಷ್ಣನ ಶ್ರೀಪದವನ್ನು ಸಾರುವ **'ಅಭಂಗ ಪೆಂಡೆಯದಾಳು'** ! ಸಂಸ್ಕೃತ ಮೂಲದಲ್ಲಿ ಇಲ್ಲದ ಈ ಪದ್ಯದ ಭಾವವನ್ನು ನೋಡಿ :

ಭಂಗವಲ್ಲಿದು ನಿನ್ನ ಘನತೆಗೆ
ಡಿಂಗರಿಗರೇ ಮಿಗಿಲು ನಿನಗೆಯು
ಡಿಂಗರಿಗರೇ ಬಲ್ಲಿದರು ದಾಕ್ಷಿಣ್ಯವೇಕೆ ।
ಮಂಗಳಾತ್ಮಕ ಕೇಳು ನಿನ್ನಯ
ಹಂಗನೊಲ್ಲೆನು ಮುಕುತಿ ಪಥದೊಳ
ಭಂಗಪೆಂಡೆಯದಾಳಲ್ಲೈ ನಿಮ್ಮಡಿಯ ಸಿರಿನಾಮ ॥ 89

ಇದಕ್ಕೆ ಸಂವಾದಿಯೆ ಆಗಿದೆ ಪುರಂದರದಾಸರ ಕೀರ್ತನೆ 'ನೀನ್ಯಾಕೋ ನಿನ ಹಂಗ್ಯಾಕೋ ನಿನ ನಾಮದ ಬಲವೊಂದಿದ್ದರೆ ಸಾಕೋ'—ಎಂಬುದು. ಕವಿ ಹೇಳಿರುವ 'ಅಭಂಗ' ಇದು ದೇವರ ನಾಮಸಂಕೀರ್ತನೆ–ಕನ್ನಡದ ಕೀರ್ತನೆ. ಮರಾಠಿಯಲ್ಲಿ ಇಂದಿಗೂ ಬಳಕೆಯಲ್ಲಿರುವ ಒಂದು ಸಾಹಿತ್ಯರೂಪ. ಇದನ್ನು ರಾ. ಸ್ವಾ. ಪಂಚಮುಖಿಯವರು 'ಅಭಂಗವು ಮರಾಠಿ ವಾಙ್ಮಯದಲ್ಲಿ ಒಂದು ವೃತ್ತದ ಹೆಸರು'90 ಎಂದಿದ್ದಾರೆ. ಆದರೆ ಇದು ಒಂದು ವೃತ್ತವಲ್ಲ. 'ರಗಳೆ' 'ಷಟ್ಪದಿ'ಗಳ ಹಾಗೆ ಒಂದು ಪದ್ಧತಿ. ಆದರೆ ಅವರ ಹಾಗೆ ನಿಶ್ಚಿತ ನಿಯಮಕ್ಕೆ ಕಟ್ಟುಬಿದ್ದ ಜಾತಿಯಲ್ಲ. ಕುಮಾರವ್ಯಾಸನು ಅಭಂಗಗಳನ್ನು ಚೆನ್ನಾಗಿ ಬಲ್ಲವನಾಗಿದ್ದನೆನ್ನಲು ಇನ್ನೊಂದೆಡೆಯಲ್ಲೂ ಪ್ರಯೋಗ ದೊರೆಯುತ್ತದೆ; ಅದು ಆತನ ದಾರಿಯನ್ನೂ ಸ್ಪಷ್ಟಪಡಿಸುತ್ತದೆ :

ಮಂಗಳವು ನಿಮಗೆಂದು ಹಂಸೆಯ
ಬೆಂಗೆ ಹಾಯ್ದನು ಬಳಿಕ ನಭದೊಳ
ಭಂಗ ಮುನಿಯಡಗಿದನು ತಮ್ಮೊಳಗೆಂದರೀ ನೃಪರು ।

---

88 ಅದೇ, ಪದ್ಯ 54–55, ಪು. 41
89 ಅದೇ, ಸಂಧಿ–6, ಪದ್ಯ-44, ಪು. 97
90 ಹರಿದಾಸ ಸಾಹಿತ್ಯ, ಪು. 293

ಅಂಗನಾ ವಿಷಯದಲಿ ಸೀಮಾ
ಸಂಗತಿಯ ಸೇರಿಸಿದನೈಮುನಿ
ಪುಂಗವನ ಕರುಣದಲಿ ಗದುಗಿನ ವೀರನಾರಯಣ ॥ 91

—ಅಭಂಗಮುನಿನಾರದ, ಹಂಸೆಯು ಬೆಂಗೆ ಹಾಯ್ದನು—ಇದು ಬಹುಮುಖ್ಯದ ಮಾತು. ಯಾವುದು ಕವಿಯ ಮತವನ್ನು ಆತನ ಕಾಲದ ಉತ್ತರ ಕರ್ನಾಟಕದಲ್ಲಿನ ವೈಷ್ಣವ ಸಂಪ್ರದಾಯದ ಸ್ವರೂಪವನ್ನು ತಿಳಿಸಿಕೊಡುತ್ತದೆ. ಮಧ್ವರೂ ಹೇಳುವುದು 'ಹಂಸ' ನಾಮಕ ಪರಮಾತ್ಮನನ್ನೇ ವಿನಾ 'ಸೋಹಂ' ಎಂಬ ತತ್ವವನ್ನಲ್ಲ. ನಾರದರಿಂದ ಪ್ರಣೀತವಾದ ಭಕ್ತಿಮಾರ್ಗ ಮಧ್ವರಿಗೂ ಶ್ರೇಷ್ಠವೇ. ನಾರದರನ್ನು ಪುರಂದರದಾಸರು ಅನೇಕ ಕೀರ್ತನೆಗಳಲ್ಲಿ ಹೇಳಿದ್ದಾರೆ. ಒಂದನ್ನಿಲ್ಲಿ ಜ್ಞಾಪಿಸಿಕೊಡಬಹುದು :

ಮಂಗಳಾಭಿಷೇಕಕೆ ಉದಕ ತರುವೆನೆನೆ
ಗಂಗೆಯ ಅಂಗುಟದಿ ಪಡೆದಿಹೆಯೊ ॥
ಸಂಗೀತ ಕೀರ್ತನೆ ಪಾಡುವೆನೆಂದರೆ
ಹಿಂಗದೆ ತುಂಬುರ-ನಾರದರು ಪಾಡುವರೋ ॥92

ಈ ತುಂಬುರ ನಾರದರು ಹಾಡಿದ ಕೀರ್ತನೆಗಳ ಸ್ವರೂಪ ದಾಸರಾಯರ ಸಮಕಾಲೀನರೇ ಆದ ಶ್ರೀ ವಾದಿರಾಜರ 'ಲಕ್ಷ್ಮೀ ಶೋಭನ ಹಾಡು' ಎಂಬ ಕೃತಿಯಲ್ಲಿ ದೊರೆಯುತ್ತದೆ. ಅದು ಇಂತಿದೆ :

ಸಂಭ್ರಮದಿಂದಂಬರದಿ ದುಂದುಭಿಮೊಳಗಲು ।
ತುಂಬುರು ನಾರದರು ಸ್ತುತಿಸುತ್ತ ॥
ತುಂಬುರು ನಾರದರು ಸ್ತುತಿಸುತ್ತ ಪಾಡಿದರು ಪೀ ।
ತಾಂಬರಧರನ ಮಹಿಮೆಯ ॥
ದೇವನಾರಿಯರೆಲ್ಲ ಬಂದೊದಗಿ ಪಾಠಕರು ।
ಓವಿ ಪಾಡುತ್ತ ಕುಣಿದರು ।
ದೇವತರುವಿನ ಹೂವಿನ ಮಳೆಗಳ ।
ಶ್ರೀವರನ ಮೇಲೆ ಕರೆದರು ॥ 93

'ಓವಿ' 'ಅಭಂಗ'ದ ಅಂಗವೇ ಎನ್ನುವ ವಿಷಯು ನಮಗೆ ಪ್ರೊ॥ ಮಾಧವ ಪಟವರ್ಧನ ಅವರ ಮರಾಠೀ 'ಛಂದೋ ರಚನಾ' ಗ್ರಂಥದಿಂದ ತಿಳಿದುಬರುತ್ತದೆ.[94] ಅಭಂಗದಲ್ಲಿನ

91 ಕು. ಮಹಾಭಾರತ (ಮೈ. ಸಂ. ಸಂ. ಪ್ರ. ಶಾ. ಪ್ರ.) ಆದಿಪರ್ವ, ಸಂಧಿ-19, ಪದ್ಯ 34, ಪು. 63

92 ಶ್ರೀ ಪುರಂದರ ದಾಸರ ಸಾಹಿತ್ಯ–1, ಪೂಜಾತತ್ವ, ಪು. 118

93 ಲಕ್ಷ್ಮಿಶೋಭನಹಾಡು (ಪಾವಂಜೆಯವರ ಪ್ರಕಟಣೆ) ಪದ್ಯ–74-75. ಪು. 14

94 ಛಂದೋ ರಚನಾ : ಅಭಂಗಾಚಾ ಪಕಪ್ರಕಾರ ಯಾ ಜವ್ಯಾಂಕೀಲ ಪಹಿಲ್ಯಾ ಪ್ರಕಾರ ಸಾರಖಾಚ ಅಸತೋ ಹೇಂ ಸಹಜಧ್ಯಾನಾಂತ ಯೇಣ್ಯಾಜೋಗೇಂ ಆಹೇ–ಪು. 516

ಕೆಲವು ಛಂದಸ್ಸುಗಳಿಗೆ ಅವರು ದೇವದ್ವಾರ, ತುಲಸಿ ಹಾಗೂ ಪುಷ್ಪಗುಚ್ಛ ಹೆಸರುಗಳನ್ನೂ ಹೇಳಿದ್ದಾರೆ. ಮರಾಠೀ ಭಾಷೆಯಲ್ಲಿ ಜ್ಞಾನದೇವ, ನಾಮದೇವ, ತುಕಾರಾಮ–ಮೊದಲಾದವರು 'ಓವಿ'ಗಳನ್ನು ಹಾಡಿದ್ದಾರೆ. 'ಓವಿ' ಮರಾಠಿಯಲ್ಲಿ ಅಕ್ಷರ ಛಂದಸ್ಸುಗಳು. ಗೇಯತೆ ಇವುಗಳ ಪ್ರಧಾನ ಲಕ್ಷಣ. ಪಾದವೊಂದಕ್ಕೆ ಇಂತಿಷ್ಟೇ ಅಕ್ಷರಗಳಿರಬೇಕೆಂಬ ಕಡ್ಡಾಯದ ನಿಯಮವಿಲ್ಲ. ಆದರೆ ನಾದ ಹಾಗೂ ತಾಳಲಯಗಳಿಂದ ಅತೀತವಾಗಬಾರದು–ಅವು. ಅಂತೆಯೆ ನಮ್ಮ ದಾಸರ ಕೀರ್ತನೆಗಳ ಮೂಲನೆಲೆ ಅಭಂಗಗಳಲ್ಲಿ ಎಂದರೆ ತಪ್ಪಾಗದು. ಈ ದಿಶೆಯಲ್ಲಿ ಕೀರ್ತನೆಗಳ ಛಂದಸ್ಸನ್ನು ಪರಿಶೀಲಿಸುವುದು ಸರಿಯೆಂದು ನಮಗೆ ತೋರುತ್ತದೆ.[95] ನಾಲ್ಕು ಓವಿಗಳನ್ನು ಕೊಟ್ಟು ಇದನ್ನು ಸ್ವಲ್ಪ ವಿವರಿಸಬಹುದು :

1	ದೇವಾಚೀಯೇದ್ವಾರೀಂ ।[95]	ದೇವರದೀ ದ್ವಾರs ।
	ಉಭಾಕ್ಷಣಭರೀ ।	ನಿಲ್ಲು ಕ್ಷಣಭರ ।
	ತೇಣೇಂ[96] ಮುಕ್ತಿಚಾರೀ ।	ಅದೇ ಮುಕ್ತಿಕಾರಿs ।
	ಸಾಧಿಯೇಲ್ಯಾ — ಜ್ಞಾನದೇವ	ಸಾಧಕಗೇs — (ಶಶಿತನಯ)
2	ನಾಮಾಮ್ಹಣೇ ಹೋಸೀ ।	ನಾಮ್‌ದೇವ ನುಡಿದ ।
	ಭಕ್ತಿ ಚಾ ವಲ್ಲಭ ।	ನೀ ಭಕ್ತಿ ವಲ್ಲಭ ।
	ಮಾಗೇಪುಢೇ ಉಭಾ ।	ಹಿಂದೆ ಮುಂದೆ ನಿಂತು ।
	ಸಾಂಭಾಲಿಸಿ — ನಾಮದೇವ	ಸಾಂಭಾಳಿಸಿ । — (ಶಶಿತನಯ)
3	ಪಲೀ ಮಾಝೀ ಓವಿ ।	ಹಾಡಿ ನನ್ನ ಓವಿ ।
	ಗಾಈನ ಜಗತ್ರ ।	ಈ ಜಗ ಸರ್ವತ್ರ ।
	ಪಾಹೀನ ಪವಿತ್ರ ।	ಆಯಿತು ಪವಿತ್ರ ।
	ಪಾಣ್ಡುರಂಗ — ತುಕಾರಾಮ[97]	ಪಾಣ್ಡುರಂಗ — (ಶಶಿತನಯ)
4	ರೂಪ ಪಾಹತಾಂ[96] ಲೋಚನೀಂ	ರೂಪವ ನೋಡೆ ನಯನ
	ಸುಖ ಝಾಲೇ ವೋ ಸಾಜಣೀ	ಸುಖವಾಯ್ತು ಸಖಿಮಣಿ
	ಸರ್ವಸುಖಾಚೇಂ ಆಗರ	ಸರ್ವ ಸುಖದ ಆಗರ
	ಬಾಪ ರಖ್ಮಾದೇವೀ - ವರ - ಜ್ಞಾನದೇವ	ತಂದೆ ರಖ್ಮಾದೇವಿ ವರ । - (ಶಶಿತನಯ)

—ಇಲ್ಲಿ ಓವಿಯಲ್ಲಿನ ಎರಡು ಛಂದಸ್ಸುಗಳನ್ನು ಮಾತ್ರ ಎತ್ತಿಕೊಂಡಿರುವೆ. ಓವಿಯನ್ನುಳ್ಳ ಅಭಂಗಗಳನ್ನು ಉಲ್ಲೇಖಿಸಿದ ಕುಮಾರವ್ಯಾಸ ನಾಥ ಪಂಥದವನು ; ಎಂದರೆ ಶಿವನನ್ನು ವಿಷ್ಣುವಿನಲ್ಲಿ ವಿಲೀನವಾಗಿಸಿದ ವೈಷ್ಣವ ಪಂಥಿ. ಇನ್ನೂ ಒಂದು

---

95 ಕೀರ್ತನೆಗಳು–ಅಭಂಗಗಳು, ತೌಲನ ವಿಮರ್ಶೆ ಬೇರೊಂದು ಲೇಖನದ ವಿಷಯ.

96 ಈ ಎಡೆಗಳಲ್ಲಿ ಬಂದಿರುವ ಬಿಂದುಗಳನ್ನು ಒಂದು ಮಾತ್ರೆ ಎಂದು ಸ್ವೀಕರಿಸಬಾರದು. ಇದು ತೆಲುಗಿನ ಅರ್ಧ ಅನುಸ್ವಾರದಂತಹದು.

97 ಛಂದೋ ರಚನಾ - ಪು. 540

ಜೋದ್ಯವನ್ನೂ ಕುಮಾರವ್ಯಾಸ ನಮ್ಮ ಮುಂದೆ ಇಟ್ಟಿದ್ದಾನೆ. ಅದೆಂದರೆ ಆತ ನಾಥಪಂಥದ ಅಭಂಗಗಳನ್ನು ಆದರಿಸಿದ ಹಾಗೆ ಅಲ್ಲಿ ಇಂದಿಗೂ ಇರುವ ಮಹಾನು ಭಾವ ಪಂಥದವರಲ್ಲಿ ಹೇಳಲಾಗುವ ಹಂಸಾವತಾರ, ದತ್ತಾತ್ರೇಯ ಹಾಗೂ ಕೃಷ್ಣಾ ವತಾರಗಳನ್ನೂ ಹೇಳಿದ್ದಾನೆ. ಹಂಸಾವತಾರದ ಪ್ರಸಕ್ತಿ ಮೇಲೆ ಉದ್ಧರಿಸಿದ ಪದ್ಯ ದಲ್ಲಿ ಈಗಾಗಲೇ ಬಂದಿದೆ. ದತ್ತಾತ್ರೇಯ ಹಾಗೂ ಕೃಷಾವತಾರಗಳನ್ನು ಕೆಳಗಿನ ಪದ್ಯದಲ್ಲಿ ವಿವರಿಸಿದ್ದಾನೆ:

ರಾಯ ಕೇಳೈ ವಿಮಲ ದತ್ತಾ
ತ್ರೇಯವೆಸರಲಿ ಧರ್ಮವನು ಪೂ
ರಾಯದಲಿ ಪಲ್ಲವಿಸಿದನು ಹೈಹಯನ ರಾಜ್ಯದಲಿ ।
ಬಾಯಿ ಬಡಿಕರು ಬಗುಳಿದರೆ ಹರಿ
ಯಾಯತಿಕೆ ಪಾಸಟಿಯೆ ನಿಗಮದ
ಬಾಯ ಬೀಯಗವೀ ಮುಕುಂದನನರಿವರಾರೆಂದ ।[98]

ಆ ಪಂಥದ ನಾಲ್ಕನೆಯ ಅವತಾರ 'ಚಕ್ರಧರ'; ಆ ಅವತಾರ ಹೇಳಿಲ್ಲವಾದು ದರಿಂದ ಚಕ್ರಧರನು 'ಅವತಾರ ಪುರುಷ' ಎಂದು ಪರಿಗಣನೆಗೊಳ್ಳುವುದಕ್ಕಿಂತ ಮುಂಚೆ ನಮ್ಮ ಕವಿ ಕುಮಾರವ್ಯಾಸನು ಇದ್ದನೆಂದೂ ಹೇಳಬಹುದು. ಚಕ್ರಧರನೂ 13 ನೆಯ ಶತಮಾನದಲ್ಲಿಯೇ ಇದ್ದ.[99] ಸೇಉಣರ ಪ್ರದೇಶದಲ್ಲಿಯೇ ಇದ್ದ. ಅಭಂಗಗಳನ್ನು ಬರೆದ ಜ್ಞಾನದೇವ ಮೊದಲಾದವರು ಪಾಂಡುರಂಗನ ಭಕ್ತರು. ವಿಠ್ಠಲ ಸಂಪ್ರದಾಯದವರು. ಕನ್ನಡದ ಹರಿದಾಸರೂ ವಿಠ್ಠಲ ಸಂಪ್ರದಾಯದ ವರು. ಆದರೂ ಇವರು ಬೇರೆಬೇರೆ. ಕುಮಾರವ್ಯಾಸನು ಹಾಗಲ್ಲ. ಅದಕ್ಕೆ ಕಾರಣ ಅವನಿದ್ದ ಕಾಲದಲ್ಲಿ ಈ ವೈಷ್ಣವ ಪಂಥ ಮಧ್ವಮತ, ನಾಥಪಂಥ ಹಾಗೂ ಮಹಾನುಭವ ಪಂಥ ಎಂದು ಮೂರು ಶಾಖೆಗಳನ್ನು ಇನ್ನೂ ಹೊಂದಿದ್ದಿಲ್ಲ. ಈ ದಿಶೆಯ ವಿಶ್ಲೇಷಣೆಯಿಂದಲೂ ಕವಿಯ ಕಾಲ ನಿರ್ಧಾರವಾಗುತ್ತದೆ. ಅದೆಂದರೆ 13ನೆಯ ಶತಮಾನದ ಮಧ್ಯಭಾಗ. ಆ ವೈಷ್ಣವ ಪಂಥವೇ ಮಧ್ವಾಚಾರ್ಯರಿಂದ ಇನಿತು ಹೊಸ ರೂಪ ಪಡೆದು ಇಂದು 'ದ್ವೈತ' ಪಂಥವೆನಿಸಿಕೊಳ್ಳುತ್ತದೆ. ಮಹಾ ನುಭವ ಪಂಥದವರೂ 'ದ್ವೈತ'ರೇ ![100] ಮಧ್ವಸಂಪ್ರದಾಯದ ಹಲವು ಭಿನ್ನಮತ

---

98 ಕು. ಮಹಾಭಾರತ, ಸಭಾಪರ್ವ ,ಸಂಧಿ-9, ಪದ್ಯ-47 (ಮೈ. ಸಂ. ಸ. ಪ್ರ. ಶಾ. ಪ್ರ)

99 a) ಡಾ॥ ಎ. ವಿ. ನರಸಿಂಹ ಮೂರ್ತಿ: 'ಮಹಾನುಭಾವರು' ಪ್ರ. ಕು. ಸಂ. 49-ಸ. 1
b) ಕಪಟರಾಳ ಕೃಷ್ಣರಾವ್, ಕರ್ನಾಟಕ-ಸಂಶೋಧನೆ, ಪು. 67 ರಲ್ಲಿ ಚಕ್ರಧರನ ಕಾಲ ಕ್ರಿ.ಶ. 1194-1273 ಎಂದು ತಿಳಿಸಿದ್ದಾರೆ.

100 'ಚಕ್ರಧರ'ನ ತತ್ವಗಳನ್ನು ನೋಡಿ. ಆತನು ದ್ವೈತವನ್ನೆ ಸಾರಿದ. ನಾಲ್ಕು ಭೇದಗಳನ್ನು ಮಾತ್ರ ಹೇಳಿದ.

ಗಳಿದ್ದ ಹಾಗೆ– ಈ ಭೇದ ; ಇರಲಿ. ಪುರಂದರ ವಿಠ್ಠಲ–ಗದುಗಿನ ವೀರನಾರಾಯಣ– ಒಂದೇ ತತ್ವಶಃ. ಅವರು ಅಭಂಗದ ಮೂಲ ಕಾರಣರು.

ಕುಮಾರವ್ಯಾಸ, ಕುಮಾರವಾಲ್ಮೀಕಿ — ಇಬ್ಬರೂ ವೈಷ್ಣವರು. ಒಬ್ಬ ಮಧ್ವಾಚಾರ್ಯರ ಶಿಷ್ಯ ; ಇನ್ನೊಬ್ಬ ಅವರ ಸಮಕಾಲೀನ. ಈ ಇಬ್ಬರೂ ಕ್ರಿ.ಶ. 1230–1275 ರ ಮಧ್ಯಕಾಲದಲ್ಲಿ ಎಂದರೆ ಉತ್ತರ ಕರ್ಣಾಟಕವನ್ನು ಯಾದವ ಚಕ್ರವರ್ತಿ ಸಿಂಘಣ, ಕೃಷ್ಣ ಹಾಗೂ ರಾಮಚಂದ್ರರು ಆಳುತ್ತಿದ್ದ ಕಾಲದಲ್ಲಿ ಗ್ರಂಥ ಗಳನ್ನು ರಚಿಸಿದರು. ಸೇಉಣರ ಕಾಲಕ್ಕೆ ಕನ್ನಡ ಸಾಹಿತ್ಯ ಡಾ॥ ಎ. ಎಸ್. ಅಳ್ತೇಕರ ಮೊದಲಾದವರು ಬರೆದಹಾಗೆ ಕ್ಷೀಣದೆಸೆಯನ್ನು ಹೊಂದಿದ್ದಿಲ್ಲ. ಹರಿಹರ, ರಾಘ ವಾಂಕ, ಜನ್ನ, ಮಲ್ಲಿಕಾರ್ಜುನ, ಕೇಶಿರಾಜರು ಹೊಯ್ಸಳನಾಡಿನಲ್ಲಿ ಬೆಳಗಿದರೆ ಕುಮಾರವ್ಯಾಸ, ಕುಮಾರವಾಲ್ಮೀಕಿ ಮೊದಲಾದವರು ಸೇಉಣ ದೇಶವನ್ನು ಬೆಳಗಿದರು.[101]

---

101 ಈ ಲೇಖನವನ್ನು ಬರೆಯುವಲ್ಲಿ ಡಾ॥ ಹಾ. ಮಾ. ನಾಯಕ, ಶ್ರೀ ಎನ್. ಬಸವಾರಾಧ್ಯ, ಶ್ರೀ ಬಿ. ಎಸ್. ಸಣ್ಣಯ್ಯ, ಶ್ರೀ ಕೆ. ಆರ್. ಶೇಷಗಿರಿ, ಶ್ರೀ ಜಿ. ಜಿ. ಮಂಜುನಾಥ, ಶ್ರೀ ಹ. ಕ. ರಾಜೇಗೌಡ, ಡಾ॥ ಬಿ. ಬಿ, ರಾಜಪುರೋಹಿತ ಮೊದಲಾದವರಿಗೆ ಋಣಿ ಆಗಿದ್ದೇನೆ.

ಪುರಿಗಣೆ

ಪಂಪನ ವಿಕ್ರಮಾರ್ಜುನ ವಿಜಯದ ಒಂಬತ್ತನೆಯ ಆಶ್ವಾಸದಲ್ಲಿ,

ನುಡಿಯೆನದಂ ನಿನ್ನಂಬಿಕೆ
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ-
ಲ್ಕೊಡರಿಸಿ ಬಂದಳ್ ಸುತರಂ
ಕುಡದಿರ್ ಪುರಿಗಣೆಯನನಿತು ಲಲ್ಲೈಸಿದೊಡಂ ॥ 78 ॥

ಎಂಬ ಪದ್ಯದಲ್ಲಿ ಪುರಿಗಣೆ ಎಂಬ ಪದವಿದೆ. ಮುಂದೆ ಇದೇ ಆಶ್ವಾಸದ 87ನೆಯ ಪದ್ಯದಲ್ಲಿಯೂ ಈ ಪ್ರಯೋಗವಿದೆ. ಆ ಪದ್ಯವು ಹೀಗಿದೆ :

ಪಿಡಿಯೆಂ ಪುರಿಗಣೆಯಂ ನರ
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ-
ರ್ದೊಡಮೞಿಯೆಂ ಪೆರ್ಜಸಮನೆ
ಪಿಡಿದೆನ್ನನೆ ರಣದೊಳೞಿವೆನಿರದಡಿಯೆತ್ತಿಂ ॥

ಈ ಎರಡು ಪದ್ಯಗಳಲ್ಲಿ ಮೊದಲನೆಯದು "ಒಪ್ಪುವ ನಿಜ ಬಿಂಬದೊಳ ಗಣಿಂದಂ ದಿನಪಂ ಪೊಱಮಟ್ಟು" ಕರ್ಣನೊಡನೆ "ನುಡಿದನೆನ್ನುಮನುಱಿದೆ ಮರುಳ್ಗನೆ ಹರಿಗೆ ಕವಚಮನಿತ್ತೈ" ಎಂಬ ಭಾಗವಾದ ಕೂಡಲೆ ಬರುತ್ತದೆ. ಇದರಲ್ಲಿ ಬರುವ "ಪುರಿಗಣೆ" ಎಂಬ ಪದಕ್ಕೆ ಏನರ್ಥವೆಂದು ಖಚಿತವಾಗಿ ಹೇಳುವ ಹಾಗೆ ತೋರುವುದಿಲ್ಲ. ಆದುದರಿಂದಲೇ ಪ್ರಾಯಶಃ ಪಂಪಭಾರತದಲ್ಲಿನ "ಕ್ಲಿಷ್ಟಪದಗಳ ನಿಘಂಟು"ವಿನಲ್ಲಿ "ಒಂದು ಬಗೆಯ ಬಾಣ" ಎಂಬರ್ಥವನ್ನು ಕೊಡಲಾಗಿದೆ. ಯುದ್ಧ ಸಂದರ್ಭದಲ್ಲಿ ಪ್ರಯೋಗಿಸುವ ವಿವಿಧ ಶಸ್ತ್ರಾಸ್ತ್ರಗಳ ಹೆಸರುಗಳಲ್ಲಿ ಪುರಿಗಣೆ ಎಂಬೊಂದು ಶಸ್ತ್ರವೋ ಅಸ್ತ್ರವೋ ಇದೆಯೆಂಬಂತೆ ಇತರ ಪೂರ್ವ ಗ್ರಂಥಗಳಲ್ಲಿ ಬಂದಂತೆ ತೋರುವುದಿಲ್ಲ. ಇದು ಕರ್ಣನಿಗೇ ಮೀಸಲಾದ ಅಥವಾ ಕರ್ಣನು ಮಾತ್ರ ಪ್ರಯೋಗಿಸುವ ವಿಶಿಷ್ಟವಾದ ಯುದ್ಧೋಪಕರಣವೆಂದು ಹೇಳಬಹುದು, ಇಲ್ಲಿ. ಎರಡನೆಯ ಪದ್ಯದಲ್ಲಿಯೂ ಇದಕ್ಕೆ ಸುಸ್ಪಷ್ಟವಾದ ಅರ್ಥವೇನೆಂದು ನಿರ್ಧರಿಸಲು ಸಾಕಾದ ಸೂಚನೆ ದೊರೆಯುವುದಿಲ್ಲ. ಮೊದಲನೆಯ ಪದ್ಯದಲ್ಲಿ "ಕುಡದಿರ್ ಪುರಿಗಣೆಯಂ" ಎಂದಿದ್ದರೆ, ಮತ್ತಿನದರಲ್ಲಿ "ಪಿಡಿಯೆಂ ಪುರಿಗಣೆಯಂ" ಎಂದಿದೆ. ಪುರಿಗಣೆ ಎಂಬುದು ಕೊಡಬಹುದಾದ ವಸ್ತುವೆಂದು ಮಾತ್ರ ಆ ವಾಕ್ಯಕ್ಕೆ ಸಂಬಂಧಿಸಿದ ಅರ್ಥವೆಂದಾದರೆ ಪಿಡಿಯೆಂ ಪುರಿಗಣೆಯಂ ಎಂಬುದಕ್ಕೆ ಆ ಪ್ರಕರಣದಲ್ಲಿ

ಪುರಿಗಣೆಯನ್ನು ಪ್ರಯೋಗಿಸುವುದಿಲ್ಲವೆಂಬರ್ಥವು ಸರಿಹೊಂದುವುದೇ ಎಂಬ ಶಂಕೆ ಯುಂಟಾಗುತ್ತದೆ. ಆದುದರಿಂದ "ಪುರಿಗಣೆಯನ್ನು ತೊಡುವುದಿಲ್ಲವೆಂಬ ಮಾತು ಕೊಡಬೇಡ" ಎಂದು ಮೊದಲಿನ ವಾಕ್ಯಕ್ಕೆ ಅರ್ಥ ಹೇಳಿ ಮತ್ತಿನದಕ್ಕೆ "ಪುರಿಗಣೆ ಯನ್ನು ಕೊಡುವುದಿಲ್ಲ" ಎಂದು ಹೇಳಬಹುದಾಗಿದೆ. ಇದರಿಂದಲೂ ಪುರಿಗಣೆಯ ಸಮಸ್ಯೆ ಬಗೆಹರಿಯುವಂತೆ ಕಾಣುವುದಿಲ್ಲ.

ಪಂಪ ಭಾರತದ ಹನ್ನೆರಡನೆಯ ಆಶ್ವಾಸದಲ್ಲಿ ಕರ್ಣಾರ್ಜುನರ ಸಂಗ್ರಾಮ ಸಂದರ್ಭದಲ್ಲಿ ಕರ್ಣನು "ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು **ಪುರಿಗಣೆ**ಯ ದೊಣೆಗೆ ಕಯ್ಯಂ ನೀಡದೆ ರೌದ್ರಶರದ ದೊಣೆಗೆ ಕಯ್ಯಂ ನೀಡಿದಾಗಳ್..." (ಪ. 190ರ ಗದ್ಯ) ಕಯ್ಗೆ ಬಂದ ಬಾಣದ ವರ್ಣನೆಯಿದೆ. ಕರ್ಣನು ತಾಯಿಗೆ ಮಾತು ಕೊಟ್ಟಂತೆ ಪುರಿಗಣೆಯನ್ನು ತೊಡಲಿಲ್ಲ; ಏಕೆಂದರೆ ಅವನು ಪುರಿಗಣೆಯ ದೊಣೆಗೆ ಕಯ್ಯಂ ನೀಡಲಿಲ್ಲವೆಂದು ಅಲ್ಲಿಯೇ ಇದೆ. ಮೇಲಿನ ಮಾತಿನಿಂದ ಇನ್ನೊಂದು ಸಮಸ್ಯೆಯೂ ತಲೆದೋರುತ್ತದೆ: ಕಾಳಗ ಮಾಡುವವರು ಒಂದಕ್ಕಿಂತ ಹೆಚ್ಚು ಬತ್ತಳಿಕೆಗಳನ್ನು ಕಟ್ಟಿಕೊಳ್ಳುತ್ತಿದ್ದರೆ? ಅರ್ಜುನನು ಸವ್ಯಸಾಚಿಯಾದುದ ರಿಂದ ಎರಡು ಬತ್ತಳಿಕೆಗಳನ್ನು ಧರಿಸಿಕೊಳ್ಳುವುದು ಸಹಜವಷ್ಟೆ. ಅರ್ಜುನನೊಡನೆ ಸಮಬಲನಾಗಿ ಹೋರಾಡ ಬಂದ ಕರ್ಣನೂ ಎರಡು ಬತ್ತಳಿಕೆಗಳನ್ನು ಧರಿಸಿ ಕೊಂಡಿದ್ದನೆಂದು ಮೇಲಿನ ಮಾತಿನಿಂದ ತಿಳಿದುಕೊಳ್ಳುವಂತಿದೆ. ಸಂಸ್ಕೃತ ಮಹಾಭಾರತದಲ್ಲಿ ಕರ್ಣನು ಒಂದೇ ಬತ್ತಳಿಕೆಯೊಳಗೆ ಸರ್ಪಮುಖದ ರೌದ್ರಶರ ವೊಂದನ್ನು ಇರಿಸಿಕೊಂಡಿದ್ದನೆಂಬ ಪ್ರಸ್ತಾಪವಿದೆ. ಹಾಗೆಯೇ ಇಲ್ಲಿಯೂ ಕರ್ಣನ ಒಂದು ಬತ್ತಳಿಕೆಯೊಳಗೆಯೇ ಇನ್ನೊಂದು ಬತ್ತಳಿಕೆಯಲ್ಲಿ ಪುರಿಗಣೆಯಿತ್ತೆಂದು ಹೇಳುವಂತೆಯೂ ಇದೆ. ಮಹಾಭಾರತದಲ್ಲಿ ಸರ್ಪಮುಖದ ಒಂದೇ ಬಾಣ ವಿದ್ದಂತಿದೆ. ಇಲ್ಲಿಯೂ ಕರ್ಣನಲ್ಲಿ ಒಂದೇ ಪುರಿಗಣೆಯಿತ್ತೆಂದು ಊಹಿಸಬಹುದು. ದಿನಪನ ಕುಡದಿರ್ ಪುರಿಗಣೆಯಂ ಎನ್ನುವಲ್ಲಿಯೂ ಕರ್ಣನು ಪಿಡಿಯೆಂ ಪುರಿಗಣೆಯಂ ಎನ್ನುವಲ್ಲಿಯೂ ಏಕವಚನವೇ ಪ್ರಯೋಗವಾಗಿದೆ. ಪುರಿಗಣೆಯ ಜಾತಿಯನ್ನೇ ಓಡಿಯೆನು ಎಂದೂ ಅರ್ಥಮಾಡುವುದು ಸಾಧ್ಯವಾದುದರಿಂದ ಹಲವು ಪುರಿಗಣೆ ಗಳಿದ್ದುವೆಂದೂ ಹೇಳುವ ಹಾಗಿದೆ. ಇರಲಿ.

ಶಲ್ಯನು ಬತ್ತಳಿಕೆಯಿಂದ ಬಂದ "ಅರ್ಧಾವಲೀಕ ಶರರೂಪದ" ಬಾಣವನ್ನು ಅರ್ಜುನನ ಉರದೆಡೆಗೆ ತೊಡಬೇಕೆಂದು ಸೂಚಿಸಿದಾಗ,

> "ತನ್ನ ಮನದೊಳ್ ಕರ್ಣನಿಂತೆಂದಂ—
> ಏಸಿತುಂ ಶಲ್ಯನ ಪೇಳ್ದವಾಂಗೆ ತೊಡಲಿಲ್ಲಂತಾದೊಡಾ ಶಕ್ರಪು
> ತ್ರನನಾಂ ಕೊಂದೊಡೆ ಧರ್ಮಪುತ್ರನಜಗುಂ ತಾಯೆಂದೆ ಮುಂಕೊಂತಿ ಬಂ
> ದಿನಿಸಂ ಪ್ರಾರ್ಥಿಸಿ ಪೋದಳೆನ್ನದನಾಂ ಮಾರ್ಪ್ದೆರ್ದೆಂ..." (ಪ. 196)

ಇಲ್ಲಿಯೂ ಕರ್ಣನು ಮಾತೆಗೆ ಮಾತುಕೊಟ್ಟಂತೆ ಅದನ್ನು (ಪುರಿಗಣೆಯನ್ನು) ಮಾಣ್ದಿರ್ದನು ಎಂದಿದೆ. ಇಲ್ಲಿಯೂ ಏಕವಚನವೇ ಇದೆ.

ಕರ್ಣನು ಪ್ರಯೋಗಿಸಿದ ರೌದ್ರಶರವು "ಕಿರೀಟಿಯ ಕಿರೀಟಮಂ ಕೊಳಿ" ದುದು. ಅನಂತರ ಅಶ್ವಸೇನನೆಂಬ ಪನ್ನಗನು ಬಂದು,

ಪುರಿಗಣೆಯಪ್ಪ ಕಾರಣದಿನಂತದು ತಪ್ಪಿದೆನೆಂದು ನೊಂದು ಪ
ಲ್ಮೊರೆದಹಿರೂಪದಿಂ ಮಗುಟ್ದು ಬಂದಿನನಂದನನಲ್ಲಿಗೆನ್ನನಂ
ತರಿಸದೆ ತೊಟ್ಟು ಬೇಗಮಿಸು ವೈರಿಯನೀಗಳೆ ಕೊಂದಪೆಂ ರಸಾಂ
ಬರಧರಣೀ ವಿಭಾಗದೊಳಗಾವೆಡೆಪೊಕ್ಕೊಡಮಂಗನಾಯಕಾ (ಪ. 203)

ಎನ್ನುತ್ತದೆ. ಕರ್ಣನು ಎಚ್ಚ ಬಾಣವು ತಪ್ಪಿದುದು, ಅದು ಪುರಿಗಣೆಯಾಗಿದ್ದ ಕಾರಣದಿಂದ—ಅಥವಾ ಅಶ್ವಸೇನನು ತಪ್ಪಿ ಬಿದ್ದುದು ಕರ್ಣನು ಪ್ರಯೋಗಿಸಿದ ಬಾಣವು ಪುರಿಗಣೆಯಾದುದರಿಂದ. ಹಾಗೆ ಅದು ತಪ್ಪಿ ಬೀಳಬೇಕಾದರೆ ಆ ಬಾಣಕ್ಕೆ ಇತರ ಬಾಣಗಳಿಗಿಲ್ಲದ ಇನ್ನಾವುದೋ ಒಂದು ವೈಶಿಷ್ಟ್ಯವಿರಬೇಕೆಂದು ಸೂಚಿತವಾಗುತ್ತದೆ. ಆ ವೈಶಿಷ್ಟ್ಯವೇನೆಂಬುದೇ ತಿಳಿಯಬೇಕಾದ ವಿಷಯ.

ಅಶ್ವಸೇನನು ಪುರಿಗಣೆಯಪ್ಪ ಕಾರಣದಿಂದ ತಪ್ಪಿದುದೆಂದು ಹೇಳಿದ ಹೇಳಿಕೆ ಸತ್ಯವೆ? ಈ ಮೊದಲೇ, ಕರ್ಣನು ಪುರಿಗಣೆಯ ದೊಣೆಗೆ ಕಯ್ಯಿಕ್ಕಿಲ್ಲವೆಂದಿರುವಾಗ ಈ ಪನ್ನಗನು ಹೀಗೇಕೆ ಹೇಳಿದುದು? ಅಶ್ವಸೇನನಿಗೆ ಅರ್ಜುನನ ಮೇಲೆ ಹಗೆ; ಈ ಹಗೆಯನ್ನು ತೀರಿಸಲು ಸಾಧ್ಯವಾಗಿಲ್ಲ. ಮತ್ತೊಮ್ಮೆ ಕರ್ಣನ ನೆರವು ದೊರೆತರೆ, ಎಂದರೆ ಕರ್ಣನು ತನ್ನನ್ನು ಕಣೆಯಂತೆ ಪ್ರಯೋಗಿಸಿದರೆ, ತಾನು ಪಾರ್ಥನನ್ನು ಕೊಲ್ಲಬಹುದು. ತನ್ನ ಹಗೆಯನ್ನೂ ಕರ್ಣನ ಎದುರಾಳಿಯನ್ನೂ ಏಕಕಾಲದಲ್ಲಿ ತೀರಿಸಬಹುದು; ಇದಕ್ಕೆ ಅಶ್ವಸೇನನಿಗೆ ಕರ್ಣನ ಪ್ರಯೋಗ ವೇಗವು ಸಹಾಯಕವಾಗಬೇಕು. ಆದುದರಿಂದಲೇ ಆ ರೀತಿ ಹೇಳಿದುದೆಂದು ತರ್ಕಿಸಬಹುದು. ಕರ್ಣನು ತೊಟ್ಟುದೇ ಪುರಿಗಣೆಯನ್ನೆಂದು ಆ ಮಾತಿಗೆ ಅರ್ಥಮಾಡಿದರೆ ಮುಂದಣ ಮಾತಿಗೆ ಅದು ವಿರುದ್ಧವಾಗುತ್ತದೆ:

ಪಿಡಿದನೆ ಪುರಿಗಣೆಯ ನೆರ
ಟ್ಟುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ
ಪಿಡಿದಟ್ಟಿದನೆಂದು ದೇವರ
ಪಡೆ ಗಡಣದೆ ಪೊಗೞ್ದು ದಿನತನೂಜನ ಗಂಡಂ (ಆ. 12–ಪ. 216)

ಈ ಪದ್ಯದಂತೆ ಕರ್ಣನು ಪುರಿಗಣೆಯನ್ನು ಹಿಡಿಯಲಿಲ್ಲವೆಂಬುದು ಸ್ಪಷ್ಟ. ಅಶ್ವಸೇನನು ತನ್ನ ಸ್ವಾರ್ಥಸಾಧನೆಗಾಗಿ ಮಾತ್ರ ಹಾಗೆಂದಿರಬೇಕು. ರನ್ನನ ಸಾಹಸ ಭೀಮ ವಿಜಯ (ಗದಾಯುದ್ಧ)ದಲ್ಲಿ—

ಪರಿ ಬೇಡೆ ಕವಚಮಂ ನೀ
ನರಿದಿತ್ತಯ್ ಕೊಂತಿ ಬೇಡೆ ಬೆಗಡದೆ ಕೊಟ್ಟಯ್
ಪುರಿಗಣೆಯಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ (ಆ 5–ಪ 23)

ಎಂಬ ಪದ್ಯವಿದೆ. 'ಗದಾಯುದ್ಧ ಸಂಗ್ರಹ'ದ ಟಿಪ್ಪಣಿಯಲ್ಲಿ ತೀ. ನಂ. ಶ್ರೀಕಂಠಯ್ಯನವರು ಪುರಿಗಣೆ ಎಂಬುದಕ್ಕೆ 'ಸುಡುವ ಬಾಣ' ಎಂದು ಪ್ರಶ್ನಾರ್ಥಕದೊಡನೆ ಅರ್ಥ ಬರೆದು, ಮುಂದೆ 'ಒಂದು ಬಗೆಯ ದಿವ್ಯಾಸ್ತ್ರ' ಎಂದು ಬರೆದಿದ್ದಾರೆ. ಪುರಿ ಎಂದರೆ ಹುರಿ, ಕಾಯಿಸು ಎಂಬರ್ಥವಿರುವುದರ ಆಧಾರದಿಂದ ಅವರು ಸುಡುವ ಬಾಣ ಎಂದು ಬರೆದಿರಬಹುದೆ ? ಕಿಟ್ಟೆಲ್ಲರ ಕೋಶದಲ್ಲಿ ಪುರಿ ಎಂಬುದಕ್ಕೆ ಕೊಟ್ಟಿರುವ ಹಲವು ಅರ್ಥಗಳಲ್ಲಿ Twisting; that is twisted ಎಂಬ ಅರ್ಥವು ಹುರಿಹಗ್ಗ ಎಂಬಲ್ಲಿ ಕಂಡುಬರುತ್ತದೆ. ಉಳಿದ strength, refreshment, spirit, courage, valour, pride ಎಂಬರ್ಥಗಳಲ್ಲಿ strength ಎಂಬರ್ಥವನ್ನು ಪ್ರಕೃತ ಸಂದರ್ಭಕ್ಕೆ ಬಳಸಿಕೊಂಡರೆ 'ಶಕ್ತಿಯುತವಾದ ಬಾಣ' ಎಂದು ಅರ್ಥ ಹೇಳಬೇಕು. ಪಂಪನು ಪುರಿಗಣೆಯ ಬದಲಿಗೆ ರೌದ್ರಶರವನ್ನು ಕರ್ಣನು ತೊಟ್ಟನೆನ್ನುವಲ್ಲಿ ಇದೇ ಅರ್ಥದ ಸೂಚನೆಯಿದೆಯೆಂದಮೇಲೆ ಈ ಅರ್ಥವೂ ಸಮುಚಿತವೆಂದು ತೋರುವುದಿಲ್ಲ.

ಪಂಪಭಾರತದಿಂದ ಕರ್ಣನ ಕಥಾಂಶವನ್ನು ಆಯ್ದು 'ಕರ್ಣರಸಾಯನಂ' ಎಂಬ ಹೆಸರಿನಿಂದ ಪ್ರಕಟವಾದ ಪುಸ್ತಕದ ವ್ಯಾಖ್ಯಾನದಲ್ಲಿ ಕೆ. ವಿ. ಕೃಷ್ಣಭಟ್ಟರು ಪುರಿಗಣೆಯೆಂಬುದಕ್ಕೆ "ದಿವ್ಯ ಮಂತ್ರಾಸ್ತ್ರವನ್ನು ಒಮ್ಮೆ ಪ್ರಯೋಗಿಸಿ, ಪುನಃ ಪ್ರಯೋಗಿಸುವಂತಿರುವುದು 'ಪುರಿಗಣೆ'ಯೆನಿಸುವುದು. ಒಮ್ಮೆ ತೊಟ್ಟ ಅಸ್ತ್ರವನ್ನು ಮತ್ತೂ ಮತ್ತೂ ತೊಡುವುದಾಗಿದ್ದರೆ ಅದು ಹುರಿಗಣೆಯೆನಿಸುವುದು" ಎಂದಿದ್ದಾರೆ. ಮರಳಿ ಮರಳಿ ಕೊಡಬಹುದಾದ ಮಂತ್ರಾಸ್ತ್ರವೇ ಪುರಿಗಣೆಯೆಂದು ಅವರು ಅಭಿಪ್ರಾಯಪಟ್ಟಂತೆ ತೋರುತ್ತದೆ. ಆದರೆ ಮಂತ್ರಾಸ್ತ್ರಗಳೆಲ್ಲ ಮರಳಿ ಮರಳಿ ತೊಡಬಹುದಾದವುಗಳೇ ಎಂದ ಮೇಲೆ ಅವುಗಳಿಗೆ ಪುರಿಗಣೆ ಎಂಬ ಹೆಸರು ಹೇಗೆ ಬರುತ್ತದೆ? ಮಾತ್ರವಲ್ಲ, ಮಂತ್ರಾಸ್ತ್ರಕ್ಕೆ ಇಂತಹ ಉಪಕರಣವೇ–ಶಸ್ತ್ರವೇ–ಆಗಬೇಕೆಂದಿಲ್ಲ. ಶ್ರೀರಾಮನು ತಾನು ಕುಳಿತಿದ್ದ ಹಾಸಿನ ಕಡ್ಡಿಯನ್ನೇ ಬ್ರಹ್ಮಾಸ್ತ್ರವನ್ನಾಗಿ ಪ್ರಯೋಗಿಸಿದುದು ಪ್ರಸಿದ್ಧವೇ ಆಗಿದೆ.

ಪಂಪಭಾರತ ದೀಪಿಕೆಯಲ್ಲಿ ಡಿ. ಎಲ್. ನರಸಿಂಹಾಚಾರ್ಯರು ಪುರಿಗಣೆ ಎಂಬುದಕ್ಕೆ ದಿವ್ಯಾಸ್ತ್ರವೆಂದು ಅರ್ಥಬರೆದು, "ಪುರಿಗಣೆ–ಹುರಿಗಣೆ (ಗದಾ 5-23), ಇವರ ಸರಿಯಾದ ಅರ್ಥವೇನೆಂಬುದು ಚಿಂತನೀಯ ; ಪುರಿ-ಎಂದರೇನು ?" ಎಂದಿದ್ದಾರೆ.

ಇನ್ನೊಂದು ಬಗೆಯಲ್ಲಿ ವಿಚಾರ ಮಾಡಿದರೆ ಏನಾದರೂ ಅರ್ಥವಾಗುವುದೋ ಎಂದು ಪರೀಕ್ಷಿಸಬಹುದು. ಯಾವುದಾದರೊಂದು ಶಸ್ತ್ರಕ್ಕೆ ಮಂತ್ರಶಕ್ತಿಯನ್ನು ಕೊಟ್ಟು ಪ್ರಯೋಗಿಸುವಾಗ, ಅದು ಮಂತ್ರಾಸ್ತ್ರವೆನ್ನಿಸುತ್ತದೆ. ಹೀಗೆ ಎಚ್ಚ ಉಪಕರಣವು ಗುರಿಮುಟ್ಟಿದರೆ ಇಲ್ಲವೆ ಪ್ರತ್ಯಸ್ತ್ರದಿಂದ ಖಂಡಿಸಲ್ಪಟ್ಟರೆ ಆ ಉಪಕರಣವು ಮರಳಿ ಉಪಯೋಗಕ್ಕೆ ದೊರೆಯುವಂತಿಲ್ಲ. ಒಂದು ವೇಳೆ ಅದು ಉದ್ದಿಷ್ಟ ಕಾರ್ಯವನ್ನು ಪೂರೈಸದಿದ್ದಾಗ ಅದನ್ನೇ ಮರಳಿ ಮಂತ್ರಬಲದಿಂದ ಪ್ರಯೋಗಿಸಲು ಸಾಧ್ಯವೆಂದಾದರೆ ಅದಕ್ಕೆ ಪುರಿಗಣೆ ಎಂಬ ಹೆಸರು ಬರಬಹುದೇ ? ಯುದ್ಧ ಭೂಮಿಯಲ್ಲಿ ಒಮ್ಮೆ ಪ್ರಯೋಗವಾದ–ಕಯ್ಯಿಂದ ಬಿಟ್ಟ–ಶಸ್ತ್ರವು ಮರಳಿ ದೊರೆಯುವುದೆಂತು ? ಎಲ್ಲಾದರೂ ಬಿದ್ದುದನ್ನು ಪುನಃ ತರಬಹುದೆಂದಿದ್ದರೂ ತರುವವರು ಯಾರು ? ಶಸ್ತ್ರವು ತಾನಾಗಿ ಬರುವಂತಿದೆಯೆ ? ಶ್ರೀರಾಮನ ಬಾಣಗಳು–ಮಂತ್ರಬಲದಿಂದ ಪ್ರಯೋಗಗೊಂಡು–ಮರಳಿ ಬಂದು ಮೂಡಿಗೆಯನ್ನು ಸೇರುತ್ತಿದ್ದುವು ಎಂದಿದೆ. ಕರ್ಣನಿಗೆ ಹಾಗಿತ್ತೆಂಬ ಸೂಚನೆ ಎಲ್ಲಿಯೂ ಇಲ್ಲ. ಮಾತ್ರವಲ್ಲ, ದುರ್ಯೋಧನನು ಎಂಟುನೂರು ಬಂಡಿಗಳಲ್ಲಿ ಶಸ್ತ್ರಗಳನ್ನು ತುಂಬಿಸಿ ಕರ್ಣನಿಗೆ ಒದಗಿಸಿದ್ದನಾದರೂ ಅವನು ಗೆಲ್ಲದೆ ಅರ್ಜುನನಿಂದ ಹತನಾದನು ಎಂದು ಮಹಾಭಾರತದಲ್ಲಿ ಪ್ರಸ್ತಾವವಿದೆ.

ಕೆಲವರ ಕೈಚಳಕವನ್ನು ಕಂಡವರು, ಒಂದು ಚಕ್ರವನ್ನೋ, ತಟ್ಟೆಯನ್ನೋ, ತಗಡನ್ನೋ, ದೊಡ್ಡ ಉಂಗುರವನ್ನೋ ಮುಂದೆ ಹೋಗಿ ಹಾಗೆಯೇ ಮರಳಿ ತಮ್ಮ ಬಳಿಗೇ ಬರುವಂತೆ ಮಾಡುವುದು ಸಾಧ್ಯವೆಂಬುದನ್ನು ಒಪ್ಪಿಕೊಳ್ಳಬಹುದು. ಅದರಂತೆ ಕರ್ಣನಿಗೆ ವಿಶಿಷ್ಟ ಜಾತಿಯ ಬಾಣಗಳನ್ನು ಒಮ್ಮೆ ಎಸೆದು ಮರಳಿ ತನ್ನ ಬಳಿಗೆ ಬರುವಂತೆ ಮಾಡುವ ಹಸ್ತಲಾಘವ ವಿತ್ತೆಂದು ಕಲ್ಪಿಸಿಕೊಂಡು, ಅಂತಹ ವಿಶಿಷ್ಟವಾದ ಬಾಣವೇ ಪುರಿಗಣೆಯೆಂದು ಊಹಿಸಿದರೆ ತಪ್ಪಾಗದೆಂದು ತೋರುತ್ತದೆ. ಆದರೆ ಇಂತಹ ಗುಣವುಳ್ಳ ಬಾಣವಿದ್ದುದು ಒಂದೇ ಎಂದೂ ಅದನ್ನು ಕರ್ಣನು ತೊಡಬಾರದೆಂದು ಕುಂತಿ ಹೇಳಿದಳೆಂದೂ ಕರ್ಣನು ಅದಕ್ಕೊಪ್ಪಿದನೆಂದೂ ತರ್ಕಿಸಿದರೆ ಅನುಚಿತವೆನ್ನಬಹುದೆ ? ಆಗ ಅಶ್ವಸೇನನ್ನು ಪುರಿಗಣೆಯಾದ ಕಾರಣದಿಂದ ತಪ್ಪಿದುದೆನ್ನುವುದಕ್ಕೂ ಒಂದು ಬಗೆಯ ಸಮಾಧಾನವನ್ನು ಹೇಳಬಹುದು : ತಾನು ಕರ್ಣನೆಚ್ಚ ಆ ಬಾಣವನ್ನು ಪುರಿಗಣೆಯೆಂದು ನಂಬಿ, ಒಮ್ಮೆ ಪ್ರಯೋಗಿಸಿದಾಗ ಗುರಿ ಮುಟ್ಟದಿದ್ದರೂ, ಅದು ಮರಳಿ ಕರ್ಣನ ಬಳಿಬರುವ ಗುಣವುಳ್ಳುದಾದ ಕಾರಣ ತನ್ನ ಹಗೆಯನ್ನು ತೀರಿಸದೆ ಬಂದೆನೆಂದು ಹೇಳಿದುದಾಗಿ ವಿವರಿಸಬಹುದು. ಯಥಾರ್ಥವಾಗಿ ಅದು ಪುರಿಗಣೆಯಲ್ಲದ ಕಾರಣದಿಂದಲೇ ಆ ಬಾಣವು ಹಾಳಾಗಿ, ಬರಿಯ ಅಶ್ವಸೇನನು ಮರಳಬೇಕಾಯಿತು. ಪುರಿಗಣೆಯಾಗಿರುತ್ತಿದ್ದರೆ ಆ ಪನ್ನಗನು ಅಹಿರೂಪದಿಂದ ಅದರಲ್ಲೇ ಇದ್ದು ಮತ್ತೊಮ್ಮೆ ಪ್ರಯೋಗಿಸುವಾಗ ತನ್ನ ಇಷ್ಟವನ್ನು ಪೂರೈಸಬಹುದಾಗಿತ್ತು.

ಪುರಿಗಣೆ ಎಂಬುದರಂತೆ ಅದು ಮಾತಿನಲ್ಲಿ "ಶಾಪ-ಪುರಿಶಾಪ" ಎಂದೂ "ಮದ್ದು-ಪುರಿಮದ್ದು" ಎಂದೂ ಪ್ರಯೋಗಗಳಿವೆ. ಪುರಿಶಾಪವೆಂದರೆ, ಒಮ್ಮೆ ಕೊಟ್ಟ ಶಾಪವನ್ನು ಮರಳಿಸಿ ಅದನ್ನು ಇನ್ನೊಂದು ಬಗೆಯಲ್ಲಿ ಕಾರ್ಯವೆಸಗುವಂತೆ ಮಾಡುವ ವಾಗ್ವಿಧಾನ. ಹಾಗೆಯೇ ಪುರಿ ಮದ್ದು ಎಂದರೆ, ಕೊಟ್ಟ ಒಂದು ಮದ್ದು ಉದ್ದಿಷ್ಟ ಪರಿಣಾಮವನ್ನು ಮಾಡದಿದ್ದರೆ ಬಯಸದ ಪರಿಣಾಮವನ್ನುಂಟು ಮಾಡಿದರೆ–ಆ ಪರಿಣಾಮವನ್ನು ಉಪಶಮನಗೊಳಿಸಲು ಕೊಡುವ ಮದ್ದು. ಈ ಎರಡನೆಯ ಮದ್ದು ಮೊದಲಿನದನ್ನು ಹಿಂದಕ್ಕೆ ತರುತ್ತದೆ; ಬೇರೆ ಉದ್ದಿಷ್ಟ ಪರಿಣಾಮವನ್ನು ಉಂಟುಮಾಡುತ್ತದೆ. ಆದುದರಿಂದ "ಪುರಿ" ಎಂಬುದು "ಮರಳಿಸು" ಎಂಬರ್ಥವನ್ನು ಕೊಡುವಂತೆ ತೋರುತ್ತದೆ. ಈ ರೀತಿಯಲ್ಲಿ ವಿವೇಚಿಸಿದರೆ, ಪುರಿಗಣೆ ಎಂದರೆ "ಒಮ್ಮೆ ಪ್ರಯೋಗಿಸಿ ಮರಳುವ ಬಾಣ" ಎಂದು ಅರ್ಥ ಹೇಳಬಹುದೆಂದು ಭಾವಿಸಬಹುದಾಗಿದೆ. ಕುಮಾರವ್ಯಾಸನೂ ಇದೇ ಅರ್ಥ ವನ್ನು ಈ ಪದಕ್ಕೆ ಮಾಡಿದ್ದಿರಬೇಕೆಂದೇ ತೋರುತ್ತದೆ. ಕುಂತಿ ಕರ್ಣನನ್ನು ಕಂಡು "ಹೋದ ಬಾಣವ ಮರಳಿ ತೊಡದಿರು" ಎಂದು ಹೇಳುತ್ತಾಳೆ (ಉದ್ಯೋಗ ಪರ್ವ : ಸಂ. 10–ಪ, 35) ಸೂರ್ಯನೂ ಕರ್ಣನೊಡನೆ "ಮುರಹರನ ಮತದಿಂದ ನಿನ್ನಯ ಸರಳ ಬೇಡಲು ಬಂದಳು" (ಉದ್ಯೋಗ ಪರ್ವ : ಸಂ. 10-ಪ. 29) ಎಂದು ಹೇಳುತ್ತಾನೆ. ಒಮ್ಮೆ ಪ್ರಯೋಗಿಸಿದ ಬಾಣವು ಮರಳಿ ಬರುವುದಿಲ್ಲವೆಂದಾದರೆ ಕುಂತಿ ಹೀಗೆ ಹೇಳಿದಳೆನ್ನುವುದಕ್ಕೆ ಔಚಿತ್ಯವೆಲ್ಲಿದೆ? ಸೂರ್ಯನೂ ಸರಳನ್ನು ಪ್ರಸ್ತಾವಿಸುತ್ತಾನೆ ಹೊರತು ಅಸ್ತ್ರವನ್ನಲ್ಲ. ಸಂಸ್ಕೃತ ಮಹಾಭಾರತದಲ್ಲಿ ಕುಂತಿ ಈ ರೀತಿ ಕೇಳುವುದೇ ಇಲ್ಲ. ಕರ್ಣನ ವಿಷಯದಲ್ಲಿಯೂ "ತೊಟ್ಟ ಬಾಣವನ್ನು ಮರಳಿ ತೊಡದವ"ನೆಂಬ ಹೇಳಿಕೆ ಜನಜನಿತವಾಗಿಯೇ ಇದೆ. ಆದರೆ ಕರ್ಣನು "ಉರಗಾಸ್ತ್ರ ವನುಗಿದು" ಅದು ಅರ್ಜುನನ "ವಿನುತಮಕುಟವನುಗಿದು" ಮರಳಿದಾಗ "ಎಸಲು ಸರಳುಗಳತ್ತಲೇ ಕೀಲಿಸುವವಲ್ಲದೆ ಮತ್ತೆ ಮರಳಿದು ಜೆಸನ ಬೇಡುವ ಬಾಣ ವೆಂಬುದನರಿಯೆ ನಾ ಕೇಳ್ದು" ಎನ್ನುತ್ತಾನೆ ಕರ್ಣ. (ಕರ್ಣಪರ್ವ ಸಂ. 25–ಪ. 35) ತೊಟ್ಟ ಬಾಣವು ಮರಳುವುದಿಲ್ಲವೆಂದು ಅವನಿಗೇ ಗೊತ್ತಿದ್ದು "ಹೋದ ಬಾಣವ ಮರಳಿ ತೊಡದಿರು" ಎಂದು ಕುಂತಿ ಕೇಳಿಕೊಂಡುದಕ್ಕೆ ಅವನು ಆಸ್ತು ಗೊಟ್ಟುದು ಹೇಗೆ? ಸೂರ್ಯನಾಗಲೀ, ಮುರಹರನ ಮತದಿಂದ ಬಂದ ಕುಂತಿ ಯಾಗಲೀ ಹಾಗೆ ಕೇಳಿಕೊಂಡಿದ್ದರೆನ್ನುವುದಾದರೂ ಹೇಗೆ? ಪೂರ್ವಾಪರ ವಿರುದ್ಧ ವಾಗಿ ಕಾಣುವ ಈ ಮಾತಿಗೆ ಏನು ಸಮಾಧಾನ ಹೇಳಬೇಕು? ಪುರಿಗಣೆ ಅಥವಾ ಒಮ್ಮೆ ಪ್ರಯೋಗವಾಗಿ ಮರಳಿ ಬರುವ ಬಾಣವೆಂಬುದೊಂದಿದೆ. ಕರ್ಣನಿಗೂ ಅದು ಗೊತ್ತು. ಆದುದರಿಂದ ತಾಯಿಗೆ ಹಾಗೆ ಮಾತುಕೊಟ್ಟನು. ಸರ್ಪಬಾಣ ವನ್ನು ಪ್ರಯೋಗಿಸಿದಾಗ ಅದು ಮರಳಬೇಕೆಂಬ ರೀತಿಯು ಕರಜಮತ್ಕೃತಿಯಿಂದ

ಅವನ್ನು ಪ್ರಯೋಗಿಸಿದ್ದಿರಲಿಲ್ಲ. ಆದುದರಿಂದ ಅಶ್ವಸೇನನು ಮರಳಿದಾಗ ಹಾಗೆ ಉದ್ಗಾರವೆತ್ತಿದನು ಎಂಬುದು ಒಂದು ಬಗೆಯ ಸಮಾಧಾನವಾಗಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ, ಶ್ರೀಕೃಷ್ಣನಿಗೂ ಸೂರ್ಯನಿಗೂ ಕರ್ಣನ ಬತ್ತಳಿಕೆಯಲ್ಲಿದ್ದ ಸರ್ಪಬಾಣದ ವಿಷಯ ತಿಳಿದಿತ್ತು. ಸೂರ್ಯನು ಅದನ್ನೇ ಕರ್ಣನಿಗೆ ಸೂಚಿಸಿದನು. ಶ್ರೀಕೃಷ್ಣನ ಮತದಿಂದ ಕುಂತಿ ಹಾಗೆ ಕೇಳಿಕೊಂಡಳು. ಅವನೂ ಒಪ್ಪಿದನು. ಸರ್ಪವು ಮರಳಿದಾಗ ಕರ್ಣನಿಗೆ ವಿಸ್ಮಯವಾಯಿತು. ಆ ಸರ್ಪಬಾಣವೇ ಹುರಿಗಣೆ.

ಈ ಸರ್ಪಬಾಣವು ಸರ್ಪಾಸ್ತ್ರವಲ್ಲ. ಇಪ್ಪತ್ತಮೂರನೆಯ ಸಂಧಿಯಲ್ಲಿ ಕರ್ಣನು ಸರ್ಪಾಸ್ತ್ರವನ್ನು ಬಿಟ್ಟುದೂ ಅರ್ಜುನನು ಗರುಡಾಸ್ತ್ರದಿಂದ ಖಂಡಿಸಿದುದೂ ವರ್ಣಿತವಾಗಿದೆ. ಮಂತ್ರಾಸ್ತ್ರಗಳನ್ನು ಒಮ್ಮೆ ತೊಟ್ಟು ಅದೇ ಮಂತ್ರಾಸ್ತ್ರವನ್ನು ಮರಳಿ ತೊಡಬೇಡ ಎಂದು ಕುಂತಿ ಹೇಳಿದ್ದಳೆಂದಾದರೆ, ಇಲ್ಲಿ ಮತ್ತೊಮ್ಮೆ ಸರ್ಪಾಸ್ತ್ರವನ್ನು ಬಿಡುವುದೂ ಅಸಂಭವ. ಹಾಗಾಗಿ, ಕುಮಾರವ್ಯಾಸನೂ ಪುರಿಗಣೆ ಎಂಬುದಕ್ಕೆ ಮರಳಿ ಬರುವ ಬಾಣ ಎಂಬರ್ಥವನ್ನಿಟ್ಟುಕೊಂಡೇ ಹಾಗೇ ಪ್ರಯೋಗಿಸಿರಬಹುದು ಎನ್ನಿಸುತ್ತದೆ.

ತೆಕ್ಕುಂಜ ಗೋಪಾಲಕೃಷ್ಣಭಟ್ಟ

ಪಂಪಭಾರತದ ಒಂದು ಕ್ಲಿಷ್ಟಪದ್ಯ

ನುಡಿವುದಂ ಪತಿಭಕ್ತಿಯ ಪೆಂಪಿಂ ನೀಂ ನುಡಿದೈ ಪೆಱತಂದದಿಂ ।
ನುಡಿದೆಯಲ್ತೆ ಮದಾಯಮಮೋಘಂ ಸೂಳ್ವಿಡೆಯಲ್ಕೆನಗಕ್ಕುಮಿ ।
ನ್ನೆಡೆಯೊಳೆಂದಮದೆಂದುದದೇಂ ತಪ್ಪಾದುದೆ ನಮ್ಮೊವಜರ್ ಜಸಂ ।
ಬಡೆದ ಭಾರ್ಗವರಪ್ಪುದಱಿಂದಂ ನಂಟರುಮಂಗಮಹೀಪತೀ । 12–56

ಈ ಪದ್ಯಕ್ಕೆ ಪೂಜ್ಯರಾದ D. L. N. ಅವರು ಪಂಪಭಾರತ ದೀಪಿಕೆಯಲ್ಲಿ ಕೆಳಕಂಡಂತೆ ಅನ್ವಯಾನುಕ್ರಮದಲ್ಲಿ ಅರ್ಥವನ್ನು ಹೇಳಿ ಅವರ ಸಹಜ ಪ್ರಾಮಾಣಿಕ ಅನುಮಾನವನ್ನು ಎತ್ತಿದ್ದಾರೆ. ಇಲ್ಲಿ ನಾನು ಅವರ ಅನುಮಾನವನ್ನು ಹೇಗೆ ಬಗೆಹರಿಸಬಹುದೆಂಬುದನ್ನು ತಿಳಿಸಲು ಪ್ರಯತ್ನಿಸಿದ್ದೇವೆ.

"ನುಡಿವುದಂ–ಹೇಳುವುದನ್ನು, ನೀಂ–ನೀನು, ಪತಿಭಕ್ತಿಯ–ಸ್ವಾಮಿ ಭಕ್ತಿಯ, ಪೆಂಪಿಂ–ಹಿರಿಮೆಯಿಂದ. ನುಡಿದಯ್–ಹೇಳಿದೆ; ಪೆಱತಂದದಿಂ–ಬೇರೆ ರೀತಿಯಿಂದ, ನುಡಿದೆಯ್ಯಲ್ತೆ ಮಾತಾಡಲಿಲ್ಲವಲ್ಲವೆ? ಇಲ್ಲಿ ನುಡಿ[ಯೆ]ಯಲ್ತೆ ಎಂದು ಪಾಠವಿರಬೇಕೇನೊ? ಮದಾಯಂ–ನನ್ನ ಸಾಮರ್ಥ್ಯವು, ಅಮೋಘಂ–ವ್ಯರ್ಥವಲ್ಲದ್ದು (ಹೀಗೆಂದು ಭೀಷ್ಮ ತನ್ನನ್ನು ತಾನೆ ಹೊಗಳಿಕೊಳ್ಳುವನೆ? ಅದ್ದರಿಂದ ನನ್ನ ಲಾಭವು,

ನನ್ನ (ದರ್ಶನ) ಲಾಭವು ವ್ಯರ್ಥವಲ್ಲದ್ದು ಎಂದಾಗಬಹುದು; ಆಯ ಶಬ್ದಕ್ಕೆ ಸಾಮರ್ಥ್ಯ ಎಂಬ ಅರ್ಥವಾಗುವುದಿಲ್ಲ); ಸೂೞ್–ಸರದಿಯನ್ನು, ಪಡೆಯಲ್ಕೆ–ಪಡೆಯುವುದಕ್ಕೆ, ಎನಗೆ–ನನಗೆ, ಅಕ್ಕುಂ–ಆಗುತ್ತದೆ, ಇಂ–ಇನ್ನು, ಎಡೆಯೊಳ್–ನಡುವೆ, **ಎಂದೆಂ–ಎಂದು ಹೇಳಿದನು**; ಅದೆಂದುದು–ಹೇಳಿದ ಆ ಮಾತು, ಅದೇಂ–ಅದೇನು, ತಪ್ಪಾದುದೇ–ತಪ್ಪಾಯಿತೆ? ನಮ್ಮೊವಜರ್–ನಮ್ಮಿಬ್ಬರ ಗುರುಗಳು, ಜಸಂಬಡೆದ–ಕೀರ್ತಿವಂತರಾದ, ಭಾರ್ಗವರ್–ಪರಶುರಾಮರು, ಅಪ್ಪುದಱಿಂದಂ–ಆಗಿರುವುದರಿಂದ, ಅಂಗಮಹೀಪತೀ–ಕರ್ಣನೇ, ನಂಟ[ರೆಂ]–ನಾವು ನಂಟರಾಗಿದ್ದೇವೆ. (ಪಂಪ ಭಾರತ ದೀಪಿಕೆ, ಪುಟ 455).

ಮೊದಲನೆಯದಾಗಿ ಮೇಲಿನ ಪದ್ಯದ ಮೂರನೆ ಪಂಕ್ತಿಯ 'ಎಂದೆಂ' (=ಎಂದು ಹೇಳಿದೆನು) ಎಂಬ ಒತ್ತು ಇರುವ (ಒತ್ತು ನನ್ನದು) ಶಬ್ದವನ್ನು 'ಎಂದಯ್' (=ಎಂದು ಹೇಳಿದೆ) ಎಂದು ತಿದ್ದಿಕೊಳ್ಳಬೇಕು. ಬಹುಶಃ ಮೂಲಪಾಠ 'ಎಂದಯ್' ಎಂದೇ ಇದ್ದಿರಬೇಕು. ಲಿಪಿಕಾರನ ಅಥವಾ ಮುದ್ರಣಕಾರನ ಕೈತಪ್ಪಿನಿಂದ ಏನಾದರೂ ಈ ದೋಷ ಸಂಭವಿಸಿರಬಹುದು. ಈ ಊಹೆಗೆ ಆಧಾರವೇನೂ ಇಲ್ಲ. ಆದರೆ ಡಾ। ವರದರಾಜರಾವ್ ಅವರು ತಮ್ಮ 'ಸಾಹಿತ್ಯ ಸಾನ್ನಿಧ್ಯ' ಎಂಬ ಪ್ರಬಂಧ ಸಂಕಲನದಲ್ಲಿ 'ಎಂದೆಂ' ಎನ್ನುವುದನ್ನು 'ಎಂದಯ್' ಎಂಬುದಾಗಿಯೇ ಅಚ್ಚು ಮಾಡಿಸಿದ್ದಾರೆ (ಸಾಹಿತ್ಯ ಸಾನ್ನಿಧ್ಯ–142). ಅವರು ಯಾವ ಆಧಾರವನ್ನೂ ಸೂಚಿಸಿಲ್ಲ. ಅಲ್ಲದೆ ಮೇಲಿನ ನನ್ನ ಊಹೆ ಸಮರ್ಥನೆಗೆ ಆಂತರಿಕ ಆಧಾರವಾಗಿ ಸ್ವತಃ D. L. N. ಅವರೇ ಇದೇ ಪದ್ಯದಲ್ಲಿ 'ನುಡಿದೆಯಲ್ತೆ' ಎನ್ನುವ ಶಬ್ದವನ್ನು 'ನುಡಿ[ಯೆ]ಯಲ್ತೆ' ಎಂದು ಇರಬೇಕೇನೊ? ಎಂದಿದ್ದಾರೆ. ಹೀಗೆ ಪಾಠ ತಿದ್ದಿಕೊಂಡರೆ ಇಡೀ ಪದ್ಯದ ಅನ್ವಯ ಸರಿಬರುತ್ತದೆ. ಛಂದಸ್ಸಿಗೂ ಬಾಧೆ ತಟ್ಟುವುದಿಲ್ಲ.

ಪಾಠಾಂತರದ ಪದ್ಯದ ಪಾಠ :

ನುಡಿವುದಂ ಪತಿಭಕ್ತಿಯ ಪೆಂಪಿಂ ನೀಂನುಡಿದೈಪೆಱಿತಂದದಿಂ।
ನುಡಿಯೆಯಲ್ತೆಮದಾಯಮಮೋಘಂಸೂೞ್ವಡೆಯಲ್ಕೆನಗಕ್ಕುಮಿ।
ನ್ನೆಡೆಯೊಳೆಂ[ದಯ]ದೆಂದುದದೇಂ ತಪ್ಪಾದುದೆನಮ್ಮೊವಜರ್ ಜಸಂ।
ಬಡೆದ ಭಾರ್ಗವರಪ್ಪುದಱಿಂದಂ ನಂಟರುಮಂಗಮಹೀಪತೀ।

ಮೇಲೆ, ಚೌಕ ಕಂಸದಲ್ಲಿ ಕೊಟ್ಟಿರುವುದು ನನ್ನ ಊಹಾಪಾಠ. ಒತ್ತು ಇರುವುದು D. L. N. ಅವರ ಊಹಾಪಾಠ.

ಎರಡನೆಯದಾಗಿ D. L. N. ಅವರು ಕಂಸದಲ್ಲಿ ಕೊಟ್ಟಿರುವ ಸಂದೇಹದ ವಿಚಾರ. "ಮದಾಯಂ–ನನ್ನ ಸಾಮರ್ಥ್ಯವು, ಅಮೋಘಂ–ವ್ಯರ್ಥವಲ್ಲದ್ದು [ಹೀಗೆಂದು ಭೀಷ್ಮ ತನ್ನನ್ನು ತಾನೇ ಹೊಗಳಿಕೊಳ್ಳುವನೆ? ಆದ್ದರಿಂದ ನನ್ನ ಲಾಭವು

ನನ್ನ (ದರ್ಶನ) ಲಾಭವು ವ್ಯರ್ಥ್ಯವಲ್ಲದ್ದು ಎಂದಾಗಬಹುದು ; ಆಯಾ ಶಬ್ದಕ್ಕೆ ಸಾಮರ್ಥ್ಯ ಎಂಬ ಅರ್ಥಕಾಣುವುದಿಲ್ಲ] ;" ಆಚಾರ್ಯರ ಈ ಅನುಮಾನ ನಾನು ಮೇಲೆ ಸೂಚಿಸಿರುವ ಪಾಠವನ್ನು ಒಪ್ಪಿಕೊಂಡರೆ ತನಗೆ ತಾನೇ ನಿವಾರಣೆಯಾಗುತ್ತದೆ. 'ಆಯು' ಶಬ್ದಕ್ಕೆ 'ಸಾಮರ್ಥ್ಯ' ಎಂಬ ಕನ್ನಡದ ಸಾಮರ್ಥ್ಯವನ್ನೇ ಇಟ್ಟುಕೊಳ್ಳಬಹುದು. D. L. N. ಅವರು ಮೊದಲು ಹಾಗೇ ಅರ್ಥ ಹೇಳಿರುವುದು ಗಮನಾರ್ಹ. ಹಾಗಾದರೆ ಅವರಿಗೆ ಅನುಮಾನ ಬರಲು ಕಾರಣ, ಭೀಷ್ಮನು ಈ ಮಾತನ್ನು ಹೇಳುತ್ತಿದ್ದಾನೆ. ತನಗೇ ಅನ್ವಯಿಸಿಕೊಂಡು, ಎಂದು ಅವರು ಗ್ರಹಿಸಿರುವುದರಿಂದ. ಆಗ ಭೀಷ್ಮನ ವ್ಯಕ್ತಿತ್ವ ಇಂಥದಲ್ಲ ಎಂಬುದನ್ನು ಸಮರ್ಥಿಸಲು 'ನನ್ನ (ದರ್ಶನ) ಲಾಭವು' ಇತ್ಯಾದಿ ಊಹೆಯನ್ನು ಕೈಗೊಂಡಿದ್ದಾರೆ. ನಿಜ, ಭೀಷ್ಮನು ತನಗೆ ತಾನೇ ಎಂದೂ ಹೊಗಳಿಕೊಳ್ಳಲಾರ. ಕರ್ಣನು ಬೇಕಾದರೆ ತನಗೆ ತಾನೇ ಹೊಗಳಿಕೊಂಡಿದ್ದ. ಅವನ ಪ್ರಕೃತಿಯೇ ಅಂಥಾದ್ದು. ಆದ್ದರಿಂದ 'ಮದಾಯುಂ ಅಮೋಘಂ; ಸೊಟ್ಟಿಡೆಯಲ್ಕೆ ಎನಗಕ್ಕುಂ ಇನ್ನೆಡೆಯೊಳ್" + ಎಂ[ದಯ್]"; ಎಂಬುದಾಗಿ ಭೀಷ್ಮನು ಕರ್ಣನಿಗೆ ಹೇಳುತ್ತಿದ್ದಾನೆ. ಅಂದರೆ ತನಗೆ ವೀರಪಟ್ಟವನ್ನು ಕಟ್ಟಿದ ಸಂದರ್ಭಕ್ಕೆ ಕರ್ಣನು ವಿರೋಧಿಸಿದಾಗ ಆತನಲ್ಲುಂಟಾದ ತಳಮಳ, ಮುನಿಸು, ಪ್ರತಾಪ, ಸ್ನೇಹ, ಹಕ್ಕಿನ ಪಂದ್ಯಾಟ ಇತ್ಯಾದಿ, ಮಥಿತಾರ್ಥವನ್ನೇ ಮತ್ತೆ ಭೀಷ್ಮನು ಆತನ ನೆನಪಿಗೆ ತರುತ್ತಿದ್ದಾನೆ. (ನೋಡಿ-10, 16, 17, 18 ಮತ್ತು 23). ಆದ್ದರಿಂದ ಪದ್ಯದ ಮೇಲೆ ಕೊಟ್ಟಿರುವ ಘಟಕ ಕರ್ಣನ ಹಿಂದಿನ ವರ್ತನೆಯ ಇಂಗಿತಾರ್ಥವನ್ನು ಭೀಷ್ಮನು **ಉದ್ಧರಿಸುತ್ತಿದ್ದಾನೆ** ಎಂದು ಗ್ರಹಿಸಬೇಕು. "ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನನಚ್ಚು ಮಿಕ್ಕ ತೋಳ್ವಲದ ಪೊಡರ್ಪು ಕರ್ಣನಿನಗುಳ್ಳಿಸಿತು ಏನೆನಗುಂಟೆ?" (10–23) ಎಂಬ ಭೀಷ್ಮನ ಪಟ್ಟದ ಸಂದರ್ಭದ ಮಾತಿನೊಂದಿಗೆ "ಮದಾಯುಂ ಅಮೋಘಂ ಸೂಟ್ಟಿಡೆಯಲ್ಕೆನಗಕ್ಕುಂ ಇನ್ನೊಡೆಯೊಳ್–ಎಂದಯ್" ಎಂಬ ಮಾತನ್ನು ಹೋಲಿಸಿದರೆ ಭೀಷ್ಮನ ಅಭಿಪ್ರಾಯ ಎಂದೂ ವ್ಯತ್ಯಾಸವಾಗಲು ಸಾಧ್ಯವಿಲ್ಲ ಎಂಬುದು ಖಚಿತವಾಗುತ್ತದೆ. ಅಲ್ಲದೆ ವಯೋವೃದ್ಧನೂ, ಕುಲವೃದ್ಧನೂ, ಜ್ಞಾನ ವೃದ್ಧನೂ ಆದ ಭೀಷ್ಮನಿಗೆ ಪಂಪಕವಿ 'ಅತ್ಯುನ್ನತಿ' ಪದವಿಯನ್ನು ಕೊಟ್ಟಿರುವುದು ಸರ್ವವಿದಿತ. ಭೀಷ್ಮನು ಶರಶಯನದಲ್ಲಿದ್ದಾಗ ಕರ್ಣ ತನ್ನ "ಸೂಟ್" ಬಂದಾಗ ತಾನು ಹಿಂದೆ ತೆಗಳಿದ್ದು ನೆನಪಾಗಿ ಯುದ್ಧಕ್ಕೆ ಸನ್ನದ್ಧನಾಗುವ ಮುಂಚೆ ತಾತನ ಕ್ಷಮಾಪಣೆಗಾಗಿ ಬಂದು ಕಾಲು ಹಿಡಿದು ಬೇಡುತ್ತಾನೆ. ಆಗ ಭೀಷ್ಮನು ಸ್ವಲ್ಪವೂ ಚಿತ್ತಕದಡದೆ ಕರ್ಣನಿಗೆ ಪ್ರಿಯವಾಗುವಂತೆಯೇ ಹೀಗೆ ನುಡಿಯುತ್ತಾನೆ; (12–56 ನೆಯ ಪದ್ಯದ ತಾತ್ಪರ್ಯ) : "ಹಿಂದೆ ನೀನು ಹೇಳಿದ್ದನ್ನು ಸ್ವಾಮಿ ಭಕ್ತಿಯ ಒರಿವೆಯಿಂದ ಹೇಳಿದೆ; ಬೇರೆ ರೀತಿಯಿಂದ ಮಾತಾಡಲಿಲ್ಲವಲ್ಲವೆ ? 'ನನ್ನ ಸಾಮರ್ಥ್ಯವು ವ್ಯರ್ಥವಲ್ಲದ್ದು. ಸರದಿಯನ್ನು ಪಡೆಯುವುದಕ್ಕೆ ನನಗೆ (ಕೌರವ ವೀರರ) ನಡುವೆ ಇನ್ನು ಅವಕಾಶ ಆಗುತ್ತದೆ'; ಎಂದು ಹೇಳಿದೆ, ಹೇಳಿದ ಆ ಮಾತು

ಅದೇನು ತಪ್ಪಾಯಿತೇ ? ಇಲ್ಲ. ಏಕೆಂದರೆ ನಮ್ಮಿಬ್ಬರ ಗುರುಗಳು ಕೀರ್ತಿವಂತರಾದ ಪರಶುರಾಮರು ಆಗಿರುವುದರಿಂದ ಕರ್ಣನೇ ! ನಾವು ನಂಟರಾಗಿದ್ದೇವೆ." ಕರ್ಣನಿಗೆ ಹೀಗೆ ಅನುನಯದ ಸಮಾಧಾನ ಮಾಡಿ ಆಶೀರ್ವದಿಸಿ ಕಳುಹಿಸಿಕೊಡುತ್ತಾನೆ.

ಈ ಮಾತುಗಳು ಭೀಷ್ಮನ 'ಅತ್ಯುನ್ನತಿ'ಗೆ ಕಿರೀಟಪ್ರಾಯವಾಗಿವೆ. ಹೀಗೆ 12–56 ನೆಯ ಪದ್ಯಕ್ಕೆ ಪೂಜ್ಯ D. L. N. ಅವರು ಎತ್ತಿದ ಸಂದೇಹ ನಿವಾರಣೆಯಾಗುತ್ತದೆ ಎಂದು ವಿನಮ್ರವಾಗಿ ಸೂಚಿಸುತ್ತೇನೆ. ಮತ್ತು ಅನ್ವಯಾನುಕ್ರಮದಲ್ಲಿ ಪದ್ಯದ ಅರ್ಥವನ್ನು ಈ ಕೆಳಗೆ ಕೊಟ್ಟಿದೆ:

ನುಡಿವುದಂ–ಹೇಳುವುದನ್ನು, ನೀಂ–ನೀನು, ಪತಿಭಕ್ತಿಯು–ಸ್ವಾಮಿ ಭಕ್ತಿಯು, ಪೆಂಪಿಂ, ಹಿರಿಮೆಯಿಂದ, ನುಡಿದಯ್–ಹೇಳಿದೆ, ಪೆಱತಂದದಿಂ–ಬೇರೆ ರೀತಿಯಿಂದ, ನುಡಿಯೆಯುಲ್ತೆ–ಮಾತಾಡಲಿಲ್ಲವಲ್ಲವೆ ? "ಮದಾಯುಂ–ನನ್ನ ಸಾಮರ್ಥ್ಯವು, ಅಮೋಘಂ–ವ್ಯರ್ಥವಲ್ಲದ್ದು, ಸೂಟಿಯ್-ಸರದಿಯನ್ನು, ಪಡೆಯಲ್ಕೆ-ಪಡೆಯುವುದಕ್ಕೆ ಎನಗೆ–ನನಗೆ, ಇಂ–ಇನ್ನು, ಎಡೆಯೊಳ್– (ಕೌರವರ) ನಡುವೆ, ಅಕ್ಕುಂ–ಅವಕಾಶ ಆಗುತ್ತದೆ"; ಎಂ[ದಯ್]-ಎಂದು ಹೇಳಿದೆ; ಅದೆಂದುದು-ಹೇಳಿದ ಆ (ನಿನ್ನ) ಮಾತು, ಅದೇಂ–ಅದೇನು, ತಪ್ಪಾದುದೆ-ತಪ್ಪಾಯಿತೆ? ನಮ್ಮೊವಜರ್-ನಮ್ಮಿಬ್ಬರ ಗುರುಗಳು, ಜಸಂಬಡೆದ-ಕೀರ್ತಿವಂತರಾದ, ಭಾರ್ಗವರ್-ಪರಶುರಾಮರು, ಅಪ್ಪುದಱಿಂದಂ ಆಗಿರುವುದರಿಂದ, ಅಂಗಮಹೀಪತೀ-ಕರ್ಣನೇ ! ನಂಟರಂ-ನಾವು ನಂಟರಾಗಿದ್ದೇವೆ.

ಶಿವರಾಮಯ್ಯ

ಕೆರೆಯ ಪದ್ಮರಸನ 'ದೀಕ್ಷಾಬೋಧೆ' ಯ ಒಂದು ಹಸ್ತಪ್ರತಿ

ಮದ್ರಾಸ್ ಸರ್ಕಾರದ ಪ್ರಾಚ್ಯ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ[1]ಯ ಸಂಪುಟ ನಾಲ್ಕು, ಕ್ರಮಾಂಕ 795 (ಪುಟ 1121-1122) ರಲ್ಲಿ "ವೀರಶೈವ ವಿಷಯ" ವೆಂಬ ಹೆಸರಿನ ಕೃತಿಯೊಂದರ ಉಲ್ಲೇಖವಿದೆ. ಕೃತಿ ಅಪೂರ್ಣವಾಗಿದ್ದು ಆದ್ಯಂತ್ಯಗಳಿಲ್ಲ. ಸೂಚಿಯಲ್ಲಿ ಕರ್ತೃವಿನ ಬಗೆಗೆ ಏನನ್ನೂ ತಿಳಿಸಿಲ್ಲ. ಕೃತಿಯ ಸ್ವರೂಪವನ್ನು ಕುರಿತು "ಅಸಮಗ್ರ ವೀರಶೈವ ಮತ ತತ್ವಗಳನ್ನು ಬೋಧಿಸುವ ಕನ್ನಡ ಪದ್ಯಗಳೂ, ಪ್ರತಿಯೊಂದು ಪದ್ಯದ ಅನಂತರ ಅದರ ಆಧಾರಕ್ಕಾಗಿ ಉದ್ಧೃತವಾದ ಸಂಸ್ಕೃತ ಶ್ಲೋಕಗಳೂ ಇವೆ. ಅಲ್ಲಲ್ಲಿ ರಗಳೆ ಮೊದಲಾದ ಬಂಧಗಳೂ ಇವೆ" ಎಂದಿರುವರು.

ಕೆರೆಯ ಪದ್ಮರಸನ 'ದೀಕ್ಷಾಬೋಧೆ' ಕೃತಿಯಲ್ಲಿ ಸೂಚಿಯಲ್ಲಿ ಉದ್ಧೃತವಾದ ಭಾಗಗಳಿವೆ. ಡಾ. ಬಿ. ಬಿ. ಹೆಂಡಿ ಅವರಿಂದ ಸಂಪಾದಿತವಾದ ಕೃತಿಯಲ್ಲಿ

ಸೂಚಿಯ ಆದಿಯ ಭಾಗ, ಪುಟ 9 ರಲ್ಲಿನ 16 ನೇಯ ಶ್ಲೋಕದಿಂದ ಮುಂದುವರಿದಿದೆ. ಹಾಗೆಯೇ ಅಂತ್ಯ ಭಾಗ ಪುಟ 109 ರ ರಗಳೆಯ ನಡುವಣ 13-17 ನೆಯ ಸಾಲುಗಳಾಗಿವೆ. ಹೀಗಾಗಿ ಸೂಚಿಯಲ್ಲಿನ ದೀಕ್ಷಾಬೋಧೆ ಕೃತಿಯ ಸ್ವರೂಪ ಈ ರೀತಿ ಇದೆ. ಮೊದಲ ಸ್ಥಲದ ಆದಿಯಲ್ಲಿ ಸ್ವಲ್ಪ ಭಾಗವಿಲ್ಲ. ಎರಡನೆಯ ಸ್ಥಲ ಸಮಗ್ರವಾಗಿದೆ. ಮೂರನೆಯ ಸ್ಥಲದಲ್ಲಿ ಆದಿಯ ಕಂದ, ವೃತ್ತ ಮತ್ತು ರಗಳೆಯ 17 ಪಂಕ್ತಿಗಳು ಮಾತ್ರವಿವೆ; ಉಳಿದ ಭಾಗವಿಲ್ಲ.

ಈ ಮೇಲಿನ ವಿವರಣೆಯಿಂದ ಸೂಚಿಯ ಕ್ರಮಾಂಕ 795 ರಲ್ಲಿನ "ವೀರಶೈವ ವಿಷಯ" ವೆಂಬ ಕೃತಿಯ ಹೆಸರು ತಪ್ಪಾಗಿದ್ದು, ಅದು 'ದೀಕ್ಷಾಬೋಧೆ' ಎಂದಿರಬೇಕೆಂದು ಮತ್ತು ಅದರ ಕರ್ತೃ ಕೆರೆಯ ಪದ್ಮರಸನೆಂಬ ಸಂಗತಿ ಸ್ಪಷ್ಟವಾಗುತ್ತದೆ.

ಎಸ್. ಶಿವಣ್ಣ

---

1 A Descriptive Catalogue of the Kannada Manuscripts in the Government Oriental Manuscript Library, Madras, Ed. A. Shankaran, Vol. IV, 194

2 ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1973

ಈ ಸಂಚಿಕೆಯ ಲೇಖಕರು

ಎನ್. ವೆಂಕಟಕೃಷ್ಣಯ್ಯ	
ಡಾ॥ ಮ. ಸು. ಕೃಷ್ಣಮೂರ್ತಿ	ರೀಡರ್ ಹಿಂದೀ ವಿಭಾಗ, ಮಾನಸ ಗಂಗೋತ್ರಿ ಮೈಸೂರು
ಎಸ್. ಸುಂದರರಾಜನ್	ಅಧ್ಯಾಪಕ ಸಸ್ಯಶಾಸ್ತ್ರವಿಭಾಗ, ಸೆಂಟ್‌ಜೋಸೆಫ್ಸ್ ಕಾಲೇಜ್, ಬೆಂಗಳೂರು 560001
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು 560056
ಎಸ್. ನಾರಾಯಣಮೂರ್ತಿ	''ಮಲ್ಲಿಕಾ'' 357-(ಬಿ) ಮಾಗಡಿ ಕಾರ್ಡ್ ರೋಡ್, ಬೆಂಗಳೂರು 560040
ಪ್ರೊ. ಬಿ. ಬಿ. ಮಹೀಶವಾಡಿ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3
ಎಚ್. ಎಸ್. ಭೀಮನಗೌಡರ	ಕಲಾ ಮತ್ತು ವಿಜ್ಞಾನ ಕಾಲೇಜ್ ಸಂಕೇಶ್ವರ, ಬೆಳಗಾಂ ಜಿಲ್ಲೆ
ಡಾ॥ ಎಸ್. ಶೆಟ್ಟರ್	ಇತಿಹಾಸ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3

ಕೆ. ನಾಗರಾಜನ್	ಅಧ್ಯಾಪಕರು, ಭೌತಶಾಸ್ತ್ರ ವಿಭಾಗ ಸೆಂಟ್ ಜೋಸೆಫ್ಸ್ ಕಾಲೇಜು ಬೆಂಗಳೂರು 560001
ಮೀರಾ ಚಕ್ರವರ್ತಿ	ಅಧ್ಯಾಪಕಿ ಸಂಸ್ಕೃತ ವಿಭಾಗ, ಜ್ಞಾನಭಾರತಿ ಬೆಂಗಳೂರು 560056
ಬಿ. ವೈ. ಲಲಿತಾಂಬ	ಅಧ್ಯಾಪಕಿ, ಹಿಂದೀ ವಿಭಾಗ ಮಹಾರಾಣಿ ಕಾಲೇಜು ಬೆಂಗಳೂರು 560001
ಕೆ. ರಾಜೇಶ್ವರಿ	C/o ದೊಡ್ಡ ರಂಗೇಗೌಡ ಅಧ್ಯಾಪಕ, ಕನ್ನಡ ವಿಭಾಗ ಎಸ್. ಎಲ್. ಎನ್. ಕಾಲೇಜ್, ಬೆಂಗಳೂರು (ಕೋಟೆ)-2
ಎಚ್. ಆರ್. ಕೃಷ್ಣಮೂರ್ತಿ	ಅಧ್ಯಾಪಕ ಭೌತಶಾಸ್ತ್ರ ವಿಭಾಗ, ನ್ಯಾಷನಲ್ ಕಾಲೇಜ್, ಜಯನಗರ ಬೆಂಗಳೂರು 560011
ಎಚ್. ಎಚ್. ಗಂಗಾಧರಮೂರ್ತಿ	ಸಹಾಯಕ ಅಧ್ಯಾಪಕ ಎಸ್. ಜೆ. ಪಾಲಿಟೆಕ್ನಿಕ್, ಭದ್ರಾವತಿ
ಡಾ॥ ಡಿ. ಎಸ್. ನಾಗಭೂಷಣ	ಕನ್ನಡ ನ್ಯೂಸ್ ರೀಡರ್ ಎ.ಐ.ಆರ್., ನವದೆಹಲಿ
ಎಸ್. ಉಮಾಪತಿ	ಅಧ್ಯಾಪಕ, ಕನ್ನಡ ವಿಭಾಗ ಎ.ಆರ್.ಜಿ. ಕಾಲೇಜ್, ದಾವಣಗೆರೆ
ಡಾ॥ ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಬೆಂಗಳೂರು 560056

ಎಂ. ಯೋಗ	ಡೈರೆಕ್ಟರ್, ಮ್ಯಾನೇಜ್‌ಮೆಂಟ್ ಸರ್ವಿಸಸ್ (ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್) 38, ಗಾಲ್ಫ್ ಲಿಂಕ್ಸ್, ನವದೆಹಲಿ
ತೆಕ್ಕುಂಜ ಗೋಪಾಲಕೃಷ್ಣ ಭಟ್ಟ	ರೀಡರ್, ಕನ್ನಡ ವಿಭಾಗ ಸೆಂಟ್ ಅಲಾಯಿಯಸ್ ಕಾಲೇಜ್ ಮಂಗಳೂರು 575003
ಶಿವರಾಮಯ್ಯ	ಅಧ್ಯಾಪಕ, ಕನ್ನಡ ವಿಭಾಗ ಶ್ರೀ ಮಹದೇಶ್ವರ ಕಾಲೇಜ್ ಕೊಳ್ಳೆಗಾಲ, ಮೈಸೂರು ಜಿಲ್ಲೆ
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಬೆಂಗಳೂರು 560056
ಸೀತಾರಾಮ ಜಾಗೀರ್‌ದಾರ್	ನ. 75/A, ಹೊಸಬಡಾವಣೆ (ಕಾಮಾಕ್ಷಿ ಆಸ್ಪತ್ರೆಯ ಬಳಿ) ಸರಸ್ವತಿಪುರಂ, ಮೈಸೂರು 9

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪುಟ 1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ 2	ಶಾಸನ ಮತ್ತು ಗದ್ಯ	...	ಹು. ಕಾ. ಜಯದೇವ್
ಸಂಪುಟ 3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ 4	ಚಂಪೂ ಕವಿಗಳು	...	ಓ. ವಿ. ನಾರಾಯಣ
ಸಂಪುಟ 5	ವಚನ ಸಾಹಿತ್ಯ	...	ಎಂ. ಚಿದಾನಂದ ಮೂರ್ತಿ
ಸಂಪುಟ 6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ದಪ್ಪ
ಸಂಪುಟ 7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ 8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ 9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ 10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರತಿ ಸಂಪುಟದ ಬೆಲೆ : ರೂ. 4-00

ವಿವರಗಳಿಗೆ ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು